ಸಂವಾದ

ಅಕ್ಟೋಬರ್ ೨೦೦೪
ರೂ. ೨೦

ಗಲ್ಲು:
ಜೈಲುವಾಸಿಗಳ ಸ್ಪಂದನ

ಭಾಷೆ
ಸಮಾಜ
ಮತ್ತು
ಕಾವೇರಿ

ಭಗವದ್ಗೀತೆ:
ಹಲವು ಪ್ರಶ್ನೆಗಳು

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೧೨

ಅಕ್ಟೋಬರ್ ೨೦೦೪

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

© ೨೩೨೮೭೯೪೩ / ೯೪೪೮೦ ೪೮೩೦೬

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

© 080-23287943, 94480 48306

EDITOR :

INDUDHARA HONNAPURA

ಒಳಪುಟಗಳಲ್ಲಿ...

- ❑ ಪತ್ರಗಳು ೩
- ❑ ಗಲ್ಲು : ಜೈಲುವಾಸಿಗಳ ಸ್ಪಂದನ ೪
- ❑ ಅಂತರಂಗ ೫
- ❑ ಭಾಷೆ ಹಾಗೂ ಸಮಾಜ
  ಕಾವೇರಿ ಹೋರಾಟದ ಹಿನ್ನೆಲೆಯಲ್ಲಿ ೬
  ○ ಬಿ. ಕನಕರಾಜು
- ❑ ಭಾರತ: ಗಾಂಧಿ, ತಿಲಕ, ಅಂಬೇಡ್ಕರ್ ದೃಷ್ಟಿ ೮
  ○ ಡಾ॥ ಬಿ. ಶರಣಪ್ಪ ಸತ್ಯಂಪೇಟೆ
- ❑ ಮಾಧ್ಯಮ ಮತ್ತು ಮಾರುಕಟ್ಟೆ ಧರ್ಮಯುದ್ಧ ೧೦
  ○ ನಾ. ದಿವಾಕರ





- ❑ ಝೆನ್ ಝಲಕ್ ೧೩
  ○ ಕೆ.ವಿ. ಸುಬ್ಬಣ್ಣ
- ❑ ಭಗವದ್ಗೀತೆ : ಕೆಲವು ಪ್ರಶ್ನೆಗಳು ೧೪
  ○ ಪದ್ಮಾಲಯಾ ನಾಗರಾಜ್
- ❑ ಮಹಿಳಾ ಸಬಲೀಕರಣ -
  ಒಂದು ಸಮಾಜ ಶಾಸ್ತ್ರೀಯ ಚಿಂತನ ೧೯
  ○ ಡಾ॥ ಅಂಬಾರಾವ ಉಪಳಾಂವಕರ
- ❑ ಸಮಕಾಲೀನ ಕಣ್ಣಲ್ಲಿ
  ಅಂಬೇಡ್ಕರರ ಆರ್ಥಿಕ ಚಿಂತನೆಗಳು ೨೮
  ○ ಆನಂದ್ ತೇಲ್‌ತುಂಬ್ಡೆ
- ❑ ದಲಿತ್ ಡೈರಿ
  ಕಾಂಗ್ರೆಸ್ ಸಿಹಿ ವಿಷ ಉಣಿಸಲು
  ಆರಂಭಿಸಿದೆಯೇ ? ೩೪
  ○ ಚಂದ್ರಭಾನ್ ಪ್ರಸಾದ್
- ❑ ಜಲಹಂಚಿಕೆಯ ಅಸಮಾನತೆ ೩೮
  ○ ಅನು : ಡಿ.ಡೊಮಿನಿಕ್
- ❑ ಹೊಸ ಪುಸ್ತಕ ೪೨
- ❑ ವಿವೇಕಾನಂದರ ವಿಚಾರಗಳು ೪೩
  ○ ಜ.ಹೊ. ನಾರಾಯಣಸ್ವಾಮಿ

ಕವನಗಳು : ❑ ಗಾಂಧಿ ನಂತರದ ಗಾಂಧಿ ಚಹರೆಗಳು - ೯ ❑ ಸ್ವರ ವಿಸ್ತಾರ - ೩೨

ಮುಖಪುಟ ಕಲೆ : ಜಾನ್ ದೇವರಾಜ್ ವಿನ್ಯಾಸ : ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪರ್ಯಾಯ ರಾಜಕಾರಣಕ್ಕೆ ಎಲ್ಲರೂ ಕೈಗೂಡಿಸಲಿ

ಮಾನ್ಯರೇ,

ಪರ್ಯಾಯ ರಾಜಕಾರಣದ ಚರ್ಚೆಗೆ ವೇದಿಕೆ ಕಲ್ಪಿಸಿರುವ 'ಸಂವಾದ'ಕ್ಕೆ ಧನ್ಯವಾದಗಳು.

ಪ್ರಸ್ತುತ ರಾಜಕಾರಣವು ಅಧಿಕಾರ, ಸ್ವಾರ್ಥ ಇಂಥವುಗಳಿಂದಲೇ ತುಂಬಿ ಕೊಳೆತು ಕಮಂಡಲವಾಗಿ ಹೋಗಿದೆ.

ಇಂತಹ ಸನ್ನಿವೇಶದಲ್ಲಿ ದಶಕಗಳಿಂದ ಚಳವಳಿಗಳ ಮೂಲಕ ರಾಜ್ಯದ ಹಿತಾಸಕ್ತಿಗಾಗಿ ಹೋರಾಟ ಮಾಡಿಕೊಂಡು ಬರುತ್ತಿರುವ ದಸಂಸ ಹಾಗೂ ರೈತಸಂಘಗಳು ಒಂದುಗೂಡಿ ರಚಿಸಲು ಹೊರಟಿರುವ ಪರ್ಯಾಯ ರಾಜಕಾರಣ ನಮ್ಮಂತಹ ಯುವಕರಲ್ಲಿ ಮನಸ್ಸಿನಲ್ಲಿ ಭರವಸೆಯ ಕಿರಣಗಳನ್ನು ಹೊತ್ತಿಸಿದೆ.

ಕುರುಡರಲ್ಲದಿದ್ದರೂ ಕತ್ತಲೆ ಕೋಣೆಯಲ್ಲಿ ಬಂಧಿತರಾಗಿರುವ ಇಂದಿನ ಯುವ ಪೀಳಿಗೆಗೆ ಆ ಕತ್ತಲಲ್ಲಿಯೇ ಪರ್ಯಾಯ ಎಂಬ ಜ್ಯೋತಿಯನ್ನು ಹೊತ್ತಿಸಿ ದಾರಿದೀಪವಾಗುವ ಕೆಲಸವನ್ನು ಈ ಸಂಘಟನೆಗಳು ಮಾಡಬೇಕಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಿನ್ನಾಭಿಪ್ರಾಯಗಳು ಸಹಜವೇ ಆಗಿದ್ದು ಅದು ಈ ಪರ್ಯಾಯ ರಾಜಕಾರಣ ವಿಷಯದಲ್ಲೂ ಅಪಸ್ವರ ಇದೆ ಎಂಬುದರ ಅರಿವಿದ್ದರೂ ಇಂತಹ ಒಂದು ಪ್ರಯತ್ನ ಇತಿಹಾಸದಲ್ಲಿ ತುಂಬಾ ವಿರಳ ಎನ್ನುವುದು ಸಮಾಧಾನದ ಹಾಗೂ ನೆಮ್ಮದಿ ತರುವಂತಹ ವಿಚಾರ.

ಗುರಿ ಒಂದೇ; ಅದರ ದಾರಿ ಹಲವು ಎಂಬಂತೆ ಇಂದಿನ ಜನಪರ ಸಂಘಟನೆಗಳು, ಹೋರಾಟಗಾರರೆಲ್ಲಾ ಚೆಲ್ಲಾಪಿಲ್ಲಿಯಾಗಿ ಹೋಗಿದ್ದಾರೆ.

ಯಾವುದೇ ಒಂದು ಕಾರ್ಯ ಯಶಸ್ಸು ಗಳಿಸಬೇಕಾದರೆ ಅದು ಟೀಮ್ ವರ್ಕ್‌ನಿಂದ ಮಾತ್ರ ಸಾಧ್ಯ. ಹಾಗಾಗಿ ಎಲ್ಲ ಜನಪರ ಸಂಘಟನೆಗಳು, ಹೋರಾಟಗಾರರು, ಈ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ತಮ್ಮ ಕೈ ಜೋಡಿಸಿ ಅದನ್ನು ಬಲವರ್ಧನೆಗೊಳಿಸಬೇಕು.

ಅನಿಷ್ಟ ವ್ಯವಸ್ಥೆಯನ್ನು ತೊಲಗಿಸಲು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮರೆತು ತಾವು ಸಾಧಿಸಲು ಇಚ್ಛಿಸಿರುವ ಗುರಿಯೆಡೆಗೆ ಸಾಗಲು ಈ ಪರ್ಯಾಯ ರಾಜಕಾರಣವು ಒಂದು ಉತ್ತಮ ಅವಕಾಶವನ್ನು ಒದಗಿಸಿ ಕೊಟ್ಟಿದೆ.

ಅವಕಾಶಗಳು ತುಂಬಾ ವಿರಳ. ಅದರ ಆಯ್ಕೆ ಮಾಡುವುದು ನಮ್ಮ ವಿವೇಚನಾ ಶಕ್ತಿಯನ್ನು ಆಧರಿಸಿರುತ್ತದೆ. ನನ್ನ ಉದ್ದೇಶ ಇಷ್ಟೆ ಎಲ್ಲ ಪ್ರಯತ್ನಗಳಂತೆ ಇದೂ ವಿಫಲವಾದಾಗ ಪಶ್ಚಾತ್ತಾಪ ಪಡುವ ಬದಲು ಮೊದಲೇ ಎಚ್ಚೆತ್ತುಕೊಂಡು ತಮ್ಮ ಕೈಲಾದ ಬೆಂಬಲವನ್ನು ಈ ಪರ್ಯಾಯ ರಾಜಕಾರಣದ ಪ್ರಯತ್ನಕ್ಕೆ ನೀಡಲೆಂಬುದು.

ಇಡೀ ವ್ಯವಸ್ಥೆಯ ಲೋಪದೋಷಗಳ ನಿರ್ನಾಮವೇ ಈ ಪರ್ಯಾಯ ರಾಜಕೀಯ ಶಕ್ತಿಯ ಕಾರ್ಯಸೂಚಿಯಾಗಬೇಕೆಂಬುದು ನನ್ನ ಆಶಯ.

ವಂದನೆಗಳು,

ಶಾರದಾ ಕುಮಾರ, ಬೆಂಗಳೂರು

ರಾಜಕೀಯ ಪ್ರಜ್ಞೆ ಮೂಡಿಸುತ್ತಿರುವ 'ಸಂವಾದ'

ಮಾನ್ಯ ಇಂದೂಧರ ಹೊನ್ನಾಪುರ ಅವರಿಗೆ ನಮಸ್ಕಾರಗಳು,

ನಾ. ದಿವಾಕರ ಅವರು ಬರದಿರುವ 'ಚುನಾವಣೆ, ರಾಜಕೀಯ ಮತ್ತು ಯುವಶಕ್ತಿ' ಲೇಖನವು ರಾಜಕೀಯ ಪಕ್ಷಗಳು ಯುವಶಕ್ತಿಯನ್ನು ಯಾವ ರೀತಿ ದುರ್ಬಳಕೆ ಮಾಡಿಕೊಳ್ಳುತ್ತಿವೆ ಹಾಗೂ ಅಲ್ಪ ಕಾಲದ ಹಣದ ಆಮಿಷಕ್ಕೆ ಬಲಿಯಾಗಿ ಚುನಾವಣಾ ಪ್ರಚಾರದಲ್ಲಿ ತೊಡಗುವ ಯುವಶಕ್ತಿ ತನ್ನ ಶಕ್ತಿಯನ್ನು ಹೇಗೆ ಅಪವ್ಯಯ ಮಾಡುತ್ತಿದೆ ಎಂಬುದಕ್ಕೆ ಪ್ರಸ್ತುತ ಲೇಖನ ಕನ್ನಡಿ ಹಿಡಿದಿದೆ.

ಯುವಪೀಳಿಗೆಯಲ್ಲಿ ರಾಜಕೀಯ ಪ್ರಜ್ಞೆ ಇಲ್ಲದಿದ್ದರೆ ಅವರು ಹರಕೆಯ ಕುರಿಗಳಾಗಿಬಿಡುತ್ತಾರೆ ಎಂಬ ಲೇಖಕರ ಹೇಳಿಕೆಯಲ್ಲಿ ಹುರುಳಿಲ್ಲದೆ ಇಲ್ಲ. ರಾಜಕೀಯ ಪ್ರಜ್ಞೆಯನ್ನು ಮೂಡಿಸುವಲ್ಲಿ ವಿಫಲವಾಗಿರುವ 'ಯಶಸ್ವೀ' ಮಾಧ್ಯಮಗಳು ಕೇವಲ ವಸ್ತುನಿಷ್ಠ ವಿಚಾರಗಳನ್ನಷ್ಟೇ ಹೇಳಿ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದು 'ಸಂವಾದ' ಅದಕ್ಕೆ ವ್ಯತಿರಿಕ್ತವಾಗಿ ಮೂಡಿಬರುತ್ತಿದೆ.

ಸಂತೋಷ್, ಬೈಕಂಪಾಡಿ

ಕಾಯಕದ ಶ್ರೇಷ್ಠತೆ ಸಾರಿದ ಲೇಖನ

ಮಾನ್ಯ ಸಂಪಾದಕರೇ,

'ಸಂವಾದ' ಪತ್ರಿಕೆಯ ಜುಲೈ ಸಂಚಿಕೆಯಲ್ಲಿ ಪ್ರಕಟವಾದ ಡಾ॥ ಅಂಬಾರಾವ ಉಪಳಾಂವಕರ ಅವರ 'ಕಾಯಕ ಸಿದ್ಧಾಂತ ವಾದ - ಒಂದು ಸಾಮಾಜಿಕ ವಿಶ್ಲೇಷಣೆ' ಎಂಬ ಲೇಖನ ಓದಿ ತುಂಬ ಸಂತೋಷವಾಯಿತು.

'ಕಾಯಕ ಸಿದ್ಧಾಂತವು ವೀರಶೈವ ಧರ್ಮದ ಒಂದು ಅಪೂರ್ವವಾದ, ವಿಶಿಷ್ಟಪೂರ್ಣವಾದ ದುಡಿಮೆ, ನೀತಿ ಹಾಗೂ ತತ್ವವಾಗಿದೆ. ವೈದಿಕ ಧರ್ಮದ ಸಂಪ್ರದಾಯಗಳಾದ ಕರ್ಮ ಮತ್ತು ವೈರಾಗ್ಯ ಸಿದ್ಧಾಂತಗಳ ಪ್ರಭಾವದಿಂದ ೧೨ನೆಯ ಶತಮಾನದಲ್ಲಿ ಸಾಮಾಜಿಕ ಮತ್ತು ನೈತಿಕ ಮಟ್ಟ ಕುಂದಿದಾಗ ಬಸವಣ್ಣನವರು ಕಾಯಕ ಸಿದ್ಧಾಂತವಾದದ ಮೂಲಕ ಹಿಂದೂ ಸಾಮಾಜಿಕ ಜೀವನಕ್ಕೆ ಚೇತನಶಕ್ತಿ ನೀಡಿದರು'. ಹಾಗೆಯೇ ಈ ಪ್ರಬಂಧದಲ್ಲಿ ಲೇಖಕರು, ಯಾವ ದುಡಿಮೆ ಕಾಯಕ ಅಲ್ಲ, ಯಾವ ದುಡಿಮೆ ಕಾಯಕ ಅಹುದು, ಎಂಬುದನ್ನು ತುಂಬ ಸ್ಪಷ್ಟವಾಗಿ ಹಾಗೂ ಗಮನಾರ್ಹವಾಗಿ ವಿವರಿಸಿದ್ದಾರೆ.

ವ್ಯಕ್ತಿಯು ತನ್ನನ್ನು ಸಮಾಜದ ಚೌಕಟ್ಟಿನಿಂದ ಭಿನ್ನವೆಂದು ಭಾವಿಸದೆ ಈ ವಿಶಾಲವಾದ ಸಮಾಜದ ಒಂದು ಅಂಗವೆಂದು ತಿಳಿಯಬೇಕಾಗುವುದು. ಲೇಖಕರು ಈ ಪ್ರಬಂಧದಲ್ಲಿ ಕಾಯಕದ ಶ್ರೇಷ್ಠತೆಯನ್ನು ಮಂದಿರದ ಶಿಖರೋಪಾದಿಯಲ್ಲಿ ಶಿವಶರಣರ ವಚನವನ್ನು ಉದ್ಧರಿಸಿ ಪರಿಣಾಮಕಾರಿಯಾಗಿ ಪ್ರತಿಷ್ಠಾಪಿಸಿದ್ದಾರೆ.

'ಪ್ರಾರ್ಥನೆ, ಧಾರ್ಮಿಕ ಚಟುವಟಿಕೆಗಳು ಅಥವಾ ತೀರ್ಥಯಾತ್ರೆಯ ಮೂಲಕ ಪರಮಾತ್ಮನನ್ನು ಸಾಕ್ಷಾತ್ಕರಿಸಲಾಗದು. ಆದರೆ ಭಕ್ತರು ಕಾಯಕದ ಮೂಲಕ ದೇವರ ಸಾಕ್ಷಾತ್ಕಾರವನ್ನು ಸಿದ್ಧಿಸಬಹುದು. ಈ ಕೆಳಗಿನ ವಚನದಲ್ಲಿ ಕಾಯಕ ಸಿದ್ಧಾಂತದ ತಿರುಳನ್ನು ಹೇಳಲಾಗಿದೆ.

ಸಂಕ್ಷಿಪ್ತವಾಗಿ ಹೇಳಬೇಕಾದರೆ ಲೇಖಕರು ಕಾಯಕ ಸಿದ್ಧಾಂತವಾದವನ್ನು ಪ್ರತಿಷ್ಠಾಪಿಸುವಲ್ಲಿ ಅನೇಕ ಸಮಾಜ ಶಾಸ್ತ್ರಜ್ಞರ ವ್ಯಾಖ್ಯೆಗಳನ್ನು ವಿಶ್ಲೇಷಿಸಿದ್ದಾರೆ. ಆ ವ್ಯಾಖ್ಯೆಗಳಿಗೆ ಕಿರೀಟವಿಟ್ಟಂತೆ, ಶರಣರ ವಚನಗಳನ್ನು ಉದ್ಧರಿಸಿದ್ದಾರೆ. ಶ್ರೀಯುತರು ಲೇಖನದ ಕೊನೆಯಲ್ಲಿ ಕೊಟ್ಟ ಗ್ರಂಥ ಋಣವೇ ಅವರು ಪಟ್ಟ ಶ್ರಮಕ್ಕೆ ಸಾಕ್ಷಿಯಾಗಿದೆ.

ವಂದನೆಗಳೊಂದಿಗೆ,

ಡಾ॥ ಮಾಣಿಕರಾವ ಧನಶ್ರೀ, ಗುಲ್ಬರ್ಗಾ

ನಿಸ್ವಾರ್ಥ ಜೀವದ ಕಣ್ಮರೆ

ಸಂಪಾದಕರಿಗೆ ವಂದನೆಗಳು,

ಕರ್ನಾಟಕ ದಲಿತ ಹೋರಾಟದ ಚರಿತ್ರೆಯ ಪುಟದಲ್ಲಿ ದಾಖಲಾದ ಬೆಲ್ಲದ ಮಡು ರಂಗಸ್ವಾಮಿ ಅವರ ನಿಧನದ ಸುದ್ದಿ ಓದಿ ತುಂಬಾ ಬೇಸರವಾಯಿತು.

ಪರರ ಸಮಸ್ಯೆಗಳೆಂದು ಪರಿಗಣಿಸದೆ ಎಲ್ಲರ ಸಮಸ್ಯೆಗಳಿಗೂ ಪರಿಹಾರ ಹುಡುಕಿಕೊಡುತ್ತಿದ್ದ ನಿಸ್ವಾರ್ಥ ಜೀವ ರಂಗಸ್ವಾಮಿಯವರದು. ಅಂತಹ ಒಂದು ಹಿರಿ ಜೀವ ಕಣ್ಮರೆಯಾದುದು ನಮಗೆ ಅಪಾರ ದುಃಖವನ್ನು ತರಿಸಿದೆ.

ತಮ್ಮ ಇರುವಿಕೆಯನ್ನು ತೋರಿಸಿಕೊಳ್ಳದೆ ತಮ್ಮ ಕೈಲಾದ ಸಮಾಜ ಸೇವೆಯನ್ನು ಮಾಡುತ್ತಾ ಜೀವನ ಸಾಗಿಸಿದ ಅವರ ರೀತಿ ಅನುಕರಣೀಯವಾದುದು.

ಅವರ ಮಹದಭಿಲಾಷೆಗಳನ್ನು ಸಾಕಾರಗೊಳಿಸಲು ಪ್ರಯತ್ನಿಸುವುದರ ಮೂಲಕ ಅವರ ಆತ್ಮಕ್ಕೆ ಶಾಂತಿಯನ್ನು ಕೋರೋಣ.

ಗಂಗರಾಜು, ತುಮಕೂರು

ಪತ್ರಾಗಾರ

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ
ರೂ: ೧೦೦/- ರೂ. ೩೦೦/- ರೂ. ೫೦೦/-

ನೌಕರರು ಮತ್ತು ವೃತ್ತಿಪರರಿಗೆ
ರೂ. ೨೦೦/- ರೂ. ೫೦೦/- ರೂ. ೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ. ೨೫೦/- ರೂ. ೬೦೦/- ರೂ. ೧೦೦೦/-

ವಿಶೇಷ ಹಿತೈಷಿ ಚಂದಾದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಮ್.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಗಲ್ಲು: ಜೈಲುವಾಸಿಗಳ ಸ್ಪಂದನ

ಜೈಲಿನಿಂದ ಪತ್ರ

ಸಂಪಾದಕರೇ,

ಗುಲ್ಬರ್ಗಾ ಸೆಂಟ್ರಲ್ ಜೈಲಿನಲ್ಲಿ ಮೂಲಭೂತ ಸೌಲಭ್ಯಗಳನ್ನು ಕೇಳಿದ್ದಷ್ಟಕ್ಕೇ ನಮ್ಮ ಮೇಲೆ ಜೈಲ್ ಅಧಿಕಾರಿಗಳು ಮಾರಣಾಂತಿಕ ಹಲ್ಲೆ ನಡೆಸಿದರು. ಅಷ್ಟಕ್ಕೂ ತೃಪ್ತರಾಗದ ಅವರು ನಮ್ಮನ್ನು ಮತ್ತಷ್ಟು ಹಿಂಸಿಸುವ ಸಲುವಾಗಿಯೇ ಬೆಳಗಾವಿ ಸೆಂಟ್ರಲ್ ಜೈಲಿಗೆ ವರ್ಗಾಯಿಸಿದರು. ಇದು ಪನಿಷ್ಮೆಂಟ್ ವರ್ಗಾವಣೆಯಾಗಿತ್ತು. ಹಾಗಾಗಿ ನಮ್ಮನ್ನು ಅಲ್ಲಿ ಅತಿ ಬಿಗಿ ಭದ್ರತೆಯಿರುವ ಅಂಧೇರಿ ಬ್ಯಾರಕ್‌ಗೆ ಸೇರಿಸಿದರು.

ಈ ಅಂಧೇರಿ ಬ್ಯಾರಕ್‌ನಲ್ಲಿ ಪ್ರಸ್ತುತ ಗಲ್ಲುಶಿಕ್ಷೆಗೆ ಒಳಗಾದವರನ್ನು ಇಡಲಾಗಿದೆ. ಅಲ್ಲಿಗೆ ನಮ್ಮನ್ನೂ ಹಾಕಿದರು. ಅಲ್ಲಿ ಸುಮಾರು ೬ ಮಂದಿ ಗಲ್ಲುಶಿಕ್ಷೆಗೆ ಒಳಗಾಗಿರುವ ಕೈದಿಗಳಿದ್ದಾರೆ. ಇವರಲ್ಲಿ ಇಬ್ಬರು ಈ ಸಾಮಾಜಿಕ ವ್ಯವಸ್ಥೆಯ ಪ್ರೇರೇಪಿತ ಕಾರಣದ ಜತೆಗೆ ತಮ್ಮ ಕ್ಷಣಿಕ ಆವೇಶದ ಸೆಳೆತಕ್ಕೆ ಸಿಲುಕಿ ಈಗ ಈ ಮೃತ್ಯುಕೂಪಕ್ಕೆ ದೂಡಲ್ಪಟ್ಟಿದ್ದಾರೆ. ದುಗುಡ ತುಂಬಿದ ಅವರ ನೋಟಗಳು ತಪ್ಪನ್ನರಿತು ಪಶ್ಚಾತ್ತಾಪ ಪಡುತ್ತಿರುವ ನಮಗೆ ಕ್ಷಮೆ ಎಂಬ ದಯೆಯು ಕರುಣಿಸದಿರದಾ ಎಂಬ ದೈನ್ಯತೆ ತುಂಬಿ ಮರುಕ ಹುಟ್ಟಿಸುತ್ತವೆ... ಇವರಿಬ್ಬರಲ್ಲಿ ಯಾರೂ ನಟೋರಿಯಸ್ ಗೂಂಡಾಗಳಲ್ಲ. ಆಯಾ ಸಂದರ್ಭಗಳಲ್ಲಿ ಹುಟ್ಟಿಕೊಂಡ ವಿವಾದ ಪ್ರಕೋಪಕ್ಕೆ ಹೋಗಿದ್ದರಿಂದ ಮೂಡಿದ ಆವೇಶವು ಕೊಲೆಯಲ್ಲಿ ಪರ್ಯವಸಾನಗೊಂಡಿದೆ. ಈಗ ಪಶ್ಚಾತ್ತಾಪ ಪಡುತ್ತ ದೇವರಲ್ಲಿ ಮೊರೆ ಇಟ್ಟು ಪ್ರಾರ್ಥಿಸುತ್ತಿದ್ದಾರೆ.

ಇವರ ನಂತರ ಉಳಿದ ನಾಲ್ಕು ಮಂದಿ ಆ ವೀರಪ್ಪನ್‌ನ ಕರಿನೆರಳು ಮತ್ತು ಪೊಲೀಸರ ದೌರ್ಜನ್ಯದ ಪ್ರಹಾರಕ್ಕೆ ಸಿಲುಕಿ ಬಲಿಯಾಗಿರುವ ಬಡಪಾಯಿ ರೈತ ಕೂಲಿಗಳಾಗಿದ್ದಾರೆ. ಮಾಡದ ತಪ್ಪಿಗೆ ಅನ್ಯಾಯವಾಗಿ ಬಲಿಯಾಗುತ್ತಿದ್ದೇವಲ್ಲ ಎಂಬ ಕೊರಗು ಅವರನ್ನು ಕೊರೆಯುತ್ತಿದೆ.

ಇತ್ತೀಚೆಗಿನ ನಿವೃತ್ತ ಎಸಿಪಿ ಸಂಗ್ರಾಮ್ ಸಿಂಗ್‌ರ ಹೇಳಿಕೆಗಳಿಂದಾಗಿ ವೀರಪ್ಪನ್ ಪ್ರಸ್ತಾಪ ಮತ್ತೊಮ್ಮೆ ಚರ್ಚೆಗೆ ಗ್ರಾಸವಾಗಿದೆ. ಈ ಚರ್ಚೆಗಳಲ್ಲಿ ಕಡೆಗಣಿಸಲ್ಪಡುತ್ತಿರುವ ಈ ಬಡಪಾಯಿಗಳಲ್ಲಿ ಮತ್ತೊಮ್ಮೆ ಹಲವು ಪ್ರಶ್ನೆಗಳು ಕ್ಷೀಣವಾಗಿ ಹೊರ ಹೊಮ್ಮುತ್ತಿವೆ.

ಬಲಿಷ್ಠ ಗುತ್ತಿಗೆದಾರರೂ, ರಾಜಕಾರಣಿಗಳು, ಮಂತ್ರಿ ಮಹೋದಯರೊಂದಿಗೆ ವೀರಪ್ಪನ್ ರಾಜಾರೋಷವಾಗಿ ಸಂಪರ್ಕಗಳನ್ನು ಇಟ್ಟುಕೊಂಡಿರುವುದು ಬಹಿರಂಗವಾಗಿ ಕಂಡುಬರುತ್ತಿದ್ದರೂ ಯಾವುದೇ ರೀತಿಯ ಬಲವಾದ ಸಾಕ್ಷ್ಯಾಧಾರಗಳಿಲ್ಲದಿದ್ದರೂ ನಮ್ಮನ್ನೇ ಏಕೆ ಬಲಿಪಶುಗಳನ್ನಾಗಿ ಮಾಡುತ್ತಿದ್ದಾರೆ!

ವೀರಪ್ಪನ್‌ನೊಂದಿಗೆ ನಿಜವಾದ ಸಂಬಂಧ ವಿಟ್ಟುಕೊಂಡಿರುವವರೂ, ಹಣ, ಮದ್ದುಗುಂಡುಗಳನ್ನು ಸಾಗಿಸುತ್ತಿರುವವರು ರಾಜರಾಗಿ ಮೆರೆಯುತ್ತಿದ್ದಾರೆ. ಪೊಲೀಸರು ಮಾತ್ರ ಹಳ್ಳಿಗಳಲ್ಲಿ ಗುಡಿಸಲುಗಳಿಗೆ ಬೆಂಕಿ ಹಚ್ಚಿ, ಅತ್ಯಾಚಾರ, ದೌರ್ಜನ್ಯಗಳನ್ನು ಎಸಗಿ, ಎಷ್ಟೋ ಮಂದಿ ಅಮಾಯಕರನ್ನು ಎನ್‌ಕೌಂಟರ್‌ಗಳಲ್ಲಿ ಕೊಂದು, ನಿರಪರಾಧಿಗಳನ್ನು ಹಿಂಸಿಸುತ್ತಿರುವುದು ಯಾವ ನ್ಯಾಯ ?

ಸದಾಶಿವ ಕಮಿಷನ್ ತನಿಖೆಗೆ ಪೊಲೀಸರು ಸ್ಟೇ ತಂದಿದ್ದಷ್ಟಕ್ಕೇ ಕಮೀಷನ್ ಮೂಲೆ ಗುಂಪಾದದ್ದೇಕೆ? ನಮ್ಮ ಮೇಲೆ ಹೊರಿಸಿರುವ ಆರೋಪ ಗಳನ್ನು ಕನಿಷ್ಠ ಪಕ್ಷ ನಿಷ್ಪಕ್ಷಪಾತವಾದ ತನಿಖೆಯನ್ನು ನಡೆಸುತ್ತಿಲ್ಲ ವೇಕೆ? ಗುಜರಾತಿನ ಬೆಸ್ಟ್ ಬೇಕರಿ ಕೇಸಿನಲ್ಲಿ ಮರುತನಿಖೆಗೆ ಆದೇಶಿಸಿದ ಸುಪ್ರೀಂ ಕೋರ್ಟ್ ಅದೇ ರೀತಿ ನಮ್ಮ ವಿಷಯ ದಲ್ಲಿ ಸಿಬಿಐ ತನಿಖೆಗೆ ಯಾತಕ್ಕಾಗಿ ಆದೇಶಿಸುತ್ತಿಲ್ಲ? ನಿಷ್ಪಕ್ಷ ಪಾತವಾದ ತನಿಖೆಯನ್ನು ನಡೆಸಿ ನಾವು ಅಪರಾಧಿಗಳೇ ಎಂದು ಸಾಬೀತಾದರೆ ನಮ್ಮ ಮನೆ ಮಂದಿಗೆಲ್ಲಾ ಗಲ್ಲು ಶಿಕ್ಷೆ ನೀಡಲಿ! ಸ್ಪಷ್ಟತನಿಖೆಯನ್ನೇ ನಡೆಸದೆ ಕೇವಲ ಗೋಪಾಲ ಸ್ವಾಮಿ ಎಂಬ ಎಸ್‌ಐ ರ ಸಾಕ್ಷಿಯನ್ನು ಮುಂದುಮಾಡಿ ನಮ್ಮನ್ನು ಶಿಕ್ಷಿಸುವುದು ಯಾವ ನ್ಯಾಯ ? ೧೦ ಹೆಜ್ಜೆ ದೂರದ ಮನುಷ್ಯನನ್ನೂ ನೋಡಲಾಗದಷ್ಟು ದಟ್ಟ ಕಾಡು ಪ್ರದೇಶದಲ್ಲಿ, ಅದೂ ನೆಲಬಾಂಬ್ ಸಿಡಿತದಿಂದ ಎದ್ದ ದಟ್ಟವಾದ ಧೂಳು, ಇನ್ನೊಂದೆಡೆ ತೀವ್ರಗಾಯಗಳೊಂದಿಗೆ ತುಂಬಾ ಗಾಬರಿ ಯಿಂದ ಇರಬಹುದಾದ ಆ ಎಸ್‌ಐ ನಮ್ಮನ್ನು ಗುರ್ತಿಸಿದ್ದೇ ನೆಂದು ಹೇಳುವುದನ್ನು ಯಾವ ಕೋನದಿಂದ ನೋಡಿದರು ನಂಬಲು ಸಾಧ್ಯವಾಗುವುದೇ? ಡಾ|| ರಾಜ್ ಕಿಡ್ನಾಪ್ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ರನ್ನೊಳಗೊಂಡಂತೆ ನೆಲಬಾಂಬ್ ಸಿಡಿತದಲ್ಲಿ ಸತ್ತಿರುವ ರೈತರ ಕುಟುಂಬಗಳೂ ನಮ್ಮನ್ನು ಅಮಾಯಕರು, ನಿರಪರಾಧಿಗಳೆಂದು ಬಹಿರಂಗವಾಗೇ ಹೇಳುತ್ತಿದ್ದರೂ ನ್ಯಾಯಾಲಯಗಳು ಕೇಳಿಸಿಕೊಳ್ಳದಿರುವುದು ಅದೆಷ್ಟು ಘೋರವಾಗಿದೆ!

ಸರ್ವೋನ್ನತ ನ್ಯಾಯಸ್ಥಾನವೇ ನಮ್ಮ ವಿಷಯದಲ್ಲಿ ಸತ್ಯವನ್ನು ಹೊರಗೆಳೆಯುವ ಪ್ರಯತ್ನ ಕೈಬಿಟ್ಟರೆ ನಾವು ಇನ್ನಾರಲ್ಲಿ ಮೊರೆ ಇಡುವುದು ? ಒಂದು ಕಡೆ ವೀರಪ್ಪನ್‌ಗೆ ಪೊಲೀಸ್ ಅಧಿಕಾರಿಗಳೇ ಕೋಟ್ಯಾಂತರ ರೂ.ಗಳನ್ನು ತಲುಪಿಸುತ್ತಾ, ಇನ್ನೊಂದು ಕಡೆ ಅಂತದೇ ಪೊಲೀಸ್ ಅಧಿಕಾರಿಯು ನಮ್ಮ ಗಲ್ಲು ಶಿಕ್ಷೆಗೆ ಪ್ರಧಾನ ಸಾಕ್ಷಿಯಾಗುತ್ತಿರುವುದು ಅದೆಷ್ಟು ದಾರುಣವಾಗಿದೆ !

ಸರ್ವೋನ್ನತ ನ್ಯಾಯಸ್ಥಾನವೇ ನಮ್ಮ ವಿಷಯದಲ್ಲಿ ಸತ್ಯವನ್ನು ಹೊರಗೆಳೆಯುವ ಪ್ರಯತ್ನ ಕೈಬಿಟ್ಟರೆ ನಾವು ಇನ್ನಾರಲ್ಲಿ ಮೊರೆ ಇಡುವುದು? ಒಂದು ಕಡೆ ವೀರಪ್ಪನ್‌ಗೆ ಪೊಲೀಸ್ ಅಧಿಕಾರಿಗಳೇ ಕೋಟ್ಯಾಂತರ ರೂ.ಗಳನ್ನು ತಲುಪಿಸುತ್ತಾ, ಇನ್ನೊಂದು ಕಡೆ ಅಂತದೇ ಪೊಲೀಸ್ ಅಧಿಕಾರಿಯು ನಮ್ಮ ಗಲ್ಲು ಶಿಕ್ಷೆಗೆ ಪ್ರಧಾನ ಸಾಕ್ಷಿಯಾಗುತ್ತಿರುವುದು ಅದೆಷ್ಟು ದಾರುಣವಾಗಿದೆ!

ಇಂತಹ ಹತ್ತಾರು ಪ್ರಶ್ನೆಗಳೊಂದಿಗೆ ಹೋಗಲಿ ಕನಿಷ್ಠ ಈಗಲಾದರೂ ಸಿಬಿಐನಿಂದ ನಿಷ್ಪಕ್ಷಪಾತವಾದ ತನಿಖೆಯನ್ನು ನಡೆಸಿ, ಸತ್ಯಾಂಶಗಳನ್ನು ಹೊರ ತೆಗೆದು ನಿಜವಾದ ಅಪರಾಧಿಗಳು ಯಾರೆಂಬುದನ್ನು ಪತ್ತೆ ಹಚ್ಚಲಿ ಎಂಬ ಅವರ ನೇರ ಬೇಡಿಕೆಯನ್ನು ಒಮ್ಮೆ ಅವಲೋಕಿಸಿ ನೋಡಿದಾಗ ಅವರು ನಿರಪರಾಧಿಗಳು ಎಂಬ ಅನಿಸಿಕೆಗೆ ಪುಷ್ಟಿ ದೊರೆಯುತ್ತದೆ. ವೀರಪ್ಪನ್‌ನನ್ನೂ, ನಿಜವಾದ ಅಪರಾಧಿಗಳನ್ನೂ ಹಿಡಿಯಲಾಗದೆ, 'ಅತ್ತೆ ಮೇಲಿನ ಕೋಪ ಕೊತ್ತಿ ಮೇಲೆ' ಎಂಬಂತೆ ಅಮಾಯಕರನ್ನು ಬಲಿಗೈದು ಕೈತೊಳೆದುಕೊಳ್ಳುತ್ತಿರುವಂತೆ ಎದ್ದು ಕಾಣುತ್ತಿದೆ.

ಅದಾಗಿಯೇ ಇಂದು ಮತ್ತೊಮ್ಮೆ ಮಾನವೀಯತಾವಾದಿಗಳೂ, ಪ್ರಜಾತಂತ್ರವಾದಿಗಳೂ, ವಿಚಾರವಂತರೂ, ಈ ನತದೃಷ್ಟರ ಧ್ವನಿಗೆ ಧ್ವನಿ ಕೂಡಿಸಬೇಕಾದುದು ಪ್ರಜಾತಾಂತ್ರಿಕ ಜವಾಬ್ದಾರಿಯಾಗಿದೆ ಅಂತ ಅನ್ನಿಸುತ್ತಿದೆ. ಅದರಲ್ಲಿ ಭಾಗವಾಗಿಯೇ ನಾವು ಕೂಡಾ ಈ ಬಲಿಪಶುಗಳ ಕ್ಷೀಣ ಸ್ವರವನ್ನು ಹೊರ ಪ್ರಪಂಚಕ್ಕೆ ಮುಟ್ಟಿಸುವ ಮಾನವೀಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇವೆ.

ಒಟ್ಟಾರೆ ಗಲ್ಲು ಶಿಕ್ಷೆಯ ಬಗ್ಗೆ ಎನ್ನುವುದಾದರೆ, '...ಸುಪ್ರೀಂ ಕೋರ್ಟಿನಲ್ಲಿಯೇ ಒಂದು ಶಿಕ್ಷೆಯಾಗಿ ಮರಣದಂಡನೆಗೆ ಇರುವ ಚಲಾವಣೆಯನ್ನು ಅನೇಕ ಸಾರಿ ಪ್ರಶ್ನಿಸಿರುವುದೂ ನಡೆದಿದೆ' ಎಂದೂ, ಸುಪ್ರೀಂಕೋರ್ಟ್ ನಿರ್ದೇಶಿತ ನಿಯಮದ ಪ್ರಕಾರ '...ಮರಣ ಶಿಕ್ಷೆಯನ್ನು ತುಂಬಾ ಅಪರೂಪ ಸಂದರ್ಭಗಳಲ್ಲಿಯೇ, ಅತ್ಯಂತ ಪ್ರಬಲವಾದ ಕಾರಣಗಳಿಂದಲೇ ವಿಧಿಸಬೇಕಾಗಿರುತ್ತದೆ' ಎಂದೂ 'ಸಂವಿಧಾನ ಪೀಠಿಕೆಯಲ್ಲೂ, ಆದೇಶಿತ ಸೂತ್ರಗಳಲ್ಲಿಯೂ 'ನ್ಯಾಯ'ವನ್ನೇ ಪ್ರಧಾನವಾಗಿ ಒತ್ತಿ ಹೇಳುತ್ತಿರುವುದೂ, ಸಂವಿಧಾನಾತ್ಮಕ ವಿಧಿಗಳ ಕುರಿತ ಅಧ್ಯಾಯವು ಒಬ್ಬರ ಪ್ರಾಣ ತೆಗೆಯುವುದನ್ನು ವಿರೋಧಿಸುತ್ತದೆ.' ಎಂದೂ ಪ್ರಜಾತಂತ್ರವಾದಿಗಳು ಎತ್ತಿ ತೋರುತ್ತಿರುವ ಅಂಶಗಳನ್ನು ಈ ಆರು ಮಂದಿಯ ವಿಷಯಕ್ಕೂ ಅನ್ವಯಿಸಬೇಕಿದೆ.

ಈ ಹಿನ್ನೆಲೆಯಲ್ಲಿ, ಮೃತ್ಯುವಿನ ಅಂಚಿನಲ್ಲಿರುವ ಈ ಆರು ಮಂದಿಯ ವಿಷಯದಲ್ಲಿ ಪ್ರಜಾತಂತ್ರವಾದಿಗಳ ಸ್ಪಂದನೆಗಳು ಹೊರಹೊಮ್ಮಿ ಬರಲೆಂದು ಮನವಿ ಮಾಡಿಕೊಳ್ಳುತ್ತಿದ್ದೇವೆ.

ರಮೇಶ್, ಗೋಪಾಲ್, ಮನೋಹರ್,
ಕೇಂದ್ರ ಕಾರಾಗೃಹ, ಬೆಳಗಾವಿ

ಗಲ್ಲು ಶಿಕ್ಷಾ ಕೈದಿಗಳ ಕಳಕಳಿಯ ಮನವಿಗೆ ಸ್ಪಂದಿಸೋಣ।
ಗಲ್ಲು ಶಿಕ್ಷೆ ರದ್ದತಿಗಾಗಿ ಮಾನವೀಯತೆಯಿಂದ ಪ್ರತಿಕ್ರಿಯಿಸೋಣ।

ಸಂಪಾದಕೀಯ



ದೇಶಭಕ್ತರೆಂಬ ಆಷಾಢಭೂತಿಗಳು

ಕಳೆದ ಒಂದು ತಿಂಗಳಿನಿಂದ ಈ ಪ್ರಹಸನವನ್ನು ನೀವು ನೋಡುತ್ತಿದ್ದೀರಿ. ಹುಬ್ಬಳ್ಳಿಯ ಈದ್ಗಾ ಮೈದಾನ ವಿವಾದಕ್ಕೆ ಸಂಬಂಧಿಸಿದ ಗಲಭೆ, ಲೂಟಿ, ಪ್ರಚೋದನೆಯ ಕ್ರಿಮಿನಲ್ ಪ್ರಕರಣ, ರಾಷ್ಟ್ರಧ್ವಜ ಹಾಗೂ ದೇಶಭಕ್ತಿಯ ಪ್ರಕರಣವಾಗಿ ಮಾರ್ಪಟ್ಟು ದೇಶಾದ್ಯಂತ ಹಿಂದೆಂದೂ ನಡೆಯದಷ್ಟು ಪ್ರಮಾಣದಲ್ಲಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಯಾವ ರಾಷ್ಟ್ರಧ್ವಜವನ್ನು ದೇಶಭಕ್ತಿಯ ಸಂಕೇತವೆನ್ನುತ್ತಾರೋ ಆ ರಾಷ್ಟ್ರಧ್ವಜವನ್ನು ಪುಢಾರಿ ಸನ್ಯಾಸಿನಿ ಉಮಾಭಾರತಿ ಮೂಲಕ ಕೋಮುವಾದಿಗಳು ಅಲ್ಪಸಂಖ್ಯಾತರನ್ನು ಸದೆಬಡಿಯುವ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಈ ಅವಸರದಲ್ಲಿ ರಾಷ್ಟ್ರಧ್ವಜವನ್ನು ಬಿಜೆಪಿ ತನ್ನ ರಾಜಕೀಯ ಬ್ರಾಂಡ್ ಮಾಡೆಲ್ ಆಗಿ ಬಳಸಿಕೊಳ್ಳುತ್ತಿದೆ.

ಉಮಾಭಾರತಿ ಹತ್ತು ವರ್ಷಗಳ ಹಿಂದಿನ ಆರೋಪಿ. ಆಕೆ ಎಂದೂ ನ್ಯಾಯಾಲಯಕ್ಕೆ ಹಾಜರಾಗಲೇ ಇಲ್ಲ. ಮೊಕದ್ದಮೆ ಹಿಂತೆಗೆಸಲು ನಿರಂತರವಾಗಿ ರಾಜಕೀಯ ಒತ್ತಡ ಹೇರುತ್ತಲೇ ಬಂದರು. ಕಳೆದ ಚುನಾವಣೆಯಲ್ಲಿ ಕಾನೂನಿನಂತೆ ಚುನಾವಣಾ ಆಯೋಗದ ಎದುರು ಘೋಷಿಸಲೇಬೇಕಾದ ಅಪರಾಧ ವಿವರದಲ್ಲಿ ಈ ಪ್ರಕರಣವನ್ನು ಆಕೆ ಘೋಷಿಸಿಕೊಳ್ಳಲಿಲ್ಲ. ಕಾನೂನು-ನ್ಯಾಯಾಂಗಕ್ಕೆ ಸದಾ ವಿರುದ್ಧವಾಗಿ ನಡೆದುಕೊಂಡೇ ಬಂದರು. ಕಡೆಗೂ ಅದು ಕುತ್ತಿಗೆಗೆ ಬಂದಾಗ ಅದನ್ನು ಕಾನೂನು ರೀತಿ ಎದುರಿಸಲಿಲ್ಲ. ದೇಶಭಕ್ತಿಯ ಸೋಗು ಹಾಕಿದರು. ಜನರನ್ನು ದಾರಿತಪ್ಪಿಸಿ ರಾಜಕೀಯ ಲಾಭ ಪಡೆಯುವ ಆಟ ಹೂಡಿದರು. ದೇಶಭಕ್ತರೆಂಬ ಈ ಆಷಾಢಭೂತಿಗಳು, ಇಷ್ಟಕ್ಕೇ ಸುಮ್ಮನಾಗಲಿಲ್ಲ. 'ತಿರಂಗ ಯಾತ್ರೆ' ಎಂಬ 'ಕಮಂಗಿ ಯಾತ್ರೆ' ನಡೆಸಿದರು. ಮಾಜಿ ಪ್ರಧಾನಿ, ಉಪಪ್ರಧಾನಿಯಿಂದ ಹಿಡಿದು ಎಲ್ಲಾ ಮುಖಂಡರೂ ಬೆಂಗಳೂರಿಗೆ ಬಂದು ಅದನ್ನು ಕೋಮುವಾದಿಗಳ ಅಡ್ಡೆಯನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದರು. ಕರ್ನಾಟಕ ಜನರ ದಿವ್ಯ ನಿರ್ಲಕ್ಷವೇ ಇವರ ಈ ಆಷಾಢಭೂತಿತನಕ್ಕೆ ತಕ್ಕ ಉತ್ತರವಾಯಿತು.

ರಾಷ್ಟ್ರಧ್ವಜಕ್ಕೆ ತನ್ನದೇ ಆದ ಧ್ವಜಸಂಹಿತೆ ಎನ್ನುವುದೊಂದು ಇದೆ ಎಂಬ ಕನಿಷ್ಠ ಜ್ಞಾನವಾದರೂ ಈ ನಾಯಕ ಮಣಿಗಳಿಗೆ ಇರಬಾರದೆ? ಅದರ ಪಾವಿತ್ರ್ಯ ಅಪಾವಿತ್ರ್ಯದ ವಿಚಾರ ಬೇರೆ. ಆದರೆ ಸಂವಿಧಾನ-ಕಾನೂನು-ನೀತಿಗಳನ್ನು ಅನುಸರಿಸಿ ನಡೆಯಬೇಕಾದ ಜನ ಅದರಲ್ಲೂ ಆಳುವ ರಾಜಕಾರಣಿಗಳು ರಾಜಾರೋಷವಾಗಿ ಇಷ್ಟೊಂದು ಪುಂಡಾಟಕೆಗೆ ಇಳಿದರೆ ಬೇರೆಯವರ ಪಾಡೇನು? ಉಮಾಭಾರತಿ ಭೋಪಾಲ್‌ನಿಂದ ಹೊರಟು, ಹುಬ್ಬಳ್ಳಿ ತಲುಪುವವರೆಗೆ ರಾಷ್ಟ್ರಧ್ವಜವನ್ನು ಅವರು ಬಳಸಿಕೊಂಡದ್ದನ್ನು ನೋಡಿದರೆ ಇವರ ರಾಷ್ಟ್ರಪ್ರೇಮ, ದೇಶಭಕ್ತಿ ಎಂಥ ನಾಟಕ ಅನ್ನುವುದು ಯಾರಿಗಾದರೂ ಅರ್ಥವಾಗುತ್ತದೆ. ಇಷ್ಟಾದರೂ ತಾವೇ ದೇಶಭಕ್ತರು, ರಾಷ್ಟ್ರಪ್ರೇಮಿಗಳು ಎಂಬ ಹಸಿ ಸುಳ್ಳು ಹೇಳುವುದನ್ನು ಬಿಟ್ಟಿಲ್ಲದಿರುವುದು ಇವರೆಂಥ ಭಂಡರೆನ್ನುವುದನ್ನು ಸಾರಿ ಹೇಳುತ್ತದೆ.

ಸೂರ್ಯ ಮುಳುಗಿದ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಬಾರದು, ರಾಷ್ಟ್ರಧ್ವಜ ಹಾರಾಡುವಾಗ ಅಕ್ಕ ಪಕ್ಕ ಬೇರಾವುದೇ ಧ್ವಜ ಇರಬಾರದು, ಬೇರೆ ಧ್ವಜಗಳು ರಾಷ್ಟ್ರಧ್ವಜಕ್ಕಿಂತ ಎತ್ತರ ಇರಬಾರದು - ಇವೇ ಮೊದಲಾದ ನಿಯಮಗಳು ಧ್ವಜಸಂಹಿತೆಯಲ್ಲಿವೆ. ಆದರೂ ಈ ಎಲ್ಲಾ ನಿಯಮಗಳನ್ನೂ ಉಮಾಭಾರತಿ ಮತ್ತವರ ಪರಿವಾರ ಗಾಳಿಗೆ ತೂರಿದರು. ಒಂದು ಹಂತದಲ್ಲಂತೂ ಉಮಾಭಾರತಿ ಭಾಷಣಕ್ಕೆಂದು ಕಾರಿನ ಮೇಲೇರುವ ಆತುರದಲ್ಲಿ ಕೈಲಿ ಹಿಡಿದಿದ್ದ ರಾಷ್ಟ್ರಧ್ವಜವನ್ನು ಕಾರಿನ ಬಯನೆಟ್ಟಿನ ಮೇಲೆ ಎಸೆದೇ ಬಿಟ್ಟರು! ರಾಷ್ಟ್ರಧ್ವಜದ ಗೌರವ ಕಾಪಾಡಲು ಪ್ರಾಣತ್ಯಾಗಕ್ಕೂ ಸಿದ್ಧರಾದ ಅವರದು ಎಂಥ ದೇಶಭಕ್ತಿ ನೋಡಿ!

ಬಿಜೆಪಿ ಮತ್ತು ಅವರ ಸಂಘ ಪರಿವಾರದ ಗೆಳೆಯರು ಎಂದಾದರೂ ಸಂವಿಧಾನಬದ್ಧವಾಗಿ ನಡೆದುಕೊಂಡಿದ್ದಾರೆಯೇ? ಎಂದು ಪ್ರಶ್ನಿಸಿಕೊಳ್ಳಬೇಕು. ರಾಜ್ಯಾಂಗ ಬದ್ಧವಾಗಿ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರ ಗದ್ದುಗೆ ಏರಿದ ಕ್ಷಣದಿಂದಲೇ ರಾಜ್ಯಾಂಗವನ್ನು ತಿರಸ್ಕರಿಸಿ, ಪುರೋಹಿತರ ಪಂಚಾಂಗದ ಮೂಲಕ ದೇಶ ಆಳುವ ಹುನ್ನಾರಕ್ಕಿಳಿದರು. ನಿರಂತರವಾಗಿ ಸಮಾಜದಲ್ಲಿ ಆಂತರಿಕ ಕ್ಷೋಭೆಯನ್ನು ಹೆಚ್ಚಿಸತೊಡಗಿದರು. ಜನರಲ್ಲಿ ಪರಸ್ಪರ ಗುಮಾನಿ ಅನುಮಾನ ಹಾಗೂ ಭಯಗಳನ್ನು ಹುಟ್ಟಿಸಿ ಅವರೆಂದೂ ಸಹಜ ಪ್ರೀತಿ ವಿಶ್ವಾಸದಿಂದ ಬದುಕಲಾರದಂಥ ವಾತಾವರಣ ಸೃಷ್ಟಿ ಮಾಡತೊಡಗಿದರು. ಮೂಲಭೂತವಾದವೇ ಸಾಮಾಜಿಕ ಮೌಲ್ಯ ಎಂಬ ಭ್ರಮೆಯನ್ನು ಜನರ ಮನಸ್ಸಿನಲ್ಲಿ ಬಿತ್ತತೊಡಗಿದರು.

ಅಧಿಕಾರ ಬಂದಾಗ ಸಂವಿಧಾನೇತರವಾಗಿ ಆಡಳಿತ ನಡೆಸಿದ ಈ ಆಷಾಢಭೂತಿಗಳು, ಅಧಿಕಾರ ಕಳೆದುಕೊಂಡ ಕೂಡಲೇ ಹತಾಷೆಯಿಂದ ಪತರುಗುಟ್ಟತೊಡಗಿದರು. ಸೋನಿಯಾ ಪ್ರಧಾನಿಯಾಗುವರೆಂಬ ಸುದ್ದಿ ಕಿವಿಗೆ ಬಿದ್ದದ್ದೇ ಎಲ್ಲಾ ನಾಗರಿಕ ಮರ್ಯಾದೆಯನ್ನು ಮೀರಿ ವರ್ತಿಸತೊಡಗಿದರು. ಸಾಂಪ್ರದಾಯಿಕ ಹಿಂದೂ ಮಹಿಳೆಯ ಅಪರಾವತಾರದಂತಿರುವ ಸುಷ್ಮಾ ಸ್ವರಾಜ್ ತನ್ನ ಗಂಡ ಬದುಕಿದ್ದಾಗಲೇ ತಲೆ ಬೋಳಿಸಿಕೊಂಡು ಪ್ರತಿಭಟಿಸುವುದಾಗಿ ಚೀರಾಡಿದರು. ತಮ್ಮ ಉದ್ದೇಶ ಸಾಧನೆಗೆ ಎಂಥ ಹೀನ ಕೃತ್ಯಕ್ಕೂ ಇವರು ಸಿದ್ಧ ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

ಮೊನ್ನಿನ ಜನಗಣತಿ ವಿಚಾರವನ್ನೇ ನೋಡಿ. ೨೦೦೧ರ ಜನಗಣತಿಯಲ್ಲಿ ಮುಸ್ಲೀಮರ ಜನಸಂಖ್ಯೆ ಹೆಚ್ಚಳದ ಪ್ರಮಾಣ, ಹಿಂದೂ ಜನಸಂಖ್ಯಾ ಹೆಚ್ಚಳದ ಪ್ರಮಾಣಕ್ಕಿಂತ ಅಧಿಕವಾಗಿದೆ ಎಂಬ ವರದಿಯನ್ನೇ ಮುಂದೆ ಮಾಡಿ ಸಂಘ ಪರಿವಾರ ಬೊಬ್ಬೆಹೊಡೆಯತೊಡಗಿದೆ.

ಆದರೆ ನಿಜ ಏನು ಗೊತ್ತೆ? ೨೦೦೧ಕ್ಕಿಂತ ಹಿಂದೆ ನಡೆದ ಜನಗಣತಿಯಲ್ಲಿ ಜಮ್ಮು-ಕಾಶ್ಮೀರ ಮತ್ತು ಅಸ್ಸಾಂ ರಾಜ್ಯಗಳನ್ನು ಹೊರತುಪಡಿಸಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಈ ರಾಜ್ಯಗಳನ್ನು ಸೇರಿಸಿಕೊಂಡು ವಿವಿಧ ಧರ್ಮಗಳ ಜನಗಣತಿ ನಡೆದಿದೆ. ಈ ಎರಡೂ ರಾಜ್ಯಗಳನ್ನು ಹೊರತುಪಡಿಸಿದರೆ ಮುಸ್ಲಿಮರ ಜನಸಂಖ್ಯಾ ಹೆಚ್ಚಳದ ಪ್ರಮಾಣ ಕೇವಲ ಶೇ ೨೯.೩ ರಷ್ಟು. ಅಂದರೆ೧೯೮೧-೯೧ರ ಜನಗಣತಿಗಿಂತ ಕಡಿಮೆ (ಹಿಂದೆ ಅದು ಶೇ ೩೨.೮ ಆಗಿತ್ತು). ಆದರೂ ಸಂಘ ಪರಿವಾರ ಈ ಸತ್ಯವನ್ನು ಮುಚ್ಚಿಟ್ಟು ಅಪಪ್ರಚಾರ ನಡೆಸುತ್ತಿದೆ. ಮಾಧ್ಯಮಗಳೂ ಈ ಸತ್ಯವನ್ನು ಹುಡುಕುವ ಪ್ರಯತ್ನ ಮಾಡುತ್ತಿಲ್ಲ.

ಬರೀ ಹಸಿಸುಳ್ಳು ಭಂಡತನ ಮತ್ತು ಆಷಾಡಭೂತಿತನವೇ ಧರ್ಮವೆಂದು ಈ ಮನುವಾದಿಗಳು ನಂಬಿದ್ದಾರೆ. ಅವರಿಗೆ ಸತ್ಯ-ಪ್ರೀತಿ-ಸಹಬಾಳ್ವೆಯಲ್ಲಿ ನಂಬಿಕೆಯೇ ಇಲ್ಲ. ಭಯ-ತಲ್ಲಣ-ಘಾತಕತನಗಳ ಮೂಲಕ ಮಾತ್ರ ದೇಶವನ್ನು ಆಳಬಹುದೆಂಬ ನಂಬಿಕೆ ಅವರದ್ದು. ಐದು ಸಾವಿರ ವರ್ಷಗಳ ಭಾರತೀಯ ಪರಂಪರೆ-ಇತಿಹಾಸದಲ್ಲಿ ಮೊಗಲರು ಮತ್ತು ಬ್ರಿಟೀಷರ ೫೦೦-೬೦೦ ವರ್ಷಗಳನ್ನು ಬಿಟ್ಟರೆ ಉಳಿದ ೪೪೦೦-೪೫೦೦ ವರ್ಷಗಳನ್ನು ಈ 'ಭಯ ಸಿದ್ಧಾಂತ' ದಿಂದಲೇ ಇವರು ಆಳಿದ್ದಾರೆ!

ಆದರೆ ಪ್ರೀತಿ-ವಿಶ್ವಾಸಗಳಲ್ಲಿ ಈಗಲೂ ನಂಬಿಕೆ ಇರುವ ಭಾರತೀಯರು ಈಗಾಗಲೇ ಅವರನ್ನು ತಿರಸ್ಕರಿಸಿದ್ದಾರೆ. ಮುಂದೂ ತಿರಸ್ಕರಿಸುತ್ತಾರೆ!

○ ಇಂದೂಧರ ಹೊನ್ನಾಪುರ

ಅಂತರಂಗ

ವಿವಾದ

ಇಂದು ನಮ್ಮ ಮುಂದಿರುವ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಕಳಕಳಿಯಿಲ್ಲದ ನಾಯಕರುಗಳು ಭಾಷೆಯ ಅಮಲನ್ನು ತಿನ್ನಿಸಿ ಜನರನ್ನು ಒಡೆಯುತ್ತಿದ್ದಾರೆ. ತಮ್ಮ ತಮ್ಮದೇ ಭಾಷೆಯನ್ನಾಡುವ ಕಾರ್ಮಿಕರ ದುಸ್ಥಿತಿಗಳ ಬಗ್ಗೆ ಇವರುಗಳು ಎಂದಾದರೂ ಮಾತನಾಡಿದ್ದಾರೆಯೇ ? ಎರಡೂ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ಅದರ ಕಾರಣಗಳು ಬೇರೆಬೇರೆಯಾಗಿರುವುದಿಲ್ಲ. ಕೂಲಿ ಕಾರ್ಮಿಕರು ಬದುಕುವ ಆಸೆಯನ್ನೇ ಕಳೆದುಕೊಂಡಿದ್ದರೆ ಅದಕ್ಕೂ ಎರಡೂ ಕಡೆ ಕಾರಣಗಳು ಒಂದೇ ಆಗಿರುತ್ತವೆ. ಈ ಹೋರಾಟಗಾರರು ಕಾವೇರಿ ವಿಚಾರ ಬಂದಾಗ ಮಾತ್ರ ಪ್ರಚಾರಕ್ಕೆ ಬರುತ್ತಾರೆ. ಮಿಕ್ಕ ಹೋರಾಟಗಳ ಸಮಯದಲ್ಲಿ ಇವರ ಹೆಸರುಗಳೇ ಇರುವುದಿಲ್ಲ.

○ ಬಿ. ಕನಕರಾಜು

ಭಾಷೆ ಹಾಗೂ ಸಮಾಜ

ಕಾವೇರಿ ಹೋರಾಟದ ಹಿನ್ನೆಲೆಯಲ್ಲಿ



ಹತ್ತಾರು ವರ್ಷಗಳಿಂದ ನಡೆಯುತ್ತಿರೋ ಕಾವೇರಿ ವಿವಾದ ತಮಿಳುನಾಡು ಹಾಗೂ ಕರ್ನಾಟಕದ ನಡುವೆ ಒಂದು ಕಂದಕವನ್ನೇ ಸೃಷ್ಟಿ ಮಾಡುತ್ತಿದೆ. ಹಿಂದೆ ಅದೊಂದು ಬೃಹದಾಕಾರವಾದ ಸಮಸ್ಯೆಯಾಗಿರಲಿಲ್ಲ. ಆದರಿಂದು ಅದು ವಿಭಿನ್ನ ತಿರುವು ಪಡೆದುಕೊಂಡು ದಿನದಿನಕ್ಕೆ ಬೆಳೆಯುತ್ತಲೇ ಇದೆ.

ಈ ವಿವಾದವನ್ನು ಹಿಡಿದು ಕೂಗಾಡುವ ಎರಡೂ ರಾಜ್ಯಗಳಲ್ಲಿನ ಹೋರಾಟಗಾರರು ಮುಂದಿಡುವ ವಾದಕ್ಕೂ ನೈಜತೆಗೂ ತುಂಬಾ ವ್ಯತ್ಯಾಸಗಳಿವೆ. ಆ ಹೋರಾಟಗಾರರ ಧೋರಣೆಯೇ ಇಲ್ಲಿ ಪ್ರಶ್ನಾರ್ಹವಾಗಿದೆ. ದುಡಿವ ಜನರ ಹೋರಾಟಗಳು ಕೆಲವೊಂದು ಶಕ್ತಿಗಳ ಕೈಗೆ ಸಿಕ್ಕು ಬೇರೊಂದು ಅವತಾರ ಪಡೆದುಬಿಡುತ್ತಿದೆ. ಹಾಗೆ ಬೇರೊಂದು ಅವತಾರ ಪಡೆದಾಗ ಇಡೀ ಹೋರಾಟ ಹಾದಿ ತಪ್ಪುತ್ತದೆ. ಕಾವೇರಿ ಹೋರಾಟ ಹಾಗಿರುವುದೇ ಹಾಗೆ. ಅದೊಂದು ಭಾಷಾ ಹೋರಾಟವಾಗಿ ಬೆಳೆಯುತ್ತಿದೆ.

ಭಾಷೆಯ ಬಗೆಗೆ ಭಾವನಾತ್ಮಕವಾಗಿ ಮಾತನಾಡೋ ಜನರಿಗೆ ಆ ಭಾಷೆಯ ಅಧಿಕೃತ ವಾರಸುದಾರರು ಅನುಭವಿಸೋ ಕಷ್ಟಗಳ, ನೋವುಗಳ ಅರಿವಿರುವುದಿಲ್ಲ ಎಂಬುದಕ್ಕೆ ಎರಡೂ ರಾಜ್ಯಗಳಲ್ಲಿ ನಡೆಯುತ್ತಿರೋ ಕಾವೇರಿ ಹೋರಾಟವೇ ಸಾಕ್ಷಿ. ನದಿ ಬಗ್ಗೆ, ಅದರ ಅನಿವಾರ್ಯತೆ ಬಗ್ಗೆ 'ಕಾವೇರಿ activists' ಗಳಿಗೆ ಅರಿವಿದ್ದಂತಿಲ್ಲ. 'ಕನ್ನಡ-ತಮಿಳು' ಎಂದು ಕೂಗಿಕೊಂಡು ಬೀದಿಗಿಳಿದಿರುವವರಲ್ಲಿ ಎಷ್ಟು ಜನ ತಮ್ಮ ತಮ್ಮ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಅದಕ್ಕೆ ಕಾರಣಗಳನ್ನು ಹುಡುಕಿದ್ದಾರೆ ? ತಮ್ಮ ತಮ್ಮ ಭಾಷೆಯ ಜನರು 'ಜಾತಿ' ಅನ್ನೋ ಹೆಸರಲ್ಲಿ ಅಮಾನವೀಯವಾಗಿ ನಡೆದುಕೊಳ್ಳುವುದರ ವಿರುದ್ಧ ಇವರಲ್ಲಿ ಎಷ್ಟು ಜನ ಪ್ರತಿಭಟಿಸಿದ್ದಾರೆ ? ಧರ್ಮದ ಹೆಸರಲ್ಲಿ ಮುಗ್ಧ ಹಸುಳೆಗಳ ಕೊಲ್ಲುವುದರ ವಿರುದ್ಧ ಇವರು ಧರಣಿ ಕೂತಿದ್ದಾರೆಯೆ ? ಈ ಭಾಷಾ ಹೋರಾಟಗಳೆಲ್ಲವೂ 'ಜನಪರ'ವಾದ ಉದಾಹರಣೆಗಳು ತೀರಾ ಕಡಿಮೆ. ಇದನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಕಾವೇರಿ ವಿವಾದ ಇಂದು ಎತ್ತ ಸಾಗುತ್ತಿದೆ ಎಂಬುದನ್ನು ನೋಡಬೇಕು.

ಎರಡೂ ರಾಜ್ಯಗಳಲ್ಲಿ ನಡೆಯುತ್ತಿರೋ ಹೋರಾಟಗಳು ಭಾಷಾ ಪ್ರೇರಿತವಾದುದೂ ಜನಾಂಗ ಪ್ರೇರಿತವಾದುದೂ ಆಗುವ ಅಪಾಯದಲ್ಲಿದೆ. ಕಾವೇರಿ ಚಳವಳಿ ರೈತರನ್ನು ಉಳಿಸುವ ಚಳವಳಿಯಾಗಿರದೆ ದ್ವೇಷವನ್ನು ಕಾರುವ ತಾಣವಾಗಿದೆ. ಎರಡೂ ಭಾಷೆಯ ಸೋಕಾಲ್ಡ್ ಹೋರಾಟಗಾರರು ಎಂದಾದರೂ ರೈತರ ಜೀವನವನ್ನು ಹಿಸುಕುತ್ತಿರುವ ಬಹುರಾಷ್ಟ್ರ ಕಂಪೆನಿಗಳ ವಿರುದ್ಧ ಹೋರಾಡಿದ ಉದಾಹರಣೆಗಳಿವೆಯೇ ? ತಮಿಳಿನ ಕಾವೇರಿ ಹೋರಾಟವೆಂದರೆ 'ಕನ್ನಡ ವಿರೋಧಿ ಹೋರಾಟ', ಕನ್ನಡದ ಕಾವೇರಿ ಹೋರಾಟವೆಂದರೆ 'ತಮಿಳು ವಿರೋಧಿ ಹೋರಾಟ'ವಾಗಿ ರೂಪಾಂತರಗೊಳ್ಳುತ್ತಿದೆ. ಇಲ್ಲಿ ದುರಂತವೇನೆಂದರೆ, ನಮ್ಮ ಬುದ್ಧಿಜೀವಿಗಳೆನಿಸಿಕೊಂಡವರೂ ಈ ಸಮೂಹ ಸನ್ನಿಯ ದೈತ್ಯನಲ್ಲಿ 'ಮೆಟಾಮಾರ್ಫಿಸಿಸ್' ಆಗುತ್ತಿರುವುದು. ಭಾಷೆಯ ಬಗ್ಗೆ ರಸ್ತೆಯಲ್ಲಿ ಧರಣಿ ಕೂರುವ, ರೈಲುಗಳ ತಡೆಯುವ ಈ ಹೋರಾಟಗಾರರು ತಮ್ಮ ಜೀವಿತಾವಧಿಯಲ್ಲಿ ಎಂದಾದರೂ ರೈತಸಂಘ, ಕಮ್ಯುನಿಸ್ಟ್ ಸಂಘಟನೆ, ಡಿಎಸ್‌ಎಸ್ ಮುಂತಾದ ಜನಸಂಘಟನೆಗಳ ಜೊತೆ ಜನಪರ ಹೋರಾಟಗಳಲ್ಲಿ ಭಾಗಿಯಾಗಿದ್ದಾರೆಯೇ ? ಇವರುಗಳಿಗೆ ಒಂದು ಬದ್ಧತೆ ಎಂಬುದಿದೆಯೆ ?

ಇಂದು ನಮ್ಮ ಮುಂದಿರುವ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಕಳಕಳಿಯಿಲ್ಲದ ಈ ನಾಯಕರುಗಳು ಭಾಷೆಯ ಅಮಲನ್ನು ತಿನ್ನಿಸಿ ಜನರನ್ನು ಒಡೆಯುತ್ತಿದ್ದಾರೆ. ತಮ್ಮ ತಮ್ಮದೇ ಭಾಷೆಯನ್ನಾಡುವ ಕಾರ್ಮಿಕರ ದುಸ್ಥಿತಿಗಳ ಬಗ್ಗೆ ಇವರುಗಳು ಎಂದಾದರೂ ಮಾತನಾಡಿದ್ದಾರೆಯೇ ? ಎರಡೂ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ಅದರ ಕಾರಣಗಳು ಬೇರೆಬೇರೆಯಾಗಿರುವುದಿಲ್ಲ. ಕೂಲಿ ಕಾರ್ಮಿಕರು ಬದುಕುವ ಆಸೆಯನ್ನೇ ಕಳೆದುಕೊಂಡಿದ್ದರೆ ಅದಕ್ಕೂ ಎರಡೂ ಕಡೆ ಕಾರಣಗಳು ಒಂದೇ ಆಗಿರುತ್ತವೆ.

ಈ ಹೋರಾಟಗಾರರು ಕಾವೇರಿ ವಿಚಾರ ಬಂದಾಗ ಮಾತ್ರ ಪ್ರಚಾರಕ್ಕೆ ಬರುತ್ತಾರೆ. ಮಿಕ್ಕ ಹೋರಾಟಗಳ ಸಮಯದಲ್ಲಿ ಇವರ ಹೆಸರುಗಳೇ ಇರುವುದಿಲ್ಲ. ಆಲಮಟ್ಟಿ ಅಣೆಕಟ್ಟಿನಿಂದ ನಿರಾಶ್ರಿತರಾದ ಕನ್ನಡಿಗರಿಗೆ ಇವರು ಯಾವ ರೀತಿ ಸಹಕರಿಸಿದ್ದಾರೆ? ಕುದುರೆಮುಖ ಗಣಿಗಾರಿಕೆ ಮಲೆನಾಡಿನ ಕನ್ನಡಿಗರಿಗೆ ಉರುಳಾಗಿರುವುದರ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ಇವರು ಭಾಗಿಯಾಗಿದ್ದಾರೆಯೆ ? ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸಲು ಇವರ ಬಳಿ ಯಾವುದಾದರೂ ಕಾರ್ಯಸೂಚಿಗಳಿವೆಯೇ ?

ಮತೀಯ ವಾದಿಗಳು ಹೇಗೆ 'ಒಂದು ರಾಷ್ಟ್ರೀಯ ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನು ಮುಂದಿಡುತ್ತಿದ್ದಾರೋ ಹಾಗೆಯೇ ಭಾಷಾಂಧರೂ ಸಹಾ ಮುಂದಿಡುತ್ತಿದ್ದಾರೆ. ತಾವೊಂದು ಸಾಂಸ್ಕೃತಿಕ ಹಿತಾಸಕ್ತಿಯನ್ನು ರಕ್ಷಿಸುತ್ತೇವೆ ಎಂಬ ಭ್ರಮೆಯನ್ನು ಹೊಂದಿರುವ ಇವರುಗಳ ಚಿಂತನಾಕ್ರಮದ ಹಿಂದಿರುವುದು ಸಣ್ಣಪುಟ್ಟ ಆದರ್ಶಗಳು ಮಾತ್ರ. ಭಾಷೆ ಎಂಬ ಸಾಮಾಜಿಕ ಸಾಮರಸ್ಯದ ಸಾಧನವನ್ನು ಹಗೆತನದ, ದ್ವೇಷದ ಸಾಧನವನ್ನಾಗಿ ತಿರುಚುತ್ತಿರುವವರ ವಿಚಾರಗಳು ಸಾರ್ವತ್ರಿಕವೆ ?

ಎಲ್ಲಾ ಭಾಷಾ, ಧಾರ್ಮಿಕ ಹೋರಾಟಗಳು ಸಂಸ್ಥೀಕರಣಗೊಂಡು ಪ್ರಬಲ ವ್ಯಕ್ತಿಯೊಬ್ಬನ ಅಥವಾ ಗುಂಪೊಂದರ ವಾದವೇ ಇಡೀ

ಹೋರಾಟವನ್ನು ನಿರ್ದೇಶಿಸುತ್ತಿರುತ್ತದೆ. ಅದು ಬಹುಜನರ ಅನಿಸಿಕೆಯಾಗಿರುವುದಿಲ್ಲ. ಒಂದು ಹೋರಾಟದ ಪ್ರಬಲ ಶಕ್ತಿಗಳ ವಿಚಾರಗಳು ಬಹುಸಂಖ್ಯಾತರ ಮೇಲೆ ದಾಳಿ ಮಾಡಿ ಅವರ ಹಿತಾಸಕ್ತಿಗಳನ್ನು ಕಡೆಗಣಿಸುತ್ತದೆ. ಅವರ ಅಸ್ತಿತ್ವ, ಕ್ರಿಯಾಶೀಲತೆಗಳನ್ನು ನಾಶಪಡಿಸುತ್ತದೆ. ಆದುದರಿಂದಲೇ ಅದು ಪ್ರಜಾಸತ್ತಾತ್ಮಕವಾದುದಲ್ಲ.

ಭಾಷಾ ಹೋರಾಟವೊಂದರಲ್ಲಿ ಜಾತಿ/ವರ್ಗದ ಪ್ರಶ್ನೆ ಮಾಯವಾಗಿ ಒಂದು ನಿರ್ದಿಷ್ಟ ವಿಚಾರವೇ ಮುಖ್ಯವಾಗುತ್ತದೆ. ಈಗಿನ ಭಾಷಾ ಹೋರಾಟಗಳು ಕೋಮುವಾದದಂತೆ ಇನ್ನೊಂದು ಭಾಷೆ, ಸಂಸ್ಕೃತಿಯ ದಾಳಿಯನ್ನು ಎದುರಿಗಿಟ್ಟು 'ಸ್ವಾಭಿಮಾನ', 'ಸ್ವದೇಶಿ', ಎಂಬ ಏಕರೂಪಿ ಅರ್ಥವುಳ್ಳ ರಾಜಕೀಯ ಸಾಂಸ್ಕೃತಿಕ ಪರಿಕಲ್ಪನೆಯನ್ನು ಕಟ್ಟುವ ಪ್ರಯತ್ನ ನಡೆಸುತ್ತಿವೆ. ಪ್ರಗತಿಪರ, ಜನಪರ ಹೋರಾಟಗಳೆಲ್ಲವೂ ಸೋತಿರುವಂತೆ ಕಾಣುವ ಈ ಹೊತ್ತಲ್ಲಿ 'ಐಡೆಂಟಿಟಿ ರಾಜಕಾರಣ' ಬಂದಿದೆ.

ಧಾರ್ಮಿಕವಾಗಿ, ಭಾಷಿಕವಾಗಿ ಕಟ್ಟಿಕೊಳ್ಳುವ ಈ ರಾಜಕಾರಣ ತನ್ನೊಳಗಿನ ಶೋಷಣೆಯನ್ನು ಗಮನಿಸಲು ಹೋಗುವುದೇ ಇಲ್ಲ. ಜನಾಂಗವಾದ, ಭಾಷಾವಾದಗಳ ಅಫೀಮನ್ನು ತಿನ್ನಿಸಿ ಇದು ಜನರ ನಡುವೆ ಅಭದ್ರತೆ, ದ್ವೇಷಗಳನ್ನು ಸೃಷ್ಟಿಸಿ ನಿಜವಾದ ಸಮಸ್ಯೆಗಳತ್ತ ಜನರನ್ನು ವಿಮುಖಗೊಳಿಸುತ್ತಿವೆ. ವಸಾಹತು ಸಂದರ್ಭದಲ್ಲಿನ ಅಧಿಕಾರವು ಜನರನ್ನು ದಮನಗೊಳಿಸುತ್ತಿದ್ದರೂ ಪ್ರತಿರೋಧಗಳು ಬೆಳೆಯುವ ಅವಕಾಶವನ್ನು ಮುಕ್ತವಾಗಿರಿಸಿತ್ತು. ಆದರೆ ಇಂದಿನ 'ದ್ವೇಷಿ' (ದೇಶಿ) ಆಂದೋಲನದ ಸಂದರ್ಭದಲ್ಲಿ ಭಿನ್ನಾಭಿಪ್ರಾಯಗಳನ್ನು ನಿರ್ನಾಮಗೊಳಿಸುವ ಪ್ರವೃತ್ತಿ ಅಧಿಕವಾಗುತ್ತಲೇ ಹೋಗುತ್ತಿದೆ.

ಕರ್ನಾಟಕವೆಂದರೆ ಕನ್ನಡ ಮಾತೃಭಾಷೆಯ ಜನರಿಗೆ ಮಾತ್ರ ಸೇರಿದ್ದೇ ? ರಾಜ್ಯ ಎದುರಿಸುತ್ತಿರುವ ಹತ್ತಾರು ಸಮಸ್ಯೆಗಳಿಗೆ ಅನ್ಯಭಾಷೆಯನ್ನಾಡುವ ಜನ ಕಾರಣರೆ ? ಭಾರತದ ಸರಿಸುಮಾರು ರಾಜ್ಯಗಳಲ್ಲಿ ಈ ವಿವಾದ ಚಾಲ್ತಿಯಲ್ಲಿದೆ. ಇಂತಹ ವಾದಗಳು 'ಜನಾಂಗೀಯ ವಾದ'ದಂತೆ, 'ಫ್ಯಾಸಿಸಂ'ನಂತೆ ಜೀವ ವಿರೋಧಿಯಾದುದು. ಭಾಷೆಯ ಬಗೆಗಿನ ಇವರುಗಳ ಅರ್ಥ ಸಂಕುಚಿತವಾದುದು. ಡಿ.ಆರ್.ನಾಗರಾಜ್ ಹೇಳುವಂತೆ ಲಂಕೇಶರ, ಅನಂತಮೂರ್ತಿಯವರ ಕನ್ನಡ ರಾಷ್ಟ್ರೀಯತೆಗೂ ಚಿದಾನಂದಮೂರ್ತಿಯವರ 'ಖ'ನ್ನಡ ರಾಷ್ಟ್ರೀಯತೆಗೂ ಅಜಗಜಾಂತರ ವ್ಯತ್ಯಾಸಗಳಿವೆ.

ಚಿದಾನಂದಮೂರ್ತಿ ಮುಂತಾದವರಿಗೆ ಕನ್ನಡವೆಂದರೆ ಹೊಯ್ಸಳರ ಕಾಲದ ಚಾಲುಕ್ಯರ ಕನ್ನಡ. ಹಿಂದುತ್ವವಾದಿಗಳು ಇತಿಹಾಸವನ್ನು ತಿರುಚಿ ವರ್ತಮಾನವನ್ನು ಕುಲಗೆಡಿಸುವಂತೆ ಇವರೂ ವರ್ತಮಾನದ 'ನಿಜ'ವನ್ನರಿಯದೆ ತಮ್ಮ ಚರಿತ್ರೆಯ ಅಪಗ್ರಹಿಕೆಯನ್ನು ಹೇರಲು ಹವಣಿಸುತ್ತಿದ್ದಾರೆ. ಆದರೆ ಸಾಂಸ್ಕೃತಿಕವಾಗಿಯೂ ಸೆಕ್ಯುಲರ್ ಆಗಿರುವ ಕನ್ನಡಿಗ ಅವರನ್ನು ಗಂಭೀರವಾಗಿ ಪರಿಗಣಿಸಿದ ಉದಾಹರಣೆಗಳು ವಿರಳ. ಲಂಕೇಶ್, ಡಿ.ಆರ್, ಬರಗೂರು ಹಾಗೂ ಬಂಜಗೆರೆ ಜಯಪ್ರಕಾಶ್‌ರ 'ಕರ್ನಾಟಕ' ಸದ್ಯದ ಸಾಮಾಜಿಕ ಆವರಣದಲ್ಲಿ ರೂಪುಗೊಂಡಿದ್ದು, ಪಶ್ಚಿಮದ 'ನೇಶನ್-ಸ್ಟೇಟ್'ನ್ನು ವಿರೋಧಿಸುವ 'ನಾಗರಿಕ ಸಮಾಜ'ದ ಕನಸು. ಇವರೆಲ್ಲರ ಕಾಳಜಿ ಇರುವುದು ಕರ್ನಾಟಕ ಎಂಬ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ರೂಪಿಸುವ ಕರ್ನಾಟಕವನ್ನು ಭಾಷಾಕೇಂದ್ರಿತವಾಗಿ ನೋಡುತ್ತಿದೆ.

ಎರಡೂ ಭಾಷೆಯ ಸಾಮಾನ್ಯರಿಗೆ ಮುಖ್ಯವಾದುದು ಆ ಹೊತ್ತಿನ ಬದುಕು. ಆದರಿಂದು ಸಾಮಾನ್ಯನೊಬ್ಬನ ಯೋಚನಾ ದಿಕ್ಕನ್ನೇ ಬದಲಾಯಿಸಿ ಮೂಲ ಸಮಸ್ಯೆಗಳ ವಿರುದ್ಧ ಹೋರಾಡದಂತೆ ಆಕೆಯನ್ನು / ಆತನನ್ನು ನಿಷ್ಕ್ರಿಯಗೊಳಿಸಲು ಇಂದು ಹುನ್ನಾರಗಳ ಮಹಾಪೂರವೇ ಸುತ್ತಲೂ ಹರಿಯುತ್ತಿದೆ. ಧರ್ಮದ ಹೆಸರಲ್ಲಿ ಗಲಭೆಯೆಬ್ಬಿಸಿ ಜನರನ್ನು ಮೂಲಭೂತ ಸಮಸ್ಯೆಗಳತ್ತ ಗಮನಹರಿಸಬಿಡದೆ ಹೊಸ ಸಮಸ್ಯೆಯೊಂದನ್ನು ಸೃಷ್ಟಿಸುವುದು ಧಾರ್ಮಿಕ ಮೂಲಭೂತ ವಾದಿಗಳ ಅಜೆಂಡ. ಅದನ್ನೇ ನಮ್ಮ ಭಾಷಾಂಧರೂ ಮಾಡುತ್ತಿರುವುದು.

ಕರ್ನಾಟಕವೆಂದರೆ ಕನ್ನಡಿಗ; ಕನ್ನಡಿಗನೆಂದರೆ ಕನ್ನಡ ಮಾತೃಭಾಷೆಯವನು ಎನ್ನುವ ವಾದ. ಇದು ತಮಿಳುನಾಡಿನಲ್ಲೂ ಇದೆ. ಇಂತಹ ವಾದಗಳು ಬಹುಭಾಷಾ ಸಂಸ್ಕೃತಿಯನ್ನು ನಾಶಪಡಿಸೋ ಫ್ಯಾಸಿಸ್ಟ್ ಧೋರಣೆಯೇ ಸರಿ. ಆದರೆ ಅನಂತಮೂರ್ತಿ - ಲಂಕೇಶರ ಪರಿಕಲ್ಪನೆ ಕರ್ನಾಟಕವೆಂಬ ಕಲ್ಪಿತ ಗೆರೆಗಳನ್ನು ನಿರಾಕರಿಸಿ ಕರ್ನಾಟಕ ಬಹುಮುಖಿಯಾದುದು ಎಂಬುದು. ಇದು ಕರ್ನಾಟಕದಲ್ಲಿರುವವರೆಲ್ಲ ಕನ್ನಡಿಗರೆಂಬ, ತಮಿಳುನಾಡಿನಲ್ಲಿರುವವರೆಲ್ಲ ತಮಿಳರೆಂಬ 'ನಾಗರಿಕ ಸಮಾಜ'ವನ್ನು ಕಟ್ಟುವ ಕನಸಾಗುತ್ತಿದೆ. ಏಕರೂಪೀಕರಣವನ್ನು ಭಗ್ನಗೊಳಿಸಿ ಬಹುರೂಪೀ ಅಸ್ತಿತ್ವದ ಚಹರೆಗಳನ್ನು ಎತ್ತಿಹಿಡಿಯುವ ಜೀವಪರ ನಿಲುವಾಗುತ್ತಿದೆ.

ತಮಿಳುನಾಡಿನಲ್ಲಿ ಭಾಷಾಂಧರ ಒಂದು ದೊಡ್ಡ ಗುಂಪೇ ಇದೆ. ಆದರೆ ಆ ಗುಂಪಿನ ವಿಚಾರಗಳೇ ಇಡೀ ತಮಿಳುನಾಡಿನ ಜನತೆಯ ವಿಚಾರವಾಗಲಾರದು. ಹಾಗೆಯೇ ಕರ್ನಾಟಕದ್ದೂ ಕೂಡ. ಆದರೆ ನಾವು ಆ ಗುಂಪನ್ನೇ ಮುಂದಿಟ್ಟುಕೊಂಡು ಸಾಮಾನ್ಯರ ಗ್ರಹಿಕೆಗಳನ್ನು ಕಡೆಗಣಿಸುತ್ತೇವೆ. ಇದೇ ಕನ್ನಡ ಮತ್ತು ತಮಿಳಿನ ನಡುವೆ ಆಗುತ್ತಿರುವುದು. 'ತಮಿಳರೆಲ್ಲ ಅಂದಾಭಿಮಾನಿಗಳು - ಕನ್ನಡಿಗರೆಲ್ಲ ಅಂಧಾಭಿಮಾನಿಗಳು' ಎಂದು ಹೇಳುವಾಗ ನಾವು ಅಲ್ಲಿಯ ಯಾವುದೋ ಒಂದು ಗುಂಪಿನ ವಾದವನ್ನೇ ಅಲ್ಲಿಯ ವಾಸ್ತವ ಎಂದು ನಂಬುತ್ತೇವೆ. ಆದರೆ ಅಲ್ಲಿ ಅದರ ವಿರುದ್ಧವೂ ಜನಪರವೂ ಆದ ಪ್ರಯತ್ನಗಳನ್ನು ನಾವು ಉಪೇಕ್ಷಿಸುತ್ತಿರುತ್ತೇವೆ.

ಸಮುದಾಯದ ಪ್ರತಿನಿಧಿಯೆಂದು ಒಂದು ಗುಂಪನ್ನು ಮಾತ್ರ ಗುರುತಿಸುತ್ತಾ ಆ ಸಮುದಾಯದೊಳಗೇ ಇರುವ ಬಹುಮುಖಿ ಆಯಾಮಗಳತ್ತ ನಮ್ಮ ಗಮನ ಹೋಗುವುದಿಲ್ಲ. ಒಂದನ್ನೇ ಗಟ್ಟಿಯಾಗಿ ಹಿಡಿದಾಗ ಹಲವಾರು ಸತ್ಯಗಳು ನಮಗೆ ಕಾಣುವುದೇ ಇಲ್ಲ. ಇಂದು ನಾವು ಯಾವುದೇ ವಿಷಯವನ್ನು 'ಇದೇ' ಎಂದು ಹೇಳುವ ಕಾಲದಲ್ಲಿಲ್ಲ. ಆ ಕಾಲಘಟ್ಟ ಸರಿದು ಸುಮಾರು ವರ್ಷಗಳೇ ಆಗಿವೆ. 'ಗ್ರ್ಯಾಂಡ್' ಆಗಿ ಒಂದು ವಿಷಯವನ್ನು ಹೇಳುವಾಗ ಅದರೊಳಗೆಯೇ ಇರುವ ಭಿನ್ನಾಭಿಪ್ರಾಯಗಳು ನಮಗೆ ಕಾಣುವುದೇ ಇಲ್ಲ. ಕಾವೇರಿ ವಿಷಯದಲ್ಲಿ ಆಗುತ್ತಿರುವುದು ಇದೇ.

'ಧೀಂ ತರಿಗಿಡ' ಎಂಬ ತಮಿಳು ಸಾಂಸ್ಕೃತಿಕ ಪತ್ರಿಕೆ ಕಾವೇರಿ ವಿಷಯದಲ್ಲಿ ಭಿನ್ನವಾದ ನಿಲುವನ್ನು ತಾಳುತ್ತದೆ. ತಮಿಳು ಕಲಿಗಳ ಭಾಷಾ ಪ್ರೇಮವನ್ನು ಉಗ್ರವಾಗಿ ವಿಮರ್ಶಿಸುತ್ತಾ ಅವರುಗಳ ಪೊಳ್ಳುತನವನ್ನು ಎಳೆಎಳೆಯಾಗಿ ಬಿಡಿಸುತ್ತದೆ. ೧೯೭೦ರವರೆಗೆ ತಮಿಳುನಾಡಿಗೆ ಸಿಗುತ್ತಿದ್ದ ನೀರಿನ ಪ್ರಮಾಣ ಇಂದು ಕಡಿಮೆಯಾಗಿದೆ ಎಂಬ ತಮಿಳು ಕೂಗನ್ನು ಪ್ರಶ್ನಿಸುತ್ತಾ ಆ ಪತ್ರಿಕೆ ಅಂಕಿ ಅಂಶವೊಂದನ್ನು ನೀಡುತ್ತದೆ. ಅಲ್ಲಿಯ ಕಾವೇರಿ ಕೃಷಿಭೂಮಿ ಕರ್ನಾಟಕಕ್ಕಿಂತ ಹತ್ತು ಪಟ್ಟು ಅಧಿಕ. ಆದರೆ ಈ ಮೂವತ್ತು ವರ್ಷಗಳಲ್ಲಿ ಕರ್ನಾಟಕದ ಉಳುಮೆ ಭೂಮಿ ಗಣನೀಯವಾಗಿ ಹೆಚ್ಚಾಗಿರುವಾಗ ಹಳೆಯ ವಾದವನ್ನೇ ತಮಿಳುನಾಡು ಹೇಳುವುದು ಎಷ್ಟು ಸರಿ ? ಎನ್ನುತ್ತದೆ.

ಹಾಗೆಯೇ ನಮ್ಮಲ್ಲೂ ತಮಿಳುನಾಡಿನ ಬಡರೈತರ, ಕೂಲಿಕಾರ್ಮಿಕರ ಸ್ಥಿತಿಗಳ ಬಗ್ಗೆ ಮಾತನಾಡಿದವರಿದ್ದಾರೆ. ಕಾವೇರಿ ಬೆಲ್ಟಲ್ಲಿನ ಕೆಲವು ರೈತರು ಆಹಾರವಿಲ್ಲದೆ ಇಲಿಗಳ ತಿನ್ನುತ್ತಿರುವುದ ಕುರಿತು ಚಿಂತಿಸಿದವರು ಇದ್ದಾರೆ. ಅಲ್ಲಿಯ ರೈತ ಮುಖಂಡರುಗಳು ನಮ್ಮ ರೈತರ ಆತ್ಮಹತ್ಯೆ ಬಗ್ಗೆ ಕಳವಳ ವ್ಯಕ್ತಪಡಿಸಿದವರೂ ಇದ್ದಾರೆ. ಭಾವನೆಗಳನ್ನು ಕೆರಳಿಸಿದಾಗ ಬೌದ್ಧಿಕ ಹುಡುಕಾಟಕ್ಕೂ, ತೀರ್ಮಾನಗಳಿಗೂ ಅವಕಾಶಗಳೇ ಇರುವುದಿಲ್ಲ. ಅಂತಹ ಸಂದರ್ಭಗಳು ಭಾಷೆ, ಧರ್ಮಗಳ ನಡುವೆ ದ್ವೇಷವನ್ನು ಮಾತ್ರ ಸೃಷ್ಟಿಸುತ್ತವೆ. ಕಾವೇರಿ ಎಂಬ 'ಏಕಾರ್ಥ'ವ ಒಡೆದು ಬಹು ಅರ್ಥಗಳನ್ನು ಅರಿಯಬೇಕೆನ್ನುವ ಹಲವಾರು ಚಿಂತಕರ, ಪತ್ರಿಕೆಗಳ ಪ್ರಯತ್ನ ಯಾರಿಗೂ ಕಾಣಿಸುವುದಿಲ್ಲ.

ಎರಡೂ ಭಾಷೆಯ ಸಾಮಾನ್ಯರಿಗೆ ಮುಖ್ಯವಾದುದು ಆ ಹೊತ್ತಿನ ಬದುಕು. ಆದರಿಂದು ಸಾಮಾನ್ಯನೊಬ್ಬನ ಯೋಚನಾ ದಿಕ್ಕನ್ನೇ ಬದಲಾಯಿಸಿ ಮೂಲ ಸಮಸ್ಯೆಗಳ ವಿರುದ್ಧ ಹೋರಾಡದಂತೆ ಆಕೆಯನ್ನು / ಆತನನ್ನು ನಿಷ್ಕ್ರಿಯಗೊಳಿಸಲು ಇಂದು ಹುನ್ನಾರಗಳ ಮಹಾಪೂರವೇ ಸುತ್ತಲೂ ಹರಿಯುತ್ತಿದೆ. ಧರ್ಮದ ಹೆಸರಲ್ಲಿ ಗಲಭೆಯೆಬ್ಬಿಸಿ ಜನರನ್ನು ಮೂಲಭೂತ ಸಮಸ್ಯೆಗಳತ್ತ ಗಮನಹರಿಸಬಿಡದೆ ಹೊಸ ಸಮಸ್ಯೆಯೊಂದನ್ನು ಸೃಷ್ಟಿಸುವುದು ಧಾರ್ಮಿಕ ಮೂಲಭೂತವಾದಿಗಳ ಅಜೆಂಡ. ಅದನ್ನೇ ನಮ್ಮ ಭಾಷಾಂಧರೂ ಮಾಡುತ್ತಿರುವುದು.

ಜಾಗತೀಕರಣ ಹೇಗೆ ಕೋಮುವಾದಕ್ಕೆ ಪುಷ್ಠಿ ನೀಡಿ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿದೆಯೋ ಹಾಗೆಯೇ ಬಂಡವಾಳಶಾಹಿ ವ್ಯವಸ್ಥೆ ಭಾಷಾಂಧರಿಗೆ ಪ್ರೋತ್ಸಾಹ ನೀಡಿ ಸಾಮಾನ್ಯರನ್ನು ಇನ್ನೂ ಹೆಚ್ಚಿನದಾಗಿ ಶೋಷಿಸುತ್ತದೆ. ಕೋಮುವಾದ ಮತ್ತು ಭಾಷಾಂಧತೆ ಎರಡೂ ಮಧ್ಯಮ ವರ್ಗದ ಐಡೆಂಟಿಟಿ ದಾಸರು ಸೃಷ್ಟಿಸಿರುವ ವ್ಯೂಹಗಳು. ಇವುಗಳು ಸೃಷ್ಟಿಸುವ ಸತ್ಯ ಏಕರೂಪಿಯಾದುದೂ ಪೂರ್ವಗ್ರಹಪೀಡಿತವಾದಷ್ಟೇ ಆಕ್ರಮಣಕಾರಿ ನಿಲುವಿನದಾಗಿವೆ. ಕಾವೇರಿ ಹೋರಾಟ ಇಂತಹ ಸತ್ಯಗಳಿಂದ ನರಳುತ್ತಿದೆ. ಬೂರ್ಜ್ವಾಗಳ, ಭಾಷಾಂಧರ ಕಪಿಮುಷ್ಠಿಯಲ್ಲಿ ಸಾಮಾನ್ಯರು ಸಿಕ್ಕಿಹಾಕಿಕೊಂಡಿದ್ದಾರೆ.

ಕಾವೇರಿ ವಿವಾದಕ್ಕೆ ಎರಡೂ ಕಡೆಯ ದುಡಿವ ಜನರು ಪ್ರತಿಕ್ರಿಯಿಸಿದಾಗ ಮಾತ್ರ ಪರಿಹಾರ ಸಿಗಲು ಸಾಧ್ಯ. ಪ್ರಗತಿಪರ, ಎಡಪಂಥೀಯ, ದಲಿತ, ರೈತ ಸಂಘಟನೆಗಳು ಕಾವೇರಿ ಹೋರಾಟವನ್ನು ತೆಗೆದುಕೊಂಡಾಗಲೇ ನೀರು-ನದಿಯಾಗುವುದು, ಭಾಷೆ-ಸಂಸ್ಕೃತಿಯಾಗುವುದು. □



ದೃಷ್ಟಿಕೋನ

ಸಮಗ್ರ ಭಾರತ ಉದ್ಧಾರದ ಕನಸು ಕಂಡಿದ್ದ ಈ ಮೂವರು ಧೀರೋದಾತ್ತ ನಾಯಕರಿಗೆ ಭಾರತ ಬೇರೆ-ಬೇರೆಯಾಗಿ ಕಾಣಿಸಿದ್ದು ಇಂದಿಗೂ ಚರ್ಚಾರ್ಹವಾಗಿದೆ. ಸಮಕಾಲೀನ ಸವಾಲು ಹಾಗೂ ಜರೂರುಗಳಿಗೆ ಸ್ಪಂದಿಸುತ್ತಿದ್ದ ಈ ಮೂವರು ಭಾರತ ಕುರಿತಾಗಿ ಭಿನ್ನ ನೆಲೆಗಳಲ್ಲಿ ಆಲೋಚಿಸಿದ್ದು ಆಶ್ಚರ್ಯಕರವೇನೂ ಅಲ್ಲ. ಯಾವುದೇ ಸಮಕಾಲೀನ ದಾರ್ಶನಿಕರು ಒಂದೇ ನೆಲೆಯಲ್ಲಿ ಆಲೋಚಿಸು ವುದಿಲ್ಲ. ಹಾಗೊಂದು ಪಕ್ಷ ಆಲೋಚಿಸಿದ್ದರೆ ಇವತ್ತು ಇಷ್ಟೊಂದು ವೈವಿಧ್ಯಮಯ ತಾತ್ವಿಕ ಸಿದ್ಧಾಂತಗಳು ಹುಟ್ಟುತ್ತಿರಲಿಲ್ಲ. ಹಾಗಾದರೆ ಗಾಂಧಿ, ತಿಲಕ, ಅಂಬೇಡ್ಕರ -ಈ ಮೂವರಿಗೆ ಭಾರತ ಭಿನ್ನವಾಗಿ ಕಾಣಿಸಿದ್ದೇಕೆ ?

ಡಾ|| ಬಿ. ಶರಣಪ್ಪ ಸತ್ಯಂಪೇಟೆ

ಭಾರತ: ಗಾಂಧಿ, ತಿಲಕ, ಅಂಬೇಡ್ಕರ್ ದೃಷ್ಟಿ

For Gandiji India was both a nation and a society.
For Tilak it was only a nation.
For Ambedkar it was only a society

— ಯು.ಆರ್. ಅನಂತಮೂರ್ತಿ

ಗಾಂಧೀಜಿ, ತಿಲಕ, ಅಂಬೇಡ್ಕರ್ - ಈ ಮೂವರೂ ಭಾರತ ಕಂಡ ಅಪರೂಪದ ದಾರ್ಶನಿಕರು. ಭಾರತದ ಉದ್ಧಾರಕ್ಕೆಂದೇ ಬದುಕನ್ನು ಮುಡಿಪಾಗಿಟ್ಟವರು. ಇವರ ರಾಷ್ಟ್ರಪ್ರೇಮ, ರಾಷ್ಟ್ರೀಯತಾ ಪ್ರಜ್ಞೆ, ಸಾಮಾಜಿಕ ಬದ್ಧತೆ ಇತ್ಯಾದಿಗಳೆಲ್ಲವೂ ಇವತ್ತಿಗು ಪ್ರಶ್ನಾತೀತ; ಇಂದಿಗೂ ಅನುಕರಣೀಯವೇ ಎನ್ನುವಷ್ಟು ಪ್ರಸ್ತುತ.

ಸಮಗ್ರ ಭಾರತ ಉದ್ಧಾರದ ಕನಸು ಕಂಡಿದ್ದ ಈ ಮೂವರು ಧೀರೋದಾತ್ತ ನಾಯಕರಿಗೆ ಭಾರತ ಬೇರೆ-ಬೇರೆಯಾಗಿ ಕಾಣಿಸಿದ್ದು ಇಂದಿಗೂ ಚರ್ಚಾರ್ಹವಾಗಿದೆ. ಸಮಕಾಲೀನ ಸವಾಲು ಹಾಗೂ ಜರೂರಿಗಳಿಗೆ ಸ್ಪಂದಿಸುತ್ತಿದ್ದ ಈ ಮೂವರು ಭಾರತ ಕುರಿತಾಗಿ ಭಿನ್ನ ನೆಲೆಗಳಲ್ಲಿ ಆಲೋಚಿಸಿದ್ದು ಆಶ್ಚರ್ಯಕರವೇನೂ ಅಲ್ಲ. ಯಾವುದೇ ಸಮಕಾಲೀನ ದಾರ್ಶನಿಕರು ಒಂದೇ ನೆಲೆಯಲ್ಲಿ ಆಲೋಚಿಸುವುದಿಲ್ಲ. ಹಾಗೊಂದು ಪಕ್ಷ ಆಲೋಚಿಸಿದ್ದರೆ ಇವತ್ತು ಇಷ್ಟೊಂದು ವೈವಿಧ್ಯಮಯ ತಾತ್ವಿಕ ಸಿದ್ಧಾಂತಗಳು ಹುಟ್ಟುತ್ತಿರಲಿಲ್ಲ.

ಹಾಗಾದರೆ ಗಾಂಧಿ, ತಿಲಕ, ಅಂಬೇಡ್ಕರ -ಈ ಮೂವರಿಗೆ ಭಾರತ ಭಿನ್ನವಾಗಿ ಕಾಣಿಸಿದ್ದೇಕೆ ? ಪ್ರಶ್ನೆ ಮನೋವಿಶ್ಲೇಷಣಾತ್ಮಕವಾದುದಾಗಿದೆ. ಹಾಗೂ ಚಾರಿತ್ರಿಕ ಒತ್ತಡಗಳಿಗೆ ಸಂಬಂಧಿಸಿದೆ. ನಿಜ, ಗಾಂಧೀಜಿಯವರಿಗೆ ಭಾರತವೆಂದರೆ: ಒಟ್ಟಿಗೇ ಒಂದು ರಾಷ್ಟ್ರ ಮತ್ತು ಒಂದು ಸಮಾಜ. ಬಾಲಗಂಗಾಧರ ತಿಲಕರಿಗೆ ಭಾರತವೆಂದರೆ : ಕೇವಲ ಒಂದು ರಾಷ್ಟ್ರ. ಅಂಬೇಡ್ಕರರಿಗೆ ಭಾರತ : ಕೇವಲ ಒಂದು ಸಮಾಜ.

ಗಾಂಧೀಜಿಯವರು ದಕ್ಷಿಣ ಆಫ್ರಿಕಾಕ್ಕೆ ಹೋಗಿರದಿದ್ದರೆ ಭಾರತದ 'ಅಸ್ಪೃಶ್ಯತೆ' ಒಂದು ಸಮಸ್ಯೆಯಾಗಿ ಅವರನ್ನು ಕಾಡುತ್ತಿತ್ತೆ? ಅನುಮಾನ. ದಕ್ಷಿಣ ಆಫ್ರಿಕೆಯಲ್ಲಿ ಗಾಂಧೀಜಿ ಬಿಳಿಯರಿಂದ ಅನುಭವಿಸಿದ ಅವಮಾನ, ಅನ್ಯಾಯ ಇತ್ಯಾದಿಗಳು ಒಬ್ಬ ಕರಿಯನ ಸ್ವಾಭಿಮಾನವನ್ನು ಜಾಗೃತಗೊಳಿಸಿದವು. ದಕ್ಷಿಣ ಆಫ್ರಿಕಾದ ವರ್ಣಭೇದ ಸಮಸ್ಯೆ ಭಾರತದ ಅಸ್ಪೃಶ್ಯತಾ ಸಮಸ್ಯೆಗೆ ಪೂರಕವಾಗಿದೆ; ಸಾವಯವ ಸಂಬಂಧವುಳ್ಳ ಬಿಕ್ಕಟ್ಟಾಗಿದೆ. ಅಂತೆಯೇ ಗಾಂಧೀಜಿಯವರು ಭಾರತದ ಅಸ್ಪೃಶ್ಯತಾ ಸಮಸ್ಯೆಯ ಭೀಕರತೆಯನ್ನು ಸರಿಯಾಗಿಯೇ ಗ್ರಹಿಸಿಕೊಳ್ಳಲು ಹಾಗೂ ಆ ಕುರಿತಾದ ಹೋರಾಟವನ್ನು ಸ್ವಾತಂತ್ರ್ಯ ಚಳವಳಿಯೊಂದಿಗೆ ಒಟ್ಟೊಟ್ಟಿಗೆ ಆರಂಭಿಸಲು ಸಾಧ್ಯವಾಯಿತು.

ಆದರೆ ತಿಲಕರು ಇದಕ್ಕೆ ವ್ಯತಿರಿಕ್ತವಾಗಿ ಯಾವತ್ತೂ ಸ್ವಾತಂತ್ರ್ಯಕ್ಕಾಗಿ ಮಾತ್ರ ಹಂಬಲಿಸುತ್ತಿದ್ದರು. ಭಾರತೀಯರ ವರ್ಣಾಶ್ರಮ ಧರ್ಮ ಹಾಗೂ ಅದು ಉಂಟುಮಾಡಿದ ಶ್ರೇಣೀಕರಣ ಸಮಾಜದಿಂದ ಉದ್ಭವಿಸಿದ 'ಅಸ್ಪೃಶ್ಯತೆ' ಇತ್ಯಾದಿ ಸಮಸ್ಯೆಗಳ ಬಗ್ಗೆ ಅವರು ಯಾವತ್ತೂ ತಲೆಕೆಡಿಸಿಕೊಂಡವರೇ ಅಲ್ಲ. ಇದೊಂದು ಆಂತರಿಕ ಸಮಸ್ಯೆ ಎಂದೇ ಅವರ ಅಂಬೋಣವಾಗಿತ್ತು. ಪ್ರಶ್ನೆ ಏನೆಂದರೆ: ಅಸ್ಪೃಶ್ಯತಾ ಸಮಸ್ಯೆಯೂ ಸ್ವಾತಂತ್ರ್ಯದಷ್ಟೇ ಜಟಿಲವಾದುದು ಎಂದು ಅವರಿಗೆ ಯಾವತ್ತೂ ಅನ್ನಿಸದೆ ಇರುವುದು! ಹೀಗೇಕೆ? ತಿಲಕರು ಶ್ರೇಣೀಕೃತ ವ್ಯವಸ್ಥೆಯ ಮೇಲ್ತರಗತಿಗೆ ಸೇರಿದವರು. ಜೊತೆಗೆ ಮೇಲ್ತರಗತಿಯ ಸುಖ-ಸೌಲಭ್ಯವನ್ನು ಅನುಭವಿಸಿದವರು. ಅಂದ ಮೇಲೆ ವರ್ಣಾಶ್ರಮ ಧರ್ಮದ ಕ್ರೌರ್ಯ, ಮೇಲ್ವರ್ಗದ ಕಬಂಧ ಬಾಹುಗಳ ಆಕ್ಟೋಪಸ್ ಹಿಡಿತಕ್ಕೆ ನಲುಗಿದ ಹಿಂದು ಸಮಾಜದ ತಳವರ್ಗದವರ ಚಾರಿತ್ರಿಕ ನೋವು ಹೇಗೆ ಅರ್ಥವಾಗಬೇಕು ? ನೊಂದವರ ನೋವನು ನೋಯದವರೆತ್ತ ಬಲ್ಲರು ?

ಗಾಂಧೀಜಿಯವರೂ - ತಿಲಕರಂತೆ - ವರ್ಣಾಶ್ರಮ ಧರ್ಮದ ಮೇಲ್ತರಗತಿಗೆ ಸೇರಿದವರೇನೋ ನಿಜ. ಹಾಗಿದ್ದೂ ಅಸ್ಪೃಶ್ಯತಾ ನಿವಾರಣಾ ಆಂದೋಲನಕ್ಕಾಗಿ ಕಾಯಾವಾಚಾಮನಸಾ ಪ್ರಯತ್ನಿಸಿದ್ದರು; ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕಾಗಿ ಹೋರಾಡಿದ್ದರು. ಇದರ ಹಿಂದೆ ವ್ಯಕ್ತಿಗತವಾದ ಅವಮಾನಗಳು ಪ್ರೇರಕ ಶಕ್ತಿಗಳಾಗಿ ಕೆಲಸ ಮಾಡಿವೆ. ಆ ವೈಯಕ್ತಿಕ ಅವಮಾನಗಳೇ ಸಾರ್ವತ್ರಿಕ ಅವಮಾನ ಹಾಗೂ ಚಾರಿತ್ರಿಕ ಅಪಮಾನಗಳಿಂದಾದ ನೋವಿನ ಕುರಿತಾಗಿ ಆಲೋಚಿಸುವುದಕ್ಕೆ ಸ್ಫೋಟಕ ಕಾರಣಗಳಾಗಿವೆ.

ಕರಿಯನೆಂಬ ಕಾರಣಕ್ಕೇ - ರಿಸರ್ವೇಶನ್ ಟಿಕೆಟ್ ಇದ್ದರೂ - ರೇಲ್ವೆ ಬೋಗಿಯಿಂದ ಹೀನಾಯವಾಗಿ ದಬ್ಬಲ್ಪಟ್ಟು ಅವಮಾನಕ್ಕೀಡಾದವರು ಗಾಂಧೀಜಿಯವರು. ಹಾಗೆ ನೋಡಿದರೆ ಸಾಮಾಜಿಕ ಸ್ಥಾನಮಾನದ ದೃಷ್ಟಿಯಿಂದ ಗಾಂಧೀಜಿಯವರೇನೂ ಸಾಮಾನ್ಯರಲ್ಲ. ಅವರ ತಂದೆಯವರೇ ರಾಜಮನೆತನವೊಂದರ ದಿವಾನರು; ಆರ್ಥಿಕವಾಗಿಯೂ ದೊಡ್ಡ ಸಿರಿವಂತರು. ಗಾಂಧೀಜಿಯವರೇ ಸ್ವತಃ ವಕೀಲರು, ವಕೀಲಿತೆಗೆಂದೇ ದಕ್ಷಿಣ ಆಫ್ರಿಕೆಗೆ ಹೊರಟವರು. ಇಂಥ ಘನತೆವೆತ್ತ ವ್ಯಕ್ತಿಗೆ ಈ ರೀತಿ ಅನ್ಯಾಯವೇ, ಅವಮಾನವೇ ? ನಿಜಕ್ಕೂ ಈ ಘಟನೆ 'ಗಾಂಧಿತನ'ವನ್ನು ಜಾಗೃತಗೊಳಿಸಿತು. ಭಾರತದ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಭಾರತೀಯ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವ ಅಸ್ಪೃಶ್ಯತೆಯಂಥ ಅನಿಷ್ಟಗಳ ವಿರುದ್ಧ ಹೋರಾಡುವುದಕ್ಕೆ ಬೇಕಾದ ಸ್ವಾಭಿಮಾನ, ಕೆಚ್ಚು ಧೈರ್ಯ, ಹೋರಾಟ ಮನೋಭೂಮಿಕೆ ಇತ್ಯಾದಿಯನ್ನು ಸ್ಫೋಟಿಸು

ವುದರ ಜತೆಗೆ ಅದಕ್ಕೆ ತಕ್ಕುದಾದ ಮನಸ್ಸನ್ನೂ ಹದಗೊಳಿಸಿತ್ತು. ನಿಜಕ್ಕೂ ಇಂಥ ಅನ್ಯಾಯ, ಅವಮಾನಗಳೇ ಗಾಂಧೀಜಿಯವರಲ್ಲಿ 'ಗಾಂಧಿತನ' ವನ್ನು ಸೃಷ್ಟಿಸಿದ್ದು. ಅಂತೆಯೇ ಗಾಂಧೀಜಿಗೆ ಭಾರತವೆಂದರೆ ಏಕಕಾಲಕ್ಕೇ ಒಂದು ರಾಷ್ಟ್ರವಾಗಿ ಹಾಗೂ ಒಂದು ಸಮಾಜವಾಗಿ ಕಾಣಿಸಿತು.

ಆದರೆ ತಿಲಕರಿಗೆ ಮಾತ್ರ ಇಂಥ ಅನ್ಯಾಯ-ಅವಮಾನಗಳಿಗೆ ತುತ್ತಾಗುವ ಪ್ರಮೇಯಗಳೇ - ಯಾವತ್ತೂ - ಬರಲಿಲ್ಲ. ಆದ್ದರಿಂದ ತಿಲಕರಿಗೆ ಕೆಳವರ್ಗದವರ ನೋವು, ಆತಂಕ, ತಲ್ಲಣ-ತಳಮಳಗಳೇನು ಎಂಬುದು ಕೊನೆಯವರೆಗೂ ಗೊತ್ತಾಗಲೇ ಇಲ್ಲ. ಅಂತೆಯೇ ತಿಲಕರಿಗೆ ಭಾರತ ಒಂದು ಸಮಾಜವಾಗಿ ಕಾಣಿಸಲೇ ಇಲ್ಲ.

ಆದರೆ ಬ್ರಿಟಿಷರ ದೌರ್ಜನ್ಯ, ದಬ್ಬಾಳಿಕೆ ಹಾಗೂ ಸಾಮ್ರಾಜ್ಯಶಾಹಿ ನೀತಿ ಇತ್ಯಾದಿಗಳು ಮಾತ್ರ ತಿಲಕರನ್ನು ತೀವ್ರವಾಗಿ ಕಾಡಿದಂತೆ ಕಾಣುತ್ತದೆ. ಆದ್ದರಿಂದಲೇ ಅವರು 'ಸ್ವಾತಂತ್ರ್ಯ ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುತ್ತೇನೆ' ಎಂದು ಪಣ ತೊಟ್ಟಿದ್ದರು. ಅಂತೆಯೇ ತಿಲಕರಿಗೆ ಭಾರತ ಕೇವಲ ಒಂದು ರಾಷ್ಟ್ರವಾಗಿ ಕಾಣಿಸಿದ್ದರ ಹಿಂದೆ ಬ್ರಿಟಿಷರ ದೌರ್ಜನ್ಯ, ಸಾಮ್ರಾಜ್ಯಶಾಹಿ ನೀತಿಯಂಥ ಸಮಕಾಲೀನ ಸವಾಲುಗಳು ಮಾತ್ರ ಪ್ರೇರಕಶಕ್ತಿಯಾಗಿ ನಿಂತಿವೆ.

> **ಅಂಬೇಡ್ಕರರು ತಿಲಕರಿಗಿಂತ ಭಿನ್ನದೃಷ್ಟಿ; ಗಾಂಧೀಜಿಯವರೊಂದಿಗೆ ಸಂಗತವಾಗುವ ವಿಚಾರ. ಅಂಬೇಡ್ಕರರು ಮೊದಲು 'ಸಾಮಾಜಿಕ ನ್ಯಾಯ' ಎನ್ನುವ ಮಂತ್ರ ಪಠಿಸುತ್ತಿದ್ದರು. ಹಾಗಾದರೆ ಅಂಬೇಡ್ಕರರಿಗೆ ಸ್ವಾತಂತ್ರ್ಯ ಮುಖ್ಯವಾಗಿರಲಿಲ್ಲವೇ ? ಖಂಡಿತಾ ಇಲ್ಲ. ಆದ್ಯತೆಯ ದೃಷ್ಟಿಯಿಂದ ಸಾಮಾಜಿಕ ನ್ಯಾಯಕ್ಕೆ ಮೊದಲ ಸ್ಥಾನ; ಸ್ವಾತಂತ್ರ್ಯಕ್ಕೆ ಎರಡನೇ ಆದ್ಯತೆ. ಇದಕ್ಕೆ ಕಾರಣವೂ ಇತ್ತು. ಒಂದು ಪಕ್ಷ ಸ್ವಾತಂತ್ರ್ಯವಷ್ಟೇ ಸಿಕ್ಕರೆ 'ಸಾಮಾಜಿಕ ನ್ಯಾಯ' ಸ್ಥಾಪನೆಯಾಗುವುದರ ಬಗ್ಗೆ ಅಂಬೇಡ್ಕರರಿಗೆ ಅಗಾಧ ಅನುಮಾನಗಳಿದ್ದವು. ಜತೆಗೆ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆಯೇ ಕಸದಬುಟ್ಟಿ ಸೇರುತ್ತದೆಯೇನೋ ಎನ್ನುವ ಆತಂಕ ಅವರನ್ನು ಬಾಧಿಸುತ್ತಿತ್ತು.**

ಇನ್ನು ಅಂಬೇಡ್ಕರರ ವಿಚಾರಕ್ಕೆ ಬರೋಣ. ಅಂಬೇಡ್ಕರರು ತಿಲಕರಿಗಿಂತ ಭಿನ್ನದೃಷ್ಟಿ ಗಾಂಧೀಜಿಯವರೊಂದಿಗೆ ಸಂಗತವಾಗುವ ವಿಚಾರ. ಅಂಬೇಡ್ಕರರು ಮೊದಲು 'ಸಾಮಾಜಿಕ ನ್ಯಾಯ' ಎನ್ನುವ ಮಂತ್ರ ಪಠಿಸುತ್ತಿದ್ದರು. ಹಾಗಾದರೆ ಅಂಬೇಡ್ಕರರಿಗೆ ಸ್ವಾತಂತ್ರ್ಯ ಮುಖ್ಯವಾಗಿರಲಿಲ್ಲವೇ ? ಖಂಡಿತಾ ಇಲ್ಲ, ಆದ್ಯತೆಯ ದೃಷ್ಟಿಯಿಂದ ಸಾಮಾಜಿಕ ನ್ಯಾಯಕ್ಕೆ ಮೊದಲ ಸ್ಥಾನ; ಸ್ವಾತಂತ್ರ್ಯಕ್ಕೆ ಎರಡನೇ ಆದ್ಯತೆ. ಇದಕ್ಕೆ ಕಾರಣವೂ ಇತ್ತು. ಒಂದು ಪಕ್ಷ ಸ್ವಾತಂತ್ರ್ಯವಷ್ಟೇ ಸಿಕ್ಕರೆ 'ಸಾಮಾಜಿಕ ನ್ಯಾಯ' ಸ್ಥಾಪನೆಯಾಗುವುದರ ಬಗ್ಗೆ ಅಂಬೇಡ್ಕರರಿಗೆ ಅಗಾಧ ಅನುಮಾನಗಳಿದ್ದವು. ಜತೆಗೆ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆಯೇ ಕಸದ ಬುಟ್ಟಿ ಸೇರುತ್ತದೆಯೇನೋ ಎನ್ನುವ ಆತಂಕ ಅವರನ್ನು ಬಾಧಿಸುತ್ತಿತ್ತು.

ಭಾರತೀಯ ವಿಚಾರಶೀಲ ಮನಸ್ಸುಗಳು ಗ್ರಹಿಸಿರುವಂತೆ ಅಂಬೇಡ್ಕರರು ದಲಿತ ವರ್ಗಕ್ಕೆ ಸೇರಿದವರು ಎಂಬ ಕಾರಣಕ್ಕೇ ಅನುಭವಿಸಿದ ಅನ್ಯಾಯ, ಅವಮಾನಗಳೋ ಅಸಂಖ್ಯಾತ; ಅಗಣಿತ. ಮೇಲಾಗಿ ಬುದ್ಧನಂಥ ದಾರ್ಶನಿಕರೇ ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ್ದರೂ ಜಾತೀಯತೆ ಹಾಗೂ ಅಸ್ಪೃಶ್ಯತೆಯನ್ನು ಅಳಿಸುವುದು ಅಸಾಧ್ಯವಾಗಿದ್ದರ ಹಿಂದಿನ ಚಾರಿತ್ರಿಕ ನೋವು ಅಂಬೇಡ್ಕರರನ್ನು ತೀವ್ರವಾಗಿ ಬಾಧಿಸಿರಬೇಕು. ಅಂತೆಯೇ ಸಾಮಾಜಿಕ ನ್ಯಾಯ ಮೊದಲು ಎಂದು ಪಟ್ಟು ಹಿಡಿಯುತ್ತಿದ್ದುದು ಸಹಜ ಹಾಗೂ ಸಮಂಜಸವಾಗಿತ್ತು.

ಅಂಬೇಡ್ಕರರು 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಸಂವಿಧಾನವನ್ನು ರಚಿಸಿ ಹಲವು ದಶಕಗಳೇ ಗತಿಸಿದರೂ ಇಂದಿಗೂ ಜಾತೀಯತೆ ಜೀವಂತವಿದೆ; ಅಸ್ಪೃಶ್ಯತೆ ಅಳಿಯದೆ ಅಸ್ತಿತ್ವದಲ್ಲಿದೆ. ಅಂದ ಮೇಲೆ ಅಂಬೇಡ್ಕರರು 'ಸಾಮಾಜಿಕ ನ್ಯಾಯ' ಸಿದ್ಧಾಂತ ಪ್ರತಿಪಾದಿಸದಿದ್ದಲ್ಲಿ ಅಥವಾ ಭಾರತದ ಪರಿಸ್ಥಿತಿ ಏನಾಗಬಹುದಿತ್ತು? ಯೋಚಿಸುವುದಕ್ಕೇ ಭಯವಾಗುತ್ತಿದೆ! ಶೂದ್ರರು ಇನ್ನೂ ಪ್ರಾಣಿಯಂತೆ ಬದುಕು ಸವೆಸುತ್ತಿದ್ದರೇ ಎಂಬ ಪ್ರಶ್ನೆಗೆ ಉತ್ತರ ಹೌದು ಎನ್ನುತ್ತದೆ.

ಅಂತೆಯೇ ಅಂಬೇಡ್ಕರರ ಮುನ್ನೋಟ, ದೂರದೃಷ್ಟಿಗಳು ವಾಸ್ತವಕ್ಕೆ ಹತ್ತಿರವಾಗಿವೆ. ಮತ್ತು ಅಂಬೇಡ್ಕರರು ಅವತ್ತು ಆತಂಕಿಸಿದ್ದರಲ್ಲಿ ತಥ್ಯವಿದೆಯೆಂದೆನಿಸುತ್ತದೆ. □



೧

ಇವನು ನೆನ್ನೆ ಮೊನ್ನೆಯವನಲ್ಲ ನಮ್ಮ ಪಿತೃ ಪಿತಾಮಹ ಅಜ್ಜ
ಶುದ್ಧ ಹಳ್ಳಿಗ ಮಾರ ಕಸ್ತೂರಿ ಬಾ ಗರಡಿ ಮನೆ ಪಹಿಲ್ವಾನ
ಕಗ್ಗತ್ತಲ ಖಂಡದಲಿ ಒದೆಸಿಕೊಂಡ ಮೃತ್ ಪಿಂಡ ಚಿಮ್ಮಿ ನೆಗೆದು
ರವಿ ಮುಳುಗದ ಸಾಮ್ರಾಜ್ಞ್ಗೆ ಬೆವರಿಳಿಸಿತು ಇಲ್ಲಿ ಬಂದು

೨

ವರ್ಣಾಶ್ರಮ ಧರ್ಮ ಸಂರಕ್ಷಕ ಕುಲ ಕಸುಬುಗಳ ಪ್ರಚಾರಕ
ನಗೆ ಮಾರಿ ತಂದೆ ಈ ಗಾಂಧಿಗೆ ಚರಕ ಸುತ್ತುವುದೊಂದು ದಂಧೆ
ಇವನ ಕೈಮಗ್ಗ ಖಾದಿ ಕೇಂದ್ರಗಳಿಗೆ ಬೇಕಂತೆ ಅನುದಾನ
ಅದಕಾಗಿ ಟೋಪಿ ಜಗ ಮರುಳೋ ಜಾತ್ರೆ ಮರುಳೋ ಶಂಕರ

೩

ತರಕು ತಲೆ ಹರಕು ಬಟ್ಟೆ ಬರಿಗಾಲಿನ ಈ ಯುವ ಗಾಂಧಿ
ನಿರಂಕುಶಮತಿ ತಂಟೆ ಮಾರಿ ಗೆಳೆಯ ಅನಿಕೇತನ ಸವಾರಿ
ನ್ಯೂಕ್ಲಿಯರ್ ವಿರೋಧಿ ನರ್ಮದಾ ಬಚಾವೊ ವೊ ಆದಿವಾಸಿ
ಸ್ವಂತ ಜಗಲಿಯಲಿ ನಿಂತು ಜಾಗತಿಕ ಕನಸ ನೇಯುವ ಜೇಡ

೪

ಈ ನಿಃಶಸ್ತ್ರ ಸತ್ಯಾಗ್ರಹಿ ಕಂಡರೆ ಭಯವಿಲ್ಲ ಸರ್ವಾಧಿಕಾರಿಗೆ
ಇವನ ಅಹಿಂಸಾ ನೀತಿ ಪರಿಹಾಸ್ಯ ವೃತ್ತಿಪರ ಕ್ರಾಂತಿಕಾರಿಗೆ
ದಂಡ ಪಿಂಡಗಳು ಉಂಡು ಸೆಮಿನಾರುಗಳಲಿ ಕೊಂಡಾಡುತ್ತಿರುತ್ತ
ಈ ದರವೇಶಿ ಗಾಂಧಿ ಸುತ್ತುವನು ಕೊಳೆಗೇರಿಗಳಲಿ ಅನಿಮಿತ್ತ

○ ಪ್ರೊ|| ಶಿವರಾಮಯ್ಯ

ಮಾಧ್ಯಮ ಮತ್ತು ಮಾರುಕಟ್ಟೆ ಧರ್ಮಯುದ್ಧ

ವಿಶ್ಲೇಷಣೆ

ಕಳೆದ ಚುನಾವಣಾ ನಂತರದ ಮೂರು ದಿನಗಳ ಮತ್ತು ಮಾರುಕಟ್ಟೆ ಕುಸಿತದ, ಮೂರು ದಿನಗಳ ಪತ್ರಿಕೆಗಳ ಅವಲೋಕನ ಮಾಡಿದರೆ, ಮಾಧ್ಯಮಗಳು ಮತದಾರರ ತೀರ್ಪಿಗೆ ಬೆಲೆ ನೀಡುವುದೋ ಅಥವಾ ಮಾರುಕಟ್ಟೆಯ ತೀರ್ಪಿಗೆ ನೀಡುವುದೋ ಎಂಬುದು ಅರಿವಾಗುತ್ತದೆ. ನಮ್ಮ ದೇಶದಲ್ಲಿ ಶೇ ೬೫ ರಷ್ಟು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಅದೇ ವೇಳೆ ದೇಶದ ೧೮೦ ದಶಲಕ್ಷ ಕುಟುಂಬಗಳಲ್ಲಿ ಶೇ ೧.೧೫ ರಷ್ಟು ಶೇರು ಮಾರುಕಟ್ಟೆಯಲ್ಲಿ ಭಾಗವಹಿಸುತ್ತಾರೆ. ಆದರೂ ಸಹ ನಮ್ಮ ಮಾಧ್ಯಮಗಳು ಸಾವಿರಾರು ರೈತರ ಆತ್ಮಹತ್ಯೆಗಿಂತಲೂ ಶೇರು ಮಾರುಕಟ್ಟೆಯ ಏರಿಳಿತಗಳಿಗೆ ಪ್ರಾಶಸ್ತ್ಯ ನೀಡಿರುವುದು ಕಂಡು ಬರುತ್ತದೆ.

○ ನಾ. ದಿವಾಕರ

೨೦೦೪ರ ಲೋಕಸಭಾ ಚುನಾವಣೆಗಳ ಪ್ರಕ್ರಿಯೆ ಮುಗಿದ ನಂತರ ಇಡೀ ದೇಶವನ್ನು ಅಲ್ಲೋಲಕಲ್ಲೋಲವಾಗುವಂತೆ ಮಾಡಿದ ಎರಡು ವಿಷಯಗಳೆಂದರೆ ಸೋನಿಯಾಗಾಂಧಿಯವರ ವಿದೇಶೀ ಮೂಲ ಮತ್ತು ಶೇರು ಮಾರುಕಟ್ಟೆಯ ಕುಸಿತ. ಚುನಾವಣಾ ಫಲಿತಾಂಶಗಳಿಗಿಂತಲೂ ಹೆಚ್ಚಾಗಿ ಮಾಧ್ಯಮಗಳಲ್ಲಿ ಬಿಂಬಿಸಲಾದ ಚಿತ್ರಣ ಶೇರು ಮಾರುಕಟ್ಟೆಯದೇ ಆಗಿತ್ತು.

ಗುಜರಾತ್ ಭೂಕಂಪ, ಭೂಪಾಲ್ ಗ್ಯಾಸ್ ದುರಂತ, ಲಾಟೂರ್ ಭೂಕಂಪ ಉಂಟಾದಾಗಲೂ ಮಾಧ್ಯಮಗಳು ಈ ರೀತಿ ಪ್ರಕ್ರಿಯಿಸಲಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಬಹುಶಃ ೧೯೯೧ ರಿಂದಲೂ ಒಂದೆಡೆ ಹಿಂದುತ್ವ ಇನ್ನೊಂದೆಡೆ ಜಾಗತೀಕರಣ ಪ್ರಕ್ರಿಯೆಗೆ ಪೋಷಣೆ ಪ್ರೋತ್ಸಾಹ ನೀಡುತ್ತಲೇ ಬಂದಿರುವ ಬಹುತೇಕ ಸುದ್ದಿ-ಪ್ರಸಾರ ಮಾಧ್ಯಮಗಳಿಗೆ ಪ್ರಸ್ತುತ ಚುನಾವಣೆಯಲ್ಲಿ ಎರಡೂ ಪ್ರಕ್ರಿಯೆಗಳಿಗೆ ಸೋಲುಂಟಾಗಿದ್ದು ಸಹಿಸಲಾರದ ಪೆಟ್ಟಾಗಿದೆ. ಹಾಗಾಗಿಯೇ ಹಲವಾರು ಚುನಾವಣಾ ಪೂರ್ವ ಸಮೀಕ್ಷೆಗಳೂ ಸಹ ನೈಜ ಚಿತ್ರಣ ನೀಡುವಲ್ಲಿ ವಿಫಲವಾಗಿದ್ದವು.

ಕೊನೆಯ ಘಳಿಗೆಯವರೆವಿಗೂ ಎನ್‌ಡಿಎಗೆ ಜಯ ಎಂದೇ ಬಿತ್ತರಿಸುತ್ತಿದ್ದ ವಾಜಪೇಯಿಯವರನ್ನು ಮುಂದಿನ ಹಲವಾರು ವರ್ಷಗಳ ಪ್ರಧಾನಿ ಎಂದೇ ಬಣ್ಣಿಸುತ್ತಿದ್ದ, ಎಡ ಪಕ್ಷಗಳನ್ನು, ಜಾತ್ಯಾತೀತ ಜನತಾದಳ ಮುಂತಾದ ಪಕ್ಷಗಳನ್ನು ಕಡೆಗಣಿಸಿದ್ದ, ಜಾಗತೀಕರಣದ ಪ್ರಭಾವವನ್ನು ನಿರ್ಲಕ್ಷಿಸಿದ್ದ ಮಾಧ್ಯಮಗಳಿಗೆ ೨೦೦೪ರ ಚುನಾವಣಾ ಫಲಿತಾಂಶಗಳು ಸಿಡಿಲು ಬಡಿದಂತಾಗಿದ್ದು ಸ್ವಾಭಾವಿಕವೇ. ಈ ಸನ್ನಿವೇಶದಲ್ಲಿಯೇ ಕಾಂಗ್ರೆಸ್ ಸರ್ಕಾರ ಅಧಿಕಾರವಹಿಸಿಕೊಂಡಿದ್ದು, ಎಡಪಕ್ಷಗಳು ಸರ್ಕಾರಕ್ಕೆ ಬೆಂಬಲ ಸೂಚಿಸಿದ್ದು, ಶೇರು ಮಾರುಕಟ್ಟೆಯ ದಲ್ಲಾಳಿಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು.

ಇಲ್ಲಿ ಗಮನಾರ್ಹ ಅಂಶವೆಂದರೆ ಪ್ರಸಾರ-ಸುದ್ದಿ-ಮಾಧ್ಯಮಗಳು ಮತದಾರರ ನಿರ್ಣಯಕ್ಕಿಂತಲೂ ಶೇರು ಮಾರುಕಟ್ಟೆಯ ಏರಿಳಿತಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿರುವುದು. ಇಡೀ ದೇಶದ ಆರ್ಥಿಕ-ಸಾಮಾಜಿಕ ತಳಹದಿಯೇ ಶೇರು ಮಾರುಕಟ್ಟೆ ಎಂಬಂತೆ ವರ್ತಿಸಿದ ಮಾಧ್ಯಮಗಳು ಚುನಾವಣಾ ನಂತರದ ದಿನಗಳಲ್ಲಿ ಬಿತ್ತರಿಸಿದ ಸುದ್ದಿಗಳನ್ನು ಓದಿದವರು, ಶ್ರೀಸಾಮಾನ್ಯರು ತಮ್ಮ ನಿತ್ಯ ಜೀವನದಲ್ಲಿ ಶೇರು ಮಾರುಕಟ್ಟೆಯನ್ನೆ ನಂಬಿ ಬಾಳುತ್ತಿದ್ದಾರೆ ಎಂದು ಗ್ರಹಿಸಿರಬೇಕು. ಈ ಪ್ರಚಾರಕಾರ್ಯ ಎಷ್ಟು ಸೂಕ್ಷ್ಮವಾಗಿತ್ತೆಂದರೆ ಮಾರುಕಟ್ಟೆಯ ಬಗ್ಗೆ ಮಾತನಾಡಿದರೆ ಎಲ್ಲಿ ಅನಾಹುತವಾಗುವುದೋ ಎಂಬಂತಿತ್ತು. ಮೇ ೧೭ರ ಮುಂಜಾನೆ ಮುಂಬೈ ಮತ್ತಿತ್ತರ ನಗರಗಳಲ್ಲಿ ಪತ್ರಿಕೆಗಳನ್ನು ಓದಿದವರಿಗೆ ಎಲ್ಲಿ ಭೂಕಂಪವಾಗುವುದೋ ಎಂದು ಭಾಸವಾಗುವಂತಿತ್ತು.

ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ (ಮೇ ೧೭) ಮುಖಪುಟದಲ್ಲಿ ಷೇರು ಮಾರುಕಟ್ಟೆಯ ಇಳಿತವನ್ನು ಸೆಪ್ಟೆಂಬರ್ ೧೧ರ ಅಮೆರಿಕಾದ ಘಟನೆಗೆ ಹೋಲಿಸಲಾಗಿತ್ತು. ಅಷ್ಟು ಸಾಲದೆಂಬಂತೆ ೨೩.೪೦೦೦೦೦೦೦೦೦೦ ಎಂದು ಅಂಕಿ ಅಂಶಗಳನ್ನು ದಪ್ಪಕ್ಷರದಲ್ಲಿ ಮುದ್ರಿಸಲಾಗಿತ್ತು. ಇದರ ಅರ್ಥ ಒಂದೇ ದಿನದಲ್ಲಿ ಭಾರತೀಯ ಜನತೆಯ ೨.೩೪ ಲಕ್ಷ ಕೋಟಿ ರೂ.ಗಳು ನೀರು ಪಾಲಾಗಿದೆ ಎಂದಷ್ಟೆ. ಈ ಪೇಪರ್ ಹಣದ ನಷ್ಟವನ್ನು ಮುಖ ಪುಟದಲ್ಲಿ ಎಂಟು ಕಾಲಂಗಳಲ್ಲಿ ಪ್ರಕಟಿಸಿದ ರಾಷ್ಟ್ರೀಯ ಪತ್ರಿಕೆಗಳು ಈ ಪ್ರಕ್ರಿಯೆಯನ್ನು ಕಾರ್ಟೂನ್ ಮೂಲಕ ಡಬ್ಲ್ಯೂಟಿಸಿ ಕಟ್ಟಡದ ಧ್ವಂಸಕ್ಕೂ ಸಮೀಕರಿಸಿದ್ದವು. ದಲಾಲ್ ರಸ್ತೆಯಲ್ಲಿದ್ದ ಶೇರು ವಿನಿಮಯ ಕಟ್ಟಡಕ್ಕೆ ಒಂದು ವಿಮಾನ ಅಪ್ಪಳಿಸಿ ಆ ಕಟ್ಟಡ ಅಗ್ನಿಗೆ ಆಹುತಿಯಾಗುತ್ತಿರುವ ವ್ಯಂಗ್ಯಚಿತ್ರ ಪ್ರಕಟವಾಗಿತ್ತು. ಆ ವಿಮಾನದ ಮೇಲೆ ಕಮ್ಯುನಿಸ್ಟ್ ಚಿಹ್ನೆಯಾದ ಕುಡುಗೋಲು-ಸುತ್ತಿಗೆ ಇದ್ದಿದ್ದು ಅತಿಶಯವೇನಾಗಿರಲಿಲ್ಲ. ಇದಾದ ನಂತರ ಎರಡು ದಿನಗಳಲ್ಲಿ ಶೇರು ಮಾರುಕಟ್ಟೆ ಸುಧಾರಿಸಿಕೊಂಡಿದ್ದು, ಸೋನಿಯಾಗಾಂಧಿ ಪ್ರಧಾನಿ ಪಟ್ಟ ನಿರಾಕರಿಸಿದ ಶುಭ ಸಂದೇಶದಿಂದ ಎಂಬಂತೆ ಪುನಃ ಪತ್ರಿಕೆಗಳು ಪ್ರಕಟಿಸಿದ್ದವು.



ಇಷ್ಟೆಲ್ಲಾ ನಾಟಕಗಳ ನಡುವೆ ಟೈಮ್ಸ್ ಪತ್ರಿಕೆಯು 'ಸರ್ಕಾರದ ರಚನೆಯ ಪ್ರಕ್ರಿಯೆಯಲ್ಲಿ ಶೇರು ಮಾರುಕಟ್ಟೆ ಯಾವುದೇ ರೀತಿಯ ಪಾತ್ರ ವಹಿಸುವುದು ಪ್ರಜಾತಂತ್ರಕ್ಕಾಗಲೀ ಮುಕ್ತ ಮಾರುಕಟ್ಟೆಗಾಗಲೀ ಒಳ್ಳೆಯದಲ್ಲ' ಎಂಬ ಉಪದೇಶವನ್ನು ನೀಡಿದ್ದು ಗಮನಾರ್ಹವಾಗಿತ್ತು. ಹಾಗೆ ನೋಡಿದರೆ ಪತ್ರಿಕೆಗಳಿಗಿಂತಲೂ ಆರ್ಥಿಕ ತಜ್ಞರ ಪ್ರತಿಕ್ರಿಯೆ ಸಂಯಮದಿಂದ ಕೂಡಿತ್ತೆಂದು ಹೇಳಬಹುದು. ಇಡೀ ಪ್ರಕರಣದ ಅವಧಿಯಲ್ಲಿ ಅನೇಕ ಅರ್ಥಶಾಸ್ತ್ರಜ್ಞರು ಈ ತೀವ್ರತರ ಬದಲಾವಣೆಗೆ ಹಲವಾರು ಕಾರಣಗಳಿವೆ, ಆಂತರಿಕ ಬಾಹ್ಯ ಕಾರಣಗಳಿವೆ, ಇತರ ದೇಶಗಳ ಮಾರುಕಟ್ಟೆ ಮೇಲೂ ಇದೇ ಪ್ರಭಾವ ಉಂಟಾಗಿದೆ ಎಂಬ ಸಂಯಮವಾದ ಅಭಿಪ್ರಾಯವನ್ನೇ ಮಂಡಿಸುತ್ತಿದ್ದುದು ನಮ್ಮ ಪತ್ರಿಕೆಗಳ ಕಣ್ಣಿಗೆ ಗೋಚರಿಸಲೇ ಇಲ್ಲ.

ಏಕೆಂದರೆ ಯಾವುದೇ ವಿಷಯ ಅಷ್ಟು ಸಾಧಾರಣವಾಗಿಬಿಟ್ಟರೆ ಪತ್ರಿಕೆಗಳಿಗೆ ರುಚಿಸುವುದಿಲ್ಲ. ರಂಜನೀಯ ವಿಷಯಗಳನ್ನೇ ಬಯಸುವ ಮುಖ್ಯ ವಾಹಿನಿಯ ಪತ್ರಿಕೆಗಳಿಗೆ ಯಾವುದೇ ಪ್ರಕರಣ ಸಂಕೀರ್ಣತೆ ಹೊಂದಿರಬೇಕು. ಒಬ್ಬ ನಾಯಕ, ಖಳನಾಯಕ, ಸುಖಾಂತ, ಅಲ್ಲಿ ಎದ್ದು ಕಾಣುತ್ತಿರಬೇಕು. ಹಾಗೆಯೇ ಈ ಪ್ರಕರಣದಲ್ಲಿ ಪತ್ರಿಕೆಗಳಿಗೆ ಎಡ ಪಕ್ಷಗಳಲ್ಲಿ ಖಳನಾಯಕ, ಮನಮೋಹನ್‌ಸಿಂಗ್‌ರಲ್ಲಿ ನಾಯಕ ಮತ್ತು ಕೊಂಚ ಸುಧಾರಣೆಯ ಸುಖಾಂತ ಕಂಡು ಬಂದಿತೆಂದು ಹೇಳಬಹುದು. ಸಾಮಾನ್ಯ ಪ್ರಕರಣಗಳನ್ನು ರಂಜನೀಯವಾಗಿ ವರದಿ ಮಾಡಿ, ಉನ್ಮಾದ ಹುಟ್ಟಿಸಿ, ಪ್ರಚಾರ-ಪ್ರಸಾರ ಸಂಖ್ಯೆ ವೃದ್ಧಿಸಿಕೊಳ್ಳುವ ಮಾಧ್ಯಮಗಳ ತಂತ್ರಕ್ಕೆ ಈ ಸನ್ನಿವೇಶ ಪೂರಕವಾಗಿತ್ತು.

ಈ ಪ್ರಕರಣ ತಿಳಿಯಾದ ಮೇಲೆ ಪ್ರಧಾನಿಗಳು ಶೇರು ಮಾರುಕಟ್ಟೆಯ ಏರಿಳಿತಗಳ ಬಗ್ಗೆ ಮಾತನಾಡುತ್ತಾ ಎಡಪಕ್ಷಗಳನ್ನು ಅಂದರೆ

> **ಶೇರು ಮಾರುಕಟ್ಟೆ ಕುಸಿತದ ತೀವ್ರತರ ಬದಲಾವಣೆಗೆ ಹಲವಾರು ಆಂತರಿಕ, ಬಾಹ್ಯ ಕಾರಣಗಳಿವೆ, ಇತರ ದೇಶಗಳ ಮಾರುಕಟ್ಟೆ ಮೇಲೂ ಇದೇ ಪ್ರಭಾವ ಉಂಟಾಗಿದೆ ಎಂಬ ಸಂಯಮವಾದವವನ್ನೇ ಅರ್ಥಶಾಸ್ತ್ರಜ್ಞರು ಮಂಡಿಸುತ್ತಿದ್ದುದು ನಮ್ಮ ಪತ್ರಿಕೆಗಳ ಕಣ್ಣಿಗೆ ಗೋಚರಿಸಲೇ ಇಲ್ಲ, ರಂಜನೀಯ ವಿಷಯಗಳನ್ನೇ ಬಯಸುವ ಮುಖ್ಯ ವಾಹಿನಿಯ ಪತ್ರಿಕೆಗಳಿಗೆ ಯಾವುದೇ ಪ್ರಕರಣ ಸಂಕೀರ್ಣತೆ ಹೊಂದಿರಬೇಕು. ಒಬ್ಬ ನಾಯಕ, ಖಳನಾಯಕ, ಸುಖಾಂತ, ಅಲ್ಲಿ ಎದ್ದು ಕಾಣುತ್ತಿರಬೇಕು. ಹಾಗೆಯೇ ಈ ಪ್ರಕರಣದಲ್ಲಿ ಪತ್ರಿಕೆಗಳಿಗೆ ಎಡ ಪಕ್ಷಗಳಲ್ಲಿ ಖಳನಾಯಕ, ಮನಮೋಹನ್‌ಸಿಂಗ್‌ರಲ್ಲಿ ನಾಯಕ ಮತ್ತು ಕೊಂಚ ಸುಧಾರಣೆಯ ಸುಖಾಂತ ಕಂಡು ಬಂದಿತೆಂದು ಹೇಳಬಹುದು. ಸಾಮಾನ್ಯ ಪ್ರಕರಣಗಳನ್ನು ರಂಜನೀಯವಾಗಿ ವರದಿ ಮಾಡಿ, ಉನ್ಮಾದ ಹುಟ್ಟಿಸಿ, ಪ್ರಚಾರ-ಪ್ರಸಾರ ಸಂಖ್ಯೆ ವೃದ್ಧಿಸಿಕೊಳ್ಳುವ ಮಾಧ್ಯಮಗಳ ತಂತ್ರಕ್ಕೆ ಈ ಸನ್ನಿವೇಶ ಪೂರಕವಾಗಿತ್ತು.**

ಖಳನಾಯಕರನ್ನು ಕುರಿತು 'ನನ್ನ ಅಭಿಪ್ರಾಯದಲ್ಲಿ ಎಡಪಂಥೀಯರೂ ನಮ್ಮೆಲ್ಲರಷ್ಟೇ ದೇಶಪ್ರೇಮಿಗಳು' ಎಂದು ಹೇಳಿದ್ದು ದೇಶಪ್ರೇಮಿ ಎಂಬ ಪದಕ್ಕೆ ಹೊಸ ಅರ್ಥ ನೀಡಿದಂತಾಗಿದೆ. ಸಂಘಪರಿವಾರದ ಹಿಡಿತದಲ್ಲಿದ್ದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಜೈಶ್ರೀರಾಂ ಎನ್ನುವುದು ದೇಶ ಭಕ್ತಿಯ ಕುರುಹಾಗಿದ್ದರೆ, ಬಹುಶಃ ಇಂದು ಮಾರುಕಟ್ಟೆಯ ಮೇಲಿನ ಶ್ರದ್ಧೆ ಜನರ ದೇಶಭಕ್ತಿಯನ್ನು ನಿರ್ಧರಿಸಬಹುದು. ಒಂದು ಹೊಸ ರಾಷ್ಟ್ರಗೀತೆ ರಚಿಸುವ ಸಮಯ ಬಂದಿದೆ ಎಂದು ತೋರುತ್ತದೆ. (ಪಿ. ಸಾಯಿನಾಥ್, ದಿ ಹಿಂದೂ ೧.೬. ೦೪)

ಚುನಾವಣಾ ನಂತರದ ಮೂರು ದಿನಗಳ ಮತ್ತು ಮಾರುಕಟ್ಟೆ ಕುಸಿತದ, ಮೂರು ದಿನಗಳ ಪತ್ರಿಕೆಗಳ ಅವಲೋಕನ ಮಾಡಿದರೆ, ಮಾಧ್ಯಮಗಳು ಮತದಾರರ ತೀರ್ಪಿಗೆ ಬೆಲೆ ನೀಡುವುದೋ ಅಥವಾ ಮಾರುಕಟ್ಟೆಯ ತೀರ್ಪಿಗೆ ನೀಡುವುದೋ ಎಂದು ಅರಿವಾಗುತ್ತದೆ. ನಮ್ಮ ದೇಶದಲ್ಲಿ ಶೇ ೬೫ ರಷ್ಟು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಅದೇ ವೇಳೆ ದೇಶದ ೧೮೦ ದಶಲಕ್ಷ ಕುಟುಂಬಗಳಲ್ಲಿ ಶೇ ೧.೧೫ ರಷ್ಟು ಶೇರು ಮಾರುಕಟ್ಟೆಯಲ್ಲಿ ಭಾಗವಹಿಸುತ್ತಾರೆ. ಆದರೂ ಸಹ ನಮ್ಮ ಮಾಧ್ಯಮಗಳು ಸಾವಿರಾರು ರೈತರ ಆತ್ಮಹತ್ಯೆಗಿಂತಲೂ ಶೇರು ಮಾರುಕಟ್ಟೆಯ ಏರಿಳಿತಗಳಿಗೆ ಪ್ರಾಶಸ್ತ್ಯ ನೀಡಿರುವುದು ಕಂಡು ಬರುತ್ತದೆ. ಪತ್ರಿಕೆ-ದೃಶ್ಯ ಮಾಧ್ಯಮಗಳ ಈ ಆಷಾಢಭೂತಿತನದಿಂದಲೇ ಭಾರತೀಯ ವರ್ಗ ಸಮಾಜದಲ್ಲಿ ಮಾರುಕಟ್ಟೆಗಳಿಗೆ ಹೆಚ್ಚು ಪ್ರಾಮುಖ್ಯತೆ ದೊರೆತಿದ್ದು ಸಾಮಾನ್ಯ ಜನರನ್ನು ಮಾರುಕಟ್ಟೆ ಆಕರ್ಷಿಸುತ್ತಿದೆ. ಮಧ್ಯಮ ವರ್ಗಗಳಿಗಂತೂ ಈಗ ಶೇರು ವ್ಯವಹಾರ ದಿನನಿತ್ಯದ ಸುಪ್ರಭಾತವಾಗಿದೆ.

ಮಾಧ್ಯಮಗಳು ಮಾರುಕಟ್ಟೆಗಳಿಗೆ ನೀಡಿರುವ ಈ ಪ್ರಾಮುಖ್ಯತೆಯನ್ನು ಹಲವರು ಆರ್ಥಿಕ ತಜ್ಞರು ಟೀಕಿಸುತ್ತಾರೆ. ಪ್ರೊಫೆಸರ್ ಜಯತಿ ಘೋಷ್ ಅವರ ಅಭಿಪ್ರಾಯದಲ್ಲಿ 'ಭಾರತೀಯ ಶೇರು ಮಾರುಕಟ್ಟೆಯಲ್ಲಿ ಹಣಕಾಸು ಸಂಸ್ಥೆಗಳು, ದೊಡ್ಡ ಕಾರ್ಪೋರೇಟ್ ಉದ್ದಿಮೆಗಳು, ಮತ್ತು ವಿದೇಶೀ ಸಾಂಸ್ಥಿಕ ಬಂಡವಾಳಿಗರು ಮುಖ್ಯವಾಗಿ ಬಂಡವಾಳ ಹೂಡಿಕೆಯಲ್ಲಿ ಅಧಿಪತ್ಯ ಸಾಧಿಸಿರುತ್ತಾರೆ. ಕೇವಲ ಒಂದು ಸಣ್ಣ ಪ್ರಮಾಣದ ಶೇರುಗಳ ಅಂಶವು ನಿತ್ಯ ವ್ಯವಹಾರಗಳಿಗೆ ಸೀಮಿತವಾಗಿರುತ್ತದೆ. ಏನೇ ಲಾಭ ನಷ್ಟಗಳಾದರೂ ಅದು ಕೇವಲ ಹಾಳೆಗಳ ಮೇಲಿರುತ್ತದೆ ಹೊರತು ದೇಶದ ಸಂಪತ್ತನ್ನು ಅವು ಪ್ರತಿಬಿಂಬಿಸುವುದಿಲ್ಲ. ಕೆಲವು ವರ್ಷಗಳಿಂದ ಗಮನಿಸಿದಲ್ಲಿ ಶೇರು ಮಾರುಕಟ್ಟೆಗಳು ನಿಜವಾದ ಆರ್ಥಿಕ ಸಾಧನೆಗಳ ಸೂಚಕವಲ್ಲ ಎಂದು ಸಾಬೀತಾಗಿರುತ್ತದೆ' ಎಂದು ಹೇಳುತ್ತಾರೆ. (ದಿ ಹಿಂದು, ಪಿ. ಸಾಯಿನಾಥ್ ೧. ೬. ೦೪)

ಶೇರು ಮಾರುಕಟ್ಟೆಯ ಈ ಕಲ್ಪನೆಯ ಹಿಂದೆ ಇರುವುದು ಮಾರುಕಟ್ಟೆಯ ಸಿದ್ಧಾಂತ ಎಂಬ ಅಂಶವನ್ನು ನಾವು ಅರಿಯಬೇಕಾಗಿದೆ. ಮಾರುಕಟ್ಟೆ ಸಿದ್ಧಾಂತವು ಇನ್ನೂ ಹೆಚ್ಚಿನ ವಿಶಾಲ ರಾಜಕೀಯ ಪರಿಕಲ್ಪನೆಯಾಗಿದೆ. ಮಾರುಕಟ್ಟೆ ಮತ್ತು ಪ್ರಜಾಪ್ರಭುತ್ವದ ನಡುವಿನ ಸಂಘರ್ಷ ನಿರಂತರವಾಗಿ ನಡೆದೇ ಇರುತ್ತದೆ. ಹಾಗಾಗಿಯೇ ಪಾಶ್ಚಿಮಾತ್ಯ ಬಂಡವಾಳ ಶಾಹಿ ದೇಶಗಳಿಗೂ ಭಾರತೀಯ ಚುನಾವಣೆಗಳ ಮೇಲೆ ನಿಗಾ ಇರುತ್ತದೆ. ಚುನಾವಣೆಗಳ ನಂತರ ಮೇ ೧೯ರ ಸಂಚಿಕೆಯಲ್ಲಿ ವಾಲ್ ಸ್ಟ್ರೀಟ್ ಜರ್ನಲ್ (WSJ) ಪತ್ರಿಕೆಯು 'ಪ್ರಜಾತಂತ್ರವೇ ಅವಶ್ಯಕತೆಗೆ ವ್ಯತಿರಿಕ್ತವಾದುದು' ಎಂದು ಆರ್ಭಟಿಸುತ್ತದೆ. 'ಎಲ್ಲಾ ದೇಶಗಳೂ ಪ್ರಜಾಪ್ರಭುತ್ವವನ್ನು ಒಪ್ಪಿಕೊಳ್ಳಬೇಕು ಎನ್ನುವುದು ಅಮೆರಿಕಾದ ನೀತಿಯಾದರೂ ಭಾರತೀಯ ಚುನಾವಣೆಗಳಿಂದ ಪಾಶ್ಚಿಮಾತ್ಯ ರಾಷ್ಟ್ರಗಳು ಕಲಿಯಬೇಕಾದುದೇನೆಂದರೆ ನಾವು ಚುನಾವಣೆಗಳ ಬಗ್ಗೆ ಅಂಥ ವಿಶ್ವಾಸ ಹೊಂದಿರುವುದು ತರವಲ್ಲ' ಎಂದು WSJ ಪತ್ರಿಕೆ ಹೇಳುತ್ತದೆ. ಇನ್ನೂ ಮುಂದುವರೆದು 'ಭಾರತೀಯ ಚುನಾವಣೆಗಳು ನಿರೂಪಿಸುವಂತೆ, ಪ್ರಜಾತಂತ್ರವು ಸದಾ ಕಾಲವೂ ಸುಸಂಗತವಾದ ಆರ್ಥಿಕ ನೀತಿ, ಅಭಿವೃದ್ಧಿ ಮತ್ತು ಉನ್ನತಿಯನ್ನು ಬೆಂಬಲಿಸುವುದಿಲ್ಲ' ಎಂದು ಈ ಪತ್ರಿಕೆ ಹೇಳುತ್ತದೆ.

ಅರ್ಥಾತ್ ಈ ಪತ್ರಿಕೆಯ ಅಭಿಪ್ರಾಯದಲ್ಲಿ ತಮಗೆ ಒಳಿತಾವುದು, ಕೆಡುಕಾವುದು ಎಂದು ನಿರ್ಧರಿಸುವ ಅರ್ಹತೆ ಮತದಾರರಿಗಿಲ್ಲ. ಭಾರತದಷ್ಟು ಆರ್ಥಿಕ ಪ್ರಗತಿ ಸಾಧಿಸುವ ದೇಶಗಳ ಬಗ್ಗೆ ಈ ಪತ್ರಿಕೆಯು 'ಪಾಶ್ಚಿಮಾತ್ಯ ದೇಶಗಳು ಈ ದೇಶಗಳಲ್ಲಿ ರಾಜಕೀಯ ಪೈಪೋಟಿಯನ್ನು ಬೆಳೆಸುವುದು ತರವಲ್ಲ, ಏಕೆಂದರೆ ಅದು ಆರ್ಥಿಕ ಬದಲಾವಣೆಯ ನಾಯಕತ್ವವನ್ನೇ ನಾಶಪಡಿಸಬಲ್ಲುದು' ಎಂದು ಹೇಳುತ್ತಾರೆ. ಬಹುಶಃ ಈ ಪತ್ರಿಕೆಯು ಜೂನ್ ನಂತರದಲ್ಲಿ ಇರಾಕ್‌ನಲ್ಲಿ ಸರ್ಕಾರ ರಚನೆಯಾಗುವ ಸಾಧ್ಯತೆಗಳ ಹಿನ್ನೆಲೆಯಲ್ಲಿ ಹೀಗೆ ಹೇಳಿರಬಹುದು. ಏಕೆಂದರೆ ಅಲ್ಲಿನ ಚುನಾಯಿತ ಸರ್ಕಾರವು ಡಿಕ್ ಚೆನಿಯವರ ಕಾಬಲ್ ಕಂಪನಿಗೆ ತೈಲವನ್ನು ಲೂಟಿ ಮಾಡಲು ಅಡ್ಡಿಯಾಗಬಹುದು. ಇದನ್ನು ನಾವು ಮಾರುಕಟ್ಟೆ ಮೂಲಭೂತವಾದ ಮತ್ತು ಪ್ರಜಾತಂತ್ರದ ನಡುವಿನ ಸಂಘರ್ಷ ಎಂತಲೂ ಬಣ್ಣಿಸಬಹುದು.

ಈ ಸನ್ನಿವೇಶದಲ್ಲಿ ನಮ್ಮಲ್ಲಿಯ ಹಲವು ಮಾರುಕಟ್ಟೆ ಜೆಹಾದಿಗಳು ಬಹುತೇಕ ಹುತಾತ್ಮರಾಗಲು ಬಯಸುತ್ತಿರುವುದನ್ನೂ ಕಾಣಬಹುದಾಗಿದೆ. ಈ ಹುತಾತ್ಮ ಮಹಾತ್ಮರ ಅಭಿಪ್ರಾಯದಲ್ಲಿ ಮಾರುಕಟ್ಟೆಯಲ್ಲಿ ವಿಶ್ವಾಸವಿಲ್ಲದಿದ್ದವರು ಜೀವಿಸುವ ಹಕ್ಕನ್ನೇ ಕಳೆದುಕೊಂಡುಬಿಡುತ್ತಾರೆ. ಮಾರುಕಟ್ಟೆಗೆ ವಿರುದ್ಧವಾಗಿ ನಡೆದುಕೊಳ್ಳುವ ಯಾವ ಸರ್ಕಾರವೂ ಊರ್ಜಿತವಾಗುವುದಿಲ್ಲ ಎಂದು ಸಂಪಾದಕರೊಬ್ಬರು ಹೇಳಿರುವುದು ದಲಾಲ್ ಸ್ಟ್ರೀಟ್‌ನ ಸಂವೇದನೆಯನ್ನು ಪ್ರತಿಬಿಂಬಿಸುತ್ತದೆ. ಹೀಗೆ ಹಲವಾರು ಪತ್ರಿಕೆಗಳ ಸಂಪಾದಕೀಯದಲ್ಲಿ ಮಾರುಕಟ್ಟೆಯ ಕುಸಿತದ ಬಗ್ಗೆ ನಾನಾ ಬಗೆಯ ಅಭಿಪ್ರಾಯಗಳು ಮೂಡಿ ಬಂದವು. ಇಷ್ಟೆಲ್ಲಾ ಊಹಾ ಪೋಹಗಳ ನಡುವೆಯೂ ಮಾರುಕಟ್ಟೆ ಶೀಘ್ರವಾಗಿ ಕುದುರಿಕೊಂಡಿದ್ದು ಈ ಮಾರುಕಟ್ಟೆ ಪೂಜಾರಿಗಳಿಗೆ ಜೀವ ಬಂದಂತಾಗಿತ್ತು.

ಆದರೂ ಇಲ್ಲಿ ಉದ್ಭವಿಸುವ ಮುಖ್ಯ ಪ್ರಶ್ನೆ ಎಂದರೆ ಈ ಪತ್ರಿಕೆಗಳಲ್ಲಿ ವರದಿಯಾದಂತೆ ಎಷ್ಟು ಶ್ರೀ ಸಾಮಾನ್ಯರು ಮಾರುಕಟ್ಟೆ ಕುಸಿತದಿಂದ ಬಾಧಿತರಾಗಿದ್ದಾರೆ? ೨.೩೪ ಲಕ್ಷ ಕೋಟಿಯಷ್ಟು ಸಾಮಾನ್ಯ ಜನರ ಹಣ ನೀರು ಪಾಲಾಗಿದೆ ಎಂಬ ಶೀರ್ಷಿಕೆಗಳ ಹಿಂದೆ ಮಾಧ್ಯಮಗಳ ದೊರೆಗಳು ಯಾವ ಪಿತೂರಿ ನಡೆಸಿದ್ದಾರೆ? ಆರ್ಥಿಕ ಸ್ಥಿರತೆಗೂ ಶೇರು ಮಾರುಕಟ್ಟೆಯ ಏರಿಳಿತಗಳಿಗೂ ಯಾವ ರೀತಿಯ ಸಂಬಂಧವಿದೆ? ೪೦ ಕೋಟಿ ಜನ, ೪೦ ಡಿಗ್ರಿ ಬಿಸಿಲಿನಲ್ಲಿ ಗಂಟೆಗಟ್ಟಲೆ ಸಾಲುಗಟ್ಟಿ ನಿಂತು ಮತದಾನ ಮಾಡಿದ್ದು ಈ ಮಾರುಕಟ್ಟೆಯನ್ನು ರಕ್ಷಿಸಲೆಂದೇ? ಅಥವಾ ತಮಗೆ ಬೇಕಾದ ಸರ್ಕಾರ ಚುನಾಯಿಸಲೆಂದೇ? ಮಾರುಕಟ್ಟೆ ಆರ್ಥಿಕತೆ ಸುಧಾರಣೆಗಳ ವಿರುದ್ಧ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದ ಜನತೆಯ ಆಶೋತ್ತರಗಳಿಗಿಂತಲೂ, ಮಾರುಕಟ್ಟೆ ಪೂಜಾರಿಗಳ ಅಭಿಪ್ರಾಯ ಮುಖ್ಯವೇ?

ಇತ್ತೀಚಿನ ದಿನಗಳಲ್ಲಿ, ವಿಶೇಷವಾಗಿ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಸಾರ್ವಜನಿಕ ಉದ್ದಿಮೆಗಳು ಶೇರು ಮಾರುಕಟ್ಟೆಯನ್ನು ಪ್ರವೇಶಿಸಿದ ನಂತರ ಗ್ರಾಮೀಣ ಪಟ್ಟಣ ಪ್ರದೇಶಗಳಲ್ಲೂ ಜನರು ಶೇರುಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿರುವುದು ಕಂಡುಬರುತ್ತಿದೆ. ಮಾರುಕಟ್ಟೆಯ ವ್ಯವಹಾರಗಳ ಬಗ್ಗೆ ಮಾಹಿತಿ ಜ್ಞಾನ ಇಲ್ಲದಿದ್ದರೂ ಹೆಚ್ಚು ಲಾಭಗಳಿಸುವ ಆಸೆಯಿಂದ ರೈತರು ಮಧ್ಯಮ ವರ್ಗದ ಜನರೂ, ಕಾರ್ಮಿಕರು, ಸಣ್ಣ ವ್ಯಾಪಾರಿಗಳೂ ಶೇರುಗಳಲ್ಲಿ ಹಣ ತೊಡಗಿಸುವ ಪ್ರವೃತ್ತಿ ಈಗ ಸಾಮಾನ್ಯವಾಗಿದೆ. ಇದೂ ಒಂದು ರೀತಿಯಲ್ಲಿ ಜಾಗತೀಕರಣದ ಪರಿಣಾಮವೇ ಆಗಿದೆ.

ಹೇಗೇ ಆಗಲಿ, ಶೀಘ್ರ ಹಣ ಗಳಿಸುವುದು ಈಗ ಮಧ್ಯಮ ವರ್ಗದ ಮೂಲ ಮಂತ್ರವಾಗಿದೆ. ದುಡಿದು ಸಂಪಾದಿಸುವುದಕ್ಕಿಂತಲೂ ಹೆಚ್ಚಾಗಿ ಕುಳಿತೆಡೆಯಲ್ಲೇ ಸಂಪಾದಿಸಲು ಆನ್‌ಲೈನ್ ಲಾಟರಿ, ಸರ್ಕಾರದ ಲಾಟರಿ ಯೋಜನೆ, ಒಂದಂಕಿ ಲಾಟರಿಗಳು ಇದ್ದಂತೆ ಶೇರು ಮಾರುಕಟ್ಟೆಯೂ ಇದೆ. ಆದರೆ ಶೇರು ಮಾರುಕಟ್ಟೆ ಇಸ್ಪೀಟ್ ಆಟದಂತೆ, ಜೂಜು ಆಡಿದಂತೆ ಎಂದು ಸಾಮಾನ್ಯ ಜನತೆ ಅರಿತಿರಲಿಕ್ಕಿಲ್ಲ, ಜೂಜುಕಟ್ಟೆಯಲ್ಲಿ ನಡೆಯುವ ಪಿತೂರಿಗಳು ಶೇರು ಮಾಟುಕಟ್ಟೆಯಲ್ಲೂ ನಡೆಯುತ್ತವೆ. ಆದರೆ ಜಾಗತೀಕರಣ ಪ್ರಕ್ರಿಯೆಯ ಒಂದು ದಶಕವು ಸಾಮಾನ್ಯರನ್ನು ಭ್ರಮೆಗೊಳಪಡಿಸುವುದೇ ಅಲ್ಲದೆ, ಅವರಲ್ಲಿ ಧನಾರ್ಜನೆಯ ಹುಚ್ಚನ್ನು ಉಂಟುಮಾಡಿದೆ. ಡಾಲರ್ ಗಳಿಸುವ ಆಸೆಯಿಂದ ಮೇಲ್ವರ್ಗದ ಜನ ಲಕ್ಷಾಂತರ ಹಣ ಸುರಿದು ವಿದೇಶಗಳಿಗೆ ಹೋಗಿ ನೆಲೆಸಿದರೆ, ಮಧ್ಯಮ ವರ್ಗ ಎಲ್ಲಿಯೂ ಸಲ್ಲದವರಂತೆ ಬಾಳುವ ಪರಿಸ್ಥಿತಿಯನ್ನು ಜಾಗತೀಕರಣ ಪ್ರಕ್ರಿಯೆ ನಿರ್ಮಿಸಿದೆ. ಒಂದೆಡೆ ಆರ್ಥಿಕ ಸುಧಾರಣೆಗಳ ಪರಿಣಾಮ

ವಾಗಿ ಉದ್ಯೋಗ ಅವಕಾಶಗಳು ಕಡಿಮೆಯಾಗುತ್ತಿರುವಂತೆಯೇ ಮಧ್ಯಮ ವರ್ಗಗಳಲ್ಲಿ ಅಭದ್ರತೆ ಹೆಚ್ಚಾಗುತ್ತಲೇ ಹೋಗುತ್ತದೆ. ಕೃಷಿ ಬಿಕ್ಕಟ್ಟಿನಿಂದ ರೈತಾಪಿ ವರ್ಗದಲ್ಲಿ, ಕೈಗಾರಿಕಾ ಬಿಕ್ಕಟ್ಟಿನಿಂದ ಕಾರ್ಮಿಕರಲ್ಲಿ ಈ ಅಭದ್ರತೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಈ ಆರ್ಥಿಕ ಬಿಕ್ಕಟ್ಟನ್ನು ನೀಗಲು ಜನ ಶೀಘ್ರ ಹಣಗಳಿಸುವ ಮಾರ್ಗಗಳನ್ನು ಹುಡುಕುತ್ತಿರುತ್ತಾರೆ. ಈ ಸನ್ನಿವೇಶದಲ್ಲಿ ಶೇರುಮಾರುಕಟ್ಟೆ ಜನತೆಗೆ ಓಯಸಿಸ್‌ನಂತೆ ಕೆಲಸ ಮಾಡುತ್ತದೆ.

ಇನ್ನೊಂದೆಡೆ ಜಾಗತೀಕರಣ ನೀತಿಯನ್ನು ಜನರ ಗಂಟಲಲ್ಲಿ ತುರುಕುವ ಸರ್ಕಾರಗಳು ತಮ್ಮ ಆರ್ಥಿಕ ನೀತಿಗಳನ್ನು ಶೇರು ಮಾರುಕಟ್ಟೆಗೆ ಮಾರಕವಾಗಿರುವಂತೆಯೇ ರೂಪಿಸುತ್ತವೆ. ಭವಿಷ್ಯನಿಧಿಯ ಬಡ್ಡಿದರ ಕಡಿಮೆ ಮಾಡಲಾಗುತ್ತದೆ. ಬ್ಯಾಂಕುಗಳಲ್ಲಿ ಠೇವಣಿ ಬಡ್ಡಿದರ, ಅಂಚೆ ಬಡ್ಡಿದರ ಕಡಿಮೆ ಮಾಡಲಾಗುತ್ತದೆ. ಅಲ್ಪಸ್ವಲ್ಪ ಉಳಿತಾಯ ಮಾಡಿರುವ ನಿವೃತ್ತ ನೌಕರರು ಉದ್ಯೋಗಿಗಳು ಮಧ್ಯಮ ವರ್ಗದವರು ಈ ಕಡಿಮೆ ಬಡ್ಡಿಗಿಂತಲೂ ಶೇರು ಮಾರುಕಟ್ಟೆಯೇ ವಾಸಿ ಎಂದು ನಿರ್ಧರಿಸಿಬಿಡುತ್ತಾರೆ. ಅವರ ಕಣ್ಮುಂದೆ ರಂಜನೀಯ ಚಿತ್ರಗಳು ತಾಂಡವವಾಡುತ್ತಿರುತ್ತವೆ.

ಐದು ರೂ.ಗಳ ಇನ್‌ಫೋಸಿಸ್ ಶೇರುಗಳು ೬೫೦೦ ರೂಪಾಯಿ ಎಂದಾದರೆ ನಾವು ತೊಡಗಿಸುವ ಹಣವು ಇದೇ ರೀತಿ ವೃದ್ಧಿಯಾಗಬಹುದೆಂಬ ಆಸೆ ಮಧ್ಯಮ ವರ್ಗದವರನ್ನು ಶೇರು ಮಾರುಕಟ್ಟೆಗೆ ಆಕರ್ಷಿಸುತ್ತದೆ. ಆದರೆ ಈ ಪೇಪರ್ ಹಣದ ಹಿಂದಿನ ಮಹತ್ವ ಸಾಮಾನ್ಯರಿಗೆ ಅರಿವಿರುವುದಿಲ್ಲ. ಇನ್‌ಫೋಸಿಸ್‌ನ ಬಂಡವಾಳವನ್ನು ಎಲ್ಲಿ ತೊಡಗಿಸಲಾಗುತ್ತದೆ ಎಂದು ಯಾರಿಗೂ ಹೇಳಲಾಗುವುದಿಲ್ಲ. ಅಥವಾ ದಿನನಿತ್ಯ ಶೇರು ಮಾರುಕಟ್ಟೆಗೆ ಹರಿದು ಬರುವ, ಅಲ್ಲಿಂದ ಹೊರಹೋಗುವ ಕೋಟ್ಯಾಂತರ ರೂ.ಗಳು ಎಲ್ಲಿಂದ ಬರುತ್ತವೆ ಎತ್ತ ಹೋಗುವುದೆಂದು ಯಾರಿಗೂ ತಿಳಿದಿರುವುದಿಲ್ಲ. ಹಣಕಾಸು ಬಂಡವಾಳದ ಜಾಗತೀಕರಣದ ಮುಖ್ಯ ಲಕ್ಷಣವೆಂದರೆ ಇದೇ ಎಂದು ಹೇಳಬಹುದು. ಕ್ಷಣಾರ್ಧದಲ್ಲಿ ಬಂಡವಾಳಗಳು ದೇಶದಿಂದ ದೇಶಕ್ಕೆ ಹಾರಿ ಹೋಗಿರುತ್ತದೆ. ಈ ಬಂಡವಾಳದ ಆಮದು ರಫ್ತುಗಳೇ ಶೇರು ಮಾರುಕಟ್ಟೆಗಳ ಸ್ಥಿರತೆಯನ್ನು ನಿರ್ಧರಿಸುತ್ತದೆ. ಕೇವಲ ಒಬ್ಬ ಬಂಡವಾಳ ಹೂಡಿಕೆದಾರ ಇಡೀ ಶೇರು ಮಾರುಕಟ್ಟೆಯನ್ನು ಅಲ್ಲೋಲ ಕಲ್ಲೋಲ ಮಾಡುವ ಸಾಮರ್ಥ್ಯ ಹೊಂದಿರುತ್ತಾನೆ. ಅಥವಾ ಒಂದು ಕಾರ್ಪೋರೇಟ್ ಕಂಪನಿ ಮಾರುಕಟ್ಟೆಯಲ್ಲಿ ಕೋಲಾಹಲ ಉಂಟು ಮಾಡಬಹುದು. ೨೦೦೪ರ ಚುನಾವಣೆಯ ನಂತರ ಆಗಿದ್ದು ಇಷ್ಟೆ.

ಆದರೆ ಸತ್ಯಾಂಶವೆಂದರೆ ಮಾಧ್ಯಮಗಳಲ್ಲಿ ಪ್ರತಿಬಿಂಬಿಸಿದಂತೆ ಮೇ ತಿಂಗಳ ಶೇರು ಮಾರುಕಟ್ಟೆಯ ಕುಸಿತದಿಂದ ಸಾಮಾನ್ಯ ಜನತೆ ಕಿಂಚಿತ್ತು ಭಾದಿತವಾಗಿಲ್ಲ. ಏಕೆಂದರೆ ಇಡೀ ಶೇರು ಮಾರುಕಟ್ಟೆಯ ವ್ಯವಹಾರ ಕೇವಲ ೩೧ ಕಂಪನಿಗಳನ್ನು ಆಧರಿಸಿರುತ್ತದೆ. ಈ ಕಂಪನಿಗಳೇ ಮಾರುಕಟ್ಟೆಯ ಏರಿಳಿತಗಳನ್ನು ಬಹುಮಟ್ಟಿಗೆ ನಿರ್ಧರಿಸುತ್ತದೆ. ಅಲ್ಲದೆ ದಿನನಿತ್ಯ ಉಂಟಾಗುವ ಏರಿಳಿತಗಳಿಂದ ಸಾಮಾನ್ಯ ಜನ ಭಾದಿತರಾಗುವುದಿಲ್ಲ. ಏಕೆಂದರೆ ಶ್ರೀ ಸಾಮಾನ್ಯರು ಶೇರು ಮಾರುಕಟ್ಟೆಯಲ್ಲಿ ತೊಡಗಿಸುವುದೇ ತನ್ನ ಉಳಿತಾಯದ ಅಲ್ಪಹಣವನ್ನುಮಾತ್ರ. ಅದನ್ನುಸಹ ದಿನನಿತ್ಯ ಶೇರು ದರಗಳನ್ನು ನೋಡಿ ಮಾರುವುದಾಗಲೀ, ಕೊಳ್ಳುವುದಾಗಲೀ ಮಾಡುವುದಿಲ್ಲ. ದಿನ ಬೆಳಗಾದರೆ ಪತ್ರಿಕೆಯಲ್ಲಿ ಶೇರುಗಳ ಧಾರಣೆಯನ್ನು ನೋಡುತ್ತಾ ಕೂರುವುದೂ ಇಲ್ಲ.

ಶೇರು ಮಾರುಕಟ್ಟೆಯ ಕುಸಿತದಿಂದ ಸಾಮಾನ್ಯ ಜನತೆ ಕಿಂಚಿತ್ತು ಭಾದಿತವಾಗಿಲ್ಲ. ಏಕೆಂದರೆ ಇಡೀ ಶೇರು ಮಾರುಕಟ್ಟೆಯ ವ್ಯವಹಾರ ಕೇವಲ ೩೧ ಕಂಪನಿಗಳನ್ನು ಆಧರಿಸಿರುತ್ತದೆ. ಈ ಕಂಪನಿಗಳೇ ಮಾರುಕಟ್ಟೆಯ ಏರಿಳಿತಗಳನ್ನು ಬಹುಮಟ್ಟಿಗೆ ನಿರ್ಧರಿಸುತ್ತದೆ. ಹೀಗಿದ್ದರೂ ಸಹ ಮಾಧ್ಯಮಗಳಲ್ಲಿ ಜನಾದೇಶ ಮತ್ತು ಮಾರುಕಟ್ಟೆ ನಡುವಿನ ಸಂಘರ್ಷದ ಬಗ್ಗೆ ಹೇರಳವಾಗಿ ಪುಟಗಟ್ಟಲೆ ಬರೆಯಲಾಗುತ್ತದೆ.

ಹಾಗಾಗಿ ಒಂದೆರಡು ದಿನಗಳ ಏರಿಳಿತಗಳು ಶ್ರೀಸಾಮಾನ್ಯನನ್ನು ಹೆಚ್ಚಾಗಿ ಭಾದಿಸುವುದಿಲ್ಲ. ಅರ್ಥಶಾಸ್ತ್ರಜ್ಞರೂ ಸಹ ಈ ಅಂಶವನ್ನು ಹಲವಾರು ಸಂದರ್ಭಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

ಆದರೂ ಸಹ ಮಾಧ್ಯಮಗಳಲ್ಲಿ ಜನಾದೇಶ ಮತ್ತು ಮಾರುಕಟ್ಟೆ ನಡುವಿನ ಸಂಘರ್ಷದ ಬಗ್ಗೆ ಹೇರಳವಾಗಿ ಪುಟಗಟ್ಟಲೆ ಬರೆಯಲಾಗುತ್ತದೆ. ವಾಲ್‌ಸ್ಟ್ರೀಟ್ ಜರ್ನಲ್ ನಂತರ ಪತ್ರಿಕೆಗಳು 'ಭಾರತ ನಿಜವಾಗಲೂ ಆರ್ಥಿಕವಾಗಿ ಬಲಾಢ್ಯರಾಗಲೇಬೇಕಾದರೆ ಈ ಚುನಾವಣಾ ಮತದಾರರಿಗಿಂತಲೂ ಹೆಚ್ಚಾಗಿ ಅಂತರರಾಷ್ಟ್ರೀಯ ಮತದಾರರಾದ ಬಂಡವಾಳ ಹೂಡಿಕೆದಾರರಿಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕು' ಎಂದು ಹೇಳುತ್ತವೆ. (ದಿ ಹಿಂದು, ೧. ೬. ೦೪) ಮಾರುಕಟ್ಟೆ ಶಕ್ತಿಗಳು ಮಾಡದಿರುವ ಪವಾಡಗಳೇ ಇಲ್ಲವೆಂದೂ ವಾದಿಸುವವರಿದ್ದಾರೆ. ಈ ಹಸಿವು ಬಡತನ ಎನ್ನುವುದು ಮಾರುಕಟ್ಟೆ ವಿರೋಧಿ ವ್ಯವಸ್ಥೆಗಳ ಲಕ್ಷಣ ಎಂದು ವಾದಿಸುವ ಈ ವರ್ಗದ ಚಿಂತಕರು ಮುಕ್ತ ಮಾರುಕಟ್ಟೆಯೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದೂ ವಾದಿಸುತ್ತಾರೆ. ಹಾಗಾಗಿಯೇ ಎನ್‌ಡಿಎ ಸರ್ಕಾರದ ಕೃಷಿ ಬಿಕ್ಕಟ್ಟನ್ನು ಸಹ ಪರಿಹರಿಸದೆ ಮಾರುಕಟ್ಟೆ ಶಕ್ತಿಗಳಿಗೆ ವಹಿಸಿ ಕೈಕಟ್ಟಿ ಕುಳಿತಿತ್ತು. ಇದರ ಪರಿಣಾಮ ಈಗಾಗಲೇ ಸ್ಪಷ್ಟವಾಗಿ ವ್ಯಕ್ತವಾಗಿದೆ.

ಈ ಶೇರು ಮಾರುಕಟ್ಟೆಯ ಸಂತೆಯೆಂಬ ಜೂಜು ಕಟ್ಟೆಯಲ್ಲಿ ಶ್ರೀ ಸಾಮಾನ್ಯನ ಪಾತ್ರ ಬಹಳ ಗೌಣವಾದದ್ದೆಂದು ಮಾಧ್ಯಮಗಳು ಇನ್ನಾದರೂ ಅರಿತುಕೊಳ್ಳುವ ಅವಶ್ಯಕತೆ ಇದೆ. ಆದಾಗ್ಯೂ ಮಾಧ್ಯಮಗಳು ಮಾರುಕಟ್ಟೆ ಕುಸಿತಕ್ಕೆ ಪ್ರತಿಕ್ರಿಯಿಸಿದ ರೀತಿ ನೋಡಿದರೆ ಶ್ರೀ ಸಾಮಾನ್ಯನ ಬಗ್ಗೆ ಬಹಳ ಸಹಾನುಭೂತಿ ಹೊಂದಿದವರಂತೆ ಕಂಡುಬರುತ್ತದೆ.

ಆದರೆ ವಾಸ್ತವತೆ ಹಾಗಿಲ್ಲ. ಭವಿಷ್ಯ ನಿಧಿಯ ಬಡ್ಡಿ ದರ ಕಡಿಮೆಯಾದಾಗ ಬ್ಯಾಂಕು-ಅಂಚೆ ಠೇವಣಿಗಳು ಬಡ್ಡಿ ಇಳಿಸಿದಾಗ, ನಿವೃತ್ತ ನೌಕರರು ತಮ್ಮ ಉಳಿತಾಯದ ಹಣದ ಮೇಲೆ ಹೆಚ್ಚು ಬಡ್ಡಿ ಗಳಿಸದೆ ಪರದಾಡಿದಾಗ ಅಂಚೆ ಕಛೇರಿಯ ಎನ್‌ಎಸ್‌ಸಿಗಳ ಬಡ್ಡಿ ಕುಸಿದಾಗ ಇದೇ ಮಾಧ್ಯಮಗಳು ಕೇಕೆ ಹಾಕುತ್ತಿದ್ದವು. ಭಾರತ ಯೂರೋಪಿನ ಹಾದಿಯಲ್ಲಿ ಸಾಗುತ್ತಿದೆ ಎಂದು ಮಾಧ್ಯಮಗಳು ಪ್ರಶಂಸಿಸುತ್ತಿದ್ದವು. ಆಗ ಶ್ರೀ ಸಾಮಾನ್ಯನ ಬಗ್ಗೆ ಇಲ್ಲದ ಕಾಳಜಿ, ಶೇರು ಮಾರುಕಟ್ಟೆ ಕುಸಿದ ಕೂಡಲೇ ಹೇಗೆ ಮೂಡಲು ಸಾಧ್ಯ ? ಶ್ರೀ ಸಾಮಾನ್ಯರ ಕುರಿತ ವಿಷಯವನ್ನು ಪ್ರಕಟಿಸಲೂ ಹಿಂಜರಿಯುತ್ತಿದ್ದ ಪತ್ರಿಕೆಗಳು ೨೩೪೪ರ ಮುಂದೆ ಹತ್ತು ಸೊನ್ನೆಗಳನ್ನು ಸೇರಿಸಿ ಗೋಳಿಡುವುದು ಮಾಧ್ಯಮಗಳ ಠಕ್ಕುತನದ ಸ್ಪಷ್ಟ ನಿದರ್ಶನವಷ್ಟೆ. ಈ ಆಕ್ರಂದನಕ್ಕೆ ಕಾರಣಗಳೂ ಸಾಕಷ್ಟಿವೆ.

೨೦೦೪ರ ಚುನಾವಣೆಗಳಲ್ಲಿ ಎಡಪಕ್ಷಗಳು ಹಿಂದೆಂದಿಗಿಂತಲೂ ಉತ್ತಮ ಸಾಧನೆ ಮಾಡಿವೆ. ಈವರೆಗಿನ ಭಾರತದ ರಾಜಕಾರಣದಲ್ಲಿ ಎಡಪಕ್ಷಗಳ ಕೂಗು ಸಂಸತ್ತಿನಲ್ಲಿ ಮೊಳಗುವುದೇ ಅಪರಾಧವಾಗಿತ್ತು. ಎಡಪಂಥೀಯ ಕಾರ್ಮಿಕ ಸಂಘಟನೆಗಳ ಹೋರಾಟಗಳಿಗೆ ಆಳುವ ವರ್ಗಗಳು ಗಂಭೀರವಾಗಿ ಪರಿಗಣಿಸುತ್ತಲೂ ಇರಲಿಲ್ಲ. ಏಕೆಂದರೆ ಯಾವುದೇ ಸರ್ಕಾರವೂ ಎಡಪಕ್ಷಗಳನ್ನು ಅವಲಂಬಿಸುತ್ತಿರಲಿಲ್ಲ. ಆದರೆ ಇಂದಿನ ಪರಿಸ್ಥಿತಿ ಭಿನ್ನವಾಗಿದೆ. ೬೧ ಸ್ಥಾನಗಳನ್ನು ಗಳಿಸಿರುವ ಎಡಪಕ್ಷಗಳು ಕೇಂದ್ರ ಸರ್ಕಾರಕ್ಕೆ ಬಾಹ್ಯ ಬೆಂಬಲ ಸೂಚಿಸಿದ್ದರೂ ಸರ್ಕಾರದ ಆರ್ಥಿಕ ನೀತಿಗಳು ಎಡಪಕ್ಷಗಳ ಸಹಮತದೊಂದಿಗೇ ರೂಪಿತವಾಗುತ್ತದೆ. ಎನ್‌ಡಿಎ ಸರ್ಕಾರದಂತೆ ಪ್ರಸ್ತುತ ಸರ್ಕಾರ ಕಾರ್ಮಿಕ ವಿರೋಧೀ ನೀತಿಗಳನ್ನು ಜನ ವಿರೋಧೀ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದಿಲ್ಲ.

ಎಡಪಕ್ಷಗಳ ಪ್ರಸ್ತುತ ರಾಜಕೀಯ ನಿಲುವು ಪ್ರಶ್ನಾರ್ಹವಾದರೂ, ಒಂದು ರೀತಿಯಲ್ಲಿ ಆರ್ಥಿಕ ಸುಧಾರಣೆಗಳಿಗೆ ಕಡಿವಾಣ ಹಾಕಿದಂತಾಗುವುದಂತೂ ಖಚಿತ. ಹಾಗಾಗಿಯೇ ಅಸಂಗತರೆನಿಸಿದ್ದ ಎಡ ಪಕ್ಷಗಳ ಒಂದು ಹೇಳಿಕೆ ಇಡೀ ಶೇರು ಮಾರುಕಟ್ಟೆಯನ್ನು ಸಂಪೂರ್ಣ ನಿರ್ಲಕ್ಷಿಸಿ ನೆಹರೂ ಆರ್ಥಿಕತೆಗೆ ಮರಳುವುದಿಲ್ಲವಾದರೂ ಕಾರ್ಪೋರೇಟ್ ಶಕ್ತಿಗಳು ರುದ್ರ ತಾಂಡವವಾಡಿದರೂ ಸದ್ಯದಲ್ಲಿ ಭಾಜಪವಂತೂ ಅಧಿಕಾರಕ್ಕೆ ಬರುವ ಸಾಧ್ಯತೆಗಳಿಲ್ಲ. ಈ ಸತ್ಯವನ್ನು ಜನಾದೇಶವನ್ನು ಮಾರುಕಟ್ಟೆಯ ಆರಾಧಕರು ಮಾಧ್ಯಮಗಳು ಅರಿಯಬೇಕಾಗಿದೆ.

ಈ ಪಂಡಿತರ ಅಭಿಪ್ರಾಯದಲ್ಲಿ ಮಾರುಕಟ್ಟೆಗಳಿಗೂ ಭಾವನೆಗಳಿರುತ್ತವೆ ಅಲ್ಲವೇ ? ಮಾರುಕಟ್ಟೆಯ ಭಾವನೆಗಳಿಗೆ ಅಷ್ಟು ತೀವ್ರವಾಗಿ ಸ್ಪಂದಿಸುವ ಮಾಧ್ಯಮಗಳು ಮತದಾರನ ಭಾವನೆಗೆ ಸ್ಪಂದಿಸುವುದನ್ನು ಇನ್ನಾದರೂ ಕಲಿಯಬೇಕಾಗಿದೆ. ಮತದಾರನ ಭಾವನೆಯು ಮಾರುಕಟ್ಟೆ ವಿರೋಧಿಯಾಗಿರುತ್ತದೆ ಎಂಬ ಅಂಶವನ್ನು ಮಾಧ್ಯಮಗಳು ಗ್ರಹಿಸುವುದು ಅಗತ್ಯವಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರವೂ ಮತದಾರರ ಈ ಭಾವನೆಯನ್ನು ಅಭಿಪ್ರಾಯವನ್ನು ಗೌರವದಿಂದ ಮನ್ನಿಸಿ, ಅವರಲ್ಲಿ ವಿಶ್ವಾಸ ಮೂಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕೇಂದ್ರದಲ್ಲಿನ ಮನಮೋಹನ್ ಸಿಂಗ್ ಸರ್ಕಾರ ಹೇಗೆ ವರ್ತಿಸುತ್ತದೋ ಕಾದು ನೋಡಬೇಕಾಗಿದೆ. ☐

ಝೆನ್

ಅವಲೋಕನ ಕಥೆ ಪ್ರಸಂಗ ಸಂವಾದ ಒಗಟು ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



ಎರಗು ಪಾಠ

ಮತಜುರ ಎಂಬಾತನಿಗೆ, ಕತ್ತಿವರಸೆಯಲ್ಲಿ ಅತ್ಯುನ್ನತ ಪರಿಣತಿ ಪಡೆಯಬೇಕು ಎಂಬ ಹಂಬಲವುಂಟಾಗಿತ್ತು. ಆದರೆ ಆತನ ತಂದೆ, 'ನಿನ್ನಲ್ಲಿ ಚುರುಕೇ ಇಲ್ಲ, ನೀನು ಯಾವತ್ತೂ ಕಲಿಯಲಾರೆ' ಎಂದು ಹೇಳಿಬಿಟ್ಟಿದ್ದ. ಆಮೇಲೆ ಆತ, ಏಕೈಕ ಖಡ್ಗವೀರನೆಂದು ಭಾರೀ ಪ್ರಸಿದ್ಧನಾಗಿದ್ದ ಬಂಜೊ ಎಂಬಾತನ ಬಳಿಗೆ ಬಂದ. ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸುವಂತೆ ಬೇಡಿಕೊಂಡ.

'ಗರಿಷ್ಠ ಪರಿಣತಿ ಪಡೆಯುವುದಕ್ಕೆ ಎಷ್ಟು ಕಾಲ ಬೇಕಾದೀತು? ನಿಮ್ಮ ಸೇವಕನಾಗಿ ಇಲ್ಲೇ ಉಳಿದುಕೊಳ್ಳುತ್ತೇನೆ. ಕ್ಷಣ ತಪ್ಪದೆ, ನಿಮ್ಮ ಜೊತೆಯಲ್ಲೇ ಇದ್ದುಬಿಡುತ್ತೇನೆ. ಎಷ್ಟು ಕಾಲ ಬೇಕಾದೀತು?' ಎಂದು ಕೇಳಿದ.

'ಹತ್ತು ವರ್ಷ' ಎಂದ, ಬಂಜೊ.

'ನನ್ನ ತಂದೆಗೆ ವಯಸ್ಸಾಗುತ್ತಿದೆ. ಹತ್ತು ವರ್ಷ ಕಳೆಯುವ ಮೊದಲೇ ನಾನು ಊರಿಗೆ ಮರಳಿ ವೃದ್ಧ ತಂದೆಯ ಶುಶ್ರೂಷೆಯಲ್ಲಿ ತೊಡಗಬೇಕಾಗುತ್ತದೆ. ನಾನು ಒಂದಕ್ಕೆರಡು ಶ್ರಮಪಡುತ್ತೇನೆ ಎನ್ನಿ, ಆಗ ಎಷ್ಟು ಕಾಲ ಬೇಕಾದೀತು?' ಎಂದು ಮತ್ತೆ ಕೇಳಿದ.

'ಮೂವತ್ತು ವರ್ಷ' ಎಂದ, ಬಂಜೊ.

ಮತಜುರನಿಗೆ ಆಶ್ಚರ್ಯವಾಯಿತು. 'ಮೊದಲು ನೀವು ಹತ್ತು ವರ್ಷ ಎಂದಿರಿ. ಒಂದಕ್ಕೆರಡು ಶ್ರಮಪಡುತ್ತೇನೆ ಎಂದರೆ, ಮೂರು ಪಟ್ಟು ಹೆಚ್ಚುಕಾಲ ಬೇಕು ಎನ್ನುತ್ತೀರಿ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಕೇಳಿ. ಕ್ಷಣಕಾಲವೂ ಬಿಡದೆ ಸತತವಾಗಿ ಶ್ರಮಿಸುತ್ತೇನೆ. ಎಷ್ಟೇ ಕಠಿಣವೆನ್ನಿಸಿದರೂ ಅಳುಕುವುದಿಲ್ಲ. ಹೇಳಿ, ಎಷ್ಟು ಕಾಲ ಬೇಕಾದೀತು?' ಎಂದು ಮತ್ತೂ ಪ್ರಶ್ನೆ ಮಾಡಿದ.



'ಎಪ್ಪತ್ತು ವರ್ಷ. ಅಷ್ಟು ಆತುರದಲ್ಲಿರುವ ಶಿಷ್ಯ ಕಲಿಯುವುದು ಅಷ್ಟೇ ನಿಧಾನವಾಗುತ್ತದೆ' ಎಂದ, ಬಂಜೊ.

ಮತಜುರನಿಗೆ ಅರಿವಾಯಿತು. ಎಷ್ಟು ಕಾಲ ಬೇಕಾದೀತೆಂದು ಮತ್ತೆ ಪ್ರಶ್ನೆ ಮಾಡದೆ ಬಂಜೊನ ಶಿಷ್ಯನಾಗಿ ಆತನ ಸೇವೆಯಲ್ಲಿ ತೊಡಗಿಕೊಂಡ. ಕಸ ಬಳಿಯುತ್ತಿದ್ದ ಅಡುಗೆ ಮಾಡುತ್ತಿದ್ದ ಬಟ್ಟೆ ತೊಳೆಯುತ್ತಿದ್ದ ತೋಟದ ಕೆಲಸ ಮಾಡುತ್ತಿದ್ದ. ಆತ ಕತ್ತಿವರಸೆಯ ವಿಷಯ ಎತ್ತಕೂಡದೆಂದು ಕತ್ತಿಯನ್ನು ಯಾವತ್ತೂ ಮುಟ್ಟಬಾರದೆಂದೂ ಆಜ್ಞೆಯಾಗಿತ್ತು. ಇದರಿಂದ ಆತನಿಗೆ ತುಂಬ ಖೇದವಾಗಿತ್ತು. ಆದರೆ, ಮೊದಲೇ ಆತ ಗುರುವಿಗೆ ವಚನ ಕೊಟ್ಟುಬಿಟ್ಟಿದ್ದ. ಕೊಟ್ಟ ವಚನಕ್ಕೆ ತಪ್ಪುವುದಿಲ್ಲ ಎಂದು ತನ್ನಲ್ಲೆ ನಿರ್ಧರಿಸಿಕೊಂಡ. ಹೀಗೆ ಮತಜುರ ಸೇವಕನಾಗಿ ಕೆಲಸ ಮಾಡುತ್ತ ಮೂರು ವರ್ಷಗಳು ಕಳೆದವು.

ಒಂದು ದಿನ, ಆತ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ, ಬಂಜೊ, ಈತನಿಗೆ ಗೊತ್ತಾಗದಂತೆ ಹಿಂದಿನಿಂದ ಬಂದು ಮರದ ಕತ್ತಿಯಿಂದ ಭಯಂಕರವಾಗಿ ಏಟುಕೊಟ್ಟ. ಮಾರನೆಯ ದಿನ ಅಡುಗೆಯ ಮನೆಯಲ್ಲಿದ್ದಾಗ ಮತ್ತೊಮ್ಮೆ ಹಾಗೇ ಇನ್ನೊಂದು ಏಟು ಕೊಟ್ಟ. ಅದಾದ ಮೇಲೆ, ದಿನಂಪ್ರತಿ, ಯಾಯಾವುದೋ ಹೊತ್ತಿನಲ್ಲಿ, ಯಾಯಾವುದೋ ಮೂಲೆಯಲ್ಲಿ, ಗೊತ್ತೇ ಆಗದಂತೆ ಬಂಜೊನ ಕತ್ತಿ ಬಂದು ಎರಗಿಬಿಡುತ್ತಿತ್ತು. ಕ್ರಮೇಣ ಆತ, ತುದಿಗಾಲಿನ ಎಚ್ಚರದಲ್ಲಿ ಬದುಕುವುದನ್ನು ಕಲಿತ; ಯಾವ ಕ್ಷಣದಲ್ಲಿ ಯಾವ ದಿಕ್ಕಿನಿಂದ ಎರಗಿದರೂ ಕ್ಷಣಮಾತ್ರದಲ್ಲಿ ತಪ್ಪಿಸಿಕೊಳ್ಳುವುದನ್ನೂ ಕಲಿತ. ಮತಜುರನ ಶರೀರದಲ್ಲಿ ಈಗ, ಆಶೆಯ ಲೇಶವೂ ಉಳಿದಿರಲಿಲ್ಲ. ಅನಂತಕಾಲವೂ ಸದಾಸಿದ್ಧ ಸದಾ ಜಾಗೃತ ಸ್ಥಿತಿಯಲ್ಲಿ ನಖಶಿಖಾಂತ ಏಕೋಜ್ವಾಲೆಯಾಗಿ ಉರಿಯುವಂತಿತ್ತು, ಆತನ ಶರೀರ.

ಈಗ ಬಂಜೊ ಮೆಲುನಗೆ ಸೂಸಿದ. ಪಾಠವನ್ನು ಪ್ರಾರಂಭಿಸಿದ. ಅನಂತರ, ಮತಜುರ ಅತ್ಯಲ್ಪ ಕಾಲದಲ್ಲೇ ಜಪಾನಿನ ಅತಿಶ್ರೇಷ್ಠ ಖಡ್ಗವೀರನಾದ.

ಹೂದಾನಿಯ ಒಡಪು

ಒಂದು ಹೊಸ ವಿಹಾರ ನಿರ್ಮಾಣವಾಗಿತ್ತು. ಗುರು ಹ್ಯಕುಜೊ, ತನ್ನ ವಿಹಾರದ ಭಿಕ್ಷುಗಳಲ್ಲಿ ಯಾರಾದರೊಬ್ಬರನ್ನು ಆಯ್ದು ಹೊಸ ವಿಹಾರಕ್ಕೆ ಮುಖ್ಯನನ್ನಾಗಿ ನೇಮಿಸಬೇಕಾಗಿತ್ತು. ಹೇಗೆ ಆಯ್ಕೆ ಮಾಡುವುದು? ಹ್ಯಕುಜೊ ಒಂದು ಉಪಾಯ ಹುಡುಕಿದ. ವಿಹಾರದ ಎಲ್ಲ ಭಿಕ್ಷುಗಳನ್ನೂ ಕರೆದ. ಅವರ ಎದುರಲ್ಲಿ, ನೀರು ತುಂಬಿದ ಒಂದು ಹೂದಾನಿಯನ್ನಿಟ್ಟು ಹೇಳಿದ–

'ಇಕೋ, ಇದರ ಹೆಸರು ಹೇಳದೆ ಇದು ಏನೆಂಬುದನ್ನು ಹೇಳಬೇಕು. ನಿಮ್ಮಲ್ಲಿ ಯಾರು ಹೇಳುತ್ತೀರಿ?'

ಭಿಕ್ಷು ಮುಖ್ಯನೊಬ್ಬನಿದ್ದ. ಅವನಿಗೆ, ಹೊಸ ವಿಹಾರದ ಯಾಜಮಾನ್ಯ ತನಗೇ ಸಿಗುತ್ತದೆ ಎಂಬ ಭರವಸೆಯಿತ್ತು. ಆತ ಹೀಗೆ ಉತ್ತರಿಸಿದ– 'ನೆಟ್ಟಗೆ ನಿಂತಿದೆ, ಮರವಲ್ಲ; ಒಳಗೆ ಟೊಳ್ಳಿದೆ, ಮರ ಕೊರೆದು ಮಾಡಿದ ಶೂ ಅಲ್ಲ.'

ಇನ್ನೊಬ್ಬ ಭಿಕ್ಷು ಹೀಗೆ ಒಡಪು ಕಟ್ಟಿ ಹೇಳಿದ –
ನೀರಿದ್ದರೂ ಒಳಗೆ ಕೊಳವಲ್ಲ ಅಲ್ಲ;
ಕೊಳವನ್ನು ಮೇಲೆತ್ತಿ ಒಯ್ಯಬರುವುದೇ ಇಲ್ಲ.'

ಮೂರನೆಯದಾಗಿ, ವಿಹಾರದಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ಕೆಳಪದವಿಯ ಭಿಕ್ಷುವೊಬ್ಬ ಎದ್ದುನಿಂತ. ಆತ ನೇರ ಹೋಗಿ ಹೂದಾನಿಯನ್ನು ಒದ್ದು ಉರುಳಿಸಿದ; ನೀರು ನೆಲದ ತುಂಬ ಚೆಲ್ಲಿಕೊಂಡಿತು. ಹೂದಾನಿಯಲ್ಲಿ 'ಶೂನ್ಯ' ಕಂಡಿತು.

ಹ್ಯಕುಜೊ, ಆತನಿಗೇ ಹೊಸವಿಹಾರದ ಯಜಮಾನಿಕೆ ವಹಿಸಿಕೊಟ್ಟ.

ಬೆತ್ತಲು ಬಟ್ಟಲು

ಝೆನ್‌ನ ಅರಿವು ಮಾಡಿಕೊಳ್ಳಬೇಕು ಎಂಬ ಯಾವನೋ ಒಬ್ಬ ದೂರದ ಪ್ರವಾಸ ಮಾಡಿ ಗುರು ನನ್‌ಇನ್‌ನ ಹತ್ತಿರಕ್ಕೆ ಬಂದಿದ್ದ. ಆದರೆ ಆತ, ಗುರುವಿನ ಮಾತನ್ನು ಕೇಳಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ತನ್ನ ಮಾತನ್ನೇ ಹೇಳಿಕೊಳ್ಳುತ್ತ ತಾನೇ ಏಕಪ್ರಕಾರ ಮಾತಿನ ಮಳೆಗರೆಯತೊಡಗಿದ.

ಸ್ವಲ್ಪ ಹೊತ್ತಾದ ಮೇಲೆ ಗುರು, ಆತನಿಗೆ ಟೀ ತೆಗೆದುಕೊಳ್ಳಲು ಹೇಳಿದ. ತಾನೇ ಸ್ವತಃ ಆತನ ಬಟ್ಟಲಿಗೆ ಟೀ ಸುರಿದ. ಬಟ್ಟಲು ತುಂಬುವ ತನಕ ಸುರಿದ. ಆಮೇಲೆ, ಬಟ್ಟಲು ತುಂಬಿ ಕೆಳಕ್ಕೆ ಚೆಲ್ಲುತ್ತಿದ್ದರೂ ಸುರಿಯುತ್ತಲೇ ಇದ್ದ.



ಜಿಜ್ಞಾಸೆಗಾಗಿ ಬಂದಿದ್ದವನಿಗೆ ಇದನ್ನು ನೋಡಿ ಸುಮ್ಮನಿರಲಿಕ್ಕೇ ಆಗಲಿಲ್ಲ. 'ಅದು ತುಂಬಿಬಿಟ್ಟಿದೆಯಲ್ಲ, ತುಂಬಿದ ಮೇಲೆ ಮತ್ತೂ ಹಿಡಿಸಲಿಕ್ಕಾದೀತಾ?' ಎಂದ.

ಆಗ ಗುರು, ಸುರಿಯುವುದನ್ನು ನಿಲ್ಲಿಸಿದ. ಹೇಳಿದ–'ಹೌದಪ್ಪಾ, ಹಾಗೇ, ಈ ಬಟ್ಟಲಿನ ಹಾಗೇ ನೀನೂ ನಿನ್ನ ಚಿಂತನೆಗಳಿಂದಲೆ ತುಂಬಿಹೋಗಿದ್ದೀಯೆ. ಬರಿದಾದ ಬಟ್ಟಲನ್ನು ನೀಡದೇ ಹೋದ ಪಕ್ಷದಲ್ಲಿ ಹೇಗೆ ತಾನೇ ನಾನು ಝೆನ್ ತುಂಬಿಕೊಡಲಿ?'

ಭಗವದ್ಗೀತೆ : ಕೆಲವು ಪ್ರಶ್ನೆಗಳು

ಜಿಜ್ಞಾಸೆ

ಭಗವದ್ಗೀತೆಯು ಯಾವ ಆದರ್ಶಗಳನ್ನಿಟ್ಟುಕೊಂಡಿದೆ? ಸತ್ಯವನ್ನು ಸರಿಯಾಗಿ ಬಳಸಿಕೊಂಡಿದೆಯೇ? ದುರುಪಯೋಗಪಡಿಸಿಕೊಂಡಿದೆಯೇ? ಮಾನವ ಜನಾಂಗದ ಬಗ್ಗೆ ಅದು ಎಂತಹ ಸಮಭಾವದ ಧೋರಣೆ ತಳೆದಿತ್ತು? ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ ಅದರ ಅಧ್ಯಯನವೇ ಸೂಕ್ತ ಮಾರ್ಗವಾಗಿದೆ. ಹಿಂಸೆ-ಅಹಿಂಸೆ, ವ್ಯಕ್ತ-ಅವ್ಯಕ್ತ ಕರ್ಮ-ನಿಷ್ಕರ್ಮ, ಪ್ರಾಪ್ತ-ಅಪ್ರಾಪ್ತ, ವಸ್ತು-ನಿರ್ವಸ್ತು ಬಂಧನ-ಬಿಡುಗಡೆ ಇಂತಹ ವೈರುಧ್ಯಗಳನ್ನು ಸಾಧ್ಯಾಸಾಧ್ಯಗಳ ಎಲ್ಲೆ ಮೀರಿ ಸಮರ್ಥಿಸುವ ಅದರ ಸ್ಪಷ್ಟ ಕಾಳಜಿ ಏನು? ಅದರ ಮಹತ್ಪೂರ್ಣ ತಾತ್ತ್ವಿಕ ತರ್ಕ ಯಾವ ಮಾನವೀಯ ಅಂಶಗಳನ್ನು ಅವಲಂಬಿಸಿದೆ? ಈ ಎಲ್ಲಾ ಪ್ರಶ್ನೆಗಳ ಕಾರಣಕ್ಕಾಗಿ ಗೀತೆಯ ಅಧ್ಯಯನ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ.

○ ಪದ್ಮಾಲಯಾ ನಾಗರಾಜ್

ಭಗವದ್ಗೀತೆಯ ವಿಶೇಷತೆಯನ್ನು 'ಹಿಂದೂ ಧರ್ಮದ ಹೃದಯ' ಎಂದು ಕರೆದಾಗ ಗೀತೆಪ್ರಿಯರಿಗಿಂತ ಅದರ ವಿರೋಧಿಗಳು ಸಮ್ಮತಿಸುವುದರಲ್ಲಿ ಕಾಣಬಹುದು. ಧಾರ್ಮಿಕ ಗ್ರಂಥಗಳ ಪೈಕಿ ಗೀತೆಯ ಬಗ್ಗೆ ಹಿಂದೂಗಳು ಹೆಮ್ಮೆ ಪಡುತ್ತಾರೆ. ಗೀತೆಯನ್ನು ಓದದವರು, ಅರೆಬರೆ ಓದಿರುವವರೂ, ಗೀತಾ ವ್ಯಾಖ್ಯಾನ ಪಠನಕಾರರು ಇದನ್ನು 'ಉನ್ನತ ತತ್ತ್ವದರ್ಶನ'ಗಳ ಕುರಿತು ಸಾರ್ವತ್ರಿಕ ವ್ಯಾಖ್ಯಾನವೆಂದು ಗ್ರಹಿಸಲ್ಪಡುತ್ತಾರೆ.

ಗೀತೆಯು ಯಾವ ಆದರ್ಶಗಳನ್ನಿಟ್ಟುಕೊಂಡಿದೆ? ಸತ್ಯವನ್ನು ಸರಿಯಾಗಿ ಉಪಯೋಗಿಸಿಕೊಂಡಿದೆಯೇ? ದುರುಪಯೋಗಪಡಿಸಿಕೊಂಡಿದೆಯೇ? ಮಾನವ ಜನಾಂಗದ ಬಗ್ಗೆ ಅದು ಎಂತಹ ಸಮಭಾವದ ಧೋರಣೆ ತಳೆದಿತ್ತು? ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ ಅದರ ಅಧ್ಯಯನವೇ ಸೂಕ್ತಮಾರ್ಗವಾಗಿದೆ.

ವೇದಾಗಮ ಶಾಸ್ತ್ರಗಳಲ್ಲಿನ ಯಜ್ಞ, ಹೋಮ, ವ್ರತ, ನಿಯಮಗಳನ್ನು, ಮನುವಿನ ವರ್ಣಾಶ್ರಮಧರ್ಮವನ್ನೂ, ಅದ್ವೈತದ ನಿರಾಕಾರ ಪರಬ್ರಹ್ಮತತ್ತ್ವವನ್ನೂ, ದ್ವೈತದ ಆಕಾರ ಸ್ವರೂಪ ಭಗವಂತ ತತ್ತ್ವವನ್ನು ವಿವರಿಸುವಾಗ ಅದು ಎಂತಹ ಆದರ್ಶಗಳನ್ನಿಟ್ಟುಕೊಂಡಿತ್ತು? ಇವೆಲ್ಲವುಗಳ ಕಾರಣ ಏನು?

ಹಿಂಸೆ-ಅಹಿಂಸೆ, ವ್ಯಕ್ತ-ಅವ್ಯಕ್ತ ಕರ್ಮ-ನಿಷ್ಕರ್ಮ, ಪ್ರಾಪ್ತ- ಅಪ್ರಾಪ್ತ ವಸ್ತು-ನಿರ್ವಸ್ತು, ಬಂಧನ-ಬಿಡುಗಡೆ ಇಂತಹ ವೈರುಧ್ಯಗಳನ್ನು ಸಾಧ್ಯಾಸಾಧ್ಯಗಳ ಎಲ್ಲೆ ಮೀರಿ ಸಮರ್ಥಿಸುವ ಅದರ ಸ್ಪಷ್ಟ ಕಾಳಜಿ ಏನು? ಅದರ ಮಹತ್ಪೂರ್ಣ ತಾತ್ತ್ವಿಕ ತರ್ಕ ಯಾವ ಮಾನವೀಯ ಅಂಶಗಳನ್ನು ಅವಲಂಬಿಸಿದೆ? ಈ ಎಲ್ಲಾ ಪ್ರಶ್ನೆಗಳ ಕಾರಣಕ್ಕಾಗಿ ಗೀತೆಯ ಅಧ್ಯಯನ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ. ಇದಕ್ಕೊಂದು ಸರಳ ಮಾರ್ಗವೆಂದರೆ 'ಮುಖ್ಯ ಪ್ರಶ್ನೆಗಳ' ಮೂಲಕ ಅದನ್ನು ಒಳಹೊಕ್ಕುವುದು.

೧. ಗೀತೆ ಹಿಂಸೆ ಪರವೋ ? ಅಹಿಂಸೆ ಪರವೋ ? ಹಾಗಾದರೆ ಏಕೆ ?
೨. ಜ್ಞಾನವನ್ನು ಗೀತೆ ಯಾವ ಅರ್ಥದಲ್ಲಿ ಬಳಸುತ್ತದೆ ?
೩. ಮೋಕ್ಷವೆಂದರೆ ಗೀತೆಯ ದೃಷ್ಟಿಯಲ್ಲಿ ಹೇಗೆ ?
೪. ಒಂದಕ್ಕೊಂದು ವಿರೋಧಿಗಳಾದ ಅದ್ವೈತ-ದ್ವೈತಗಳನ್ನು ಅದು ಇಟ್ಟುಕೊಳ್ಳುವುದೇಕೆ ?

ನಾನು ಗೀತೆಯನ್ನು ಸರಿಯಾಗಿ ಗ್ರಹಿಸಬಹುದಾದ ಮಾರ್ಗವಿದೆಂದು ತಿಳಿದುಕೊಂಡಿದ್ದೇನೆ.

೧. ಗೀತೆಯು ಹಿಂಸೆ ಪರವೋ ? ಅಹಿಂಸೆ ಪರವೋ ? ಏಕೆ ?

-ಇದರ ಅಧ್ಯಯನದ ಮಹತ್ವವಾದ ಪ್ರಶ್ನೆ. ಇದು ಸರಳವೂ ಮೊದಲನೆಯದೂ ಆಗಿರುವುದರಿಂದ ಇದನ್ನು ಯಾರೂ ಉಪೇಕ್ಷಿಸುವಂತಿಲ್ಲ; ಗೀತೆಯ ಬಗ್ಗೆ ಟೀಕೆ ಬರೆಯುವಾಗ ಈ ಪ್ರಶ್ನೆಯ ಮೂಲಕ ಸಾಗುವುದು ಸಂಪ್ರದಾಯವೂ ಆಗಿದೆ. ಗೀತೆ ಹಿಂಸೆ ಬಗ್ಗೆ ಹೇಳುತ್ತದೆನ್ನುವುದು ಎಷ್ಟು ತಪ್ಪೋ, ಅಹಿಂಸೆಯ ಬಗ್ಗೆ ಹೇಳುತ್ತದೆನ್ನುವುದು ಅತೀ ತಪ್ಪಾಗುತ್ತದೆ. ಏಕೆಂದರೆ ಅದು ಹಿಂಸೆಯನ್ನು ಚಾಣಾಕ್ಷತನದಿಂದ ಉಪಸಂಹಾರ ಮಾಡಿ ದ್ವಂದ್ವಕ್ಕೊಳಪಡಿಸುತ್ತದೆ. ಎರಡೂ ವಿಚಾರಗಳು ಒಮ್ಮೆಲೆ ಇದರಲ್ಲಿ ಸೇರಿರುವುದರ ಅಂತರಾರ್ಥವನ್ನು ತಿಳಿಯಬೇಕಷ್ಟೆ

ಧನುರ್ಧಾರಿಯಾದ ಅರ್ಜುನನು ಕುರುಕ್ಷೇತ್ರ ಯುದ್ಧದಲ್ಲಿ ತನ್ನ ಗುರುಗಳನ್ನು, ಸೋದರ ದಾಯಾದಿಗಳನ್ನು, ತಾತ ಮುತ್ತಾತಂದಿರನ್ನು ಸ್ನೇಹಿತರನ್ನು, ಸಮೀಪ ಬಂಧುಗಳನ್ನು ಕಂಡು ದಿಗ್ಭ್ರಮೆಗೊಂಡು ಹೃದಯ ಅನುಕಂಪದಿಂದ ಮಿಡಿದು...

'ನಕಾರಕ್ಷ್ಮೋ ವಿಜಯಂ ಕೃಷ್ಣ। ನಚ ರಾಧ್ಯಂ ಸುಖಾನಿಚ
ಕಿಂ ನೋ ಗೋವಿಂದ ಕಿಂ ಭೋಗೈರ್ಜೀನಿ ವಿತೇನವಾ ॥

...ಹೇ ಕೃಷ್ಣಾ ಅಶಾಶ್ವಿತವಾದ ಈ ಜಗತ್ತಿನಲ್ಲಿ, ಯಾವ ಭೋಗ ಸುಖಕ್ಕಾಗಿ ಇವರನ್ನೆಲ್ಲಾ ಕೊಲ್ಲಲಿ ? ಹಿಂಸೆಯಿಂದ ಬರುವ ರಾಜ್ಯಾದಿ ಭೋಗಗಳು ನನಗೆ ಬೇಡವೆಂದರೂ ಸರಿ, ಅಡವಿಯಲ್ಲಿ ಸಂನ್ಯಾಸ ಜೀವನದಿಂದ ಕಂದ ಮೂಲಾದಿಗಳನ್ನು ತಿಂದು ಜೀವಿಸಿದರೂ ಸರಿ। ಎಂದು ಅರ್ಜುನನು ತನ್ನ ಗಾಂಢೀವವನ್ನು ಕೆಳಗಿಟ್ಟು ಯುದ್ಧದ ಬಗ್ಗೆ ತನ್ನ ಜಿಗುಪ್ಸೆಯನ್ನು ವ್ಯಕ್ತಪಡಿಸಿದ.

ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನಿಗೆ ಕೃಷ್ಣನ ಉಪದೇಶ ?

ಪ್ರತಿಯಾಗಿ ಕೃಷ್ಣನು ಅರ್ಜುನಾ... ನಿನ್ನ ರೂಪವು ಭೌತಿಕ ಶರೀರವೆಂದೂ, ಅಥವಾ ವಸ್ತುರೂಪವಾದ ಈ ಜಗತ್ತೆಂದು ವ್ಯರ್ಥವಾಗಿ ನಂಬುತ್ತಿದ್ದೀಯೇ! ಇದು ನಿನ್ನ ಭ್ರಮೆ ನೀನು ಸಕಲ ಚರಾಚರಾ ಜಗತ್ತಿನಲ್ಲಿ ತುಂಬಿರುವ ಆತ್ಮ. ಪಂಚಭೂತಗಳಿಗೆ ಒಳಪಡದ ಆತ್ಮವನ್ನು ಕೊಲ್ಲುವುದು ಸಾಧ್ಯವೇ ಇಲ್ಲ! ಶಸ್ತ್ರ ಕತ್ತರಿಸಲಾರದು; ನೀರು ಒದ್ದೆ ಮಾಡಲಾರದು; ಗಾಳಿ ಒಣಗಿಸಲಾರದು; ಸತ್ತ ಶರೀರದಿಂದ ಆತ್ಮವು ಪ್ರತ್ಯೇಕವಾಗಿ ಮತ್ತೆ ತಾಯಿಯ ಶರೀರದಲ್ಲಿ ಪುನರ್ಜನ್ಮ ಪಡೆಯುತ್ತದೆ.

ನಾನು ಕೊಂದೆ ಎಂಬುದು ನಿನ್ನ ಭ್ರಮೆಯಾಗಿದೆ. ಮತ್ತು ನೀನು ವೀರ ಕ್ಷತ್ರಿಯನೆಂದು ನೆನೆಪಿಟ್ಟುಕೋ, ನೀನು ಯುದ್ಧ ಮಾಡಲು ಜನ್ಮಿಸಿದವ, ನಿನ್ನ ಧರ್ಮವೂ ಅದಾಗಿರುವುದರಿಂದ ನಿನ್ನನ್ನು ಪಾಪಗಳು ಅಂಟಲಾರವು. ಗೆದ್ದರೆ ರಾಜ್ಯಗಳನ್ನು ಭೋಗಿಸುವೆ, ಸೋತು ಸತ್ತರೆ ವೀರ ಸ್ವರ್ಗವನ್ನು ಸೇರುವೆ, ಇದರಿಂದ ನೀನು ವಿಮುಖನಾದರೆ ನೀನೊಬ್ಬ ಹೇಡಿ ಎಂಬುದಾಗಿ ಕೃಷ್ಣನು ಅರ್ಜುನನನ್ನು ಪ್ರಚೋದಿಸುತ್ತಾ ಯಶಸ್ವಿಯೂ ಆಗುತ್ತಾನೆ. ಈ ಜಗತ್ತಿನ ಯಾವ ಆಧ್ಯಾತ್ಮ ಆದರ್ಶಗಳೂ ಇದನ್ನು ಒಪ್ಪುವಂತೆ ಕಾಣಿಸದಿದ್ದರೂ ಅಥವಾ ವಿರೋಧಿಸಿದರೂ 'ಹಿಂಸೆಯೇ' ಗೊತ್ತಿಲ್ಲ ಎಂಬಂತೆ ಕೂಡ ಗೀತೆ ವಾದಿಸುತ್ತದೆ.

'ಇಂದ್ರಿಯಾರ್ಥೇಶು ವೈರಾಗ್ಯ ಮನಹಂಕಾರ ಏವಚ।
ಜನ್ಮ ದುಃಖ ಜರಾವ್ಯಾಧಿ ಮೃತ್ಯು ದೋಷಾನು ದರ್ಶನಂ॥
(ಅಧ್ಯಾಯ ೧೩. ಶ್ಲೋ॥ ೮)

...ನಿರಹಂಕಾರ, ನಿರಾಡಂಬರ, ಅಹಿಂಸೆ, ಆರ್ಜವ (ಮಾನವ ಮಾನಗಳಲ್ಲಿ ಸಮಭಾವ) ಆಚಾರ್ಯೋಪಾಸನೆ, ಶೌಚ (ಮನಶ್ಶುದ್ಧಿ) ಸ್ಥೈರ್ಯ, ಆತ್ಮ ನಿಗ್ರಹ, ಇಂದ್ರಿಯಾದಿಗಳಲ್ಲಿ ವೈರಾಗ್ಯ, ಅನಹಂಕಾರ, ಜನ್ಮ, ಮೃತ್ಯು, ಜರೆ, ವ್ಯಾಧಿ, ದುಃಖ ಇವುಗಳಲ್ಲಿ ದೋಷವನ್ನು ಹುಡುಕುವುದು. ಹೆಂಡತಿ, ಮನೆ, ಮಕ್ಕಳು ಮೊದಲಾದುವುಗಳಲ್ಲಿ ಆಸಕ್ತಿ ಇಲ್ಲದಿರುವಿಕೆ, ಇಷ್ಟಾನಿಷ್ಟಗಳು ಪ್ರಾಪ್ತಿಯಾದಾಗ ಸಮಚಿತ್ತ ಮತ್ತು ಕೃಷ್ಣನಲ್ಲಿ ಅನನ್ಯ ಯೋಗದ ಮೂಲಕ ಅವ್ಯಭಿಚಾರಿಯಾದ ಭಕ್ತಿ ನಿರ್ಜನ ಪ್ರದೇಶವನ್ನು ಸೇವಿಸುವಿಕೆ, ಜನಸಮೂಹದಲ್ಲಿ ಪ್ರೀತಿ ಇಲ್ಲದಿರುವಿಕೆ ಅಧ್ಯಾತ್ಮ ಜ್ಞಾನದಲ್ಲಿ ನಿಷ್ಠೆ ತತ್ತ್ವಜ್ಞಾನಾರ್ಥದ ಆಲೋಚನೆ ಇದು ಜ್ಞಾನವೆಂದು ಹೇಳಲ್ಪಡುತ್ತದೆ. ಯಾವುದು ಇದಕ್ಕಿಂತಲೂ ಭಿನ್ನವೋ ಅದು ಅಜ್ಞಾನ.

ಇಲ್ಲಿ ವ್ಯಾಖ್ಯಾನಿಸಲಾದ 'ಸಾರ್ಥಕ ಜೀವನ ಸಾಫಲ್ಯ'ದ ಮಹತ್ವಗಳನ್ನು ಕುರಿತು ಕೃಷ್ಣನು ಮಾತನಾಡುವಾಗ ಇವೆಲ್ಲಾ ಮಹತ್ವಗಳಿಗೆ ಕೃಷ್ಣನು ವಿರೋಧವಾಗಿ ಹಿಂಸೆಯ ಪ್ರತಿಪಾದಕನೂ ಆಗಿದ್ದ. ನಿಸ್ಸಂದೇಹವಾಗಿ ಅವನು ಅಜ್ಞಾನಿಯಾಗಿದ್ದ! ಮಹಾಭಾರತದಲ್ಲಿ ಸ್ತ್ರೀಲೋಲ, ಕುತಂತ್ರಿ, ಮೋಸಗಾರ, ಇವೆಲ್ಲಾ ಬಿರುದುಗಳಿಗೂ ಬದ್ಧನಾಗಿದ್ದ ಸಾಮಾನ್ಯ ಮನುಷ್ಯನಂತಿದ್ದ ಕೃಷ್ಣನಿಗೆ ಒಬ್ಬ ಯೋಗಿಯ ಗುಣಸಂಪನ್ನಗಳು ಬರಲು ಸಾಧ್ಯವೇ ಇಲ್ಲ ಎಂಬುದನ್ನು ಮಹಾಭಾರತವನ್ನು ಓದಿದ ಯಾರೂ ಅಲ್ಲಗಳೆಯುವಂತಿಲ್ಲ.

ಹಿಂಸೆಯ ಪ್ರತಿಪಾದಕನಾಗಿದ್ದ ಹಿಟ್ಲರ್ ಬುದ್ಧನಾಗುವುದು ಸಾಧ್ಯವೇ? ರಾಜ್ಯ ಮತ್ತು ಭೋಗ ಜೀವನ ಆಶೆ ತೋರಿಸಿದ ಕೃಷ್ಣ ಇಂದ್ರಿಯ ವೈರಾಗ್ಯ, ಪ್ರಾಪಂಚಿಕ ವಸ್ತುಗಳ ಬಗ್ಗೆ ಅನಾಸಕ್ತಿ ತೋರಲು ಹೇಗೆ ಸಾಧ್ಯ? ಮತ್ತು ಏಕೆ?

ಇದು ನಿಸ್ಸಂಶಯವಾಗಿ ಬುದ್ಧನ ಕಲ್ಪನೆಯಾಗಿದೆ! ಸನಾತನ ಹಿಂದೂಧರ್ಮದ ವೇದಗಳ ಕಾಲದಲ್ಲಿ ಯಾವ ವಿಧವಾದ ಆಚರಣೆಗಳಿಗೆ ಹೆಚ್ಚು ಪ್ರಾಧಾನ್ಯ ನೀಡುತ್ತಿದ್ದರೆಂಬುದನ್ನು ಇತಿಹಾಸವೇ ಸಾಕ್ಷಿ ಒದಗಿಸುತ್ತದೆ.

ವೇದಗಳು ಏನನ್ನು ಹೇಳುತ್ತವೆ? ಇಂದ್ರಾದಿ ದೇವತೆಗಳನ್ನು ನಮ್ಮನ್ನು ಸುಖವಾಗಿಡು, ಶತ್ರುಗಳನ್ನು ಕೊಲ್ಲು ನಿನಗೆ ಹವಿಸ್ಸನ್ನು ಅರ್ಪಿಸುತ್ತೇವೆ ಎಂದು ಪ್ರಾರ್ಥಿಸುತ್ತವೆ. ಬುದ್ಧಪೂರ್ವದ ಆ ಯುಗವು ರಾಜ್ಯ ರಾಜ್ಯಗಳ ಮಧ್ಯೆ, ಪಂಗಡಗಳ ಮಧ್ಯೆ, ಜಾತಿಗಳ ಮಧ್ಯೆ ದ್ವೇಷಗಳಿಂದ ಮತ್ತು ಯುದ್ಧಗಳಿಂದ ತುಂಬಿಹೋಗಿತ್ತು. ಬ್ರಾಹ್ಮಣರು ಧಾರ್ಮಿಕ ನಂಬಿಕೆಗಳಿಂದ ಎಲ್ಲಾ ಜನರನ್ನು ತಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಂಡಿದ್ದರು. ಯಜ್ಞ, ಯಾಗಾ(ಅತ್ಯಂತ ದುಬಾರಿಯಾಗಿದ್ದವು)

> **ಅರ್ಜುನನು ಕುರುಕ್ಷೇತ್ರ ಯುದ್ಧದಲ್ಲಿ ತನ್ನ ಗುರುಗಳನ್ನು, ಸೋದರ ದಾಯಾದಿಗಳನ್ನು, ತಾತ ಮುತ್ತಾತಂದಿರನ್ನು ಸ್ನೇಹಿತರನ್ನು, ಸಮೀಪ ಬಂಧುಗಳನ್ನು ಕಂಡು ದಿಗ್ಭ್ರಮೆಗೊಂಡು ಹೃದಯ ಅನುಕಂಪದಿಂದ ಮಿಡಿದು... ಹೇ ಕೃಷ್ಣಾ ಅಶಾಶ್ವಿತವಾದ ಈ ಜಗತ್ತಿನಲ್ಲಿ, ಯಾವ ಭೋಗ ಸುಖಕ್ಕಾಗಿ ಇವರನ್ನೆಲ್ಲಾ ಕೊಲ್ಲಲಿ ? ಎಂದು ಯುದ್ಧದ ಬಗ್ಗೆ ತನ್ನ ಜಿಗುಪ್ಸೆಯನ್ನು ವ್ಯಕ್ತಪಡಿಸಿದ. ಪ್ರತಿಯಾಗಿ ಕೃಷ್ಣನು ಅರ್ಜುನನನ್ನು ಕುರಿತು 'ನಾನು ಕೊಂದೆ ಎಂಬುದು ನಿನ್ನ ಭ್ರಮೆಯಾಗಿದೆ. ಮತ್ತು ನೀನು ವೀರ ಕ್ಷತ್ರಿಯನೆಂದು ನೆನೆಪಿಟ್ಟುಕೋ, ನೀನು ಯುದ್ಧ ಮಾಡಲು ಜನ್ಮಿಸಿದವ, ನಿನ್ನ ಧರ್ಮವೂ ಅದಾಗಿರುವುದರಿಂದ ನಿನ್ನನ್ನು ಪಾಪಗಳು ಅಂಟಲಾರವು. ಗೆದ್ದರೆ ರಾಜ್ಯಗಳನ್ನು ಭೋಗಿಸುವೆ, ಸೋತು ಸತ್ತರೆ ವೀರ ಸ್ವರ್ಗವನ್ನು ಸೇರುವೆ, ಇದರಿಂದ ನೀನು ವಿಮುಖನಾದರೆ ನೀನೊಬ್ಬ ಹೇಡಿ ಎಂಬುದಾಗಿ ಕೃಷ್ಣನು ಅರ್ಜುನನನ್ನು ಪ್ರಚೋದಿಸುತ್ತಾ ಯಶಸ್ವಿಯೂ ಆಗುತ್ತಾನೆ.**

ದಿಗಳಿಂದ ಎಲ್ಲಾ ಜನರು ದುರ್ಬಲರಾಗಿದ್ದರು. ಬ್ರಾಹ್ಮಣರು ಮಾತ್ರ ಕೊಬ್ಬಿದ್ದರು. ಮಿಕ್ಕೆಲ್ಲಾ ಸಮಾಜವು ಶಾಂತಿಗಾಗಿ ಹಾತೊರೆಯುತ್ತಿತ್ತು.

ಬುದ್ಧನ ನಂತರ ಅಹಿಂಸೆ, ದಯೆ, ಮೈತ್ರಿಗಳಿಂದ ಆಕರ್ಷಿತರಾಗಿ ಶಾಂತ ಜೀವನಕ್ಕಾಗಿ ಹೆಚ್ಚು ಹೆಚ್ಚು ಜನ ಈ ಧರ್ಮಕ್ಕೆ ಮತಾಂತರವಾದರು. ಇಲ್ಲಿ ಎಲ್ಲಾ ವೈದಿಕ ಧರ್ಮದ ತತ್ತ್ವಗಳು ಸೋತುಹೋದವು. ಆದರೆ ಸತ್ತಿರಲಿಲ್ಲ. ಇಲ್ಲಿ ದೊಡ್ಡ ಕ್ರಾಂತಿಯೇ ಆಯಿತು. ಇದೇ ಕ್ರಾಂತಿಯ ಯುಗ.

ಬುದ್ಧನ ನಂತರ ಬಹುಶಃ ಇಂದಿನವರೆಗೂ ಪ್ರತಿಕ್ರಾಂತಿಯ ಯುಗವೆಂದು ಕರೆಯಲಾಗುತ್ತದೆ. ಏಕೆಂದರೆ ಬುದ್ಧನ ಕ್ರಾಂತಿಗೆ ಪ್ರತಿಯಾಗಿ ಸನಾತನ ಹಿಂದೂಧರ್ಮವನ್ನು ಪ್ರತಿಕ್ರಾಂತಿಯ ರೂಪದಲ್ಲಿ ಸುಧಾರಿಸಬೇಕಾಗಿತ್ತು. ಶಂಕರಾಚಾರ್ಯ(ಕ್ರಿ.ಶ. ೭೮೮-೮೨೦)ರಾದಿಯಾಗಿ ಎಲ್ಲಾ ಆಚಾರ್ಯತ್ರಯರೂ, ಚಕ್ರವರ್ತಿಗಳೂ ಮಾಡಿದ್ದು ಹಿಂದೂ ಧರ್ಮದ ಸುಧಾರಣೆ. 'ಹಿಂದುತ್ವವನ್ನು ಉಳಿಸಿಕೊಳ್ಳಲು ಸನಾತನರು ಅಂದಿನ ಸಮಾಜಕ್ಕೆ ಅಲರ್ಜಿಯಾಗಿದ್ದ ಹಿಂಸೆಯನ್ನು ಅಹಿಂಸೆಯ ತೇಪೆ ಹಾಕಿ ಮುಚ್ಚಬೇಕಾಗಿತ್ತು' ಅದಕ್ಕಾಗಿಯೇ ಡಾ॥ ಅಂಬೇಡ್ಕರರು ಭಗವದ್ಗೀತೆಯನ್ನು 'ಪ್ರತಿಕ್ರಾಂತಿಯ ಬೈಬಲ್' ಎಂದು ಕರೆಯುತ್ತಾರೆ.

ಅಹಿಂಸೆಯನ್ನು ಮತ್ತು ಉನ್ನತ ಆದರ್ಶಗಳನ್ನು ಕದ್ದ ಭಗವದ್ಗೀತೆ 'ಒಂದು ವಸ್ತುವನ್ನು ಕೊಂಡರೆ ಇನ್ನೊಂದು ಉಚಿತ ಎಂಬ ಇಂದಿನ ವ್ಯಾಪಾರೀಕರಣದ ತಂತ್ರ ಉಪಯೋಗಿಸಿ ಗೀತೆ ಹಿಂಸೆಗೆ ವಿರುದ್ಧವಾದ ಅಹಿಂಸೆಯ ಉಚಿತತೆಯನ್ನು ವೈಭವೀಕರಿಸಲಾಯಿತು' ಆದಾಗ್ಯೂ ಪ್ರತಿಕ್ರಾಂತಿಯ ಪರಿಣಾಮದಿಂದಲಾದರೂ ಗೀತೆ ಅಹಿಂಸೆಯನ್ನು ಒಂದು ಮಹತ್ವ ವಿಷಯವನ್ನಾಗಿ ಸ್ವೀಕರಿಸಿತೇ? ಹಿಂಸೆಯನ್ನು ಪೂರ್ಣವಾಗಿ ತ್ಯಜಿಸಲಿಲ್ಲವೇಕೆ? ಇಲ್ಲ ಎನ್ನಬಹುದು ಏಕೆಂದರೆ ಗೀತೆಗಿಂತ ಪ್ರಾಚೀನವಾದ ಜೈಮಿನಿ ಪೂರ್ವ ಮೀಮಾಂಸೆ ಮತ್ತು ಬಾದರಾಯಣನ ಬ್ರಹ್ಮ ಸೂತ್ರಗಳು ಪ್ರಧಾನವಾಗಿ ತೆಗೆದುಕೊಳ್ಳುವ ಕರ್ಮಕಾಂಡಗಳನ್ನು ಗೀತೆಗೆ ಬಿಟ್ಟುಕೊಡಲು ಮನಸ್ಸಾಗಲಿಲ್ಲ.

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನ ಸಂಭವಃ
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞ ಕರ್ಮ ಸಮುದ್ಭವಃ
(ಅಧ್ಯಾಯ ೩. ಶ್ಲೋ : ೧೪)

'ಯಜ್ಞಗಳಿಂದ ಸಂತೃಪ್ತರಾದ ದೇವತೆಗಳು ಜನರಿಗೆ ಇಷ್ಟವಾದ ಭೋಗಗಳನ್ನು ನೀಡುತ್ತಾರೆ. ಯಾರು ಯಜ್ಞದ ಶೇಷವನ್ನು ಉಣ್ಣುವರೋ ಅವರು ಎಲ್ಲಾ ದೋಷಗಳಿಂದ ಮೋಕ್ಷವನ್ನು ಪಡೆಯುತ್ತಾರೆ. ಅನ್ನದಿಂದ ಪ್ರಾಣಿಗಳು; ಪ್ರಾಣಿಯಿಂದ ಕರ್ಮ; ಕರ್ಮದಿಂದ ವೇದ; ವೇದದಿಂದ ಅಕ್ಷರ ಹುಟ್ಟುತ್ತದೆ'.

ಇಲ್ಲಿ ಶೂದ್ರನಾದ ಕೃಷ್ಣನನ್ನು ಬ್ರಾಹ್ಮಣ್ಯ ಸಿದ್ಧಾಂತಗಳಿಂದ ಗುಗ್ಗು ಮಾಡಿದ್ದು ಯಾರಿರಬಹುದು ? ಉನ್ನತ ಆದರ್ಶಗಳನ್ನು ಜ್ಞಾನವೆಂದು ಹೇಳುವ ಕೃಷ್ಣ ಯಜ್ಞಗಳಿಂದ ದೇವತೆಗಳನ್ನು ಸಂತೃಪ್ತಿಗೊಳಿಸಿ ಇಷ್ಟವಾದ ಭೋಗಗಳನ್ನು ಪಡೆಯುವುದನ್ನು ಮೋಕ್ಷ ಎಂದು ಅರ್ಥೈಸುವುದಾದರೆ ಇದೊಂದು ಬಾಲಿಶವಾದ ತರ್ಕವಾಗುತ್ತದೆ.

ಯಜ್ಞಗಳನ್ನು ಮಾಡುವವರು ಯಾರು? ಬ್ರಾಹ್ಮಣರು! ಏಕೆ? ಅಪಾರವಾದ ದಕ್ಷಿಣೆಗಾಗಿ. ಯಜ್ಞಗಳ ಸ್ವರೂಪ ಎಂಥದ್ದು? ಸ್ವಾರ್ಥ, ಹತ್ಯೆ, ಹಿಂಸೆ!

ಆಗಮ ಶಾಸ್ತ್ರದಲ್ಲಿ ಯಜ್ಞಗಳು ಇಪ್ಪತ್ತೊಂದು. ಮೂರು ಭಾಗಗಳ ಒಂದು ಭಾಗಕ್ಕೆ ಏಳರಂತೆ ವಿವಿಧ ಯಜ್ಞಗಳುಂಟು.

೧. ಸಾತ್ವಿಕ ಯಾಗಗಳು ೨. ಸೋಮಯಾಗಗಳು ೩. ಪಶುಯಾಗಗಳು ಈ ಯಾಗಗಳಿಗೆ ತುಪ್ಪ ಅಪರೂಪವಾಗಿ ಸಿಗುವ ಸುಗಂಧ ದ್ರವ್ಯಗಳು, ರೇಷ್ಮೆ, ಚಿನ್ನ, ಬೆಳ್ಳಿ, ಕಂಚು, ತಾಮ್ರದಂತಹ ಲೋಹಗಳು, ಪುಷ್ಯ, ರಾಗಿ, ಗೋಮೇಧಿಕಗಳಾದಿಯಾಗಿ ನವರತ್ನಗಳು ಬೇಕಾಗಿತ್ತು. ಮದ್ಯಪಾನ ಮಾಂಸಹಾರದ ಯಜ್ಞಗಳೂ ಉಂಟು.

ಅಶ್ವಮೇಧಯಾಗ, ಪುರುಷಮೇಧಯಾಗ, ವೃಷಭಮೇಧಯಾಗಗಳು ಕ್ರಮವಾಗಿ ಕುದುರೆ, ಮನುಷ್ಯ, ಗೂಳಿ (ಎತ್ತು) ಗಳನ್ನು ಯಜ್ಞಕರ್ತೃ ಮತ್ತು ಬ್ರಾಹ್ಮಣರು ಅವುಗಳ ಮಾಂಸ ತಿನ್ನಬೇಕಾಗಿತ್ತು. ಊಹೆಗೂ ಅನರ್ಹವಾದ ಲೈಂಗಿಕ ವಿಚಾರಗಳೂ ಇದರಲ್ಲಿತ್ತು. ಇಂತಹ ವಿಚಾರಗಳ ವಿವರಣೆಯೇ ವೇದಾಗಮ ಶಾಸ್ತ್ರ. ಆಮೇಲೆ ಇದು ಆಚರಣೆಯಲ್ಲಿ ಬದಲಾದದ್ದು ಯಾರ ಕ್ರಾಂತಿಯಿಂದ? ಆದಾಗ್ಯೂ ಅವುಗಳಿಗೆ ಆಗುವ ಅಪಾರ ವೆಚ್ಚ ಇಂದಿಗೂ ಬದಲಾವಣೆಯಾಗಲಿಲ್ಲ. ಗೃಹಪ್ರವೇಶ, ಉತ್ತರ ಕ್ರಿಯಾದಿಗಳು, ಲಕ್ಷ್ಮಿಪೂಜೆ, ಸತ್ಯನಾರಾಯಣ ಪೂಜೆ, ಬ್ರಹ್ಮೋತ್ಸವಗಳು, ದೇವರ ಅಭಿಷೇಕ, ಸಹಸ್ರನಾಮಾವಳಿಗಳ ಉದ್ದೇಶ ಏನು? ದುಬಾರಿ ಖರ್ಚು, ನಮಗೆ ಇನ್ನೂ ಹೆಚ್ಚು ಲಾಭವಾಗಬೇಕು, ಸುಖ ಬೇಕು ಎಂಬ ಹಂಬಲ ಬಿಟ್ಟರೆ ಈ ಎಲ್ಲಾ ಆಚರಣೆಗಳ ಹಿಂದೆ ಒಳ್ಳೆಯ ನೈತಿಕ ಜೀವನದ ಹಂಬಲ ಇದೆಯೇ? ಇಲ್ಲ. ಮೌಢ್ಯತೆಗೆ ಪೂರಕವಾಗಿ ಬ್ರಾಹ್ಮಣರಿಗೆ ಮಾತ್ರ ಉಪಯೋಗಕಾರಿ.

ಹಿಂದೂಗಳಲ್ಲಿ ಪವಿತ್ರ ಭಾವನೆಯನ್ನುಂಟು ಮಾಡುವ ಭಗವತ್ಗೀತೆ ಮಾನವೀಯ ವಿವೇಕ್ಷೆಯಿಂದ ಹೊರಗುಳಿಯುವ 'ಯಜ್ಞ'ದ ಬಗ್ಗೆ ಪವಿತ್ರೀಕರಿಸಲು ಮತ್ತು ರಜೋ, ಸತ್ವ, ತಮೋ ಗುಣಾದಿಗಳ ಮೇಲೆ ವರ್ಣಾಶ್ರಮ ಧರ್ಮವನ್ನು ಪವಿತ್ರೀಕರಿಸಲು 'ಕರ್ಮ' ಎಂಬ ಪದವನ್ನು ಮಲಿನಗೊಳಿ

ಇದೆ. ಕರ್ಮ ಎಂದರೆ ಕ್ರಿಯೆ ಎಂಬ ಅರ್ಥದಲ್ಲಿ ಕನಿಷ್ಠ ಬಸವಣ್ಣನವರು ಹೇಳುವ 'ಕಾಯಕ ಸಿದ್ಧಾಂತ' ಕಲ್ಪನೆಗಾದರೂ ಸೀಮಿತಗೊಂಡಿಲ್ಲ. ಕರ್ಮ ಎಂದರೆ ಯಜ್ಞ, 'ಹೋತ್ರ', ವ್ರತ, ನಿಯಮ ಎಂಬಂತೆ ಗೀತೆ ವಾದಿಸುತ್ತದೆ. ಈ ಕಾರಣಗಳಿಂದಾಗಿ ಗೀತೆ ಮಾನವೀಯ ತತ್ವಗಳ ವಿವೇಚನೆಯಲ್ಲಿ ತೊಡಗದೇ ಬ್ರಾಹ್ಮಣ್ಯವನ್ನು ಸ್ಥಾಪಿಸುವ ಗ್ರಂಥವೆಂದೇ ಭಾವಿಸಬೇಕಾಗಿದೆ.

೨. ಜ್ಞಾನವನ್ನು ಗೀತೆ ಯಾವ ಅರ್ಥದಲ್ಲಿ ಬಳಸಿದೆ?

ಇದು ನನ್ನ ವೈಯಕ್ತಿಕವಾದ ಅತ್ಯಂತ ನೆಚ್ಚಿನ ಪ್ರಶ್ನೆ. 'ಗೀತೆಯ ಮೇಲೆ ಹಲವು ಪ್ರಶ್ನೆಗಳು' ಎಂಬೀ ಲೇಖನದ ಪ್ರೇರಣಶಕ್ತಿಯಾಗಿ ಈ ಪ್ರಶ್ನೆಯಿಂದ ಹುಟ್ಟುಕೊಂಡಿತೆಂದರೆ ತಪ್ಪಾಗಲಾರದು.

'ನಹಿ ಜ್ಞಾನೇನ ಸದೃಶಂ ಪವಿತ್ರ ಮಿಹವಿದ್ಯತೇ। ತತ್ಸ್ವಯಂ ಯೋಗ ಸಂಸಿದ್ಧ ಕಾಲೇನಾತ್ಮ ನ ವಿಂದ್ಯತಿ ॥

(ಜ್ಞಾನಯೋಗ ಶ್ಲೋ : ೩೮)

(ಗೀತೆಯು ಜ್ಞಾನಯೋಗ, ರಾಜಯೋಗ, ಅಕ್ಷರ ಪರಬ್ರಹ್ಮಯೋಗ ಇತ್ಯಾದಿ ಮುಖ್ಯ ಅಧ್ಯಾಯಗಳನ್ನು 'ಜ್ಞಾನ'ವನ್ನು ಅರ್ಥೈಸುವುದಕ್ಕಾಗಿ ಬಳಸಿಕೊಂಡಿದೆ)

...ಈ ಲೋಕದಲ್ಲಿ ಜ್ಞಾನಕ್ಕಿಂತಲೂ ಶ್ರೇಷ್ಠವಾದುದಿಲ್ಲ. ಯಾರು ಜ್ಞಾನವನ್ನು ಪಡೆಯುತ್ತಾರೋ ಅವರು ನನ್ನನ್ನೇ (ಭಗವಂತ) ಸೇರುತ್ತಾರೆ.

ಇಲ್ಲಿ ಜ್ಞಾನ ಎಂದರೆ ತಿಳುವಳಿಕೆ ಎಂದು ಅರ್ಥೈಸಲಾಗಿದೆ. ಮುಖ್ಯವಾಗಿ 'ತಿಳುವಳಿಕೆ'ಯನ್ನು ಯಾವ ತಾತ್ವಿಕಾಂಶಗಳಿಂದ ತೆಗೆದುಕೊಂಡಿದೆ? ಅಥವಾ ಜ್ಞಾನ ಪದವನ್ನು ಸಮನಾರ್ಥಕವಾಗಿ ಬಳಸಿಕೊಂಡಿದೆಯೇ?

ತಿಳಿ ಎಂದರೆ ಏನನ್ನು ತಿಳಿ? ಏತಕ್ಕಾಗಿ ತಿಳಿ? ಇವುಗಳನ್ನು ಗೀತೆಯೇ ಸ್ವಂತಿಕೆಯಿಂದ ಅಜ್ಞಾಪಿಸುತ್ತದೆ. ಅದರ ದೃಷ್ಟಿಯಲ್ಲಿ ಭಗವಂತನನ್ನು ಮೋಕ್ಷಕ್ಕಾಗಿ ಗ್ರಹಿಸಲೇಬೇಕು. ಯಾರೀ ಭಗವಂತ? ಈ ಭೌತಿಕ ಪ್ರಪಂಚದ ಸೃಷ್ಟಿಗೆ ಯಾರು ಕಾರಣರೋ... ಈ ಪ್ರಪಂಚದ ಪಾಲನೆಗೆ ಯಾರು ಕಾರಣನೋ... ಈ ಜಗತ್ತಿನ ಅನಿವಾರ್ಯ ಕಾರಣವಾದ ನಾಶಕ್ಕೆ ಯಾರು ಕಾರಣನೋ... ಇವೆಲ್ಲ ಮಹತ್ವವಾದ ಅಂಶಗಳನ್ನು ಯಾರ ಮಾಯೆಯ ಕಾರಣಕ್ಕೆ ಗ್ರಹಿಸಲಸಾಧ್ಯವೋ ಅವನೇ ಭಗವಂತ. ಈ ಭಗವಂತ ಅಥವಾ ಈಶ್ವರನ ನಿಷ್ಠವಾದ, ನಿತ್ಯವಾದ, ಸತ್ಯವಾದ ರೂಪ ಯಾವುದು ? ಎಂಬುದನ್ನು ಗೀತೆ ಹೇಳುತ್ತದೆ.

'ಅವನು ಬ್ರಹ್ಮಾಂಡ ಗರ್ಭದ ಅನಂತಾತ್ಮ, ವಿಶ್ವ ಚೈತನ್ಯದ ಏಕಾತ್ಮ ಅವನು ಆಕಾರ ರಹಿತ, ಅನಂತ ಭೌತಿಕ ವಿಶ್ವದಲ್ಲಿ ಇವನಿಗೆ ಯಾವ ಜೀವಿಯ ಮೇಲೂ ಕೋಪ, ದ್ವೇಷ, ಅನುಕಂಪಗಳಿಲ್ಲ. ಇವನು ಯಾವ ಇಂದ್ರಿಯಗಳ ಅನುಭವಕ್ಕೂ ಬಾರದ ಅವ್ಯಕ್ತ ಸ್ವರೂಪ, ಯಾರು ಈ ಜಗತ್ತಿನಲ್ಲಿ ಬಾಲ್ಯ, ಯೌವನ, ಗೃಹಸ್ಥಾಶ್ರಮಗಳನ್ನು ಸಂಪ್ರದಾಯದಂತೆ (ಹಿಂದೂ ಸಂಪ್ರದಾಯ) ನಡೆದುಕೊಂಡು ಕೊನೆಗೆ ಸಂನ್ಯಾಶ್ರಮದಲ್ಲಿ ಸಂಸಾರವನ್ನು ತ್ಯಜಿಸಿ, ಎಲ್ಲಾ ಆಸೆಗಳನ್ನು ತ್ಯಾಗ ಮಾಡಿ ಹಸಿವು, ಬಾಯಾರಿಕೆ, ರೋಗಗಳನ್ನು ಲೆಕ್ಕಿಸದೇ ಏಕಾಗ್ರ ದೃಷ್ಟಿಯಿಂದ ಯಾರು ಭಗವಂತನನ್ನು ಮಾಂಸ, ತುಲ್ಯ, ಅಸ್ಥಿಗಳು ನಾಶವಾಗುವವರೆಗೂ ಧ್ಯಾನ ಮಾಡುತ್ತಾರೋ ಅವನೇ ಮೋಕ್ಷ ಜೀವಿ. ಇದೆಲ್ಲ ಕಷ್ಟವೆಂದು ಭಾವಿಸುವುದಾದರೆ ಕೃಷ್ಣನಲ್ಲಿ ಶರಣಾಗತನಾಗಿ ಅವನನ್ನು ಭಜಿಸುವವನು ಮೋಕ್ಷಜೀವಿ ಎಂದು ಒಂದು ನಿಗದಿತ ಚೌಕಟ್ಟನ್ನು ಗೀತೆ ಹಾಕುತ್ತದೆ.

ಇಲ್ಲಿ ನಾವು ಮುಖ್ಯವಾಗಿ ಗ್ರಹಿಸಬೇಕಾಗಿರುವುದೇನೆಂದರೆ ವೇದಗಳ ಸಾರವೇ ಉಪನಿಷತ್ತುಗಳು. ಇವುಗಳನ್ನು ವೇದದ ಕೊನೆಯ ಅಧ್ಯಾಯಗಳೆಂದೂ ಕರೆಯಬಹುದು. ಈ ಉಪನಿಷತ್ತುಗಳು ಆತ್ಮವನ್ನು ವಸ್ತುವಾಗಿಸಿಕೊಂಡು ವಿಮರ್ಶಿಸುತ್ತವೆ. ಸನಾತನರ ಉದ್ದೇಶಗಳನ್ನು ಕೃಷ್ಣ ಗೀತೆಯಲ್ಲಿ ಪುಷ್ಟೀಕರಿಸುತ್ತಾನೆ. ಈ ಆತ್ಮತತ್ತ್ವದ ಹಿನ್ನೆಲೆಯಿಂದ ಬಂದಿದ್ದೇ 'ಅದ್ವೈತ ದರ್ಶನ' ಅಥವಾ ಈಶ್ವರ ವಾದ. ಶಂಕರಾಚಾರ್ಯರಿಗೆ ಗೀತೆ ಮತ್ತು ಉಪನಿಷತ್ತುಗಳೆಂದರೆ ಈ ಕಾರಣಕ್ಕಾಗಿಯೇ ಪಂಚ ಪ್ರಾಣ. ಈ ಅದ್ವೈತದ ನಿರಾಕಾರ ತತ್ತ್ವವನ್ನು ಮದ್ವ, ರಮಾನುಜ, ನಿಂಬರಾದಿಯಾಗಿ ಉಡುಪಿ ಮಠದವರು ಇಂದಿಗೂ ಖಡಾಖಂಡಿತವಾಗಿ ವಿರೋಧಿಸುತ್ತಾರೆ. (ಯಾರ್ಯಾಯ ಕಾಲದಲ್ಲಿ ಹೇಗೆಗೆ? ಬದಲಾವಣೆಯಾಗಿದೆ ಎಂಬುದನ್ನು ಇಲ್ಲಿ ಗ್ರಹಿಸಬಹುದು) ಇದು ಇರಲಿ.

ಈ ಅದ್ವೈತ ತತ್ವವು ಬದುಕಿನ ಸಮಷ್ಟಿಗೆ, ಹೃದಯ ತುಷ್ಟಿಗೆ ಅಥವಾ ಮಾನವೀಯ ಅನುಕಂಪಗಳಾದ ಹಸಿವು, ಬಾಯಾರಿಕೆ, ದುಃಖ, ನೋವು, ಕಷ್ಟ ನಷ್ಟಗಳಿಗೇನಾದರೂ ಸಹಾಯಕವೇ? ಎಂಬುದನ್ನು ಹುಡುಕಲೇಬೇಕಾಗುತ್ತದೆ. ಏಕೆಂದರೆ 'ಒಂದು ಧರ್ಮದ ತಾತ್ವಿಕತೆಯನ್ನು ನಿರ್ಣಯಿಸುವ ಮಾನದಂಡವು ಪಾರಮಾರ್ಥಿಕವಾಗಿರುವುದಾದರೆ ಅದು ಪ್ರಾಪಂಚಿಕವಾಗಿಯೂ ಇರಬೇಕಾಗುವುದು (-ಅಂಬೇಡ್ಕರ್)'

ನೈತಿಕತೆ ಈ ಜಗತ್ತಿನಲ್ಲಿ ಮಹತ್ವವಾದುದೆಂಬುದು ಎಲ್ಲರೂ ಒಪ್ಪುವುದಾದರೆ ಅದ್ವೈತವನ್ನು ನ್ಯಾಯದ ತರ್ಕಕ್ಕೆ ಬಳಸುವುದು ತಪ್ಪಲ್ಲ.

ಕಠೋಪನಿಷತ್ತಿನಲ್ಲಿ ಯಮ ಮತ್ತು ನಚಿಕೇತ ಎಂಬ ಬಾಲಕನಿಗೆ ಒಂದು ಚರ್ಚೆ ಇದೆ. ಅಲ್ಲಿ ಯಮನು ನಚಿಕೇತನನ್ನು ಕುರಿತು ಏನಾದರೂ ವರ ಕೇಳು ಎಂಬ ಪ್ರಸಂಗ ಬರುತ್ತದೆ. ಆಗ ನಚಿಕೇತನು... 'ಈ ಜಗತ್ತಿನಲ್ಲಿ ಯಾವುದನ್ನು ನೋಡಿದರೆ ಇನ್ನೇನನ್ನೂ ನೋಡುವ ಹಾಗಿಲ್ಲವೋ, ಯಾವುದನ್ನು ಗ್ರಹಿಸಿದರೆ ಈ ವಿಶ್ವದಲ್ಲಿ ಮತ್ತೇನನ್ನೂ ಗ್ರಹಿಸುವ ಅವಶ್ಯಕತೆ ಇಲ್ಲವೋ... ಯಾವುದರ ಕುರಿತು ಮಾತನಾಡಿದರೆ ಇನ್ನೇನನ್ನೂ ಮಾತನಾಡುವಂತೆ ಇರುವುದಿಲ್ಲವೋ... ಯಾವುದನ್ನು ಸ್ಪರ್ಶಿಸಿದರೆ ಈ ಜಗತ್ತಿನಲ್ಲಿ ಮುಟ್ಟಬೇಕಾಗಿರುವುದೇನೂ ಇರುವುದಿಲ್ಲವೋ... ಯಾವುದಕ್ಕೆ ದುಃಖ ಅಂಟಲಾರದೋ... ಯಾವುದು ಈ ವಿಶ್ವದ ಮೂಲವೂ, ಯಾವುದು ಅಮೃತ ಸ್ವರೂಪವೂ... ಅದನ್ನು ನನಗೆ ನೀಡು!'

ಯಜ್ಞಗಳನ್ನು ಮಾಡುವವರು ಯಾರು? ಬ್ರಾಹ್ಮಣರು! ಏಕೆ? ಅಪಾರವಾದ ದಕ್ಷಿಣೆಗಾಗಿ. ಯಜ್ಞಗಳ ಸ್ವರೂಪ ಎಂಥದ್ದು? ಸ್ವಾರ್ಥ, ಹತ್ಯೆ, ಹಿಂಸೆ! ಗೃಹಪ್ರವೇಶ, ಉತ್ತರ ಕ್ರಿಯಾದಿಗಳು, ಲಕ್ಷ್ಮಿಪೂಜೆ, ಸತ್ಯನಾರಾಯಣ ಪೂಜೆ, ಬ್ರಹ್ಮೋತ್ಸವಗಳು, ದೇವರ ಅಭಿಷೇಕ, ಸಹಸ್ರನಾಮಾವಳಿಗಳ ಉದ್ದೇಶ ಏನು? ದುಬಾರಿ ಖರ್ಚು, ನಮಗೆ ಇನ್ನೂ ಹೆಚ್ಚು ಲಾಭವಾಗಬೇಕು, ಸುಖ ಬೇಕು ಎಂಬ ಹಂಬಲ ಬಿಟ್ಟರೆ ಈ ಎಲ್ಲಾ ಆಚರಣೆಗಳ ಹಿಂದೆ ಒಳ್ಳೆಯ ನೈತಿಕ ಜೀವನದ ಹಂಬಲ ಇದೆಯೇ? ಇಲ್ಲ! ಮೌಢ್ಯತೆಗೆ ಪೂರಕವಾಗಿ ಬ್ರಾಹ್ಮಣರಿಗೆ ಮಾತ್ರ ಉಪಯೋಗಕಾರಿ.

ಇದಕ್ಕೆ ಪ್ರತಿಯಾಗಿ ಯಮನು 'ಯಾವುದನ್ನು ನೋಡಲು ಸಾಧ್ಯವೇ ಇಲ್ಲವೋ, ಮನಸ್ಸಿನ ಗ್ರಹಿಕೆ, ಶಬ್ದ ಸ್ಪರ್ಶಗಳಿಗೆ ಸಿಲುಕುವುದಿಲ್ಲವೋ ಅದನ್ನು ಕೇಳಿದರೆ ನಾನು ಹೇಗೆ ಕೊಡಲಿ?' ಎಂದು ಉತ್ತರಿಸುತ್ತಾನೆ.

ಇಲ್ಲಿ ಮಾತು, ಅಕ್ಷರ, ಗ್ರಹಿಕೆಗೆ ಸಿಲುಕದ ವಿಚಾರವೊಂದಿದೆ ಎಂಬುದು ಸ್ಪಷ್ಟ. ಇಂತಹ ಅಸಾಧ್ಯವಾದುದನ್ನು ಹೇಳಲು ಮಾಡಿದ ಪ್ರಯತ್ನವು ಆತ್ಮವೇ ಅಲ್ಲ ಅಂದ ಮೇಲೆ ಅದರ ಬಗ್ಗೆ ವರ್ಣರಂಜಿತ ತರ್ಕವೇಕೆಂಬುದು ನನ್ನ ಪ್ರಶ್ನೆ?

ಈ ರೀತಿಯ ಅವ್ಯಕ್ತಾನುಭವಗಳನ್ನು ತರ್ಕ ಮಾಡುವ ಚಮತ್ಕಾರದಂತೆ ಅದ್ವೈತವು ಕಾಣಬಹುದು. ಇದು ಭಾಷೆಯ ಉತ್ಕೃಷ್ಟ ಪದಗಳೊಂದಿಗೆ ಪಾಂಡಿತ್ಯ ಪೂರ್ಣ ಆಟದಂತೆ ಭಾಸವಾಗುತ್ತದೆ. ಮೇಲ್ನೋಟಕ್ಕೆ ಇದು ವರ್ಣನಾತ್ಮಕ ವಿಜ್ಞಾನದಂತೆ ಕಾಣುವುದೂ ಇದರ ವಿಶೇಷತೆ. ಈ ವಿಧವಾದ ಶೂನ್ಯತ್ವವನ್ನು ಗ್ರಹಿಸಲ್ಪಡುವುದೇ 'ಜ್ಞಾನ' ಎಂದು ಗೀತೆ ವಾದಿಸುತ್ತದೆ.

ಮೇಲ್ಪಟ್ಟದ ಅದ್ವೈತ ಚಿಂತನಾಸಕ್ತರು ಭಾವ ತೀವ್ರತೆಯ ಅನಂತತೆಯಲ್ಲಿ ಅದ್ವೈತದ ಸ್ಥಿತಿಯನ್ನೂ ಸತ್-ಚಿತ್ ಆನಂದವೆಂದು ವಾದಿಸುತ್ತಾರೆ. ಮತ್ತೆ ಕೆಲವರು ಅಧ್ಯಾತ್ಮಿಕ ಕ್ಷಣಗಳನ್ನು ಆತ್ಮ ತತ್ತ್ವವೆಂದೂ ಭಾವಿಸುತ್ತಾರೆ. ಇನ್ನೂ ಅನೇಕರು ಧ್ಯಾನ ಮತ್ತು ಸಮಾಧಿಯ ಗಂಭೀರ ಸ್ಥಿತಿಗಳನ್ನು ಅದ್ವೈತವೆಂದೂ ಭಾವಿಸುತ್ತಾರೆ. ಈ ಎಲ್ಲಾ ಅಂಶಗಳೂ ಪೂರ್ತಿ ತಪ್ಪು. ಏಕೆಂದರೆ ಈ ಎಲ್ಲಾ ಅಂಶಗಳನ್ನೂ ನಮ್ಮ ಮನಸ್ಸಿನ ಗ್ರಹಣಕೋಶವು ಅರ್ಥಮಾಡಿಕೊಳ್ಳುತ್ತದೆ.

ಮನಸ್ಸಿನ ಸ್ವಪ್ನ, ಜಾಗ್ರತೆ, ಸುಷುಪ್ತಿಯಂತಹ ಯಾವ ಅವಸ್ಥೆಗೂ ಅದು ವ್ಯಕ್ತವಾಗುವುದಿಲ್ಲ ಎನ್ನುವುದು ಅದ್ವೈತದಲ್ಲಿ ಸ್ಪಷ್ಟವಿದೆ.

ಅದ್ವೈತದ ಇನ್ನೊಂದು ಮುಖ್ಯ ಲಕ್ಷಣವೆಂದರೆ ಪ್ರಪಂಚದ ಮಹತ್ವವಾದ ಭೌತಿಕಾಂಶಗಳನ್ನು ಬದಿಗೊತ್ತಲ್ಪಡುವುದು ಜಗನ್ ವಿದ್ಯೆಯಾಗಿರುವುದರಿಂದ ಬ್ರಹ್ಮ ಸಾಕ್ಷಾತ್ಕಾರವೆಂದರೆ ಶೂನ್ಯದ ಗ್ರಹಿಕೆಯಾಗಲೇಬೇಕು, ಈ ಜನ್ಮದಲ್ಲಾಗದಿದ್ದರೆ ಇನ್ನೊಂದು ಜನ್ಮದಲ್ಲಾದರೂ ಎಂದು ವಿಸ್ತರಿಸುತ್ತದೆ.

ಈ ಎಲ್ಲಾ ಸಲಕ್ಷಣ ಕಾರಣಗಳಿಂದಾಗಿ ಅದ್ವೈತದ ಚರ್ಚೆಯನ್ನು 'ಧರ್ಮ ಸಂಬಂಧಿ ತತ್ತ್ವಜ್ಞಾನ' ಎನ್ನಲಾಗುತ್ತದೆ. ಏಕೆಂದರೆ ಈ ತತ್ತ್ವಗಳು ಧರ್ಮದೊಂದಿಗಿನ ತಮ್ಮ ಸಂಬಂಧಗಳನ್ನು ಕಳಚಿಕೊಳ್ಳಲಾರವು. ನಮ್ಮ ಕನ್ನಡದಲ್ಲಿ ಬೂಸನೂರಮಠರ 'ಶೂನ್ಯಸಂಪಾದನೆಯ ಪರಾಮರ್ಶೆ'ಯನ್ನು ತೆಗೆದುಕೊಳ್ಳಿ! ಕುವೆಂಪುರವರ 'ವಿಶ್ವಮಾನವ ಗೀತೆ'ಯನ್ನು ತೆಗೆದುಕೊಳ್ಳಿ! ನೂರು ಮತಗಳ ನೂಕಾಚೆ ದೂರ ಎನ್ನುವ ಅವರ ಧನಿ ರಸೋವೈಸಃದಲ್ಲಿ ಕುಗ್ಗಿ ಹೋಗುತ್ತದೆ.

ಇಂತಹ ಸಂದರ್ಭಗಳಲ್ಲಿ ಅದ್ವೈತಾಭಿಮಾನಿಗಳು ಭಾವದ ಅನಂತತೆಯಲ್ಲಿ ಎಂದಾಗ ಸಣ್ಣತನಗಳಿಂದ ವಿಮುಕ್ತರೇ? ಇಲ್ಲಿ ಮೌಖಿಕವಾದದ್ದು ಎಷ್ಟು ಕಾರ್ಯರೂಪಕ್ಕಿಳಿಯುತ್ತದೆ? ಎಂಬುದು ಎಷ್ಟು ಗ್ರಾಹ್ಯವೆಂದರೆ 'ನಿಜ ಬದುಕಿನಲ್ಲಿ ತತ್ತ್ವಗಳು ಸೋಲೇ?' ಎಂದರೆ ನನ್ನನ್ನು ಅದ್ವೈತಾಸಕ್ತರು ಅಪಾದಿಸಬಹುದು! ಇದನ್ನು ಅವರೇ ಹೇಳಬೇಕು. ಏಕೆಂದರೆ ಆದಿ ಶಂಕರಾಚಾರ್ಯರು ಭ್ರಷ್ಟ ಕುಡುಕ, ಅಶುಭ್ರ, ಚಾಂಡಾಲನನ್ನು ಕಂಡು ದೂರ ಸರಿ... ಎಂದು ನುಡಿದು ತಮ್ಮ

ತತ್ತ್ವಕ್ಕೆ ತಾನೇ ವಿರುದ್ಧವಾಗಿ ನಡೆಯುತ್ತಿದ್ದೇನೆಂದು ಗ್ರಹಿಸಿದ ಕೂಡಲೆ 'ಮನೀಷ ಪಂಚಕ' ಬರೆದರೇ ವಿನಃ ಅವನ ವಾಸ್ತವ ಸಮಸ್ಯೆಗಳಿಗೆ ತಲೆತೂಗುವ ಸಂದರ್ಭಗಳನ್ನೇ ಅವರು ತಂದುಕೊಳ್ಳಲಿಲ್ಲ. ಇದು ಎಷ್ಟೊಂದು ಖಚಿತ ಎಂದರೆ ಮಾನ, ಅವಮಾನ, ಹಸಿವು, ನೋವುಗಳನ್ನು ಉಪೇಕ್ಷಿಸುತ್ತಾ ಮಾನವ ಸಂಬಂಧಿ ಕಷ್ಟಗಳನ್ನು ಇವು ಮುಖ್ಯವಾಹಿನಿಗೆ ತಂದುಕೊಳ್ಳುವುದೇ ಇಲ್ಲ ಎನ್ನಬಹುದು.

ಇಂತಹ ವಿಚಾರಗಳ ಬಗ್ಗೆ ಅಂಬೇಡ್ಕರ್ ಏನು ಹೇಳುವರೋ ನೋಡೋಣ -'ಒಮ್ಮೆ ಧರ್ಮ ಪಂಡಿತ ಮತ್ತು ತತ್ತ್ವಜ್ಞಾನಿ ವಾಗ್ವಾದದಲ್ಲಿ ತೊಡಗಿದ್ದರಂತೆ, ಧರ್ಮಶಾಸ್ತ್ರ ಪಂಡಿತ ಆರೋಪಿಸಿದ, 'ತತ್ವಜ್ಞಾನಿಯು ಕತ್ತಲೆಯ ಕೋಣೆಯಲ್ಲಿ ಇಲ್ಲದ ಕರಿಯ ಬೆಕ್ಕಿಗಾಗಿ ಹುಡುಕುವ ಕುರುಡನಂತಿದ್ದಾನೆ!' ಧರ್ಮಶಾಸ್ತ್ರ ಪಂಡಿತನ ಮೇಲೆ ಪ್ರತಿದಾಳಿ ಮಾಡಿದ ತತ್ತ್ವಜ್ಞಾನಿ ಹೇಳಿದ -'ಕತ್ತಲೆಯ ಕೋಣೆಯಲ್ಲಿ ಇಲ್ಲದ ಕರಿಯ ಬೆಕ್ಕಿಗಾಗಿ ಹುಡುಕುವ ಕುರುಡನಂತಿದ್ದೂ ಅದನ್ನು ತಾನು ಕಂಡಿರುವುದಾಗಿ ಆಣೆ ಇಟ್ಟು ಹೇಳುತ್ತಿದ್ದಾನೆ'! ಧರ್ಮ ಸಂಬಂಧಿಯಾದ ತತ್ತ್ವಜ್ಞಾನವೆಂಬ ದುರಾದೃಷ್ಟ ಶೀರ್ಷಿಕೆಯೇ ಈ ಎಲ್ಲಾ ಗೊಂದಲದ ಜವಾಬ್ದಾರಿ ಹೊರಬೇಕಿದೆ'. (ಸಂ.೩, ಹಿ.ಧ.ತ; ಪು.ಸಂ. ೪)

ಯತಾರ್ಥದಲ್ಲಿ ಬ್ರಹ್ಮನಿರ್ವಾಣ ತತ್ವವನ್ನು ಗೀತೆ ಹೇಗೆ ದುರುಪಯೋಗಪಡಿಸಿಕೊಂಡಿದೆ ಯೆಂದರೆ, 'ನಿನ್ನನ್ನು ನೀನು ತಿಳಿ' ಎಂಬುದನ್ನು ಒಮ್ಮೆ ನಿನ್ನ ವ್ಯಕ್ತಿತ್ವ ದೌರ್ಬಲ್ಯವನ್ನು ತಿಳಿ ಎಂಬಂತೆ, ಇನ್ನೊಮ್ಮೆ ನೀನು ಆತ್ಮವಾಗಿರುವುದರಿಂದ 'ಪರಮಾತ್ಮ ಸ್ವರೂಪವನ್ನು ತಿಳಿ' ಎಂದು ತಾತ್ವಿಕ ಕುತರ್ಕ ಮಾಡಿದೆ. ಏಕೆಂದರೆ ಬೌದ್ಧಧರ್ಮದ ತತ್ತ್ವವನ್ನು ಪೂರ್ಣವಾಗಿ ಒಪ್ಪಿಕೊಂಡರೆ ಹಿಂದೂಧರ್ಮದ ದೈವ ಮತ್ತು ಆಚರಣೆಗಳಿಗೆ ಹಾಗೂ ಬ್ರಾಹ್ಮಣ್ಯಕ್ಕೆ ಉಳಿಗಾಲವಿರುವುದಿಲ್ಲ. ಹಾಗಾಗಿ ಸತ್ಯವನ್ನು ಮುಚ್ಚಿಡಲು ಹಿಂದೂಧರ್ಮ ತೀವ್ರವಾಗಿ ಪ್ರಯತ್ನಿಸಿತು.

೩. ಮೋಕ್ಷ (ವಿಮೋಚನೆ) ಎಂದರೆ ಗೀತೆಯಲ್ಲಿ ಹೇಗೆ ?

ಏಷಾ ಬ್ರಾಹ್ಮಿಸ್ಥಿತಿ ಪಾರ್ಥ। ನೈನ ಪ್ರಾಪ್ಯ ವಿಮುಹ್ಯತಿ।
ಸ್ಥಿತ್ವಾಸ್ಯಾಮಂತ ಕಾಲೇಽಪಿ ಬ್ರಹ್ಮ ನಿರ್ವಾಣ ಮೃಚ್ಛತಿ
(-ಗೀತೆ)

ಇಲ್ಲಿ 'ಬ್ರಹ್ಮನಿರ್ವಾಣ' ಎಂಬ ಪದವು ಗಮನಾರ್ಹವಾದುದು. 'ಬ್ರಹ್ಮ ನಿರ್ವಾಣವನ್ನು ಗಳಿಸಲು ಇವು ಸೋಪಾನಗಳು ೧. ಶ್ರದ್ಧೆ(ಆತ್ಮವಿಶ್ವಾಸ) ೨. ಕೃಷಿ (ದೃಢ ನಿರ್ಧಾರ) ೩. ಸ್ಮೃತಿ (ಸದಾಗುರಿಯ ಅರಿವು) ೪. ಸಮಾಧಿ (ಗಂಭೀರ ಧ್ಯಾನ) ೫. ಪ್ರಜ್ಞೆ(ವಾಸ್ತವ ಅರಿವಿನೊಂದಿಗೆ ಅಂತರ್ ನೋಟ)

ಈ ನಿರ್ವಾಣ ತತ್ತ್ವವನ್ನು ಗೀತೆ ಎಲ್ಲಿಂದ ತೆಗೆದುಕೊಂಡಿತು? ಇದು ಉಪನಿಷತ್ತುಗಳಲ್ಲಲ್ಲ -ನಿರ್ವಾಣ ಶಬ್ದವನ್ನು ಯಾವ ಉಪನಿಷತ್ತುಗಳೂ ಬಳಸುವುದಿಲ್ಲ. ಈ ಇಡೀ ವಿಚಾರವು 'ಮಹಾಪರಿನಿಬ್ಬಾಣ' ಸುತ್ತದ ಬೌದ್ಧಧರ್ಮದ್ದು-(ಅಂಬೇಡ್ಕರ್. ಸಂ.೩. ೫೩೬)'.

ವಾಸ್ತವದಲ್ಲಿ 'ನಿಬ್ಬಾಣ' ಎಂಬ ಪದ ಪಾಳಿ ಭಾಷೆಯದು. ಅದು ಬ್ರಾಹ್ಮಣ ಸಾಹಿತ್ಯದಲ್ಲಿ ಬೌದ್ಧಧರ್ಮದ ಅವನತಿಯ ನಂತರ 'ನಿರ್ವಾಣ' ಎಂಬ ಮತ್ತೊಂದು ಸಂಸ್ಕೃತ ಪದವನ್ನು ಸೃಷ್ಟಿಮಾಡಲಾಯಿತು.

ಯತಾರ್ಥದಲ್ಲಿ ಬ್ರಹ್ಮನಿರ್ವಾಣ ತತ್ವವನ್ನು ಗೀತೆ ಹೇಗೆ ದುರುಪಯೋಗಪಡಿಸಿಕೊಂಡಿದೆಯೆಂದರೆ, 'ನಿನ್ನನ್ನು ನೀನು ತಿಳಿ' ಎಂಬುದನ್ನು ಒಮ್ಮೆ ನಿನ್ನ ವ್ಯಕ್ತಿತ್ವ ದೌರ್ಬಲ್ಯವನ್ನು ತಿಳಿ ಎಂಬಂತೆ, ಇನ್ನೊಮ್ಮೆ ನೀನು ಆತ್ಮವಾಗಿರುವುದರಿಂದ 'ಪರಮಾತ್ಮ ಸ್ವರೂಪವನ್ನು ತಿಳಿ' ಎಂದು ತಾತ್ವಿಕ ಕುತರ್ಕ ಮಾಡಿದೆ. ಏಕೆಂದರೆ ಬೌದ್ಧಧರ್ಮದ ತತ್ತ್ವವನ್ನು ಪೂರ್ಣವಾಗಿ ಒಪ್ಪಿಕೊಂಡರೆ ಹಿಂದೂಧರ್ಮದ ದೈವ ಮತ್ತು ಆಚರಣೆಗಳಿಗೆ ಹಾಗೂ ಬ್ರಾಹ್ಮಣ್ಯಕ್ಕೆ ಉಳಿಗಾಲವಿರುವುದಿಲ್ಲ. ಹಾಗಾಗಿ ಸತ್ಯವನ್ನು ಮುಚ್ಚಿಡಲು ಹಿಂದೂಧರ್ಮ ತೀವ್ರವಾಗಿ ಪ್ರಯತ್ನಿಸಿತು. ಆದಾಗ್ಯೂ ಈ ವಿಚಾರವನ್ನು ಒಪ್ಪಿಕೊಳ್ಳುವುದರಿಂದ ಶಾಸ್ತ್ರಕಾರರೂ, ಧರ್ಮಗ್ರಂಥಗಳು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ!

ಇಂದಿನ ಮಠಾಧೀಶರಂತೂ ಹಿಂದೂ ತತ್ತ್ವಗಳಿಗೇ ಬದ್ಧರಾಗಿದ್ದಾರೆಯೇ ವಿನಃ ಮೋಕ್ಷವನ್ನು ಸ್ಪಷ್ಟವಾಗಿ ವಿವರಿಸಿ ಹೇಳಲು ಪ್ರಯತ್ನಗಳೇ ನಡೆದಿಲ್ಲ ಎನ್ನಬಹುದು. ಏಕೆಂದರೆ ಮೋಕ್ಷವನ್ನು ಅದರಂತೆಯೇ ವಿವರಿಸ ಹೊರಟರೆ ತಮ್ಮ ಖಾಸಗಿ ಒಡೆತನಗಳನ್ನು ತ್ಯಾಗ ಮಾಡಬೇಕಾಗುವ ಭಯಕ್ಕೆ ಇಡೀ ಮೋಕ್ಷದ್ವಾರವನ್ನೇ ಮುಚ್ಚಿಹಾಕಿದ್ದರೆನ್ನಬಹುದು. ಆತ್ಮೋದ್ಧಾರ ಮತ್ತು ದೇವರನ್ನು ಧರ್ಮದ ಕೇಂದ್ರವಾಗಿಸಿ ಗುರುವಿಂದ ಪಂಚಾಕ್ಷರಿಯೋ, ಏಕಾಕ್ಷರಿಯೋ, ಅಷ್ಟಾಕ್ಷರಿಯೋ ಉಪದೇಶವಾಗಿ ಸ್ವೀಕರಿಸಿದರೆ ಮೋಕ್ಷ ಸಿಗುತ್ತದೆಂದೂ ಅಥವಾ ಸ್ವಯಂ ಅರಿವಿನಿಂದಾದರೂ ಮೋಕ್ಷ ಸಿಗುತ್ತದೆಂದೂ ಹಿಂದೂಗಳು ನಂಬುವುದು ಪೂರ್ತಿ 'ಮೋಕ್ಷ'ದಿಂದ ಎಲ್ಲರನ್ನೂ ವಂಚಿಸಿದಂತಾಗಿದೆ.

ಇವೆಲ್ಲವುಗಳಿಗಿಂತ ಬುದ್ಧನ ತತ್ವವು ಭಿನ್ನವಾಗಿದೆ. ಮತ್ತು ವಾಸ್ತವಕ್ಕೆ ಪೂರ್ಣವಾಗಿ ಸ್ಪಂದಿಸುವಂತಿದೆ. ಲೋಭಿತನ, ಕೆಟ್ಟ ಆಲೋಚನೆಗಳು, ಸೋಮಾರಿತನ, ಪ್ರಪಂಚದಲ್ಲಿ ತನ್ನ ಅವಶ್ಯಕತೆಯ ಮಹತ್ವವನ್ನು ಅರಿತುಕೊಳ್ಳುವ, ಅನಾಸಕ್ತಿ ಪ್ರಕಟಿಸುವ ತಿಳಿಗೇಡಿತನ, ಜೀವನದಲ್ಲಿ ಯಾವುದೇ ತತ್ತ್ವದ ಬಗ್ಗೆ ಸ್ಥಿರತೆ ಇಲ್ಲದಿರುವಿಕೆ, ಶೌರ್ಯವಂತನೆಂದು ಗರ್ವಪಡುವಿಕೆ, ಸಂಶಯ ಈ ದೋಷಗಳನ್ನು ಕಳೆದುಕೊಳ್ಳುವವನು ಜ್ಞಾನದ ಅನುಗ್ರಹಕ್ಕೆ ಪಾತ್ರನಾದವನಾಗಿರುತ್ತಾನೆ. ಇಲ್ಲಿ ಎಲ್ಲಾ ದೇವರುಗಳು ಮತ್ತು ಅನರ್ಥ ಆಚರಣೆಗಳನ್ನು ನಿರಾಕರಿಸಿದ ಏಕೆಂದರೆ ಇವೆರಡೂ ಅಂಶಗಳು (ದೇವರು ಮತ್ತು ಆತ್ಮ) ಪೂರ್ಣ ಜ್ಞಾನಕ್ಕೆ ಸಹಕಾರಿಯಲ್ಲ ಎಂಬುದು ಸತ್ಯ.

ನಂತರ ವಿಮೋಚನೆ! ವ್ಯಕ್ತಿಯ ವಿಮೋಚನೆಯ ಮೂಲಕ ಬುದ್ಧನು ಇಡೀ ಸಮಾಜದ ವಿಮೋಚನೆಯನ್ನು ಆಶಿಸಿದ್ದ. ಇವೆಲ್ಲವುಗಳಿಗಿಂತ ಮುಖ್ಯವಾಗಿ 'ಮನುಷ್ಯ ಸಹಜ ಇತಿಮಿತಿಗಳನ್ನು ಪ್ರಜ್ಞಾಪೂರ್ವಕವಾಗಿ ದಾಟುವ ನಿರಂತರ ಪ್ರಯತ್ನವೆಂದು ಬುದ್ಧನು ಮೋಕ್ಷವನ್ನು ಗ್ರಹಿಸಿದ್ದ'.

ಈ ಪ್ರಜ್ಞಾಪೂರ್ವಕವಾದ ನಿರಂತರ ಪ್ರಯತ್ನದಲ್ಲಿ ಎದುರಾಗುವ ಅಡ್ಡಿ ಆತಂಕಗಳನ್ನು 'ಬಂಧನ'ಗಳೆಂದು ಕರೆದ, ಈ ಬಂಧನಗಳನ್ನು ಮೋಕ್ಷಾಪೇಕ್ಷೆಯುಳ್ಳವರು ಕಳಚಿಕೊಳ್ಳಲೇಬೇಕಿತ್ತು. ಈ ಬಂಧನಗಳು ಸಮಾಜದ ಶೋಷಣೆ ಮತ್ತು ದುಃಖದ ಮೂಲಗಳಾಗಿದ್ದವು. ತನ್ಮೂಲಕ ಪ್ರತಿಯೊಬ್ಬನೂ ಒಂದೊಂದು ರೀತಿಯ ಶೋಷಣೆ ಮತ್ತು ದುಃಖಕ್ಕೀಡಾಗುತ್ತಿದ್ದು ಇದನ್ನು ತಡೆಯಲು ಹತ್ತು 'ಅಸವ'ಗಳನ್ನು ದಾಟಲೇಬೇಕಿತ್ತು.

೧. ಸ್ವಭ್ರಾಂತಿ : ಜೀವನದ ಪ್ರತಿಯೊಂದು ಥಳುಕಿನ ವಸ್ತುಗಳೂ ಹೃದಯದ ಎಲ್ಲಾ ಆಸೆಗಳನ್ನು ಈಡೇರಿಸುತ್ತವೆಂದೂ ವ್ಯರ್ಥವಾಗಿ ನಂಬುವುದರ ಬದಲು ಈ ಅನಂತ ವಿಶ್ವದಲ್ಲಿ ನಾನೊಂದು ಸಣ್ಣ ಕಣ ಎಂಬ ವಾಸ್ತವತೆಗೆ ಕಣ್ಣು ತೆರೆದಾಗ ನಾನೆಷ್ಟು ನಶ್ವರ ಎಂಬುದನ್ನು ಗ್ರಹಿಸುವುದರ ಮೂಲಕ ವಸ್ತುಗಳನ್ನು ಅವಲೋಕಿಸುವುದು.

೨. ಸಂಶಯ : ನಾನು ನಶ್ವರ ಎಂದು ಏನೂ ಮಾಡದೇ ಜಡವಾಗಿಬಿಡುವುದು ತಪ್ಪು. ಈ ವಿಶ್ವಕ್ಕೆ ನಾವು ಬೇಕಾಗಿರುವುದರಿಂದ ಜೀವನವನ್ನು ಒಂದು ಚಳವಳಿಯಾಗಿ ಗ್ರಹಿಸಿ ಸತ್ಪಥದಲ್ಲಿ ಸಾಗುವುದು.

೩. ಪೌರೋಹಿತ್ಯ: ಪೂಜೆ, ಪುನಸ್ಕಾರಗಳಂತಹ ಬಹಿರಾಚರಣೆಗಳು ಬದುಕಿಗೆ ಉಪಯೋಗವಿಲ್ಲವೆಂದು ಗ್ರಹಿಸುವುದು.

೪. ಸ್ವಯಂ ವಿವೇಚನೆ : ತನ್ನ ಬಗ್ಗೆ ತಾನು ವಿವೇಚಿಸಿಕೊಳ್ಳುವುದು.

೫. ಇತರರ ಬಗ್ಗೆ ಭಾವನೆ : ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಇನ್ನೊಬ್ಬರಲ್ಲಿ ಪ್ರೀತಿಯಿಂದ ವರ್ತಿಸುವುದು.

೬. ಸಾವಿನಾಚೆಯ ಮೋಕ್ಷ : ಇದು ಪೂರ್ಣ ಸುಳ್ಳೆಂದು ಗ್ರಹಿಸುವುದು.

೭. ಗರ್ವ : ತನಗೆ ತಾನು ಅತೀವ ಗೌರವದಿಂದ ಇನ್ನೊಬ್ಬರಿಗೆ ತೊಂದರೆಯಾಗುವುದೆಂದು ಗ್ರಹಿಸುವುದು.

೮. ಪರಲೋಕ ಚಿಂತನೆ : ಇದನ್ನು ಬಿಟ್ಟುಬಿಡುವುದು.

೯. ನಾನು ಜ್ಞಾನಿ : ನಾನು ಇತರರಿಗಿಂತ ಜ್ಞಾನಿ, ತಿಳಿದವ ಎಂಬುದನ್ನು ಬಿಟ್ಟುಬಿಡುವುದು.

೧೦. ಅಜ್ಞಾನ :- ನನಗಿಂತ ವಿವೇಕಿಗಳಾದವರನ್ನು ಪ್ರಶ್ನಿಸುವುದರ ಮೂಲಕ ಎಲ್ಲಾ ಅನುಮಾನಗಳನ್ನು ಪರಿಹರಿಸಿಕೊಂಡು, ಕಲೆ, ವಿಜ್ಞಾನಗಳನ್ನು ಬೆಳೆಸಿಕೊಳ್ಳುತ್ತಾ ಸತ್ಸಂಗದಲ್ಲಿ ಕಾಲ ಕಳೆಯುವುದು.

೨೫೦೦ ವರ್ಷಗಳಷ್ಟು ಹಳೆಯವಾದ ಈ ವಿಚಾರಗಳು ಎಷ್ಟು ಪ್ರಸ್ತುತ ಎಂದರೆ ಅಂದಿನಿಂದ ಇಂದಿನವರೆಗೂ ಮನುಷ್ಯನ ಬಯಕೆಗಳು ತನ್ನಲ್ಲಿ ಇಟ್ಟುಕೊಳ್ಳಲಾರದಷ್ಟು ಬದಲಾವಣೆ ಆಗಿವೆಯೇ ವಿನಃ ಮಾನವ ಸಂಬಂಧಗಳು

ಮತ್ತು ವಿವೇಕಕ್ಕೆ ಅರ್ಥವಾಗುವ ಮಾನವ ತನ್ನ ಮಿತಿಯ ಗಡಿಯನ್ನು ಎಷ್ಟು ದಾಟಿದ್ದಾನೆ ಎಂಬುದನ್ನು ಈ ಸದ್ಭಾವನಾ ಗುಣಗಳಲ್ಲಿ ಕಾಣಬಹುದು.

ಇವುಗಳನ್ನು ನಾವು ಇಂದಿಗೂ ಪ್ರಸ್ತುತ ಎಂದು ಭಾವಿಸುವುದಾದರೆ ಇವುಗಳನ್ನು 'ಆಧ್ಯಾತ್ಮಿಕ' ವಿಚಾರಗಳೆಂದು ತಪ್ಪಾಗಿ ಭಾವಿಸಿಕೊಳ್ಳುವುದರ ಬದಲು 'ಬದುಕು' ಎಂದು ಗ್ರಹಿಸಬಹುದಾಗಿದೆ. ಹೀಗಾದಾಗ ಇವೆಲ್ಲಾ ಅಂಶಗಳು ನಮ್ಮ ಕೈ ತಪ್ಪಿ ಹೋಗಲಾರವು.

ಇಂದಿನ ನೈತಿಕ ಮೌಲ್ಯಗಳು ಯಾವ ಹಂತ ತಲುಪಿದೆ ಎಂದರೆ ನಾವು ಸಹಜವಾಗಿ ಇನ್ನೊಬ್ಬರಲ್ಲಿ ಎಷ್ಟಿವೆ ಎಂದು ಹುಡುಕುತ್ತಿರುತ್ತೇವೆಯೇ ಹೊರತು ನೈತಿಕತೆ ನಮ್ಮಲ್ಲಿ ಎಷ್ಟಿದೆ ಎಂದು ವಿವೇಚಿಸಿಕೊಳ್ಳುವುದಿಲ್ಲ. ಇದೊಂದು ದೊಡ್ಡ ಶೋಷಣೆ, ನಾಟಕೀಯವಾಗಿ 'ನಮ್ಮನ್ನು ನಾವು' ಜನದ ಮುಂದೆ ಬಣ್ಣಗಟ್ಟಿ ವಿಜೃಂಭಿಸಿಕೊಳ್ಳುತ್ತಲಿದ್ದೇವೆ. ಈ ಪ್ರಯತ್ನ ದಲ್ಲಿ ನಿರಂತರವಾಗಿ ಆಯಸ್ಸನ್ನು ವ್ಯರ್ಥಮಾಡಿಕೊಳ್ಳುತ್ತಾ... ಕಾಲಗರ್ಭದಲ್ಲಿ ಮಿಂಚಿ ಮಾಯವಾಗುವ ಈ ಅಲ್ಪಮಾನವ ತನ್ನ ಕುಪ್ರಯತ್ನದಲ್ಲಿ ತನ್ನ ಹಿತ ಕಾಪಾಡಿಕೊಳ್ಳುವುದಕ್ಕಾಗಿ ಇನ್ನೊಬ್ಬರ ಆತ್ಮಗೌರವವನ್ನು ನಾಶಮಾಡಲು ಹಿಂಜರಿಯು ವುದಿಲ್ಲ. ಇದೇ ಹಿತಾಸಕ್ತಿಗಳ ಸಂಘರ್ಷ. ಈ ಸಂಘರ್ಷವು ದುಃಖ ಮತ್ತು ಅಶಾಂತಿಗೆ ಪೂರಕವಾಗಿ, ಜಗತ್ತಿನ ಮಹೋನ್ನತ ಪ್ರಕೃತಿ ನಿಯಮಗಳಿಗೆ ವಿರುದ್ಧವಾಗಿದೆ. ಈ ತೆರನಾದ ಹಿಂಸೆಯು ಚಾಕು ಮತ್ತು ಪ್ರಾಣಕ್ಕಿರುವ ನಾಶ ಹೇತುವಾದ ಅಸಂಬದ್ಧ ಸಂಬಂಧದಂತೆ... ಇಂತಹ ಕ್ಲಿಷ್ಟ ಸಂದಿಗ್ಧ ಯುಗದಲ್ಲಿ ಬುದ್ಧನ ತತ್ತ್ವ ಅನಿವಾರ್ಯ.

ಬುದ್ಧನನ್ನು ಸರಳವಾಗಿ ಗ್ರಹಿಸುವುದಾದರೆ ಆತನ ಬದುಕಿನ ದಿನಗಳನ್ನು ಎರಡು ಭಾಗಗಳಾಗಿ ಗ್ರಹಿಸಬಹುದು. ತನ್ನ ಸಮಯವನ್ನು ೧. ಸಂಘದ ಕ್ರಿಯೆಯಲ್ಲಿ ೨. ಧ್ಯಾನಗಳಲ್ಲಿ ಕಳೆಯುತ್ತಿದ್ದ.

೧. ಸಂಘದ ಕ್ರಿಯೆಗಳಲ್ಲಿ

ಸಂಘವೆಂದರೆ 'ಸಮಸ್ಯೆ' ಎಂದು ಗೊತ್ತಿದ್ದರೂ ಈ ವಿರಾಗಿ ಇಲ್ಲಿ ಏಕೆ ತೊಡಗಿಕೊಂಡಿದ್ದ? ಬಹುಶಃ ಜಗತ್ತು ಮಾಯೆ, ವಿಧಿ ಎಂದು ಗ್ರಹಿಸಿದ್ದ ಭಾರತೀಯ ಮನಸ್ಸುಗಳಿಗೆ ಇಲ್ಲಿ ಮಾಯೆಗಿಂತ ದುಃಖ ಮತ್ತು ಸಮಸ್ಯೆ ಇದೆ ಎಂಬುದನ್ನು ಮನವರಿಕೆ ಮಾಡಿಸಿ, ಧರ್ಮ ಮತ್ತು ಬದುಕಿನ ಕುರಿತು ಕ್ರಮ ಶಿಕ್ಷಣ ನೀಡಿ ತನ್ಮೂಲಕ ಚಿಕಿತ್ಸೆಗೊಳಪಡಿಸುವುದರ ಮೂಲಕ ಜನವನ್ನು ಸತ್ಪಥಕ್ಕೆಳೆದುಕೊಳ್ಳುವುದಕ್ಕಾಗಿ.

ಸಂಘ ಈ ಪದಕ್ಕೆ 'ರ್ಷ' ಪ್ರತ್ಯಯವಾದಾಗ ಸಂಘರ್ಷ. ಸಂಘವನ್ನು ಅದರ ಸದಸ್ಯರುಗಳು ತಮಗೆ ಬೇಕಾದಂತೆ ದುರುಪಯೋಗ ಪಡಿಸಿಕೊಂಡರಂತೂ ಆಂತರಿಕ ಸಂಘರ್ಷ. ಕೊನೆಗೆ ಅದರಲ್ಲಿ ಏನೂ ಉಳಿಯದೇ ಸರ್ವನಾಶ. ಸಂಘದ ತತ್ತ್ವಾದರ್ಶಗಳಿಗೆ ಬದ್ಧರಾದಾಗ 'ಅನ್ಯಾಯದ ವಿರುದ್ಧ ಸಂಘರ್ಷ' ಇಂತಹ ಮಹೋನ್ನತ ಸಂಘರ್ಷದ ಪರಿಣಾಮ ಕ್ರಾಂತಿ. ಇಂತಹವುಗಳಿಗೆ ದೂರಾಲೋಚನೆಯ ವಿವೇಕ ಮತ್ತು ಹೃದಯ ಸಿರಿವಂತಿಕೆಯ ನಾಯಕನಿಂದ ಸಾಧ್ಯವಾಗು ತ್ತದೆಯೇ ಹೊರತು, ಕ್ರಾಂತಿಯನ್ನು ಕಾಲ ನಿರ್ಧರಿಸುತ್ತದೆಯೇ ಹೊರತು ವ್ಯಕ್ತಿಗಳಲ್ಲ; ವ್ಯಕ್ತಿಗಳು ಮುಖ್ಯವಾಗುವುದಕ್ಕಿಂತ 'ನಮ್ಮತನ' ಮುಖ್ಯವಾಗಬೇಕೆಂದು ಬುದ್ಧ ತಿಳಿದುಕೊಂಡಿದ್ದ. ಅದಕ್ಕಾಗಿಯೇ ಅವನ ಅವಸಾನದ ನಂತರ ಬುದ್ಧಧರ್ಮಕ್ಕೆ ವಾರಸುದಾರಿಕೆಯನ್ನು ನೀಡಲು ನಿರಾಕರಿಸಿದ. ಅರ್ಹತೆಯ ಆಧಾರದ ಮೇಲೆ ಮನುಷ್ಯನಿಗೆ ಸ್ಥಾನ ಬರಬೇಕೆಂದು ಭಾವಿಸಿದ.

> **ಬುದ್ಧನ ತತ್ವವು ಭಿನ್ನವಾಗಿದ್ದು ವಾಸ್ತವಕ್ಕೆ ಪೂರ್ಣವಾಗಿ ಸ್ಪಂದಿಸುವಂತಿದೆ. ಲೋಭಿತನ, ಕೆಟ್ಟ ಆಲೋಚನೆಗಳು, ಸೋಮಾರಿತನ, ಪ್ರಪಂಚದಲ್ಲಿ ತನ್ನ ಅವಶ್ಯಕತೆಯ ಮಹತ್ವವನ್ನು ಅರಿತುಕೊಳ್ಳುವ, ಅನಾಸಕ್ತಿ ಪ್ರಕಟಿಸುವ ತಿಳಿಗೇಡಿತನ, ಜೀವನದಲ್ಲಿ ಯಾವುದೇ ತತ್ತ್ವದ ಬಗ್ಗೆ ಸ್ಥಿರತೆ ಇಲ್ಲದಿರುವಿಕೆ, ಶೌರ್ಯವಂತ ನೆಂದು ಗರ್ವಪಡುವಿಕೆ, ಸಂಶಯ ಈ ದೋಷಗಳನ್ನು ಕಳೆದುಕೊಳ್ಳುವವನು ಜ್ಞಾನದ ಅನುಗ್ರಹಕ್ಕೆ ಪಾತ್ರನಾದವನಾಗಿರುತ್ತಾನೆ. ಬುದ್ಧ ದೇವರುಗಳು ಮತ್ತು ಅನರ್ಥ ಆಚರಣೆಗಳನ್ನು ನಿರಾಕರಿಸಿದ. ಏಕೆಂದರೆ ಇವೆರಡೂ ಅಂಶಗಳು (ದೇವರು ಮತ್ತು ಆತ್ಮ) ಪೂರ್ಣ ಜ್ಞಾನಕ್ಕೆ ಸಹಕಾರಿಯಲ್ಲ ಎಂಬುದು ಸತ್ಯ. ನಂತರ ವಿಮೋಚನೆ! ವ್ಯಕ್ತಿಯ ವಿಮೋಚನೆಯ ಮೂಲಕ ಬುದ್ಧನು ಇಡೀ ಸಮಾಜದ ವಿಮೋಚನೆಯನ್ನು ಆಶಿಸಿದ್ದ.**

ಬುದ್ಧನು ಬದುಕನ್ನು ಕರುಣೆ, ಪ್ರೀತಿ, ದಯೆ, ಅಹಿಂಸೆ ಎಂದು ಅರ್ಥೈಸಿಕೊಂಡುದುದರ ಹಿನ್ನೆಲೆಯಲ್ಲಿ ಮಹತ್ವ ವಾದ ಮಾನವೀಯ ಮೌಲ್ಯಗಳ ಸ್ಥಾಪನೆಯ ಅಂಶಗಳಿ ದ್ದವು. ಈ ಅಂಶಗಳನ್ನು ಬರೀ ಹೇಳುವುದರಲ್ಲಿ ಬುದ್ಧ ತೊಡಗದೇ ಅವುಗಳನ್ನು ಕಾರ್ಯರೂಪಕ್ಕಿಳಿಸುವ ಹಾದಿ ಆಯ್ಕೆ ಮಾಡಿಕೊಂಡಿದ್ದ ಈ ಕಾರಣಗಳಿಂದಾಗಿ ಸಂಘದ ಸದಸ್ಯರಿಗೆ 'ಕಡ್ಡಾಯ ನಿಯಮಗಳೂ' ಅನಿವಾರ್ಯ ವಾಗಿತ್ತು.

ಇಂದಿನ ಸ್ಥಿತಿ ಇದಕ್ಕೆ ವಿರುದ್ಧವಾಗಿ 'ನಿಯಮಗಳು ಕಡ್ಡಾಯವೇನೂ ಅಲ್ಲ! ಆದಾಗ್ಯೂ ಸಂಘಗಳ ಅವಲಂಬನೆ ಜಾಸ್ತಿಯಾಗಿದೆ! ಏಕೆಂದರೆ ಶಿಫಾರಸ್ಸುಗಳಿಗಾಗಿ! ವ್ಯಕ್ತಿಪ್ರತಿಷ್ಠೆ ಗಾಗಿ! ಸ್ವಾರ್ಥ ಪರ ಆಲೋಚನೆಗಳನ್ನು ಸಾಫಲ್ಯಗೊಳಿಸಿಕೊ ಳ್ಳುವುದಕ್ಕಾಗಿ! ಸಂಘದ ಗುಮ್ಮನನ್ನು ತೋರಿಸಿ ಥಳುಕಿನ ವಸ್ತುಗಳನ್ನು ಪಡೆದುಕೊಳ್ಳುವುದು ಮತ್ತು ಆಸ್ತಿ ಸಂಗ್ರಹಣೆ ; ಆಸ್ತಿ ಸಂಗ್ರಹಣೆಯು ದುರಾಸೆಯ ಮೂಲದಿಂದ ಹುಟ್ಟಿ ಕೊಳ್ಳುತ್ತದೆ. ಇದೇ ಶೋಷಣೆಯ ಪ್ರಾಥಮಿಕ ಪರವಾನ ಗಿಯೂ ಹೌದು!

ಹಾಗಾಗಿ ಬುದ್ಧನ ಸಂಘದಲ್ಲಿ 'ಕಡ್ಡಾಯ'ಗಳೇ ಮಹತ್ವವಾಗಿದ್ದವು. ಈ ನಿಯಮಗಳನ್ನು ಯಾರಾದರೂ ಮುರಿದರೆ ಅವರು ಸಂಘದಿಂದ ಹೊರಗುಳಿಯಬೇಕಾಗಿತ್ತು. ಇಂತಹ ನಿಯಮಗಳಿಂದ ಮಾತ್ರ ಇಲ್ಲಿ ಸಮಾಜವನ್ನು ಸತ್ಪಥದಲ್ಲಿ ಕೊಂಡೊಯ್ಯಬಹುದೆಂದ. ಏಕೆಂದರೆ ಅವನ ಪ್ರೀತಿಯ ತತ್ತ್ವದ ಹಿನ್ನೆಲೆಯಲ್ಲಿ ಸಹೋದರತೆ, ಸಮಾನತೆ ಸ್ಥಾಪಿಸುವ ಉದ್ದೇಶವಿತ್ತು.

ಅವನ ದಯೆ, ಮೈತ್ರಿ, ಅಂತಃಕರುಣೆಯ ತತ್ತ್ವದ ಹಿನ್ನೆಲೆಯಲ್ಲಿ ಹಸಿದವರಿಗೆ ಅನ್ನ; ಅಸಹಾಯಕರಿಗೆ ಸಹಾಯದ ಹಸ್ತ; ನಿರ್ಗತಿಕರಿಗೆ ಆಸರೆ; ರೋಗಿಗಳಿಗೆ ಸಾಂತ್ವನ; ದ್ವೇಷಕ್ಕೆ ಪ್ರೀತಿ; ಅಸೂಯೆಗೆ ವಾಸ್ತವ ಜ್ಞಾನ; ಇವೆಲ್ಲವುಗಳಿಗೆ ಪೂರಕವಾಗಿ ರೂಪುಗೊಂಡ ದೊಡ್ಡ ಯೋಜನೆಯೇ ಬುದ್ಧನ ಸಂಘವಾಗಿತ್ತು.

ಮನುಷ್ಯನು ಹೃದಯವನ್ನು ಕ್ರಮೇಣ ಕ್ರಮವಾಗಿ ಸಂಪದ್ಭರಿಸಿಕೊಳ್ಳುವುದರಿಂದ ಒಬ್ಬರಿಂದೊಬ್ಬರಿಗೆ ಮನುಷ್ಯ ಆಸರೆಯಾಗುತ್ತಾನೆಂದು ಅವನು ಬಲವಾಗಿ ನಂಬಿದ್ದ.

ವೈಜ್ಞಾನಿಕ ಯುಗದ ಪರಿಣಾಮ ಇಂದು ಇಂತಹ ವಿಚಾರಗಳಿಗೆ ಮನುಷ್ಯನು ವಿಮುಖನಾಗಿದ್ದಾನೆ. ಇವೆಲ್ಲಾ ಇಂದು ಬಹುಶಃ ಮನುಷ್ಯನಿಗೆ ಅಮೂರ್ತ ಕಲ್ಪನೆಗಳಂತಾಗಿ ಭಾವಿಸಲ್ಪಡಬಹುದು.

...ಹೀಗೆ ಒಂದು ದಿನ ಬುದ್ಧನನ್ನು ಕಾಣಲು ಯಾರೋ ಒಬ್ಬ ಮನುಷ್ಯ ಬಂದ, ತಥಾಗತರಿಗೆ ನಮಸ್ಕರಿಸಿ ಬದುಕಿನ ದ್ವಂದ್ವಗಳ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕೆಂದಿದ್ದೇನೆ ಉತ್ತರಿಸುವಿರಾ? ಎಂಬುದಾಗಿ ಕೇಳಿದ. ಪ್ರತಿಯಾಗಿ ಬುದ್ಧನು 'ನಾನು ಹೇಳುವ ನಿಯಮಗಳನ್ನು ನೀವು ಮೂರು ತಿಂಗಳ ಕಾಲ ಪಾಲಿಸಿ ಆ ನಂತರ ಬನ್ನಿ ಖಂಡಿತವಾಗಿ ಉತ್ತರಿಸುವೆ' ಎಂದ. ಅಲ್ಲಿಯೇ ಬುದ್ಧನ ಪಕ್ಕದಲ್ಲಿದ್ದ ಮತ್ತೊಬ್ಬ ಹಳೇ ಬಿಕ್ಕು ಕಿಸಕ್ಕನೆ ನಕ್ಕ! ಆಗ ಆ ಮನುಷ್ಯನಿಗೆ ಗಾಬರಿಯಾಗಿ ಪ್ರಶ್ನೆ ಕೇಳಿದರೆ ತಪ್ಪೇನು ? ನೀನು ಯಾಕೆ ನಕ್ಕೆ? ಹೇಳಲೇಬೇಕೆಂದು ಹಠ ಹಿಡಿದ. ಆಗ ನಕ್ಕವನು 'ನೀವು ಯಾವ ರೀತಿ ಬಂದು ಪ್ರಶ್ನೆ ಕೇಳಿದಿರೋ ಹಾಗೆಯೇ ನಾನೂ ಒಂದು ವರ್ಷದ ಹಿಂದೆ ಬುದ್ಧನನ್ನು ಕೇಳಿದೆ. ಅವರು ನನಗೂ ನಿನ್ನ ಮಾದರಿಯಲ್ಲಿಯೇ ಮೋಸ ಮಾಡಿದರು. ಅವರು ಹೇಳಿದ ನಿಯಮಗಳನ್ನು ಪಾಲಿ ಸುತ್ತಾ ಬಂದಿದ್ದೇನೆ. ಈಗ ಕೇಳೋಣವೆಂದರೆ ಎಲ್ಲಾ ಪ್ರಶ್ನೆಗಳಿಗೆ ನನ್ನಲ್ಲಿಯೇ ಉತ್ತರಗಳಿವೆ. ನಾನು ಯಾವ ಪ್ರಶ್ನೆ ಕೇಳಲಿ ?'

ಬದುಕಿನ ನಿಯಮಗಳು ಹಾಗೂ ಧಾರ್ಮಿಕವಾದ ಕ್ರಮಶಿಕ್ಷಣವು ಮಾತ್ರ ಮಾನವನ ಜೀವನವನ್ನು ಸಾರ್ಥಕ ಗೊಳಿಸಬಲ್ಲವು.

೨. ಧ್ಯಾನಗಳಲ್ಲಿ

ಬುದ್ಧನ ಧ್ಯಾನಗಳು ನೂರಾರು ವಿಧಗಳಾಗಿದ್ದರೂ ಅವು ದೈವ ಮತ್ತು ಪರಮಾತ್ಮಕ್ಕೆ ಸಂಬಂಧಿಸಿದವಾಗಿ ರಲಿಲ್ಲ ಎನ್ನುವುದು ಬಹಳ ಮುಖ್ಯ. ಅವು ಮನಸ್ಸು ಮತ್ತು ಹೃದಯಕ್ಕೆ ಸಂಬಂಧಿಸಿದ್ದವು. ಮನುಷ್ಯನ ಬಂಧನ ಮತ್ತು ಬಿಡುಗಡೆಗೆ ಮನಸ್ಸೇ ಕಾರಣ ಆದರೂ ಚಾಂಚಲ್ಯದ ದೃಷ್ಟಿಯಿಂದ ಅದು ಕ್ಲಿಷ್ಟವೂ ಸಂಕೀರ್ಣವೂ ಹೌದು! ಬದುಕಿನ ಅನಿಶ್ಚಿತ ವಾಸ್ತವಗಳನ್ನು ನೀತಿಯೊಂದಿಗೆ ನಡೆಸಿಕೊಳ್ಳುವುದು ಕಷ್ಟವೆಂದೂ ಆತನಿಗೂ ಗೊತ್ತಿತ್ತು. ಎಲ್ಲಾ ದ್ವಂದ್ವಗಳನ್ನು ಆರೋಗ್ಯ ಪೂರ್ಣವಾಗಿ ಗ್ರಹಿಸಲು ಸ್ವಾಸ್ಥ್ಯ ಮನಸ್ಸು ಬೇಕಾದಾಗ ಧ್ಯಾನವು ಮಹತ್ವವಾದ ಅಂಶವಾಗಿತ್ತು.

ಇಲ್ಲಿ ಸ್ವಭಾವವು ನಿರ್ಭಾವವಾಗಿ, ಈ ಗತಿ ವಿಕಾಸ ವಾಗುತ್ತಾ ಅನಂತವಾಗುತ್ತಾ ಮಹಾಭಾವವಾಗುತ್ತದೆ. ಇದುವೇ ಮಹಾವಿವೇಕ ಈ ವಿವೇಕದಲ್ಲಿ ಅನಂತ ವಿಶ್ವವೇ ತಾನಾಗಿ ತಾನು ವಿಶ್ವವಾಗಿ ಸ್ಥಿರವಾಗಿರುತ್ತದೆ. ಇದು ಭಾವ ತೀವ್ರತೆಯ ಅನಂತತೆ ಅಲ್ಲ, ವಾಸ್ತವಿಕದಲ್ಲಿ ಅನಿವಾರ್ಯ ವಾಗಿರುವ ವಿವೇಕ, ಚೈತನ್ಯ ಮತ್ತು ಶಕ್ತಿಯ ಸಂಚಯವನ್ನು ಇಲ್ಲಿ ಪಡೆಯಬಹುದಾಗಿದೆ.

ಅನಿಶ್ಚಿತ ಪ್ರಪಂಚದಲ್ಲಿ ನಿರಂತರವಾಗಿ ಚಲನೆಯ ಬದಲಾವಣೆಯಲ್ಲಿ ಇದು ನಿಶ್ಚಿತವಾದ ಒಂದು ಅಮೂಲ್ಯ ಪೂರ್ಣತ್ವದ ಸ್ಥಿತಿಯನ್ನು ಬುದ್ಧ ಧ್ಯಾನದಲ್ಲಿ ಪಡೆದಿದ್ದ. □

ಮಹಿಳಾ ಸಬಲೀಕರಣ-
ಒಂದು ಸಮಾಜ ಶಾಸ್ತ್ರೀಯ ಚಿಂತನ

ಮಹಿಳೆಯರ ಅಶಕ್ತತೆಗಳು : ಭಾರತದ ಜನಸಂಖ್ಯೆಯಲ್ಲಿ ಶೇಕಡಾ ೪೮ ರಷ್ಟು ಪ್ರಮಾಣದಲ್ಲಿ ಮಹಿಳೆಯರಿದ್ದಾರೆ. ಭಾರತದ ೨೦೦೧ರ ಜನಗಣತಿ ಪ್ರಕಾರ ಭಾರತದಲ್ಲಿ ಒಟ್ಟು ೪೯ ಕೋಟಿ ೬೦ ಲಕ್ಷ ಮಹಿಳೆಯರಿದ್ದಾರೆ. ಆದರೂ ಅವರು ಬಡವರಲ್ಲಿಯೇ ಬಡವರಾಗಿದ್ದಾರೆ ಮಾತ್ರವಲ್ಲ; ಪೌಷ್ಟಿಕ ಆಹಾರ ಸೇವನೆಯಲ್ಲಿ ಹಿಂದಿದ್ದಾರೆ ಮತ್ತು ಬಹಳಷ್ಟು ಜನ ಹೊಟ್ಟೆ ತುಂಬ ಆಹಾರ ಸೇವನೆ ಮಾಡುತ್ತಿಲ್ಲ. ತಮ್ಮ ಮನೆತನದ ನಿರ್ವಹಣೆಯಲ್ಲಿ ಬಹಳಷ್ಟು ಜನರಿಗೆ ಎಂಥದೂ ಪಾತ್ರವಿಲ್ಲ, ಹಾಗೆಯೇ ಅವರ ಅಭಿಪ್ರಾಯಗಳನ್ನು ಆಲಿಸುತ್ತಿಲ್ಲ. ಅವರಿಗೆ ಅವರದೇ ಆದ ಆಸ್ತಿಯೂ ಇಲ್ಲ, ಬ್ಯಾಂಕ್ ಬ್ಯಾಲೆನ್ಸ್ ಇಲ್ಲ. ಹೀಗಾಗಿ ಭಾರತೀಯ ಸಮಾಜದಲ್ಲಿ ನಮ್ಮ ಮಹಿಳೆಯರು ಇಂದಿಗೂ ಅಭದ್ರ ಪರಿಸ್ಥಿತಿಯಲ್ಲಿ ಅಸಹಾಯಕ ಜೀವಿಗಳಾಗಿ ಬಾಳು ಮುಂದುವರಿಸಿದ್ದಾರೆಂಬುದನ್ನು ಮಾತ್ರ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ.

ಇತ್ತೀಚಿನ ೧೯ನೆಯ ಶತಮಾನದ ತನಕ ಎಲ್ಲ ರಾಷ್ಟ್ರಗಳ ಜನಜೀವನದಲ್ಲಿ ಮಹಿಳೆಯರಿಗೆ ಕೆಳಮಟ್ಟದ ಸ್ಥಾನಮಾನವನ್ನೇ ನೀಡಿಕೊಂಡು ಬರಲಾಗುತ್ತಿತ್ತು. ಮಹಿಳೆಯರು ಭಾವ ಜೀವಿಗಳು, ಅವೈಚಾರಿಕರು ಮತ್ತು ಅವಿಶ್ವಾಸಿಕರು ಎಂಬ ಕಾರಣಗಳನ್ನು ಮುಂದೊಡ್ಡಿ ಉಪೇಕ್ಷಿಸಲಾಗುತ್ತಿತ್ತಷ್ಟೇ ಅಲ್ಲ ಉಪಯೋಗರಹಿತರು ಎಂಬ ಕುತರ್ಕವನ್ನು ಬೆಳೆಸಿಕೊಂಡು ಬರಲಾಗಿತ್ತು. ಮಹಿಳಾ ಜಗತ್ತಿನ ಸ್ಥಿತಿಗತಿ ಬಗ್ಗೆ ಆಳವಾಗಿ ಅವಲೋಕಿಸಿದಾಗ ಮನದಟ್ಟಾದ ಒಂದು ಸಂಗತಿಯೆಂದರೆ ಪುರುಷ ಪ್ರಧಾನ ಸಮಾಜವು ಯಾವಾಗಲೂ ಮಹಿಳೆಯರನ್ನು ಕೀಳಾಗಿಯೇ ಕಂಡು ಅವರು ಸೇವಕರು, ಗುಲಾಮರು ಮತ್ತು ಪುರುಷರ ಅಡಿಯಾಳಾಗಿಯೇ ಬಾಳಬೇಕಾದಂಥವರು ಎಂಬ ಸಂಸ್ಕೃತಿಯನ್ನು ಬೆಳೆಸಿಕೊಂಡು ಬರಲಾಗಿದೆ. ಇದನ್ನು ಪುರುಷರು ಮಹಿಳೆಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವನ್ನು ನೀಡದೆ ತಮ್ಮಷ್ಟಕ್ಕೆ ಪಡೆದುಕೊಂಡರು. ಬೇರೆ ಶಬ್ದಗಳಲ್ಲಿ ಹೇಳಬಹುದಾದರೆ ಮಹಿಳೆಯರ ದುರ್ಬಲತೆಯನ್ನು ಅವರು ದುರುಪಯೋಗ ಪಡಿಸಿಕೊಂಡರು.

ಅದರಂತೆ ಕಾಲಾನುಕಾಲದಿಂದ ಪುರುಷರು ಮಹಿಳೆಯರನ್ನು ಕೀಳರಿಮೆಗೆ ಶೋಷಣೆಗೆ ಮತ್ತು ದುರ್ವ್ಯವಹಾರಗಳಿಗೆ ಗುರಿಪಡಿಸಿದರು. ಅವರು ತಲೆಯೆತ್ತಿ ಬಾಳುವ ಅವಕಾಶಗಳನ್ನೇ ನೀಡಲಿಲ್ಲ.

ಅಂಕಿ ಸಂಖ್ಯೆಗಳ ಆಧಾರದ ಮೇಲೆ ಹೇಳಬಹುದಾದರೆ ಭಾರತದಲ್ಲಿ ಪ್ರತಿ ಆರು ಗಂಟೆಗೊಬ್ಬ ಮಹಿಳೆಯನ್ನು ಸಜೀವ ದಹನದ ಮೂಲಕವೋ, ಅವರೇ ಸೀಮೆ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳುವಂತೆ ಮಾಡಿಯೋ ಅಥವಾ ಯಾವುದೋ ಬೇರೆ ರೀತಿಯ ಆತ್ಮಹತ್ಯೆ ಪ್ರಕರಣಕ್ಕೆ ತೊಡಗುವಂತೆ ಮಾಡಿಯೋ ಕೊಲ್ಲಲಾಗುತ್ತಿದೆ. ಪ್ರತಿ ೪೭ ನಿಮಿಷಗಳ ಅವಧಿಯಲ್ಲಿ ಒಬ್ಬ ಸ್ತ್ರೀಯ ಶೀಲಭಂಗವಾಗಿರುತ್ತದೆ. ಒಂದು ನೂರು ಜನರಲ್ಲಿ ಕನಿಷ್ಠ ೨೦ ಜನ ಮಹಿಳೆಯರಾದರೂ ಪ್ರತಿದಿನ ಗಂಡನ ಹೊಡೆತಕ್ಕೆ ಗುರಿಯಾಗುತ್ತಿರುತ್ತಾರೆ. ಒಂದು ವರ್ಷಕ್ಕೆ ಅಂದಾಜು ೬೫೦೦ ಜನ ಸ್ತ್ರೀಯರು ವರದಕ್ಷಿಣೆ ಕಾರಣದ ಸಾವನ್ನಪ್ಪುತ್ತಾರೆ.

ಮತ್ತೂ ಆಶ್ಚರ್ಯದ ಸಂಗತಿಯೇನೆಂದರೆ ಮಹಿಳಾವಾದ ಹುಟ್ಟಿಕೊಂಡಂತಹ ಅಮೇರಿಕಾದಲ್ಲಿಯೇ ಪ್ರತಿವರ್ಷ ೩೦ ರಿಂದ ೪೦ ಲಕ್ಷ ಮಹಿಳೆಯರನ್ನು ನಾಪತ್ತೆ ಮಾಡಲಾಗುತ್ತಿದೆ. ಗಂಡಂದಿರು ಅಥವಾ ಅತ್ತೆ ಮನೆಯವರೇ ಮಹಿಳೆಯ ಕೊಲೆಗೆ ಕಾರಣರಾಗುತ್ತಿದ್ದಾರೆ. ಮಹಿಳೆಯನ್ನು ಆಕೆಯ ಮನೆಯಲ್ಲಿಯೇ ಕೊಂದು ಹೂತುಬಿಡುವ ಘಟನೆಗಳು ಎಲ್ಲ ರಾಷ್ಟ್ರಗಳಲ್ಲಿ ನಡೆಯುತ್ತಿವೆಯೆಂದು ವಿಶ್ವಸಂಸ್ಥೆಯೇ ತನ್ನ ವರದಿಯಲ್ಲಿ ಈ ವಿಷಯವನ್ನು ಸ್ಥಿರಪಡಿಸಿದೆ.

ಬಿಹಾರ, ರಾಜಸ್ಥಾನ ಮೊದಲಾದ ರಾಜ್ಯಗಳಲ್ಲಿ ಇಂದಿಗೂ ಸತಿ ಹೋಗುವ ಪದ್ಧತಿಗಳು ಮುಂದುವರಿದುಕೊಂಡೇ ಇದೆ. ಯಾವುದೇ ಗಳಿಗೆಯಲ್ಲಿ ತನ್ನ ಮನಸ್ಸಿನ ಪ್ರಕಾರ ತಲಾಕ್ ಕೊಟ್ಟು ಮನಬಂದಷ್ಟು ಹೆಂಡರನ್ನು ಮಾಡಿಕೊಳ್ಳುವ ರೂಢಿಯಂತೂ ಕೆಲವೊಂದು ಸಮಾಜಗಳಲ್ಲಿ ಅಬಾಧಿತವಾಗಿ ನಡೆಯುತ್ತಿದೆ.

ಎಷ್ಟು ಹೋರಾಡಿದರೂ ತೀರದ ಬವಣೆ

ಭವಿಷ್ಯದ ಬದುಕಿನ ಜತೆಗಾರನನ್ನು ಆರಿಸಿಕೊಳ್ಳುವ ಹಕ್ಕನ್ನು ಯಾವ ಸಮಾಜವೂ ಮಹಿಳೆಯರಿಗೆ ಬಿಟ್ಟುಕೊಟ್ಟಿಲ್ಲ. ಆಕೆಯ ಜೀವನ ಸಂಗಾತಿಯನ್ನು ಆರಿಸುವ ಅಧಿಕಾರ ಬೇರೆಯವರಿಗೇನೇ ಇದೆ. ನಿಜ ಹೇಳಬೇಕೆಂದರೆ ಮನೆತನದ ಅಭಿವೃದ್ಧಿಯಲ್ಲಿ ಮಹಿಳೆಯೂ ಕೂಡ ತನ್ನದೇ ಆದ ಪಾತ್ರವನ್ನು ವಹಿಸಬಲ್ಲಳು ಎಂಬ ಸಂಗತಿಯನ್ನು ಭಾರತದಲ್ಲಿನ ಯಾವ ಜಾತಿಯೂ ನಂಬಲು ಸಿದ್ಧವಿಲ್ಲ.

ಇಲ್ಲಿಯವರೆಗೆ ಬೆಳೆದ ಸಂಪ್ರದಾಯವೇನೆಂದರೆ ಹೆಣ್ಣು ಮಕ್ಕಳನ್ನು ಹೆರಬೇಕು, ಹೊರಬೇಕು, ಸಾಕಿ ಬೆಳೆಸಬೇಕು ಮತ್ತು ಹಿರಿಯರ ಹಾಗೂ ವೃದ್ಧರ ಸೇವೆ ಮಾಡಿಕೊಂಡು ಎಲ್ಲರಿಗಾಗಿ ಅಡುಗೆ-ಉಡುಗೆಗಳನ್ನು ತಯಾರಿಸಬೇಕು ಅಷ್ಟೆ. ಇದಕ್ಕಿಂತ ಪುಣ್ಯದ ಕೆಲಸ ಆಕೆಗೆ ಮತ್ತಾವುದಿದೆ ?

ಹೆಣ್ಣು ಎಂದರೆ ಸಭ್ಯ, ಸೌಮ್ಯ, ಆಜ್ಞಾನುವರ್ತಿ ಮತ್ತು ಸೇವಾತತ್ಪರೆ, ಇದಕ್ಕೆ ವಿರುದ್ಧವಾಗಿ ಯಾರದರೂ ತಮ್ಮ ಮಾತನ್ನೇ ನಡೆಸಿದರೆ ಆಕೆ ಗಂಡುಬೀರಿ ಎನಿಸಿಕೊಳ್ಳುತ್ತಾಳೆ. ಹೇಳಿದ ಕೆಲಸ ಮಾಡದಿದ್ದರೆ ಒಂದು ಹೆಣ್ಣು ಎಲ್ಲರ ದೃಷ್ಟಿಯಲ್ಲಿ ಬಿದ್ದುಹೋಗಿ ಅಲಕ್ಷ ತಾತ್ಸಾರಗಳಿಗೆ ಆಕೆ ಗುರಿಯಾಗುತ್ತಾಳೆ. ಒಂದು ಹೆಣ್ಣಿನ ನೀಚಾನುಸಂಧಾನಕ್ಕೆ ಮತ್ತೊಂದು ಹೆಣ್ಣು ಪಾಲುಗೊಳ್ಳುವುದು ಮತ್ತೂ ದುಃಖದ ಸಂಗತಿಯಾಗಿದೆ.

ಮಹಿಳೆಯರ ಸಾಂಪ್ರದಾಯಿಕ ಅಶಕ್ತತೆಯು ಪತ್ನಿತ್ವದ ಮತ್ತು ತಾಯ್ತನದ ಅರ್ಹತೆಗೆ ಸಂಬಂಧಿಸಿದುದಾಗಿದೆ. ಮದುವೆ ರಹಿತ ಮತ್ತು ಬಂಜೆತನದ ಮಹಿಳೆಯರನ್ನು ಸಮಾಜವು ಅಗೌರವ ಮತ್ತು ಅವಲಕ್ಷಣ ದೃಷ್ಟಿಯಿಂದ ನೋಡುತ್ತಾರೆ. ಅದರಂತೆ ಹೆಚ್ಚು ಮೊತ್ತದ ವರದಕ್ಷಿಣೆ ತಂದ ಮಹಿಳೆಯನ್ನು ಬಹಳ ಆದರಭಾವದಿಂದ ಕಾಣಲಾಗುತ್ತಿದೆ. ತಂದೆ

ಮಹತ್ವ

ಮಹಿಳೆಯರಿಗೆ ನಿಜವಾದ ನ್ಯಾಯ ಮತ್ತು ಸಮಾನತೆ ದೊರೆಯಬೇಕಾದರೆ ಸಮಗ್ರವಾದ ಮತ್ತು ಪ್ರಬಲವಾದ ಆಂದೋಲನ ಕಾರ್ಯಕ್ರಮಗಳನ್ನೇ ರೂಪಿಸಬೇಕಾಗುತ್ತದೆ. ಮುಖ್ಯವಾಗಿ ಮಹಿಳೆಯರು ಸ್ವಾವಲಂಬನ ಜೀವನ ನಡೆಸುವಂತಾಗಬೇಕು. ಇದು ಉಚ್ಚ ಶಿಕ್ಷಣ ಮತ್ತು ಸ್ವಉದ್ಯೋಗ ಸೌಲಭ್ಯಗಳು ಪ್ರಾಪ್ತಿಯಾದಾಗ ಮಾತ್ರ ಪುರುಷರಿಗೆ ಸಮಾನವಾಗಿ ನಿಲ್ಲಲು ಸಾಧ್ಯವಾಗುತ್ತದೆ. ಸ್ವ ಉದ್ಧಾರದ ಕ್ರಮಗಳನ್ನು ಮಹಿಳಾ ಸಂಘಟನೆಗಳೇ ರೂಪಿಸಿಕೊಳ್ಳುವಂತೆ ಸರ್ಕಾರ ಅವರಿಗೆ ಎಲ್ಲ ರೀತಿಯ ಸೌಲಭ್ಯ ಮತ್ತು ಸವಲತ್ತು ಹಾಗೂ ಪ್ರೋತ್ಸಾಹವನ್ನು ನೀಡಬೇಕು.

○ ಡಾ|| ಅಂಬಾರಾವ ಉಪಳಾಂವಕರ
ಅನು : ಬಿ. ಮಹಾದೇವಪ್ಪ

ತಾಯಿಗಳಾದವರು ಸಹಿತ ತಮ್ಮ ಹೆಣ್ಣು ಮಕ್ಕಳನ್ನು ತಲೆಬಾರ ಎಂದು ಭಾವಿಸುತ್ತಾರೆ ಮಾತ್ರವಲ್ಲ ಸಧ್ಯವಾದಷ್ಟು ಬೇಗ ಒಮ್ಮೆ ಅವರನ್ನು ಯೋಗ್ಯವರನಿಗೆ ಕೊಟ್ಟು ಮದುವೆಮಾಡಿ ಕೈತೊಳೆದುಕೊಂಡರೆ ತಮ್ಮ ಜೀವನದ ಜವಾಬ್ದಾರಿ ಮುಗಿಯಿತೆಂದು ತಿಳಿದುಕೊಳ್ಳುತ್ತಾರೆ. ಹೆಚ್ಚು ಹೆಣ್ಣು ಮಕ್ಕಳಿದ್ದರ ಹೆಚ್ಚು ಹೊಣೆಗಾರಿಕೆಗಳು ಎಂಬ ತಿಳುವಳಿಕೆ ತಾಯಿ- ತಂದೆಯರದಾಗಿರುತ್ತದೆ. ಬಹಳ ದುರ್ದೈವದ ಮತ್ತು ದುಃಖದಾಯಕ ವಾದ ಸಂಗತಿಯೇನೆಂದರೆ ಸುಶಿಕ್ಷಿತ ದಂಪತಿಗಳು ಸಹಿತ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಕೂಸು ಹೆಣ್ಣು ಎಂದು ತಿಳಿದರೆ ಅದನ್ನು ತೆಗೆಯಿಸಿ ಹಾಕಲು ಮುಂದಾಗುತ್ತಿರುವುದು.

ವೈಧವ್ಯವಂತೂ ಹಿಂದೂ ನಾರಿಯರಿಗೆ ಒಂದು ಶಾಪವೆಂಬಂತೆ ಪರಿಗಣಿಸಲ್ಪಟ್ಟಿದೆ. ಈ ಕಳಂಕ ಗಂಡಸರಿಗೆ ಅಂಟಿಕೊಳ್ಳುವುದಿಲ್ಲ. ಹೆಂಡತಿ ಸತ್ತವನು ಅಥವಾ ವಿಧುರ ಮುಂದೆ ಮದುವೆ ಮಾಡಿಕೊಳ್ಳಲು ಸ್ವತಂತ್ರನಷ್ಟೇ ಅಲ್ಲ ತನ್ನ ಜೀವನ ಸಮಸ್ಯೆಯಲ್ಲಿ ಸಿಲುಕಿತು ಎಂದು ತಿಳಿದುಕೊಳ್ಳುವುದೇ ಇಲ್ಲ.

ಮಹಿಳೆಯರ ಅಶಕ್ತತೆಯ ನಿವಾರಣೆಗೆ ಕಾನೂನುಗಳ ರಚನೆ : ಭಾರತಕ್ಕೆ ಬ್ರಿಟಿಷರ ಆಗಮನದ ನಂತರ ಮತ್ತು ವಿಶೇಷವಾಗಿ ಬ್ರಿಟಿಷರಿಂದ ಸ್ವತಂತ್ರವಾದ ನಂತರ ದೇಶದಲ್ಲಿ ಮಹಿಳೆಯರ ಸುಭದ್ರತೆಯ ದೃಷ್ಟಿಯಿಂದ ಹಲವು ಕಾನೂನುಗಳನ್ನು ಮಾಡಲಾಗಿದೆ. ಉದಾಹರಣೆಗೆ ಬಾಲ್ಯ ವಿವಾಹ ಪದ್ಧತಿ ರದ್ದುಪಡಿಸಲಾಗಿದೆ. ವಿಧವಾ ಮರುವಿವಾಹಕ್ಕೆ ಅವಕಾಶ ಕಲ್ಪಿಸಲಾಗಿದೆ. ಒಬ್ಬ ಹೆಂಡತಿ ಇರಲಿಕ್ಕಾಗಿಯೂ ಗಂಡಸರ ಮರುಮದುವೆಯನ್ನು ನಿಷೇಧಿಸಲಾಗಿದೆ. ಹೆಣ್ಣು ಮಕ್ಕಳಿಗೂ ತಂದೆಯ ಆಸ್ತಿಯಲ್ಲಿ ಪಾಲು ದೊರೆಯುವ ಶಾರದಾ ಕಾನೂನು ಜಾರಿಗೊಳಿಸಲಾಗಿದೆ. ವರದಕ್ಷಿಣೆ ಪದ್ಧತಿ ಕಾನೂನು ಬಾಹಿರವೆಂದು ಸಾರಲಾಗಿದೆ. ಮಹಿಳೆಯರಿಗೆ ಪುನರ್ವಿವಾಹದ ಮತ್ತು ಡೈವೋರ್ಸಿನ ಅಧಿಕಾರ ಕಲ್ಪಿಸಲಾಗಿದೆ. ಹೀಗೆ ಮಹಿಳೆಯರ ಸಾಂಪ್ರದಾಯಿಕ ಅಶಕ್ತತೆಯನ್ನು ನಿವಾರಣೆ ಮಾಡಲು ಸಾಕಷ್ಟು ಕಾನೂನುಗಳನ್ನು ಪಾಸು ಮಾಡಲಾಗಿದೆ.

ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು : ಅದೇ ವೇಳೆಯಲ್ಲಿ ಭಾರತ ಸರ್ಕಾರವು ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಶಿಕ್ಷಣ ಪ್ರಸಾರದಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ತಾಲೂಕ ಮತ್ತು ಹಳ್ಳಿ ಮಟ್ಟದಲ್ಲಿಯೂ ಬಾಲಕಿಯರ ಶಾಲೆ ಕಾಲೇಜುಗಳಿಗಾಗಿ ಲಕ್ಷಗಟ್ಟಲೆ ರೂಪಾಯಿ ವೆಚ್ಚ ಮಾಡುತ್ತಿದೆ. ಉಚ್ಚ ಶಿಕ್ಷಣ ದೊರೆತುದರಿಂದ ನಮ್ಮ ಮಹಿಳೆಯರೂ ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಂಡಿದ್ದಾರೆ. ಹೀಗಾಗಿ ನಮ್ಮ ಮಹಿಳೆಯರು ಅನೇಕ ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶಗಳ ಬಾಗಿಲು ತೆರೆದಂತಾಗಿದೆ. ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ ಪ್ರಜಾಪ್ರಭುತ್ವ ಪದ್ಧತಿ, ಆಧುನೀಕರಣ ಪ್ರಕ್ರಿಯೆಗಳು ಮತ್ತು ಜನಕಲ್ಯಾಣದಂತಹ ಕಾರ್ಯಕ್ರಮಗಳ ದೆಸೆಯಿಂದ ಈಗೀಗ ಮಹಿಳೆಯರ ಸ್ಥಾನಮಾನ ಮತ್ತು ಪಾತ್ರದ ಬಗ್ಗೆ ಬಹಳಷ್ಟು ಬದಲಾವಣೆಗಳು ಬಂದಿವೆ.

ಆದರೂ ಸಹಿತ ಬಹಳಷ್ಟು ಮಹಿಳೆಯರು ಮತ್ತು ಕೆಲಮಟ್ಟಿಗೆ ಸುಶಿಕ್ಷಿತ ಮತ್ತು ಉದ್ಯೋಗಸ್ಥ ಮಹಿಳೆಯರೂ ಸೇರಿ- ಅವರಿಗೆ ಪುರುಷನ ಯಜಮಾನತ್ವದಿಂದ ಪಾರಾಗಲು ಸಾಧ್ಯವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಸಾರ್ವತ್ರಿಕವಾಗಿ ಮಹಿಳೆಯರು ಇಂದಿನ ಭಾರತದಲ್ಲಿ ಪುರುಷರ ದಬ್ಬಾಳಿಕೆಯಿಂದ ಹೊರಬರಲು ಸಾಕಷ್ಟು ಸಬಲೀಕರಣ ನಡೆದಿಲ್ಲ

ವಾಸ್ತವಿಕವಾಗಿ ಮಹಿಳಾ ಸಬಲೀಕರಣವೆಂದರೆ ಪುರುಷ ದುರ್ಬಲೀಕರಣವಲ್ಲ, ಇದೊಂದು ರೀತಿಯಲ್ಲಿ ಕುಟುಂಬದಲ್ಲಿನ ಹೊಣೆಗಾರಿಕೆಗಳ ಪುನರ್ ಹಂಚಿಕೆ, ಕಾಲಮಾನಕ್ಕೆ ತಕ್ಕಂತೆ ನಡತೆಗಳ ಪುನರ್ ಮೌಲೀಕರಣ, ಹೊಸ ರೀತಿಯ ಹೊಂದಾಣಿಕೆ, ಮತ್ತು ಪರಸ್ಪರರ ಯೋಗಕ್ಷೇಮ ಬಯಸುವ ಹೊಸ ದೃಷ್ಟಿಕೋನದ ಅಳವಡಿಕೆ. ಒಟ್ಟು ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಪ್ರಜಾಸತ್ತಾತ್ಮಕ ತತ್ವಗಳನ್ನು ಜಾರಿಗೊಳಿಸುವುದೇ ಮಹಿಳಾ ಸಬಲೀಕರಣದ ಪರಮೋದ್ದೇಶ ಎಂದು ಹೇಳಬಹುದು.

ಕೇವಲ ಕಾನೂನು ಮಾಡುವುದರಿಂದ ಮತ್ತು ತಾತ್ಕಾಲಿಕ ಪರಿಹಾರದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರಿಂದ ಕಾಲಾನುಕಾಲದ ಪುರುಷ ಪ್ರಧಾನ ವ್ಯವಸ್ಥೆ ಬದಲಾಗಲಾರದು. ನಮ್ಮ ಮಹಿಳೆಯರಿಗೆ ನಿಜವಾದ ನ್ಯಾಯ ಮತ್ತು ಸಮಾನತೆ ದೊರೆಯಬೇಕಾದರೆ ಸಮಗ್ರವಾದ ಮತ್ತು ಪ್ರಬಲವಾದ ಆಂದೋಲನ ಕಾರ್ಯಕ್ರಮಗಳನ್ನೇ ರೂಪಿಸಬೇಕಾಗುತ್ತದೆ. ಮುಖ್ಯವಾಗಿ ಮಹಿಳೆಯರು ಸ್ವಾವಲಂಬನ ಜೀವನ ನಡೆಸುವಂತಾಗಬೇಕು.

ಇದು ಉಚ್ಚ ಶಿಕ್ಷಣ ದೊರೆತಾಗಲೇ ಮತ್ತು ಸ್ವ ಉದ್ಯೋಗ ಸೌಲಭ್ಯಗಳು ಪ್ರಾಪ್ತಿಯಾದಾಗಲೇನೇ ಪುರುಷರಿಗೆ ಸಮಾನವಾಗಿ ನಿಲ್ಲಲಿಕ್ಕೆ ಸಾಧ್ಯವಾಗುತ್ತದೆ. ಅಂತಹ ಬಹುಮುಖ ಸುಧಾರಣೆಯ ಕಾರ್ಯಕ್ರಮಗಳನ್ನು ಸರ್ಕಾರ ಆಲೋಚಿಸಬೇಕು. ಸ್ವ ಉದ್ಧಾರದ ಕ್ರಮಗಳನ್ನು ಮಹಿಳಾ ಸಂಘಟನೆಗಳೇ ರೂಪಿಸಿಕೊಳ್ಳುವಂತೆ ಸರ್ಕಾರ ಅವರಿಗೆ ಎಲ್ಲ ರೀತಿಯ ಸೌಲಭ್ಯ ಮತ್ತು ಸವಲತ್ತು ಹಾಗೂ ಪ್ರೋತ್ಸಾಹವನ್ನು ನೀಡಬೇಕು. ಮಹಿಳೆಯರಿಗೆ ತಮ್ಮದೇ ಆದ ಭಾವನಾ ಸಮುಚ್ಚಯ, ತಾತ್ವಿಕತೆ ಮತ್ತು ತಂತ್ರಗಾರಿಕೆ ಸಾಧ್ಯವಾದರೆ ಅವರೂ ಸಮಾಜದಲ್ಲಿ ತಮ್ಮದೇ ಆದ ಒಂದು ಛಾಪನ್ನು ಮೂಡಿಸಿಯಾರು.

ಮಹಿಳಾ ಸಬಲೀಕರಣದ ಕಲ್ಪನೆ : ವಾಸ್ತವಿಕವಾಗಿ ಮಹಿಳಾ ಸಬಲೀಕರಣವೆಂಬುದು ಇತ್ತೀಚಿನ ಕಲ್ಪನೆ, 'ಮಹಿಳಾ ಸಬಲೀಕರಣ' ವೆಂಬ ಕಾರ್ಯಕ್ರಮವನ್ನು ವಿಶ್ವಸಂಸ್ಥೆಯು ಈಚಿನ ಕೆಲ ವರ್ಷಗಳಿಂದ ಚಾಲ್ತಿಯಲ್ಲಿ ತಂದಿತು. ಮಹಿಳಾ ಸಬಲೀಕರಣವು ಪುರುಷ ಪ್ರಾಧಾನ್ಯತೆಗೆ ಮಂಗಳಹಾಡಿ ಮಹಿಳಾ ಲೋಕದಲ್ಲಿ ಸಂಪೂರ್ಣ ಆತ್ಮವಿಶ್ವಾಸ, ಸ್ವಾತಂತ್ರ್ಯ ಮನೋಭಾವ ಮತ್ತು ಸಾಮರ್ಥ್ಯವನ್ನು ಮೂಡಿಸಬಹುದೆಂಬ ಅಂಶವನ್ನು ಈಗೀಗ ತೀವ್ರತರವಾಗಿ ಅನುಭವಕ್ಕೆ ತಂದುಕೊಳ್ಳಲಾಗುತ್ತಿದೆ. ಸ್ತ್ರೀ-ಪುರುಷ ಭೇದಭಾವ ಮಹಿಳಾ ಸಬಲೀಕರಣದಿಂದಲೇ ಕೊನೆಗೊಳ್ಳಬಹುದೆಂಬುದನ್ನು ಕಂಡುಕೊಳ್ಳಲಾಗುತ್ತಿದೆ.

'ಸಬಲೀಕರಣ'ದ ಅರ್ಥ ಒಬ್ಬರನ್ನು ಬಲಗೊಳಿಸುವುದು ಮತ್ತು ಜೀವನದ ಸವಾಲುಗಳನ್ನು ಎದರಿಸಲಿಕ್ಕೆ ಬೇಕಾದ ಧೈರ್ಯ ಸಾಹಸಗಳನ್ನು ತುಂಬುವುದು ಎಂಬುದಾಗುತ್ತದೆ. ಒಬ್ಬರು ಬಲಗೊಳ್ಳುವುದರಿಂದ ಅವರು ತಮ್ಮ ಅಶಕ್ತತೆ ಅಸಾಮರ್ಥ್ಯ ಅನಾನುಕೂಲತೆ ಅಸಮಾನತೆಗಳನ್ನು ಕೊಡಹಿ ಆತ್ಮ ನಿರ್ಭರ ಹೊಂದುತ್ತಾರೆ. ಬಹು ವ್ಯಾಪಕ ಅಥವಾ ಬಲಗೊಳ್ಳುವಿಕೆಯು ಮಹಿಳೆಯರಿಗೆ ಪ್ರತಿಯೊಂದು ಕ್ಷೇತ್ರದ ಜೀವನವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಆಸ್ಪದ ಮಾಡಿಕೊಡುತ್ತದೆ. ಸಶಕ್ತ ಹೊಂದಿದ ಮಹಿಳೆಯರು ಹೊಸ ಹೊಸ ಜ್ಞಾನಕ್ಷೇತ್ರಗಳನ್ನು ಹುಡುಕಿಕೊಂಡು ಹೋಗುತ್ತಾರೆ. ತಮಗೇನು ಬೇಕು ಎಂಬುದನ್ನು ಅರಿತುಕೊಳ್ಳುತ್ತಾರೆ ಅವರಿಗೆ ಸ್ವಯಂ ನಿರ್ಧಾರದ ಮನೋಬಲವಲ್ಲದೆ ತಮ್ಮ ಜೀವನವನ್ನು ತಾವೇ ಯೋಜಿಸಿಕೊಳ್ಳುವ ಸಾಮರ್ಥ್ಯವನ್ನು ಅಳವಡಿಸಿಕೊಳ್ಳುತ್ತಾರೆ. ತಮ್ಮ ಮೇಲೆ ತಲೆ ತಲಾಂತರದಿಂದ ಹೇರಲಾದ ಕಂದಾಚಾರಗಳನ್ನು, ಮೂಢನಂಬಿಕೆಗಳನ್ನು, ರೀತಿ ರಿವಾಜುಗಳನ್ನು ಕಿತ್ತಿಹಾಕಿ, ಹತ್ತಾರು ಅಡ್ಡಿ ಆತಂಕಗಳನ್ನು ಹೇಗೆ ನಿವಾರಿಸಿಕೊಳ್ಳಬೇಕೆಂಬ ನಿಯಂತ್ರಣ ಶಕ್ತಿಯನ್ನು ಅವರು ಸಂಪಾದಿಸಿಕೊಳ್ಳುತ್ತಾರೆ.

ಮಹಿಳಾ ಸಬಲೀಕರಣವೆಂದರೆ ಮಹಿಳೆಯರನ್ನು ಪುರುಷ ಸಮಾಜದ ವಿರುದ್ಧ ಎತ್ತಿ ಕಟ್ಟುವುದಲ್ಲ. ನಿಜವಾಗಿಯೂ ಇದೊಂದು ಹೆಣ್ಣು ಗಂಡುಗಳು ಪರಸ್ಪರರನ್ನು ಅರ್ಥಮಾಡಿಕೊಂಡು ಮತ್ತು ಪರಸ್ಪರರನ್ನು ಗೌರವಿಸಿ ಸುಖ ಸೌಹಾರ್ದತೆಯಿಂದ ಬಾಳುವ ಆಧುನಿಕ ಕಾಲದ ಕರೆ, ವಾಸ್ತವಿಕವಾಗಿ ಮಹಿಳಾ ಸಬಲೀಕರಣವೆಂದರೆ ಪುರುಷ ದುರ್ಬಲೀಕರಣವಲ್ಲ, ಇದೊಂದು ರೀತಿಯಲ್ಲಿ ಕುಟುಂಬದಲ್ಲಿನ ಹೊಣೆಗಾರಿಕೆಗಳ ಪುನರ್ ಹಂಚಿಕೆ, ಕಾಲಮಾನಕ್ಕೆ ತಕ್ಕಂತೆ ನಡತೆಗಳ ಪುನರ್ ಮೌಲೀಕರಣ, ಹೊಸ ರೀತಿಯ ಹೊಂದಾಣಿಕೆ, ಮತ್ತು ಪರಸ್ಪರರ ಯೋಗಕ್ಷೇಮ ಬಯಸುವ ಹೊಸ ದೃಷ್ಟಿಕೋನದ ಅಳವಡಿಕೆ.

ಒಟ್ಟು ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಪ್ರಜಾಸತ್ತಾತ್ಮಕ ತತ್ವಗಳನ್ನು ಜಾರಿಗೊಳಿಸುವುದೇ ಮಹಿಳಾ ಸಬಲೀಕರಣದ ಪರಮೋದ್ದೇಶ ಎಂದು ಹೇಳಬಹುದು. ಮಹಿಳೆಯು ಸಬಲಗೊಂಡಾಗ ತನ್ನಷ್ಟಕ್ಕೆ ತಾನೇ ಮದುವೆ ಮತ್ತು ಪರಿವಾರದ ಕಲ್ಪನೆಗಳಲ್ಲಿ ಮತ್ತು ಲಿಂಗಭೇದ ನಿರ್ನಾಮವಾಗಿ ಮರು ಮದುವೆಯ ವಿಚಾರ ಹೊಸ ಸ್ವರೂಪವನ್ನು ಪಡೆದುಕೊಳ್ಳುತ್ತದೆ.

ಇದೇ ಸಂದರ್ಭದಲ್ಲಿ ನಾವು ಇನ್ನೊಂದು ಸಂಗತಿಯನ್ನೂ ಮನದಟ್ಟು ಮಾಡಿಕೊಳ್ಳಬೇಕು. ಮಹಿಳಾ ಸಬಲೀಕರಣದ ಪರಿಣಾಮ ಸ್ವರೂಪದಲ್ಲಿ ಮಹಿಳೆಯರ ಮೇಲೆ ಹೆಚ್ಚಿನ ಜವಾಬ್ದಾರಿಗಳು ಬರುತ್ತವೆ. ಗಂಡನಿಗೆ ಡೈವೋರ್ಸ್ ಕೊಡುವುದು ಸುಲಭ, ಅದರ ಪರಿಣಾಮಗಳನ್ನು ಎದುರಿಸುವುದು ಕರ ಕಷ್ಟ. ಗಂಡಸಿನ ಯಜಮಾನಿಕೆಯನ್ನು ಧಿಕ್ಕರಿಸಿದಾಗ ಆತ ತೋರಬಹುದಾದ ಅಸಹಕಾರ ಪ್ರವೃತ್ತಿಯನ್ನು ಎದುರಿಸಲು ಮಾನಸಿಕ ಸಿದ್ಧತೆ ಮಾಡಿಕೊಂಡಿರಬೇಕಾಗುತ್ತದೆ. ಕೋರ್ಟು-ಕಚೇರಿಗಳ ವ್ಯಾಜ್ಯಗಳನ್ನು ಎದುರಿಸಬೇಕಾಗುತ್ತದೆ. ಅದರಂತೆ ಗೃಹಕೃತ್ಯಗಳು, ಸಾಮಾಜಿಕ, ರಾಜಕೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಪೂರ್ಣಕಾಲಿಕವೋ ಅರೆಕಾಲಿಕವೋ ಉದ್ಯೋಗ ವ್ಯವಹಾರಗಳನ್ನು ಕೈಕೊಳ್ಳಲೇಬೇಕಾಗುತ್ತದೆ.

ಮಹಿಳಾ ಸಬಲೀಕರಣ ಕಾರ್ಯ ವಿಧಾನಗಳಲ್ಲಿ ಸಲಹಾತ್ಮಕ ಅಂಗವೂ ಒಳಗೊಂಡಿರಬೇಕಾಗುತ್ತದೆ. ಗಂಡ ಹೆಂಡಿರ ಮಧ್ಯೆ ಮತ್ತು ಸೊಸೆ ಹಾಗೂ ಅತ್ತೆ-ಮಾವಂದಿರ ಮಧ್ಯೆ ಒಳ ಜಗಳಗಳು ಕಾಣಿಸಿಕೊಂಡಾಗ ಅವುಗಳನ್ನು ಬಗೆಹರಿಸುವ ಒಂದು ಸಂಸ್ಥೆ ಬೇಕಾಗುತ್ತದೆ. ಒಟ್ಟಿನಲ್ಲಿ ಹೇಳಬಹುದಾದರೆ ಮಹಿಳಾ ಸಬಲೀಕರಣ ಭಾರತೀಯ ಸಮಾಜದ ಸಂಪೂರ್ಣ ಕಾಯಕಲ್ಪ ಚಿಕಿತ್ಸೆಯನ್ನೇ ಬೇಡುತ್ತದೆ ಎನ್ನಬಹುದು.

ಮಹಿಳಾ ಸಬಲೀಕರಣದ ಮಾರ್ಗೋಪಾಯಗಳು : ಮಹಿಳಾ ಸಬಲೀಕರಣ ಎಂಬ ಕಲ್ಪನೆಯನ್ನು ನಾವು ಶಿಕ್ಷಣ, ಉದ್ಯೋಗ ಮತ್ತು ಮಹಿಳಾ ಸಂಘಟನೆಯಂತಹ ಮಾರ್ಗೋಪಾಯಗಳಿಂದ ಸಾಕಾರಗೊಳಿಸಬೇಕಾಗುತ್ತದೆ.

೧. ಶಿಕ್ಷಣ : ಆಧುನಿಕ ಸಮಾಜದಲ್ಲಿ ಶಿಕ್ಷಣವು ಒಂದು ಪ್ರಬಲ ಅಸ್ತ್ರ ಎಂಬ ಪರಿಗಣನೆಗೆ ಪಾತ್ರವಾಗಿದೆ. ಶಿಕ್ಷಣದ ಬಗೆಗಿನ ನಮ್ಮ ರಾಷ್ಟ್ರೀಯ ನೀತಿಯು (National Policy on Education) ಮಹಿಳಾ ಸಬಲೀಕರಣಕ್ಕೆ ಶಿಕ್ಷಣವು ಅನಿವಾರ್ಯವಾದ ಒಂದು ಪ್ರಕ್ರಿಯೆ ಎಂಬುದನ್ನೇ ಎತ್ತಿ ಹೇಳಿದೆ.

ಮಹಿಳಾ ಸಾಕ್ಷರತೆ ಎಂದರೆ ಓದುವುದು, ಬರೆಯುವುದು ಮತ್ತು ಲೆಕ್ಕ ಮಾಡುವುದು ಎಂಬವುಗಳನ್ನು ಮೂಲಭೂತ ಅಗತ್ಯತೆಗಳೆಂದು ಪರಿಗಣಿಸಲಾಗಿದೆ. ಒಬ್ಬ ಸಾಕ್ಷರತೆ ಹೊಂದಿದ ಮಹಿಳೆಯು ರಶೀದಿಗಳನ್ನು ಓದಿಕೊಳ್ಳುತ್ತಾಳೆ. ದಿನಬಳಕೆಯ ವಸ್ತುಗಳ ಮೇಲಿನ ಅಥವಾ ಉಪಕರಣಗಳ ಮೇಲಿನ ಮುದ್ರಿತ ದರಗಳನ್ನು ಗಮನಿಸುತ್ತಾಳೆ ಮತ್ತು ತನ್ನ ಕೌಟುಂಬಿಕ ಕೊಡು-ಕೊಳ್ಳುವಿಕೆಯ ಲೆಕ್ಕಗಳನ್ನು ಇಟ್ಟುಕೊಳ್ಳುತ್ತಾಳೆ. ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಈ ವಿದ್ಯಾವಂತಿಕೆಯು ಅವಳಲ್ಲಿ ಆತ್ಮವಿಶ್ವಾಸವನ್ನು ತುಂಬುವುದಲ್ಲದೆ ಬಾಹ್ಯ ಜಗತ್ತಿನ ಬಗೆಗೆ ಧೈರ್ಯ ಮತ್ತು ಎಚ್ಚರಿಕೆಯನ್ನು ತಂದುಕೊಡುತ್ತದೆ. ಶಿಕ್ಷಣದ ಮೂಲಕ ಮಹಿಳೆ ಪದವಿ ಅಥವಾ ಪ್ರಮಾಣ ಪತ್ರಗಳನ್ನು ಗಳಿಸಿಕೊಂಡರೆ ನೆರಳಿನಲ್ಲಿನ ಉದ್ಯೋಗಗಳು ಅವಳಿಗೆ ತಾನಾಗಿ ಲಭಿಸುತ್ತವೆ. ಇದರ ಜತೆಗೆ ಶಿಕ್ಷಣವು ಮಹಿಳೆಯರನ್ನು ಗಣ್ಯಮಾನ್ಯರನ್ನಾಗಿ ಮಾಡುವುದಲ್ಲದೆ ಅವರ ವ್ಯಕ್ತಿತ್ವ ವಿಕಾಸವಾಗಿ ಸಾರ್ವಜನಿಕ ಜೀವನದಲ್ಲಿ ಆಧುನಿಕ ಸೌಲಭ್ಯಗಳು ಅವಳಿಗೆ ತಾನಾಗಿ ಕೈಬೀಸಿ ಕರೆಯುತ್ತವೆ.

ಹೀಗೆ ಸಮಾನವಾದ ಶಿಕ್ಷಣಾವಕಾಶಗಳು ಸಮಾಜದಲ್ಲಿ ಮಹತ್ತರ ಪಾತ್ರವನ್ನಾಳುವ ಶಕ್ತಿ ಸಾಮರ್ಥ್ಯಗಳನ್ನು ಮಹಿಳೆಯರಿಗೆ ತಂದುಕೊಡುತ್ತವೆ. ಅಷ್ಟೇ ಏಕೆ ಜತೆ ಜತೆಗೆ ಕುಟುಂಬದಲ್ಲಿಯೂ ಕೂಡ ಶಿಕ್ಷಣವು ಒಂದು ಗೌರವ ಸ್ಥಾನ ನೀಡಿ ಆಂತರಿಕ ಕಲಹಗಳನ್ನು ದೂರಮಾಡುವ ಧೈರ್ಯ ಸಾಹಸಗಳೂ ಅವಳಲ್ಲಿ ತಲೆದೋರುತ್ತವೆ. ಎಂತಹ ಪಕ್ಷಪಾತ ನಿಷಿದ್ಧಗಳನ್ನು ಅವಳು ಧೈರ್ಯದಿಂದ ಮೆಟ್ಟಿ ನಿಲ್ಲುತ್ತಾಳೆ. ಶಿಕ್ಷಣದ ಮುಖ್ಯ ಪ್ರಭಾವವೆಂದರೆ ತಲೆ ತಲಾಂತರದ ಲಿಂಗ ತಾರತಮ್ಯವನ್ನು ಕೊನೆಗಾಣಿಸಿ ಅರ್ಹತೆಗೆ ಮಹತ್ವ ತಂದುಕೊಡುತ್ತದೆ.

ಉದ್ಯೋಗ : ಹಣಗಳಿಕೆಯ ಉದ್ಯೋಗದ ಅರ್ಥ ಆರ್ಥಿಕ ಸಾಮರ್ಥ್ಯವೇ ಆಗಿದೆ. ಮೈ ಮುರಿದು ದುಡಿದು ಗಳಿಸುವುದರಿಂದ ಯೋಗ್ಯತೆಯ ಪ್ರಶ್ನೆ ತನ್ನಷ್ಟಕ್ಕೆ ಬಗೆಹರಿದಿರುತ್ತದೆ. ಸರಕಾರಿ ಅಥವಾ ಅರೆ ಸರಕಾರಿ ನೌಕರಿಗಳಿಂದ ಇಲ್ಲವೆ ಉದ್ಯಮಶೀಲತೆ ಅಥವಾ ವ್ಯವಹಾರ ಶೀಲತೆಗಳಿಂದ ಹೆಣ್ಣು ಹಣ ಸಂಪಾದಿಸಲು ತೊಡಗಿದರೆ ಖರ್ಚುಗಳಿಗಾಗಿ ಪುರುಷರನ್ನು ಅವಲಂಬಿಸುವ ತೊಂದರೆ ತಾಪತ್ರಯಗಳೇ ಇರುವುದಿಲ್ಲ.

ಸಂಪನ್ಮೂಲಗಳು ತನ್ನ ಕೈಯಲ್ಲಿ ಇರದ ಪರಿಸ್ಥಿತಿಯಲ್ಲಿ ಮಹಿಳೆ ಗಂಡಸಿನ ದಬ್ಬಾಳಿಕೆ ಶೋಷಣೆಗಳನ್ನು ಅನಿವಾರ್ಯವಾಗಿ ಮೂಕದನಗಳಂತೆ ಸಹಿಸಿಕೊಳ್ಳಬೇಕಾಗುತ್ತದೆ. ಮನೆಯ ಹೊರಗಡೆ ಒಂದು ಧನ ಸಂಪಾದನೆಯ ಕೆಲಸವಿದ್ದರೆ ಮಹಿಳೆಯರಿಗೆ ಆತ್ಮ ನಿರ್ಭರತೆ ತಾನಾಗಿ ದೊರೆಯುತ್ತದೆ ಮಾತ್ರವಲ್ಲ ಎಲ್ಲಿ ಅವರು ತಮ್ಮ ಮೇಲೆ ಸೇಡು ತೀರಿಸಿಕೊಳ್ಳುವರೋ ಎಂಬ ಭಯದಿಂದ ಗಂಡನೊಡನೆ ಬೇರೆ ಕುಟುಂಬದ ಜನರೂ ಕೂಡ ಹೀಗಳೆಯಲು ಇಲ್ಲವೆ ತುಚ್ಛೀಕರಿಸಲು ಹಿಂದೆ ಮುಂದೆ ನೋಡುತ್ತಾರೆ.

ಸ್ವಾತಂತ್ರ್ಯ ಪ್ರಾಪ್ತಿಯ ಕಾಲದಿಂದಲೂ ನಮ್ಮ ಭಾರತ ಸರ್ಕಾರವು ಮಹಿಳೆಯರಿಗೆ ಪ್ರತಿಯೊಂದು ದೃಷ್ಟಿಯಿಂದಲೂ ಸಹಾಯ ಮಾಡಲು ಹವಣಿಸುತ್ತಿದೆ. ಸಂಘಟಿತ ಅಥವಾ ಅಸಂಘಟಿತ ಕ್ಷೇತ್ರಗಳಲ್ಲಿ ಮಹಿಳೆಯರಿಗೆ- ಅವರು ಸುಶಿಕ್ಷಿತರೇ ಆಗಿರಲಿ ಅಥವಾ ಅಶಿಕ್ಷಿತರೇ ಆಗಿರಲಿ-ಉದ್ಯೋಗಗಳನ್ನು ಒದಗಿಸಿ ಸ್ವಾವಲಂಬನ ಕಲ್ಪಿಸಲು ಪ್ರಯತ್ನಮಾಡುತ್ತಿದೆ. ಶಿಕ್ಷಣ ಹೊಂದಿದ ಮಹಿಳೆಯರು ಶಾಲೆ, ಕಾಲೇಜು, ಕಾರ್ಯಾಲಯಗಳು, ಆಸ್ಪತ್ರೆಗಳು, ಮೊದಲಾದವುಗಳಲ್ಲಿ ಆದ್ಯತೆಯಿಂದ ನೌಕರಿಗಳನ್ನು ಪಡೆಯುತ್ತಿದ್ದಾರೆ. ಇಷ್ಟು ಮಾತ್ರವಲ್ಲ ಅದೇ ನೆರಳಲ್ಲಿನ ನೌಕರಿಗಳೆನಿಸುವ ಪೊಲೀಸ್ ಅಧಿಕಾರಿಗಳು, ಪೊಲೀಸ್ ಪೇದೆಗಳು, ಬಸ್ ಸಂಚಾಲಕರು ಮೊದಲಾದ ನೌಕರಿಗಳೂ ವಿದ್ಯಾವಂತ ಮಹಿಳೆಯರಿಗೆ ದೊರಕುತ್ತಿವೆ.

> **ಶಿಕ್ಷಣದ ಮುಖ್ಯ ಪ್ರಭಾವವೆಂದರೆ ತಲೆ ತಲಾಂತರದ ಲಿಂಗ ತಾರತಮ್ಯವನ್ನು ಕೊನೆಗಾಣಿಸಿ ಅರ್ಹತೆಗೆ ಮಹತ್ವ ತಂದುಕೊಡುತ್ತದೆ.**

ಇಷ್ಟೆಲ್ಲ ಪದವೀಧರ ಬಾಲಕಿಯರು ಸರ್ಕಾರದ ಸ್ವಯಂ ಉದ್ಯೋಗ ಯೋಜನೆಯ ಲಾಭ ಪಡೆದು ವ್ಯಾಪಾರೋದ್ಯಮ ಕ್ಷೇತ್ರಗಳನ್ನು ಪ್ರವೇಶಿಸುವುದರ ಜೊತೆಗೆ ಆಟೋ ಚಾಲನೆ, ಮೊದಲಾದವುಗಳಿಗೂ ಕೈ ಹಾಕುತ್ತಿದ್ದಾರೆ. ಇಂಥ ವರನ್ನು ನಾವು ಪಟ್ಟಣ ನಗರ ಪ್ರದೇಶಗಳಲ್ಲಿ ಮಾತ್ರ ಕಾಣಬಹುದು.

ಇನ್ನು ಅಸಂಖ್ಯಾತ ಗ್ರಾಮಾಂತರ ಮಹಿಳೆಯರಿಗಾಗಿಯೂ ಸರ್ಕಾರ ಸ್ವಸಹಾಯ ಸಂಘಗಳಿಗೆ ಹಣಕಾಸಿನ ನೆರವನ್ನಿತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಆರಂಭಿಸಲು ಉತ್ತೇಜಿಸುತ್ತಿದೆ.

ಮಹಿಳಾ ಸಂಘಟನೆಗಳು : ಆಧುನಿಕ ಭಾರತದಲ್ಲಿ ಸಂಘಶಕ್ತಿಯೇ ದೊಡ್ಡದೆಂಬ ಭಾವನೆಯಿಂದ ಮಹಿಳೆಯರೇ ವಿವಿಧ ಸಂಘಟನೆಗಳಿಗೆ ಅವು ಶಕ್ತಿಯ, ಪ್ರತಿಷ್ಠೆಯ, ಪ್ರಾಬಲ್ಯದ ಕೇಂದ್ರಗಳೆಂದು ಪರಿಗಣಿಸಿ-ಮಾನ್ಯತೆ ದೊರೆಯುತ್ತಿದೆ. ಗಂಡು ತನ್ನ ದೈಹಿಕ ಬಲದ ಮೂಲಕ ತೋರುವ ಅನ್ಯಾಯ ಅತ್ಯಾಚಾರಗಳನ್ನು ಒಬ್ಬ ಮಹಿಳೆ ಏಕಾಂಗಿಯಾಗಿ ತಡೆಗಟ್ಟಲಾರಳು. ಅದಕ್ಕಾಗಿ ಮಹಿಳೆಯರ ಒಕ್ಕೂಟ ಬೇಕೆ ಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಸ್ವ-ಸಹಾಯ ಸಂಘಗಳು ಮತ್ತು ಸ್ತ್ರೀ-ಶಕ್ತಿ ಸಂಸ್ಥೆಗಳು ಸರ್ಕಾರದ ಆದೇಶ್ಯೋಯೋಜನೆಗಳ ಸದುಪಯೋಗ ಪಡೆದುಕೊಳ್ಳುತ್ತಿವೆ.

ಇತ್ತೀಚೆಗೆ ನಾನಾ ವರ್ಗಗಳ ಮಹಿಳೆಯರು ಜಾತಿ-ಪಂಗಡಗಳ ಭೇದವಿಲ್ಲದೆ ಒಂದು ಸಂಘವನ್ನು ಕಟ್ಟಿಕೊಂಡು ಕಾಲಾನುಕಾಲದಿಂದ ಬಂದ ಅನಿಷ್ಟ ಪದ್ಧತಿಗಳಾದ ವರದಕ್ಷಿಣೆ, ಸೊಸೆಯಂದಿರ ದಹನ, ಜೂಜುಕಟ್ಟೆ ಮಟಕಾ ಅಡ್ಡೆ ಕುಡಿತದ ಕ್ಲಬ್ಬು ಮೊದಲಾದವುಗಳ ವಿರುದ್ಧ ಸಮರ ಸಾರುತ್ತಿದ್ದಾರೆ. ಈ ಮಹಿಳಾ ಸ್ವಸಹಾಯ ಸಂಘಗಳು ಬಹುಪತ್ನಿತ್ವ, ವರದಕ್ಷಿಣೆ ಶೋಷಣೆ, ದೇವದಾಸಿ ಪದ್ಧತಿ, ಬಾಲ್ಯ ವಿವಾಹ ಮೊದಲಾದವುಗಳ ವಿರುದ್ಧವೂ ಕೂಗೆಬ್ಬಿಸುತ್ತಿರುವುದು ಮಹಿಳಾ ಜಾಗೃತಿಯ ಲಕ್ಷಣಗಳಾಗಿವೆ. ಈ ಸ್ವಸಹಾಯ ಸಂಘಗಳು ಹಳ್ಳಿಗಳಲ್ಲಿನ ಅಶಿಕ್ಷಿತ, ಮುಗ್ಧ ಅಸಹಾಯಕ ಮಹಿಳೆಯರಿಗೆ ಗೃಹಕೈಗಾರಿಕೆಗಳಲ್ಲಿ ಉದ್ಯೋಗ ನೀಡಿ ಅವರ ಆರ್ಥಿಕ ಮುಗ್ಗಟ್ಟುಗಳನ್ನು ನಿವಾರಿಸುತ್ತಿರುವುದನ್ನು ಆಶಾಭಾವನೆಯಿಂದ ನಿರೀಕ್ಷಿಸಬಹುದಾಗಿದೆ. ಒಂದು ಒಳ್ಳೆಯ ನಾಯಕತ್ವ ಮಾತ್ರ ಗ್ರಾಮೀಣ ಮಹಿಳೆಯರನ್ನು ಸಬಲಗೊಳಿಸುವಲ್ಲಿ ಸಾರ್ಥಕ್ಯ ಪಡೆಯಬಹುದು. □

ಸಾಹಿತ್ಯ ವಿಶೇಷಾಂಕ

ಅನುಭವದ ಗಣಿಯಿಂದ

ಹಸಿವು - ಅಸ್ಪೃಶ್ಯತೆ ಮತ್ತು ಅವಮಾನ ಮನುಷ್ಯನ ಅಂತಃಶಕ್ತಿಯನ್ನು ಉಡುಗಿಸಿ ಅವನನ್ನು ನಿಸ್ತೇಜನನ್ನಾಗಿಸುವ ಸಾಮಾಜಿಕ ದುರಂತಗಳು. ಇಪ್ಪತ್ತೊಂದನೆ ಶತಮಾನದ ವೈಜ್ಞಾನಿಕ ಯುಗದಲ್ಲಿ ಕೂಡ ಭಾರತೀಯ ಸಮಾಜ ಇವುಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಬಡತನ ಮತ್ತು ಸಾಮಾಜಿಕ ಅಸಮಾನತೆಗಳ ಕಾರಣದಿಂದಲೇ ಭಾರತದಲ್ಲಿ ಪ್ರತಿಭೆಗಳನ್ನು ಗುರುತಿಸಲೂ ಸಾಧ್ಯವಾಗುತ್ತಿಲ್ಲ.

ಹಸಿವು ದಾರುಣವಾದುದಾದರೆ, ಅಸ್ಪೃಶ್ಯತೆ ಅಮಾನವೀಯವಾದುದು. ಅಸ್ಪೃಶ್ಯರಲ್ಲದ ಕೆಲವು ಕೆಳಜಾತಿಗಳ ಅಪಮಾನ ಕೂಡ ಕಡಿಮೆಯಾದದ್ದೇನಲ್ಲ.

ನಮ್ಮ ನಡುವಿನ ಹಲವಾರು ಅಸಾಮಾನ್ಯ ಪ್ರತಿಭೆಗಳು, ಸಾಹಿತಿ-ಕಲಾವಿದರು- ಮೊದಲ ತಲೆಮಾರಿನ ಶಿಕ್ಷಿತರು ಇಂಥ ಅಸಮಾನತೆಗಳನ್ನು ಉಂಡು ಬೆಳೆದವರೇ ಆಗಿದ್ದಾರೆ. ಇಂಥ ನೋವುಗಳ ಅನುಭವ ಕಥಾನಕಗಳನ್ನು 'ಸಂವಾದ' ವಿಶೇಷಾಂಕಕ್ಕಾಗಿ ಆಹ್ವಾನಿಸುತ್ತದೆ. ದಯಮಾಡಿ ಒಂದು ಸಾವಿರ ಪದಗಳಿಗೆ ಮೀರದಂತೆ ನಿಮ್ಮ ಅನುಭವಗಳನ್ನು ನಮಗೆ ಬರೆದು ಕಳುಹಿಸಿ. ಭಾಷೆ-ಶೈಲಿಯ ಬಗೆಗೆ ತಲೆಕೆಡಿಸಿಕೊಳ್ಳಬೇಡಿ. ನಿಮಗೆ ಅನಿಸಿದ ಹಾಗೆ ನಿಮ್ಮದೇ ಭಾಷೆ-ಶೈಲಿ ಇರಲಿ.

ನಿಮ್ಮ ಬರಹ ನಮಗೆ ತಲುಪಬೇಕಾದ ದಿನಾಂಕ ಅಕ್ಟೋಬರ್ ೩೧, ೨೦೦೪

ವಿಳಾಸ : ಸಂಪಾದಕರು, 'ಸಂವಾದ' ಮಾಸ ಪತ್ರಿಕೆ, ೬೩, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ ಬೆಂಗಳೂರು - ೫೬೦ ೦೯೧

ದಲಿತ - ರೈತ; ಅದೇ ಅಮೋಘವರ್ಷ

○ ಪ್ರೊ॥ ಹಿ.ಶಿ. ರಾಮಚಂದ್ರೇಗೌಡ
ಜಾನಪದ ತಜ್ಞರು

ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಜನಪರ ಚಳವಳಿಯ ಕವಲುಗಳಾದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇತರೇ ಜನಪರ ಚಳವಳಿಗಳು ಹಾಗೂ ವ್ಯಕ್ತಿ-ಶಕ್ತಿಗಳೊಂದಿಗೆ ಜೊತೆಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸುವ ಐತಿಹಾಸಿಕ ಪ್ರಯತ್ನವೊಂದಕ್ಕೆ ಮುಂದಾಗಿವೆ. ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ರಾಜಕಾರಣದ ಜೀವಾಳವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣದ ಈ ಪ್ರಯತ್ನ ಜನಪರ ವಿಚಾರಧಾರೆಯುಳ್ಳವರಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ. ಹಿಂದೆ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡು ಕಾಲಾನಂತರ ವಿವಿಧ ರಾಜಕೀಯ ಪಕ್ಷಗಳಲ್ಲಿ ಸೇರಿಹೋಗಿದ್ದ ವ್ಯಕ್ತಿಗಳೂ ಈ ಪ್ರಯತ್ನದಿಂದಾಗಿ ಖುಷಿಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಸಂವಾದ' ನಾಡಿನ ಚಿಂತಕರೊಂದಿಗೆ ಚರ್ಚೆ ನಡೆಸಬೇಕೆಂದು ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಉಳಿದವುಗಳನ್ನು ಪ್ರಕಟಿಸುತ್ತೇವೆ. ಓದುಗರೂ ಈ ಸಂವಾದದಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

೧. ಜನಪರ ಚಳವಳಿಗಳು (ವಿಶೇಷವಾಗಿ ದಸಂಸ ಮತ್ತು ರೈತಸಂಘ) ಜೊತೆಗೂಡಿ ರೂಪಿಸ ಹೊರಟಿರುವ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣಕ್ಕೆ ಹೊರತಾದ 'ಪರ್ಯಾಯ ರಾಜಕಾರಣ' ಹೇಗಿರಬೇಕೆಂದು ನೀವು ಬಯಸುತ್ತೀರಿ ?

೩. ಎಂಥ ಶಕ್ತಿಗಳು ಮತ್ತು ವ್ಯಕ್ತಿಗಳು ಒಗ್ಗೂಡಿದರೆ 'ಪರ್ಯಾಯ ರಾಜಕಾರಣ' ರೂಪಿಸಲು ಸಾಧ್ಯ ?

೪. ಜನಪರ ಚಳವಳಿಗಳು - ವ್ಯಕ್ತಿ - ಶಕ್ತಿಗಳು ಒಗ್ಗೂಡಲು ತಾವು ಸೂಚಿಸುವ ಮಾರ್ಗೋಪಾಯಗಳೇನು ?

೫. ಪರ್ಯಾಯ ರಾಜಕೀಯ ಶಕ್ತಿ (ಪಕ್ಷ) ಹೊಂದಬಹುದಾದ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳೇನು ?

೧. ವೈಚಾರಿಕವಾಗಿ ಈ ಚಳವಳಿಗಳು ಭಿನ್ನಧೋರಣೆ ಹಾಗೂ ನೆಲೆಗಟ್ಟನ್ನು ಹೊಂದಿವೆ. ಇವು ವರ್ಗ ಸ್ವಭಾವದ ಚಳವಳಿಗಳೆ ಆಗಿದ್ದಲ್ಲಿ ಒಂದು ಹಂತದಲ್ಲಿ ಕೂಡುತ್ತಿದ್ದವು. ಇವು ಈಗಿರುವ ಹಾಗೆ ದ್ವಿಜ ಚಳವಳಿಗಳು.

- ಅ. ತಮ್ಮ ನಂಬಿಕೆ ಮತ್ತು ನಡವಳಿಕೆಗಳ ಮಧ್ಯೆ ಹೊಂದಾಣಿಕೆಯಾದಾಗ -
- ಆ. ತಮ್ಮ ಸಮಸ್ಯೆಗಳೆ ತುಂಬ ಮುಖ್ಯ ಎಂಬ ಅಂದಾಭಿಮಾನ ನಿವಾರಣೆ ಆದಾಗ -
- ಇ. ತಮ್ಮ ಹೊರಗೆ ಇನ್ನೂ ಹೆಚ್ಚು ಆರ್ತ ಧ್ವನಿಗಳು ಇವೆ ಎಂದು ತಿಳಿದಾಗ -

ಪರ್ಯಾಯ ರಾಜಕಾರಣ ಮಾಡಲು ಶಕ್ತವಾಗಬಲ್ಲವು.

೨. ದುಡಿಮೆ ಕೊಡುತ್ತಾರೆ ಮತ್ತು ದುಡಿಮೆಗೆ ತಕ್ಕ ಪ್ರತಿಫಲ ಕೊಡುತ್ತಾರೆ ಎಂದು ಜನ ನಂಬುವ ರಾಜಕಾರಣವೇ ಪರ್ಯಾಯ ರಾಜಕಾರಣ. ಮೀಸಲಾತಿ ಕೊಡುತ್ತೇವೆ ಅಥವಾ ಉದ್ಯಮಪತಿಗಳನ್ನಾಗಿ ಮಾಡುತ್ತೇವೆ ಎಂಬ ಸುಳ್ಳು ಮಾತ್ರ ಹೇಳಬಾರದು.

೩. ಮೂರು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತೇವೆ ಎಂದರೆ ಒಗ್ಗೂಡಿ ಓಟು ಹಾಕುವಂತಹ ಸಂಚಯಶಕ್ತಿ ಮತ್ತು ಸೇವೆ ಮಾಡುತ್ತಾರೆ ಎಂದು ಜನ ನಂಬಬಹುದಾದ ಜನಪ್ರತಿನಿಧಿಗಳು ಒಗ್ಗೂಡಿದರೆ ಪರ್ಯಾಯ ರಾಜಕಾರಣ ತನಗೆ ತಾನೆ ಸೃಷ್ಟಿಯಾಗುತ್ತದೆ.

೪. ಜಾತಿಯಾಗಿ ಒಡೆದುಕೊಂಡಿರುವ ನೈತಿಕತೆ ಮತ್ತು ಬಡವರಾಗಿಯೆ ಬದುಕುವ ಪಾಪಕರ್ಮದ ನಿವಾರಣೆಯ ಮಾರ್ಗಗಳು ಜನಪರ ಶಕ್ತಿ-ವ್ಯಕ್ತಿಗಳು ಒಗ್ಗೂಡಲು ನೆರವಾಗಬಹುದು.

೫. ಅ. ಸಂಘರ್ಷ ತನ್ನ ವ್ಯಕ್ತಿತ್ವವನ್ನು ದುಬಾರಿ ಮಾಡಿಕೊಳ್ಳದಿರುವುದು
- ಆ. ತಕ್ಷಣವೆ ನಾಯಕನಾಗುವ ಭ್ರಮೆ/ಅಹಂ ಅನ್ನು ತ್ಯಜಿಸುವುದು.
- ಇ. ದಿಢೀರ್ ಫಲಾಪೇಕ್ಷೆ/ ವೈಯಕ್ತಿಕ ಬಡತನವನ್ನು ನಿವಾರಿಸಿಕೊಳ್ಳದಿರುವಿಕೆ
- ಈ. ತಂತ್ರಗಾರಿಕೆ ಅಸ್ತ್ರವಾಗದಿರುವುದು

(೨೪ನೇ ಪುಟಕ್ಕೆ.)

ಐತಿಹಾಸಿಕ ಪ್ರಯತ್ನ

○ ಡಾ. ಆರ್. ಪೂರ್ಣಿಮಾ
ಸಂಪಾದಕರು, ಉದಯವಾಣಿ

೧. ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಜೊತೆಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸಲು ಹೊರಟಿರುವುದು ಒಂದು ಐತಿಹಾಸಿಕ ಪ್ರಯತ್ನ ಅನ್ನುವುದರಲ್ಲಿ ಅನುಮಾನವಿಲ್ಲ. ಸ್ವಾತಂತ್ರ್ಯ ಬಂದ ೨೫ ವರ್ಷಗಳ ನಂತರ ಒಂದು ಬಲಿಷ್ಠ ಜನಪರ ಆಂದೋಲನ ರೂಪುಗೊಂಡು ಹಲವು ವರ್ಷಗಳ ಕಾಲ ನಮ್ಮ ರಾಜಕೀಯ ರಂಗವನ್ನು ಜೀವಂತವಾಗಿಟ್ಟಿತ್ತು. ಮತ್ತೆ ೨೫ ವರ್ಷಗಳ ನಂತರ ಇಂಥ ಪ್ರಯತ್ನ ಜೀವ ತಳೆಯುವುದಾದರೆ ಇದು ಐತಿಹಾಸಿಕ ಅಗತ್ಯವೂ ಆಗಿರಬಹುದು ಅನ್ನಿಸುತ್ತದೆ.

೨. 'ಪರ್ಯಾಯ ರಾಜಕಾರಣ' ಈಗಿರುವುದಕ್ಕೆ ಪರ್ಯಾಯವೇ ಆಗಿರಬೇಕಷ್ಟೆ. ಕಳೆದ ಐದು ದಶಕಗಳ ರಾಜಕಾರಣದ ವೈಫಲ್ಯಗಳೇ ಇದರ ಗುರಿಗಳು ಎಂದಾಗಬೇಕು. ಅಂದರೆ ಅಲ್ಲಿ ನಾಶವಾದ ಆದರ್ಶ, ಜನಪರತೆ, ಸಮುದಾಯ ದೃಷ್ಟಿಕೋನ ಮುಂತಾದವು ಇಲ್ಲಿ ಪ್ರಾಮುಖ್ಯ ಪಡೆಯಬೇಕು.

೩. 'ಪರ್ಯಾಯ ರಾಜಕಾರಣ' ರೂಪಿಸಲು ಸಮುದಾಯದಿಂದ ಒಡಮೂಡಿದ ಶಕ್ತಿಗಳಿಂದ ಮಾತ್ರ ಸಾಧ್ಯ. ಅದರಲ್ಲಿ ನಂಬಿಕೆಯಿಟ್ಟ ಅದನ್ನು ಬಲಪಡಿಸುವ ವ್ಯಕ್ತಿಗಳು ಇದರೊಂದಿಗೆ ಒಗ್ಗೂಡದೆ ಇರುವುದಿಲ್ಲ. ಆದರೆ ಉದಾರೀಕರಣದ ಹಿನ್ನೆಲೆಯಲ್ಲಿ ಯುವಜನರ ಆದ್ಯತೆಗಳೇ ಬದಲಾಗಿರುವಾಗ, ಅವರನ್ನು ಆಂದೋಲನದ ಮುಖ್ಯ ಶಕ್ತಿಯಾಗಿ ಬೆಳೆಸುವುದು ಹೇಗೆನ್ನುವುದೇ ದೊಡ್ಡ ಸವಾಲು.

೪. ಸೈದ್ಧಾಂತಿಕ ಹಿನ್ನೆಲೆಯಿಂದ ರೂಪುಗೊಂಡ ನಿರ್ದಿಷ್ಟ ಕಾರ್ಯಸೂಚಿ ಮಾತ್ರ ಜನಪರ ಚಳವಳಿಗಳು ಮತ್ತು ಶಕ್ತಿಗಳನ್ನು ಒಂದುಗೂಡಿಸಲು ಸಾಧ್ಯ. ಸಮಕಾಲೀನ ಬದುಕಿನ ಸಮಸ್ಯೆಗಳ ಪರಿಹಾರಕ್ಕೆ ಈ ಕಾರ್ಯಸೂಚಿಯ ಆಧಾರದ ಮೇಲೆ ಹೋರಾಟ ನಡೆಯಬೇಕು.

೫. ಯಾವುದೇ ರಾಜಕೀಯ ಶಕ್ತಿ ಅಥವಾ ಪಕ್ಷ ರಾಜಕೀಯ ಅಧಿಕಾರದಿಂದ ದೂರವುಳಿದು ಜನರ ಬದುಕಿನಲ್ಲಿ ಮಹತ್ತರ ಮಾರ್ಪಾಡು ಮಾಡಲು ಸಾಧ್ಯವಿಲ್ಲ. ಚುನಾವಣಾ ರಾಜಕಾರಣ ಮತ್ತು ಪಕ್ಷ ರಾಜಕಾರಣದ ಸ್ವರೂಪವನ್ನು ಅರಿತವರಿಗೆ, ನೀತಿ ಸಂಹಿತೆಯ ಸ್ವರೂಪವು ಸ್ಪಷ್ಟವಾಗುತ್ತದೆ! □

ಗಾಢವಾದ ಹೊಸ ರಾಜಕೀಯ ಶಕ್ತಿ

ಚರ್ಚೆ

ಪರ್ಯಾಯ ರಾಜಕಾರಣ

೧. ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಜೊತೆಗೂಡಿದ್ದಾದರೆ ಗಾಢವಾದ ಹೊಸದೊಂದು ರಾಜಕೀಯ ಶಕ್ತಿ ಹುಟ್ಟಿಕೊಂಡಂತಾಗುತ್ತದೆ. ಕೃಷಿಕ ವರ್ಗಕ್ಕೆ ಸೇರಿದ ಜಾತಿಗಳು ಮತ್ತು ಭೂಹೀನರೂ, ಕನಿಷ್ಠ ಭೂಮಿ ಪಡೆದವರೂ ಆದ ದಲಿತರ ನಡುವೆ ಈವರೆಗೆ ನಡೆಯುತ್ತಿದ್ದ ಹಿಂಸಾಚಾರಗಳು ನಿಂತಂತಾಗುತ್ತದೆ. ಹೊಸ ರಾಜಕೀಯ ಶಕ್ತಿಯೊಂದು ಇದರಿಂದ ಹುಟ್ಟುವಂತಾಗಬೇಕಾದರೆ ಬಡ ಮುಸ್ಲಿಮರ ಹಿತವೂ ಈ ಒಕ್ಕೂಟದಲ್ಲಿ ಸೇರಿರಬೇಕಾಗುತ್ತದೆ. ಹಳ್ಳಿಯ ಮುಸ್ಲಿಮರೂ ಈ ಒಕ್ಕೂಟದಲ್ಲಿ ಕೂಡಿದಾಗ ಇದೊಂದು ಪರ್ಯಾಯ ಶಕ್ತಿಯಾಗಿ ಮಾರ್ಪಡುತ್ತದೆ; ಮತ್ತು ಸಮಗ್ರ ಭಾರತದ ರಾಜಕಾರಣದ ಒಂದಂಶವಾಗುತ್ತದೆ.

೨. ಪರ್ಯಾಯ ರಾಜಕಾರಣ ಜೀವನಮಟ್ಟಕ್ಕೂ, ಸಮಾನತೆಯ ಆರ್ಥಿಕ ಮೌಲ್ಯಗಳಿಗೂ, ಸಾಮಾನ್ಯರ ನಿತ್ಯಜೀವನದ ಕ್ವಾಲಿಟಿಯಲ್ಲೇ - ಗುಣದಲ್ಲೇ - ಇರಬೇಕಾದ ಸುಖ ಸಂತೋಷದ ಪಾರಮಾರ್ಥಿಕ ನೆಮ್ಮದಿಗೂ ಇರುವ ನಂಟನ್ನು ತಿಳಿದಿರುತ್ತದೆ.

೩. ಎಲ್ಲ ಬಡವರು, ಭವಿಷ್ಯಕ್ಕೆ ಮುಖ ಮಾಡಿದ ಯುವಕರು, ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು - ಎಲ್ಲರೂ ಹೊಸದೊಂದು ಯುಗವನ್ನು ಬಯಸಿದಾಗ ಪರ್ಯಾಯ ರಾಜಕಾರಣ ಬಲವಾದ ಶಕ್ತಿಯಾಗುತ್ತದೆ. ಈ ಹೊಸ ಯುಗ ಪಾಶ್ಚಿಮಾತ್ಯ ಸಂಸ್ಕೃತಿಯ ದಾಹವನ್ನು ತೊರೆದಿರುತ್ತದೆ. ಜೀವಜಾಲವಾದ ನಿಸರ್ಗದ ಜೊತೆ ನೆಮ್ಮದಿಯ ನಂಟನ್ನು ಬಯಸುತ್ತದೆ.

೪. ಜನಪರ ಚಳವಳಿಗಳು ಅಹಿಂಸಾತ್ಮಕವಾಗಿರಬೇಕು. ಚಳವಳಿಗಳು ಹಾಡು, ಕುಣಿತ, ನಾಟಕ, ಕಾವ್ಯವಾಚನ, ಕಥನಗಳನ್ನು ಮೈಗೂಡಿಸಿಕೊಂಡು, ತನ್ನ ಉತ್ಕರ್ಷವನ್ನೂ ಜೀವನ ಪ್ರೀತಿಯನ್ನೂ ಎಲ್ಲ ಚಟುವಟಿಕೆಯಲ್ಲೂ ಪಡೆದಿರಬೇಕು.



○ ಡಾ|| ಯು.ಆರ್. ಅನಂತಮೂರ್ತಿ
ಜ್ಞಾನಪೀಠ ಪ್ರಶಸ್ತಿ ವಿಜೇತರು

೫. ಎಲ್ಲ ಮತೀಯ ಆಸಕ್ತಿಗಳನ್ನೂ ಬದಿಗಿಟ್ಟು ಗಂಡು ಹೆಣ್ಣು ಬೇಧವಿಲ್ಲದ, ಜಾತಿ ಬೇಧವಿಲ್ಲದ, ಸಿಟ್ಟಿದ್ದರೂ ದ್ವೇಷವಿಲ್ಲದ, ಅನುಕಂಪಶೀಲವಾಗಿದ್ದರೂ ಮೆತ್ತಗಾಗದ, ತಮ್ಮ ಸಂಘಟನೆಯಲ್ಲಿ ಸರಳವಾದ ಪ್ರಜಾತಂತ್ರೀಯವಾದ ವಾಗ್ವಾದಕ್ಕೆ ಹಿಂಜರಿಯದ, ಸಂವಾದಕ್ಕೆ ಸತತ ಆಸೆ ಪಡುವ ನೀತಿ ಸಂಹಿತೆಯನ್ನು ಪಾಲಿಸುವುದರಲ್ಲೇ ಕಾರ್ಯಸೂಚಿಯೂ ತನ್ನಿಂದ ತಾನೇ ರೂಪಿತವಾಗುತ್ತದೆ. □

ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಜೊತೆಗೂಡಿದ್ದಾದರೆ ಗಾಢವಾದ ಹೊಸದೊಂದು ರಾಜಕೀಯ ಶಕ್ತಿ ಹುಟ್ಟಿಕೊಂಡಂತಾಗುತ್ತದೆ. ಕೃಷಿಕ ವರ್ಗಕ್ಕೆ ಸೇರಿದ ಜಾತಿಗಳು ಮತ್ತು ಭೂಹೀನರೂ, ಕನಿಷ್ಠ ಭೂಮಿ ಪಡೆದವರೂ ಆದ ದಲಿತರ ನಡುವೆ ಈವರೆಗೆ ನಡೆಯುತ್ತಿದ್ದ ಹಿಂಸಾಚಾರಗಳು ನಿಂತಂತಾಗುತ್ತದೆ. ಹೊಸ ರಾಜಕೀಯ ಶಕ್ತಿಯೊಂದು ಇದರಿಂದ ಹುಟ್ಟುವಂತಾಗಬೇಕಾದರೆ ಬಡ ಮುಸ್ಲಿಮರ ಹಿತವೂ ಈ ಒಕ್ಕೂಟದಲ್ಲಿ ಸೇರಿರಬೇಕಾಗುತ್ತದೆ. ಹಳ್ಳಿಯ ಮುಸ್ಲಿಮರೂ ಈ ಒಕ್ಕೂಟದಲ್ಲಿ ಕೂಡಿದಾಗ ಇದೊಂದು ಪರ್ಯಾಯ ಶಕ್ತಿಯಾಗಿ ಮಾರ್ಪಡುತ್ತದೆ; ಮತ್ತು ಸಮಗ್ರ ಭಾರತದ ರಾಜಕಾರಣದ ಒಂದಂಶವಾಗುತ್ತದೆ.

ಹೊಸ ರಾಜಕೀಯ ಸಂಸ್ಕೃತಿ ಬೆಳೆಸುವುದೇ ಪರ್ಯಾಯ ರಾಜಕಾರಣ

೧. ಒಳ್ಳೆಯ ಪ್ರಯತ್ನ, ಇಂದು ಪರ್ಯಾಯ ರಾಜಕಾರಣದ ಅವಶ್ಯಕತೆ ಖಂಡಿತಾ ಇದೆ. ಈ ರಾಜ್ಯದ ಎರಡು ಬಹುದೊಡ್ಡ ಶಕ್ತಿಗಳಾದ ದಸಂಸ ಮತ್ತು ರೈತಸಂಘ ಅಂಥದೊಂದು ರಾಜಕಾರಣ ರೂಪಿಸಲು ಸಾಧ್ಯವಾದರೆ ಒಳ್ಳೆಯದು.

೨. ಖಂಡಿತಾ ಈಗ ಇರುವ ರಾಜಕೀಯ ಪಕ್ಷಗಳಿಗಿಂತ ಭಿನ್ನವಾಗಿರಬೇಕು. ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಬದ್ಧತೆ ಪರ್ಯಾಯ ರಾಜಕಾರಣದ ಪ್ರಮುಖ ಸೂತ್ರಗಳಾಗಬೇಕು.

೩. ವ್ಯಕ್ತಿ ಪ್ರತಿಷ್ಠೆ ಸಮಯ ಸಾಧಕತನ ಇರುವ ವ್ಯಕ್ತಿಗಳು ಎಂದಿದ್ದರೂ ಅಪಾಯ. ನಿರ್ಲಕ್ಷ್ಯಕ್ಕೆ ಒಳಗಾಗಿರುವ ಎಲ್ಲಾ ರೀತಿಯ ಶಕ್ತಿಗಳನ್ನೂ ಒಳಗೊಳ್ಳುವುದು ಅನಿವಾರ್ಯ. ಬಹಳ ಮುಖ್ಯವಾಗಿ ಬಲಿಷ್ಠ ಯುವಶಕ್ತಿಯನ್ನು ಸಂಘಟನೆಯಲ್ಲಿ ಸೇರಿಸಿಕೊಳ್ಳುವುದು ಮುಖ್ಯ. ಹೊಸದೊಂದು ರಾಜಕೀಯ ಸಂಸ್ಕೃತಿಯನ್ನು ಹುಟ್ಟುಹಾಕಿ ಬೆಳೆಸುವುದೇ ಪರ್ಯಾಯ ರಾಜಕಾರಣ.

೪. ತಳಮಟ್ಟದಿಂದ ಸಂಘಟನೆ ಪ್ರಾರಂಭವಾಗಬೇಕು. ಮೊದಲಿಗೆ ಇಲ್ಲಿಯವರೆಗೆ ಜನಪರ ಚಳವಳಿಯಲ್ಲಿ ಭಾಗವಹಿಸುತ್ತಾ ಬಂದಿರುವ, ಕೆಟ್ಟು ಮುಗ್ಗಲು ಹಿಡಿಯದಿರುವ ವ್ಯಕ್ತಿಗಳನ್ನು ಸಂಘಟನೆಗಳನ್ನು ಗುರುತಿಸಿ ಒಂದುಗೂಡುವಂತೆ ಮಾಡಬೇಕು. ದಿಢೀರ್ ಎಂದು ಚುನಾವಣೆಗೆ ಸ್ಪರ್ಧಿಸುವುದನ್ನು ಬಿಟ್ಟು ಮೊದಲು ಪರ್ಯಾಯ ರಾಜಕಾರಣದ ಅಸ್ತಿತ್ವವನ್ನು ಬಲಪಡಿಸಿಕೊಳ್ಳಬೇಕು. ರಾಜ್ಯವ್ಯಾಪಿ ಸಂಘಟನೆ ಮಾಡುವುದು ಮುಖ್ಯ. ಈಗಿರುವ ರಾಜಕೀಯ ಪಕ್ಷಗಳ ದಿವಾಳಿತನವನ್ನು, ಜನವಿರೋಧಿ ನಿಲುವನ್ನೂ ಜನರಿಗೆ ತಿಳಿಸಿಹೇಳಬೇಕು. ಚುನಾವಣೆಗೆ ಸ್ಪರ್ಧಿಸುವಾಗ ಮೊದಲಿಗೆ ಸ್ಥಳೀಯ ಸಂಸ್ಥೆಗಳಿಗೆ ಸ್ಪರ್ಧಿಸಬೇಕು.

○ ಲಿಂಗದೇವರು ಹಳೆಮನೆ
ಜನಪರ ಹೋರಾಟಗಾರರು

ಪರ್ಯಾಯ ರಾಜಕಾರಣ ಈಗಿರುವ ರಾಜಕಾರಣಕ್ಕಿಂತ ಭಿನ್ನವಾಗಿರಬೇಕು. ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಬದ್ಧತೆ ಅದರ ಪ್ರಮುಖ ಸೂತ್ರಗಳಾಗಬೇಕು.

೫. ಇದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸುವುದು ಕಷ್ಟ. ಜಾತ್ಯತೀತತೆ, ಸಮಾನತೆ, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ ಮುಂತಾದ ಜನಪರ ಕಾರ್ಯಕ್ರಮಗಳಿಗೆ ಆದ್ಯತೆ, ಪಕ್ಷದ ಸಂಘಟನೆಗೆ, ಬೆಳವಣಿಗೆಗೆ ಸ್ಪಷ್ಟವಾದ ನೀತಿಸಂಹಿತೆಯೊಂದನ್ನು ರೂಪಿಸಬೇಕು. ಮಹಿಳೆಯರಿಗೆ ಪುರುಷರಷ್ಟೇ ಸಮಾನ ಪ್ರಾಧಾನ್ಯತೆ ಕಲ್ಪಿಸಬೇಕು. □

ಪರ್ಯಾಯ ರಾಜಕಾರಣ ಅಧಿಕಾರ ರಾಜಕಾರಣವಲ್ಲ



❍ ಪ್ರೊ|| ಸಿ.ಜಿ. ಕೃಷ್ಣಸ್ವಾಮಿ
ಖ್ಯಾತ ರಂಗತಜ್ಞರು

> **ಪರ್ಯಾಯ ರಾಜಕಾರಣವೆಂದರೆ ವ್ಯವಸ್ಥೆಯ ವಿರುದ್ಧ ರಾಜಕಾರಣವೆಂದೇ ಅರ್ಥ. ನಮ್ಮ ಕಣ್ಣ ಮುಂದಿನ ರೈತ ಸಂಘದ ಹೋರಾಟ, ದಲಿತ ಸಂಘರ್ಷ ಸಮಿತಿಯ ಹೋರಾಟಗಳು ಪರಸ್ಪರ ವಿರೋಧ ಹೇಳಿಕೆಯಲ್ಲಿ ತನ್ನ 'ಫಲಶ್ರುತಿ'ಯನ್ನು ಕಾಣದಿದ್ದರೆ ನಮಗೆ ಹೊಸದೊಂದು ಮಾರ್ಗ ಸಿಗುತ್ತದೆ. ಧರ್ಮ ನಿರಪೇಕ್ಷತೆ ಮತ್ತು ನಿಸ್ವಾರ್ಥ ರಾಜಕಾರಣವೊಂದೇ ಪರ್ಯಾಯ ರಾಜಕಾರಣದ ಮುಖ್ಯ ಪ್ರಣಾಳಿಕೆಗಳಾಗಬೇಕೆನಿಸುತ್ತದೆ.**

೧. ಪರ್ಯಾಯ ರಾಜಕಾರಣವೆಂದರೆ ವ್ಯವಸ್ಥೆಯ ವಿರುದ್ಧ ರಾಜಕಾರಣವೆಂದೇ ಅರ್ಥ. ಅದರಲ್ಲೂ ಕೆಳಜಾತಿಯ ಸಂಘಟನೆಗಳು ಮತ್ತು ಕೃಷಿಕಾರರು ಜತೆಗೂಡಿ ಒಂದು ಪರ್ಯಾಯ ವ್ಯವಸ್ಥೆಯನ್ನ ರೂಪಿಸಲು ಹೊರಡುವುದು ಸೂಕ್ತ. ಹಾಗೂ ನಿದ್ರಿಸುತ್ತಿರುವ ಜನಪರ ಚಳವಳಿಗೆ ಸೂಕ್ತ ಉದ್ದೇಶಗಳನ್ನು ಕಲ್ಪಿಸಬಹುದು.

ನಿಮ್ಮ ಮೊದಲನೇ ಪ್ರಶ್ನೆಯ ಕೊನೆ ಭಾಗಕ್ಕೆ ಉತ್ತರಿಸುವುದು ತೀರ ಕಷ್ಟ. ನಮ್ಮ ಅನೇಕ ಜನ ಪ್ರಗತಿಪರರು ನಿಷ್ಠೆಯುಳ್ಳ ಜನಪರ ಕಾಳಜಿಗಳನ್ನು ಬದಿಗೊತ್ತಿ ವಿಧಾನ ಸೌಧದ ಮೆಟ್ಟಿಲನ್ನು ಅಥವಾ ಅಧಿಕಾರದ ಮೆಟ್ಟಿಲ ಕಡೆ ಗಮನ ಇಟ್ಟಿರುವ ಈ ಹಂತದಲ್ಲಿ ಈ ಎರಡೂ ಸಂಘಟನೆಯ ನಾಯಕರುಗಳ ಮುಂದಿನ ಹೆಜ್ಜೆ ರಾಜಕೀಯ ಅಧಿಕಾರದ ಕಡೆ ಇರದಿದ್ದರೆ ಪರ್ಯಾಯ ರಾಜಕಾರಣಕ್ಕೆ ಹೆಚ್ಚಿನ ಗೌರವ ಸಿಗಬಹುದು, ಹಾಗೆಯೇ ಜನಪರ ಚಳವಳಿಯ ನೇತಾರರಿಗೂ ಒಂದು ಗೌರವ ಸಿಗಬಹುದು.

ಉದಾಹರಣೆಗೆ ಹಿಂದಿನ ನಾರಾಯಣ ಗುರು ಇಂದೇಕಿಲ್ಲ, ಮಹಾರಾಷ್ಟ್ರದ ಬಾಬಾ ಆಮ್ಟೆ ಅಣ್ಣಾ ಹಜಾರೆ, ರಾಜಾಸ್ಥಾನದ ರಾಜೇಂದ್ರ ಸಿಂಗ್ ನಮ್ಮಲ್ಲೇಕಿಲ್ಲ. ಈ ಪ್ರಶ್ನೆಗೆ ನೀವು-ನಾವು ಅಧಿಕಾರ ರಾಜಕಾರಣಕ್ಕೆ ವಿದಾಯ ಹೇಳುತ್ತೇವೆ ಎಂದರೆ ಹೊಸ ಆವಿಷ್ಕಾರಗಳನ್ನು ರೂಪಿಸಬಹುದೇನೋ.

೨. ಪ್ರಸ್ತುತ ರಾಜಕಾರಣ ಹಲವು ವಿಷಗಳನ್ನು ತನ್ನ ಗಂಟಲಲ್ಲಿಯೇ ಇಟ್ಟುಕೊಂಡಿದೆ. ವಿಷರಹಿತ ರಾಜಕಾರಣವನ್ನು ರೂಪಿಸಬೇಕಾಗಿದ್ದಲ್ಲಿ ಅತ್ಯಂತ Transparent ಆಗುವ ಅವಶ್ಯಕತೆ ಇದೆ.

ನಮ್ಮ ಜನಪರ ಸಂಘಟನೆಗಳ ಮುಖಂಡರುಗಳು ಜನಪರ ಚಳವಳಿಗಳ ಹೆಸರಲ್ಲಿ ಪಡೆದಿರುವ ರಾಜಕೀಯ ಲಾಭ, ಸ್ವಂತ ಆಸ್ತಿ ಇತ್ಯಾದಿಗಳ ಬಗ್ಗೆ ಬಹಿರಂಗ ಚರ್ಚೆಯ ಅವಶ್ಯಕತೆ ಇದೆ. ಇಲ್ಲದಿದ್ದರೆ ಪರ್ಯಾಯ ರಾಜಕಾರಣದ ಅಂತಃಸತ್ತ್ವ ಕುಸಿದೇ ಹೋಗುತ್ತದೆ. ವ್ಯಕ್ತಿ ಅತ್ಯಂತ ನಿಷ್ಠುರವಾಗಿ, ಕಠೋರವಾಗಿ ಇರದಿದ್ದರೆ ಪರ್ಯಾಯ ರಾಜಕಾರಣ ತನ್ನ ಗುರಿ ಮುಟ್ಟಲು ಸಾಧ್ಯವೇ ಇಲ್ಲ.

೩. ಈ ಪ್ರಶ್ನೆಗೆ ಉತ್ತರಿಸುವುದು ತೀರ ಕಷ್ಟ. ಲಂಕೇಶ್ ಪ್ರಾರಂಭದ ದಿನಗಳ ಪತ್ರಿಕೆಯ ಕ್ರಿಯೆಯಲ್ಲಿದ್ದವನು ನಾನು. ಆ ಪತ್ರಿಕೆ ಅಂದು ನಮ್ಮೆಲ್ಲರ ಧ್ವನಿಯಾಗಬಹುದೆಂದು ಭಾವಿಸಿದೆವು. ಧ್ವನಿಯಾಯಿತೇನೋ ನಿಜ. ಆದರೆ ಅದರ ಸಕಲ ಸಂಪತ್ತು ಕುಟುಂಬದ ಆಸ್ತಿಯೇ ಆಯಿತು ಎನ್ನುವುದು ಮರೆಯಬಾರದು.

ಈ ಹಿನ್ನಲೆಯಲ್ಲಿ ವ್ಯಕ್ತಿಗಳಷ್ಟೇ ಒಗ್ಗೂಡಿದರೆ ಪ್ರಯೋಜನವಿಲ್ಲ. ಆಸ್ತಿ ಮತ್ತು ಅದಕ್ಕೆ ಹರಿಯುವ 'ಜೇನು' ಜಿನುಗನ್ನು ಅತ್ಯಂತ ನಿರ್ಲಕ್ಷದಿಂದ ಭಾವಿಸಿ ವ್ಯಕ್ತಿಗಳು ಸಾಮೂಹಿಕ ಶ್ರೇಷ್ಠತೆಯನ್ನು ಸಾಧಿಸಿದರೆ ಒಳಿತು. ನಿಸ್ವಾರ್ಥ ಮತ್ತು ಸಾಮೂಹಿಕ ಶ್ರೇಷ್ಠತೆ ಎನ್ನುವುದು ಪರ್ಯಾಯ ರಾಜಕಾರಣದ ಮುಖ್ಯ ಧ್ವನಿಯಾಗಬೇಕು. ಇಲ್ಲದಿದ್ದರೆ ಎಂತಹ ಶಕ್ತಿಗಳನ್ನೂ ಎಂತಹ ವ್ಯಕ್ತಿಗಳನ್ನಾದರೂ ಅಮಲು ಬರಿಸುವ ಸ್ವಾರ್ಥ, ಅಧಿಕಾರ ರಾಜಕಾರಣ ಕಂಡಿದೆ ಎನ್ನುವುದು ಮರೆಯಬಾರದು.

೪. ನಾನು ಮಾರ್ಗ ಸೂಚಿಸುವ Hand Post ಅಂತೂ ಅಲ್ಲ, ಕ್ಯೂಬಾದ ಚೆಗೂವರ, ಕ್ಯಾಸ್ಟ್ರೊ, ಮಾವೊ, ಲೆನಿನ್, ಮಹಾತ್ಮಾ ಗಾಂಧೀಜಿ, ಅಂಬೇಡ್ಕರ್, ನೆಲ್ಸನ್ ಮಂಡೇಲಾ ಎಲ್ಲರೂ ನಮ್ಮ ಕಣ್ಣ ಮುಂದಿದ್ದಾರೆ. ಅವರ ನಿಸ್ವಾರ್ಥ ಬದುಕನ್ನು ಅನುಸರಿಸಿರುವವರಲ್ಲಿ ಒಬ್ಬರ ಹೆಸರನ್ನು ಕೂಡ ಇಂದು ಹೇಳಲು ಸಾಧ್ಯವಿಲ್ಲ. ಹೀಗಾಗಿ ಜನಪರ ಚಳವಳಿಗಳು ದಿಕ್ಕೆಡುವುದು ಆ ಚಳವಳಿಗಳ ನಾಯಕರಿಂದಲೇ ಎನ್ನುವುದು ಪ್ರಸ್ತುತ ದಿನಗಳಲ್ಲಿ ಕಂಡಿದ್ದೇವೆ.

ಅಲ್ಲದೆ ನಮ್ಮ ಕಣ್ಣ ಮುಂದಿನ ರೈತ ಸಂಘದ ಹೋರಾಟ, ದಲಿತ ಸಂಘರ್ಷ ಸಮಿತಿಯ ಹೋರಾಟಗಳು ಪರಸ್ಪರ ವಿರೋಧ ಹೇಳಿಕೆಯಲ್ಲಿ ತನ್ನ 'ಫಲಶ್ರುತಿ'ಯನ್ನು ಕಾಣದಿದ್ದರೆ ನಮಗೆ ಹೊಸದೊಂದು ಮಾರ್ಗ ಸಿಗುತ್ತದೆ. ಧರ್ಮ ನಿರಪೇಕ್ಷತೆ ಮತ್ತು ನಿಸ್ವಾರ್ಥ ರಾಜಕಾರಣವೊಂದೇ ಪರ್ಯಾಯ ರಾಜಕಾರಣದ ಮುಖ್ಯ ಪ್ರಣಾಳಿಕೆಗಳಾಗಬೇಕೆನಿಸುತ್ತದೆ.

೫. ನೀತಿ ಸಂಹಿತೆ ಎನ್ನುವುದು ತೀರ ವೈಯಕ್ತಿಕ ವಿಷಯಗಳು. ಮನುಷ್ಯ ಯಾವುದೇ ಒತ್ತಡದಲ್ಲಿ ಸಿಲುಕಿದಾಗ ನೀತಿ ಸಂಹಿತೆಯನ್ನು ಮುರಿಯುತ್ತಾನೆ. ಪ್ರತೀ ಬಾರಿಯೂ ದಲಿತ ಸಂಘರ್ಷ ಸಮಿತಿ ಒಡೆದಾಗ ನೀಡುವ ಹೇಳಿಕೆಗಳು ಗಮನಿಸಬೇಕು. ಹೇಳಿಕೆಗಳು ತೀರ ಕೆಳಮಟ್ಟದ್ದಾಗಿರುತ್ತದೆ. ಹಾಗಾದರೆ ಹೇಳಿಕೆ ನೀಡಿದವರಿಬ್ಬರು ಇಷ್ಟು ದಿನ ಒಟ್ಟಾಗಿ ಕೆಲಸ ಮಾಡಲೇ ಇಲ್ಲವೆ?

ರೈತಸಂಘದ ಪ್ರಮುಖರೊಬ್ಬರು ಇತ್ತೀಚೆಗೆ ತೀರಿಕೊಂಡಾಗ ಇನ್ನೊಬ್ಬ ರೈತ ಸಂಘದ ಮುಖಂಡ ನಾನು ಸತ್ತ ಮೇಲೂ ಅವನ ಮುಖ ನೋಡಬಾರದು ಎಂದು ಹೇಳಿ ಸತ್ತು ಹೋದರೆ ಮಾಡುವುದೇನು? ಯಾರು ಸರಿ? ಯಾರು ತಪ್ಪು? ನೀತಿಸಂಹಿತೆ ಎನ್ನುವುದು ಅನುಷ್ಠಾನದಲ್ಲಿಯೇ ಹೊರತು ಅದನ್ನು ಹೇಳುವುದರಲ್ಲಿಲ್ಲ.

ಕೊನೆಯ ಮಾತು

ಶಿವರಾಮ ಕಾರಂತರ ಚೋಮನಿಗೆ ನಮ್ಮ ರೈತ ಸಂಘದ ಮುಖಂಡರು ಕಿಂಚಿತ್ ಭೂಮಿಯನ್ನು ದಲಿತ ಕೃಷಿ ಕಾರ್ಮಿಕರಿಗೆ ಬಹುಶಃ ಸ್ವಂತ ಇಚ್ಛೆಯಿಂದ ನೀಡುವುದಾದರೆ ಪರ್ಯಾಯ ರಾಜಕಾರಣಕ್ಕೆ ಹೊಸ ಅರ್ಥ ಬರುವುದು ಸಹಜ.

ಇನ್ನೂ ಕೊನೆ ಮಾತು

ಬ್ರೆಜಿಲ್‌ನ ಕೃಷಿ ಕಾರ್ಮಿಕರು ಒಟ್ಟಿಗೆ ರೂಪಿಸಿರುವ ಕೃಷಿ ಮತ್ತು ಕೃಷಿ ಆದಾಯ ವಿತರಣೆ, ಹೆಚ್ಚಿನ ಹೊಸ ಅರ್ಥ ನೀಡಬಹುದು. ಕರ್ನಾಟಕದ 'ಆಸ್ತಿ' (ಭೂ ಒಡೆತನ) ಒಡೆತನಕ್ಕೆ ಕೊನೆಯುಂಟೇ?

Probability theory still holds good in Science but not in real politics. ☐

ದಲಿತ - ರೈತ; ಅದೇ ಅಮೋಘವರ್ಷ

... ೨೨ನೇ ಪುಟದಿಂದ

ಉ. ತಮ್ಮೊಳಗೆ ಒಬ್ಬ ಗುಣಾತ್ಮಕ ಸೇವಕನನ್ನೂ ಸನ್ಯಾಸಿಯನ್ನೂ ಉಳಿಸಿಕೊಳ್ಳುವುದು

ಊ. ನಾನು ಮತ್ತು ನನ್ನ ಹಿತ ಅಮೂಲ್ಯ ಅನ್ನುವುದಾದಲ್ಲಿ ಯಾವುದೆ ಹೊಸ ಸಂಘಟನೆಗೆ ಹೋಗದಿರುವುದು ವಾಸಿ.

ಭಾರತದ ಅಮೋಘವರ್ಷ

ದಲಿತರು ಮತ್ತು ರೈತರು ಮಾನಸಿಕವಾಗಿ ಒಂದುಗೂಡುತ್ತಾರೆ ಮತ್ತು ಈ ಕೂಡುವಿಕೆ ಅಭಿವೃದ್ಧಿ ಚಿಂತನೆ ಆಗುತ್ತದೆ ಎನ್ನುವುದಾದಲ್ಲಿ ಅದು ಭಾರತದ ಅಮೋಘವರ್ಷ. ಯಾಕೆ ಗೊತ್ತ? ಚಿಂತನ ಕೇಂದ್ರ ಮತ್ತು ಅಧಿಕಾರ ಕೇಂದ್ರ ಗ್ರಾಮಕ್ಕೆ ವರ್ಗಾವಣೆಗೊಳ್ಳುತ್ತವೆ.

ಸಮಕಾಲೀನ ಅಭಿವೃದ್ಧಿ 'ಗ್ರಾಮ ನಾಗರಿಕತೆ'ಯಾಗಿ ಬೆಳೆಯುತ್ತದೆ. ಅಂಥ ನಾಯಕತ್ವವನ್ನು ದಲಿತ-ರೈತರು ಕೊಡುತ್ತಾರೆಯೆ? ನ್ಯೂಯಾರ್ಕ್‌ಗೆ ಭಾರತದ ಹಳ್ಳಿಯೊಂದನ್ನು ಪರ್ಯಾಯ ಮಾಡುತ್ತಾರೆಯೆ?? ನನ್ನ ಈ ಆಲೋಚನೆ ಭ್ರಮೆಯಾಗದಿರಲಿ! ☐

ಚರ್ಚೆ

ಪರ್ಯಾಯ ರಾಜಕಾರಣ

○ ಡಾ॥ ಧರಣೀದೇವಿ ಮಾಲಗತ್ತಿ
ಸಾಹಿತಿಗಳು, ಚಿಂತಕರು

ಶುದ್ಧ ಪರ್ಯಾಯ ಸಾಧ್ಯವೇ ?

೧. ಯಾವ ಚಿಂತಕರ ನಿರೀಕ್ಷೆಯ ಮೇಲೂ ರಾಜಕಾರಣ ರೂಪುಗೊಳ್ಳುವುದಿಲ್ಲ, ಆರ್ಥಿಕ, ಸಾಮಾಜಿಕ ಅರಿವಿರದ ನೇತಾರರು ಸದ್ಯದ ರಾಜಕೀಯ ಸ್ಥಿತಿಯಲ್ಲಿ ಅಭಿವೃದ್ಧಿಯ ಕನಸುಗಳನ್ನು ಮೂಲೆಗೆ ತಳ್ಳಿದ್ದಾರೆ. ದಸಂಸ ಸಾಮಾಜಿಕ ಸಂಗತಿಗಳ ಹಿನ್ನೆಲೆಯಲ್ಲಿ ರೂಪುಗೊಂಡ ಹಾಗೇ ರೈತಸಂಘ ಮುಖ್ಯವಾಗಿ ಆರ್ಥಿಕ ಸಂಗತಿಗಳ ನೆಲೆಯಲ್ಲಿ ರೂಪುಗೊಂಡಿದೆ.

ಇವೆರಡೂ ಕೈ ಜೋಡಿಸುವುದರಿಂದ ಈಗಾಗಲೇ ಇವುಗಳಿಸಿಕೊಂಡಿರುವ ಸಂಘಟನಾ ಶಕ್ತಿ ವೃದ್ಧಿಯಾಗುತ್ತದೆಯೇ ಅಥವಾ ನಷ್ಟವಾಗುತ್ತದೆಯೇ ಎನ್ನುವುದನ್ನು ಕಾಲವೇ ಉತ್ತರಿಸಬೇಕು.

ರೈತರೇ ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತದಲ್ಲಿ ಎಲ್ಲ ರೈತರೂ ರೈತ ಸಂಘವನ್ನು ತಮ್ಮ ಪ್ರತಿನಿಧಿ ಎಂದು ಪರಿಗಣಿಸಿದ್ದಿದ್ದಲ್ಲಿ ಈಗಾಗಲೇ ರಾಜಕೀಯ ಅಧಿಕಾರ ಪಡೆಯುವುದು ಕಷ್ಟವಾಗುತ್ತಿರಲಿಲ್ಲ. ಎಲ್ಲಾ ರೈತರು ರೈತಸಂಘವನ್ನು ತಮ್ಮನ್ನು ಪ್ರತಿನಿಧಿಸುವ ಸಂಘಟನೆಯಾಗಿ ಯಾಕೆ ಕಾಣುತ್ತಿಲ್ಲ? ಮತ್ತು ಎಲ್ಲಾ ದಲಿತರು ದಲಿತ ಸಂಘರ್ಷ ಸಮಿತಿಯನ್ನೇ ತಮ್ಮ ಪ್ರತಿನಿಧಿಯಾಗಿ ಯಾಕೆ ಒಪ್ಪಿಕೊಳ್ಳುತ್ತಿಲ್ಲ? ಎನ್ನುವುದಕ್ಕೆ ಕಾರಣಗಳನ್ನು ಹುಡುಕಿದಲ್ಲಿ ಎರಡೂ ಸಂಘಟನೆಗಳ ಲೋಪಗಳನ್ನು ಗುರುತಿಸುವುದು ಸಾಧ್ಯ.

ಈ ಎರಡರ ಬೆರಕೆ ವಿಲೀನ ಪ್ರಕ್ರಿಯೆಯಾಗುತ್ತದೆಯೆ? ಕೂಡಿಕೆಯಾಗುತ್ತದೆಯೆ? ವಿಘಟನೆಯಾಗುತ್ತದೆಯೆ? ಪುನರ್ನಿರ್ಮಾಣವಾಗುತ್ತದೆಯೇ? ಎನ್ನುವುದು ಎರಡೂ ಸಂಘಟನೆಗಳ ಶಕ್ತಿ ಸಾಮರ್ಥ್ಯ, ಲೋಪ-ದೋಷಗಳ ಮೇಲೆ ಹೊಂದಿಕೊಂಡಿದೆ.

ಎರಡೂ ಶಕ್ತವಾಗಿದ್ದಾಗ ಹೆಗಲಿಗೆ ಹೆಗಲು ಕೊಟ್ಟು ಒಗ್ಗೂಡಲು ಸಾಧ್ಯ. ಎರಡೂ ತಮ್ಮ ಲೋಪಗಳನ್ನು ಅರಿತಿದ್ದಾಗ ಸಂಬಂಧ ಸದೃಢವಾದೀತು. ಕುರುಡನ ಹೆಗಲ ಮೇಲೆ ಹೆಳವ ಕೂತರೆ ದಾರಿ ಸಾಗೀತು. ಕುರುಡನೇ ಹೆಳವನ ಹೆಗಲ ಮೇಲೆ ಕೂತರೆ ಎದುರಿಗೆ ಉಳಿಯುವುದು ಒಂದು ದೊಡ್ಡ ಪ್ರಶ್ನೆ ಮಾತ್ರ. ಆದರೆ ಸದ್ಯದ ರಾಜಕಾರಣದಲ್ಲಿ ಆರ್ಥಿಕ-ಸಾಮಾಜಿಕ ವಸ್ತುಸ್ಥಿತಿಯ ಅರಿವಿರುವ ಚಿಂತಕರು ತೊಡಗಿಸಿಕೊಳ್ಳುವ ಅಗತ್ಯವಿದೆ ಎನ್ನುವುದಂತೂ ನಿಜ.

೨. 'ರಾಜಕಾರಣ'ಕ್ಕೆ ಒಂದು ಶುದ್ಧ ಪರ್ಯಾಯ ಸಾಧ್ಯವೆ ? ಅಂಥದ್ದೊಂದು ಸಾಧ್ಯವಾದರೆ ಅದು ಬೆಟ್ಟದ ನೆಲ್ಲಿಕಾಯಿಗೂ, ಸಮುದ್ರದೊಳಗಣ ಉಪ್ಪಿಗೂ ನಂಟು ಬೆಸೆದ ಹಾಗೆ.

೩. ಒಂದು ಸಂದರ್ಭದಲ್ಲಿ ಪ್ರತಿಕ್ರಿಯಿಸುವ, ಪ್ರತಿಭಟನೆ ನಡೆಸುವ ಮೂಲಕ ತಮ್ಮ ಅಸ್ತಿತ್ವವನ್ನು ಸಾರುವ ಸಂಘಟನೆಗಳಿಗಿಂತ ಹೆಚ್ಚಾಗಿ ನಿರಂತರವಾಗಿ ಜನಪರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸಂಸ್ಥೆಗಳ ಅಗತ್ಯ ಸಮಾಜಕ್ಕಿದೆ. ರಾಜಕಾರಣದಲ್ಲಿ ಯಶಸ್ವಿಯಾಗುವುದಕ್ಕೆ ಜನಬಲದ ಜೊತೆಗೆ ಧನಬಲವೂ ಬೇಕು. ಜಾತ್ಯತೀತ ಮನೋಭಾವದ, ಜನಪರ ಪಕ್ಷವೊಂದನ್ನು ಹುಟ್ಟುಹಾಕುವ ಹಿನ್ನೆಲೆಯಲ್ಲಿ ಸದ್ಯಕ್ಕೆ ಅವಕಾಶಗಳು ಕಡಿಮೆ ಇದ್ದ ಹಾಗಿದೆ. ಕೃಷಿಕರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಸ್ವಪ್ರೇರಣೆಯ ಕಾರ್ಯಗಳನ್ನು ಹಮ್ಮಿಕೊಂಡು ಮೌಲ್ಯವರ್ಧಿತ ಉತ್ಪನ್ನಗಳ ಕಾರ್ಖಾನೆಗಳನ್ನು ಸ್ಥಾಪಿಸುವ ಮೂಲಕ, ಸಹಕಾರಿ ತತ್ವಗಳ

(೨೭ನೇ ಪುಟಕ್ಕೆ)

ಶೋಷಿತರ ಆಶೋತ್ತರವಾಗಲಿ

○ ಜೆ. ಶ್ರೀನಿವಾಸನ್
ಅಧ್ಯಕ್ಷರು, ಹಿಂದುಳಿದ ವರ್ಗಗಳ ಒಕ್ಕೂಟ

೧. ಪರ್ಯಾಯ ರಾಜಕಾರಣದ ಪ್ರಯತ್ನ ಎಂದಾದರೂ ಒಂದು ದಿನ ನಡೆಯಲೇಬೇಕಾಗಿತ್ತು. ಅದು ಇಂದು ಕೈಗೂಡಿರುವುದಕ್ಕೆ ಸಂತೋಷ. ಪರ್ಯಾಯ ರಾಜಕಾರಣ ಆದಷ್ಟು ಶೀಘ್ರ ಕಾರ್ಯರೂಪಕ್ಕೆ ಬರಲೆಂಬುದು ನನ್ನ ಅಭಿಲಾಷೆ

೨. ಪ್ರಸ್ತುತ ರಾಜಕಾರಣ ಜನಪರವಾಗಿರದೆ ಜನವಿರೋಧಿ ರಾಜಕಾರಣವಾಗಿದೆ. ಇಂದು ರಾಜಕಾರಣಿಗಳು ಎಂದಾಕ್ಷಣ ಜನರು ತೀರ ಕೆಟ್ಟ ದೃಷ್ಟಿಯಿಂದ ನೋಡುತ್ತಾರೆ. ಹಾಗೂ ರಾಜಕಾರಣಿಯು ಅವನ ಸ್ವಂತ ಲಾಭಕ್ಕೋಸ್ಕರ ಈ ಕ್ಷೇತ್ರಕ್ಕೆ ಬಂದಿದ್ದಾನೆ ಎಂಬ ಭಾವನೆ ಜನರ ಮನಸ್ಸಿನಲ್ಲಿ ನಾಟಿ ಹೋಗಿದೆ. ಇದೇ ರೀತಿ ರಾಜಕಾರಣಿಗಳು ತಮ್ಮ ಕರ್ತವ್ಯ ಆದರ್ಶ ಮರೆತು, ಜನರನ್ನು ಮರೆತು, 'ಚೋಟಾ ಮಹಾರಾಜ'ರಂತೆ ವರ್ತಿಸುತ್ತಿದ್ದರೆ ಬಹುಶಃ ಜನರು ಅವರನ್ನು ಛೀ... ಥೂ... ಎಂದು ಉಗುಳುವ ದಿನ ಸನ್ನಿಹಿತವಾಗದಿರದು. ಈಗಾಗಲೇ ಉತ್ತರ ಭಾರತದಲ್ಲಿ ಜನ ಪ್ರತಿನಿಧಿಯೆನಿಸಿಕೊಂಡವರೆಲ್ಲ ತುಪಾಕಿ ಹೊತ್ತ ಜನರ ಬೆಂಗಾವಲಿಲ್ಲದೆ ತಿರುಗಾಡುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವಕ್ಕೆ ಇಂತಹ ಪರಿಸ್ಥಿತಿ ಬರಬಾರದಿತ್ತು ಆದರೆ ಬಂದುಹೋಗಿದೆ. ಈಗಿನ ಪರಿಸ್ಥಿತಿಗೆ ಸಂಪೂರ್ಣ ವ್ಯತಿರಿಕ್ತವಾಗಿ ಪರ್ಯಾಯ ರಾಜಕಾರಣ ಮೂಡಿಬರಬೇಕು. ಜನರೊಡನೆ ಸ್ಪಂದಿಸುವ, ವಿಶೇಷವಾಗಿ ರೈತರು, ಕಾರ್ಮಿಕರು, ಕೂಲಿಕಾರರು, ಬಡವರು, ಶೋಷಿತರ ಆಶೋತ್ತರಗಳಿಗೆ ಒತ್ತಾಸೆಯಾಗುವಂತಹ ರಾಜಕಾರಣಿಗಳನ್ನು ಮತ್ತು ರಾಜಕೀಯವನ್ನು ಹುಟ್ಟುಹಾಕುವ ಕೆಲಸವನ್ನು ಪರ್ಯಾಯ ರಾಜಕಾರಣ ಮಾಡಬೇಕು.

೩. ಸಾಮಾಜಿಕ ನ್ಯಾಯದಲ್ಲಿ ನಂಬಿಕೆ, ನಿಷ್ಠೆ ಇರುವಂತಹ, ಬಹುಜನರ ಹಿತಾಸಕ್ತಿಯನ್ನು ಕಾಪಾಡುವಂತಹ ಚಿಂತಕರು, ಸಮಾಜ ಸೇವಕರು ಮತ್ತು ಶುದ್ಧ ಚಾರಿತ್ರ್ಯವುಳ್ಳ, ಕಳಂಕರಹಿತ ಹೋರಾಟಗಾರರನ್ನು ಒಳಗೊಂಡ ಶಕ್ತಿಗಳು ಒಗ್ಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸಬೇಕಾಗುತ್ತದೆ.

೪. ಜನಪರ ಚಳವಳಿಗಳಲ್ಲಿ ಇರುವಂತಹ ವ್ಯಕ್ತಿ ಮತ್ತು ಶಕ್ತಿಗಳು ಅಧಿಕಾರ ದಾಹಕ್ಕಿಂತ ಕರ್ತವ್ಯ ದಾಹವುಳ್ಳ ವ್ಯಕ್ತಿಗಳಾಗಿರಬೇಕು. ಅಧಿಕಾರವೊಂದನ್ನೇ ಗುರಿಯಾಗಿಟ್ಟುಕೊಂಡು ರಾಜಕಾರಣ ಮಾಡುವುದರ ಬದಲಾಗಿ ಈ ದೇಶ ಕಂಡ ಮಹಾನ್ ವ್ಯಕ್ತಿಗಳು ಕೊಟ್ಟಿರುವಂತಹ ತಾತ್ವಿಕ ನಿಲುವುಗಳ ಆಧಾರದ ಮೇಲೆ ಒಗ್ಗೂಡಿದಾಗ ಮಾತ್ರ ಪರ್ಯಾಯ ರಾಜಕಾರಣಕ್ಕೆ ಅಥವಾ ಪರ್ಯಾಯ ರಾಜಕೀಯ ಪಕ್ಷಕ್ಕೆ ಒಂದು ಭದ್ರ ಬುನಾದಿ ಸಿಗುತ್ತದೆ. ಸಣ್ಣ ಪುಟ್ಟ ವ್ಯತ್ಯಾಸಗಳನ್ನ ಮರೆತು ನಾನು-ತಾನು, ನನ್ನ ಸಂಘಟನೆ-ತನ್ನ ಸಂಘಟನೆ ಎಂಬ ಭಿನ್ನಾಭಿಪ್ರಾಯಗಳನ್ನು ಗಾಳಿಗೆ ತೂರಿ ಒಂದು ಹೊಸ ಚಿಂತನೆ, ಹೊಸತತ್ವದ ಆಧಾರದ ಮೇಲೆ ಒಗ್ಗೂಡಬೇಕಾಗುತ್ತದೆ. ಅಂತಿಮ ಗುರಿ ಶೋಷಿತರ, ಬಡವರ, ಸಮಾಜದಲ್ಲಿ ತುಳಿತಕ್ಕೊಳಗಾದವರ ಮತ್ತು ಎಲ್ಲಾ ವರ್ಗದವರ ಅಭ್ಯುದಯವನ್ನು ಆಶಿಸುವ ವ್ಯಕ್ತಿಗಳು ಒಟ್ಟಾದಾಗ ಒಂದು ಮಹಾನ್ ಶಕ್ತಿಯಾಗಲು ಸಾಧ್ಯ.

೫. ಈ ಹಂತದಲ್ಲಿ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳ ಬಗ್ಗೆ ಸಲಹೆ ಕೊಡುವುದು ಬಹುಶಃ 'Putting the cart before the horse' ಎಂಬಂತಾಗುತ್ತದೆ ಎಂಬುದು ನನ್ನ ಭಾವನೆ. ಪರ್ಯಾಯ ರಾಜಕೀಯ ಶಕ್ತಿ ರೂಪಿಸುವ ಪ್ರಕ್ರಿಯೆಯಲ್ಲಿ ನೀತಿಸಂಹಿತೆ ಮತ್ತು ಕಾರ್ಯಸೂಚಿಗಳು ತಾವೇ ರೂಪುಗೊಳ್ಳುತ್ತವೆ. □

ದಲಿತ ಸಂಘರ್ಷ ಸಮಿತಿ ಮತ್ತು ರೈತ ಸಂಘ ಜೊತೆಗೂಡಿ ಪರ್ಯಾಯ ರಾಜಕಾರಣ ರೂಪಿಸಲು ಹೊರಟಿರುವುದು ಸ್ವಾಗತಾರ್ಹ ವಿಷಯವೇ ಸರಿ. ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘಗಳೆರಡೂ ಒಡೆದ ಮನೆಗಳು. ಹೀಗಾಗಿ ಎಲ್ಲ ದಲಿತರೂ ಎಲ್ಲ ರೈತರೂ ಈ ಸಂಘಟನೆಯಲ್ಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಇವೆರಡೂ ಸಂಘಟನೆಗಳು ಒಂದುಗೂಡಿ ಕೆಲಸಮಾಡಿ, ಯಶಸ್ಸನ್ನು ಸಂಪಾದಿಸಿದರೆ, ಇವೆರಡೂ ಸಂಸ್ಥೆಗಳಿಂದ ಒಡೆದುಕೊಂಡು, ದೂರ ಸರಿದಿರುವವರೂ ಮುಂದೆ ಒಂದಾನೊಂದು ದಿನ ಇವರೊಡನೆ ಕೂಡಿಕೊಂಡಾರು.

ಸಮಸ್ಯೆಗಳನ್ನು ಪರಿಹರಿಸುವುದರ ಬದಲು ಈಗಿನ ಪಕ್ಷ ರಾಜಕೀಯ ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತಿವೆ.



○ ಎಚ್.ಎಸ್. ದೊರೆಸ್ವಾಮಿ
ಹಿರಿಯ ಗಾಂಧಿವಾದಿಗಳು

ನಮ್ಮ ನೀತಿಸಂಹಿತೆ ಹಾಗೂ ಮಾರ್ಗೋಪಾಯಗಳು ನಾವು ಎಂತಹ ಸಮಾಜ ಸೃಷ್ಟಿ ಮಾಡಬಯಸುತ್ತೇವೆ ಎಂಬುದನ್ನು ಅವಲಂಬಿಸುತ್ತದೆ. ಕೊನೆಯ ಮನುಷ್ಯನಿಗೂ ಬದುಕಿ ಬಾಳುವ ಹಕ್ಕನ್ನು ದೊರೆಯುವಂತೆ ಮಾಡುವುದು, ದುಶ್ಚಟ ದುರ್ವ್ಯಸನಗಳನ್ನು ದೂರ ಮಾಡುವ ಕಠಿಣ ತೀರ್ಮಾನಗಳನ್ನು ಕೈಗೊಳ್ಳುವುದು, ಕಾನೂನು ರೀತ್ಯಾ ರಾಜ್ಯ ಆಳುವುದು, ಸಮಾಜದ ಆರ್ಥಿಕ, ಸಾಮಾಜಿಕ ಕಂದರಗಳನ್ನು ಮುಚ್ಚಲು ಯೋಜನಾಬದ್ಧ ಕಾರ್ಯ ಕೈಗೊಳ್ಳುವುದು, ಭ್ರಷ್ಟಾಚಾರವನ್ನೂ ಎಲ್ಲ ಹಂತದಲ್ಲಿ ತಡೆಗಟ್ಟುವುದು, ಜಾತಿ ಮತ ಧರ್ಮಗಳನ್ನು ರಾಜಕೀಯದೊಡನೆ ಬೆರೆಸದ ಸಂಕಲ್ಪ ಕೈಗೊಳ್ಳುವುದು, ದುಡಿಮೆಯ ಸಾಧನಗಳಾದ ಭೂಮಿ, ಯಂತ್ರ ಮುಂತಾದವು ದುಡಿಯುವವನ ವಶಕ್ಕೆ ಒಪ್ಪಿಸುವುದು ಇವೆಲ್ಲಾ ಆಗಬೇಕು.

ಪರ್ಯಾಯ ರಾಜಕಾರಣ ಗ್ರಾಮ ಪಂಚಾಯಿತಿಯಿಂದ ಆರಂಭವಾಗಲಿ



ಅಧಿಕಾರ ಕಳೆದುಕೊಂಡ ಭಾರತೀಯ ಜನತಾ ಪಕ್ಷ ಅಧಿಕಾರವನ್ನು ಮತ್ತೆ ವಶಪಡಿಸಿಕೊಳ್ಳಲು ಚಡಪಡಿಸುತ್ತಿದೆ. ಅದಕ್ಕಾಗಿ ಏನೇನೋ Gymmic ಗಳನ್ನು ಮಾಡುತ್ತಿದೆ. ಕಾಂಗ್ರೆಸ್ ಕೂಡ ತನ್ನ ಅಸ್ತಿತ್ವ ಕಳೆದುಕೊಂಡು ಕಮ್ಯುನಿಸ್ಟ್ ಪಕ್ಷಗಳನ್ನು ಅಧಿಕಾರ ದುರಾಸೆಯಿಂದ ಓಲೈಸುತ್ತಿದೆ. ಭ್ರಷ್ಟ ರಾಜಕಾರಣಿಗಳನ್ನು ಮಂತ್ರಿಗಳನ್ನಾಗಿ ಮಾಡಿಕೊಂಡಿದೆ. ರಾಜಕೀಯ ಪಕ್ಷಗಳಲ್ಲಿರುವವರಿಗೆ ತಮಗೇನು ಸ್ಥಾನ ದೊರೆತೀತು ಎಂಬುದರದೇ ಪ್ರಥಮ ಆದ್ಯತೆ. ಎರಡನೆಯ ಆದ್ಯತೆ ತನ್ನ ಪಕ್ಷದ್ದು. ಪಕ್ಷದ ನಾಮಬಲದಿಂದ ತಾನು ಆಯ್ದು ಬರಬಹುದು ಎಂಬ ನಂಬಿಕೆ ಅವರದು. ಮೂರನೆಯ ಆದ್ಯತೆ ತನ್ನನ್ನು ಆಯ್ದು ಕಳುಹಿಸಿದ ಮತದಾರನದು, ದೇಶದ್ದು. ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ತನ್ನ ಆದ್ಯತೆಯನ್ನು ಬದಲಾವಣೆ ಮಾಡಿಕೊಳ್ಳಬೇಕು. ಅವು ರಾಜಕೀಯ ಪಕ್ಷವಾಗಿ ಪರಿವರ್ತನೆಗೊಳ್ಳದೆ ಒಂದು ಚಳವಳಿಯಾಗಿ ಅರ್ಥಾತ್ ಜನಪರ ಚಳವಳಿಯಾಗಿ ರೂಪುಗೊಳ್ಳಬೇಕು. ಹಾಗಾದಾಗ ಮಾತ್ರ ಅದು ಒಂದು ಪರ್ಯಾಯ ರಾಜಕೀಯ ಶಕ್ತಿಯಾಗಿ ಬೆಳೆಯಲು ಸಾಧ್ಯವಾದೀತು.

ಪರ್ಯಾಯ ರಾಜಕಾರಣದ ಸ್ವರೂಪ ಹೇಗಿರಬೇಕೆಂಬುದೂ ಅತಿ ಮುಖ್ಯವಾದ ವಿಚಾರವೇ ಸರಿ. ಈಗಿನ ಪಕ್ಷ ರಾಜಕೀಯದಲ್ಲಿ ಪ್ರತಿನಿಧಿ ಆಗುವವನು ಪಕ್ಷದ ಪ್ರತಿನಿಧಿಯಾಗುತ್ತಾನೆಯೇ ಹೊರತು ಮತದಾರನ ಪ್ರತಿನಿಧಿಯಾಗಲಾರ. ಹಳ್ಳಿಯಲ್ಲೋ, ತಾಲ್ಲೂಕಿನಲ್ಲೋ ಇರುವ ಇವರನ್ನು ಹುರಿಯಾಳನ್ನಾಗಿ ಆಯ್ಕೆ ಮಾಡುವವರು ಪಕ್ಷದ ಪ್ರಮುಖರು. ಆಯ್ಕೆ ಆಗುವುದು ಬೆಂಗಳೂರಲ್ಲೋ, ದೆಹಲಿಯಲ್ಲೋ.

ಕಳೆದ ಚುನಾವಣೆಗಳ ಸಮಯದಲ್ಲಿ ನಂಜುಂಡಸ್ವಾಮಿ, ಹಳ್ಳಿಗಳಲ್ಲಿ ನೆಲಸಿರದ, ಬೆಂಗಳೂರು ಮೈಸೂರುಗಳಲ್ಲಿ ವಕೀಲಿ ವೃತ್ತಿಯಲ್ಲಿದ್ದವರನ್ನೂ ಪಾರ್ಲಿಮೆಂಟಿಗೆ ಶಾಸನ ಸಭೆಗೆ ನಿಲ್ಲಿಸಿದರು. ಚುನಾವಣೆಯ ಫಲಿತಾಂಶ, ನಂಜುಂಡಸ್ವಾಮಿ ಅವರ ಆಯ್ಕೆಯ ಕ್ರಮವೇ ಸರಿಯಲ್ಲ ಎಂಬುದನ್ನು ಸಾಬೀತು ಮಾಡಿತು. ದಲಿತ ಸಂಘರ್ಷ ಸಮಿತಿ ಮತ್ತು ಪುಟ್ಟಣ್ಣಯ್ಯನವರ ರೈತಸಂಘ ಏಕಾಏಕಿ ಶಾಸನಸಭೆ, ಪಾರ್ಲಿಮೆಂಟುಗಳನ್ನು ಕಬ್ಜಾ ಮಾಡುವ ವಿಚಾರ ಕೈ ಬಿಡಬೇಕು. ಈ ಸಂಸ್ಥೆಗಳ ಮುಂಚೂಣಿಯಲ್ಲಿರುವವರಿಗೆ ಅಧಿಕಾರ ಸ್ಥಾನಕ್ಕೆ ಬರುವುದೇ ಪರಮ ಉದ್ದೇಶ ಆಗಬಾರದು. ಈ ಸ್ವಾರ್ಥ ರಾಜಕಾರಣವನ್ನು ಜನ ನೋಡಿ ನೋಡಿ ಬೇಸತ್ತಿದ್ದಾರೆ.

ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘಗಳೆರಡೂ ಒಡೆದ ಮನೆಗಳು. ಹೀಗಾಗಿ ಎಲ್ಲ ದಲಿತರೂ ಎಲ್ಲ ರೈತರೂ ಈ ಸಂಘಟನೆಯಲ್ಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಇವೆರಡೂ ಸಂಘಟನೆಗಳು ಒಂದುಗೂಡಿ ಕೆಲಸಮಾಡಿ, ಯಶಸ್ಸನ್ನು ಸಂಪಾದಿಸಿದರೆ, ಇವೆರಡೂ ಸಂಸ್ಥೆಗಳಿಂದ ಒಡೆದುಕೊಂಡು, ದೂರ ಸರಿದಿರುವವರೂ ಮುಂದೆ ಒಂದಾನೊಂದು ದಿನ ಇವರೊಡನೆ ಕೂಡಿಕೊಂಡಾರು.

ಆದ್ದರಿಂದ ಈ ಒಕ್ಕೂಟ ಮೊದಲು ಪಂಚಾಯ್ತಿಗಳ ಚುನಾವಣೆಗೆ ಆದ್ಯತೆ ನೀಡಬೇಕು. ಪ್ರತಿ ಗ್ರಾಮದಲ್ಲೂ ಮತದಾರರ ಸಂಘಗಳನ್ನು ರಚಿಸಬೇಕು. ಮತದಾರ ಸಂಘದ ಅಭಿಪ್ರಾಯ ಪಡೆದು ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳಿಗೆ ಉಮೇದುದಾರರನ್ನು ನಿಲ್ಲಿಸಬೇಕು. ಈ ಮೂಲಕ ಪಂಚಾಯ್ತಿಗಳನ್ನು ವಶಮಾಡಿಕೊಳ್ಳಬೇಕು. ಆ ನಂತರ ಶಾಸನ ಸಭೆ ಪಾರ್ಲಿಮೆಂಟಿಗೆ ಉಮೇದುದಾರರನ್ನು ನಿಲ್ಲಿಸುವ ವಿಚಾರ ಮಾಡಬೇಕು.

ಹಿಂಸಾಚಾರ, ಶೋಷಣೆ, ಜಾತೀಯತೆ ಮತಾಂಧತೆಗಳನ್ನು ಸಮಾಜದಿಂದ ತೊಡೆದು ಹಾಕಬೇಕು. ಬಡವ-ಬಲ್ಲಿದ, ಮೇಲು-ಕೀಳು, ದುಡಿಯುವ-ದುಡಿಸಿಕೊಳ್ಳುವವ, ಉಚ್ಚ-ನೀಚ ಈ ಎಲ್ಲ ಭೇದಾಸುರರನ್ನು ಸಮಾಜದಿಂದ ಗುಡಿಸಿ ಹಾಕುವುದಾಗಬೇಕು. ಈ ಮಾತು ಆಡುವುದು ಸುಲಭ. ಆದರೆ ಈ ಕೆಲಸ ಮಾಡಲಿಲ್ಲವಾದರೆ ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳುವವರಾಗುತ್ತಾರೆ ಈ 'ಪರ್ಯಾಯ ರಾಜಕೀಯ' ಪಟುಗಳು!

ಈ ನಮ್ಮ ಕನಸನ್ನು ನನಸು ಮಾಡಬೇಕಾದರೆ, ಈ ಎಲ್ಲ ಗುರಿಗಳಿಗೆ ಬದ್ಧರಾಗಿರುವವರು ರಾಜ್ಯದ ಚುಕ್ಕಾಣಿ ಹಿಡಿಯಬೇಕಾದೀತು. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಸಮಯ ಸಾಧಕ ಪಕ್ಷವಾಗಿ ರೂಪುಗೊಂಡಿದೆ. ಸಿಪಿಐ ಪಕ್ಷದ ಇತಿಹಾಸವನ್ನ ನೋಡಿದರೆ, ಅದು ಸ್ವಾತಂತ್ರ್ಯ ಬಂದ ಮೇಲಂತೂ ತುಂಬ ಕೆಟ್ಟದಾಗಿ ನಡೆದುಕೊಂಡಿದೆ. ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಘೋಷಿಸಿದಾಗ ಸಿಪಿಐ ಇಂದಿರಾಗಾಂಧಿ ಅವರ ಜೊತೆಗೆ ಸೇರಿಕೊಂಡಿತು. ಜಯಪ್ರಕಾಶರನ್ನು Fascist ಎಂದು ಕರೆಯಿತು. Anti Fascist ಸಮ್ಮೇಳನ ನಡೆಸಿತು. ಊರಿಗೆಲ್ಲ ಒಂದು ದಾರಿಯಾದರೆ ಎಡವಟ್ಟನಿಗೇ ಒಂದು ದಾರಿ!

ಯಾವುದೇ ರಾಜಕೀಯ ಪಕ್ಷವನ್ನು ಈ ಸಂಘಟನೆಗೆ ಆಹ್ವಾನಿಸಬಾರದು. ವಿದ್ಯಾವಂತರಲ್ಲಿ ಅರ್ಧ ಜನ ಆಡಳಿತ ನಡೆಸುವವರ ಜೊತೆಗೆ ಹೆಣೆದುಕೊಂಡುಬಿಟ್ಟಿದ್ದಾರೆ. ಎನ್‌ಜಿಒಗಳಲ್ಲಿ ಬಹಳಷ್ಟು ಜನ ಪರದೇಶದವರ, ಭಾರತ ಸರ್ಕಾರದ Pay Roll ನಲ್ಲಿ ಇದ್ದಾರೆ. ರಾವಣಾ ಸ್ವಸ್ತಿ ರಾಮಾಸ್ವಸ್ತಿ ಎಂದು ಅಧಿಕಾರದಲ್ಲಿರುವವರನ್ನು ಓಲೈಸುವವರಿಗೂ ಕಡಿಮೆ ಇಲ್ಲ.

ಆದ್ದರಿಂದ ಇತರರನ್ನೆಲ್ಲ ತಮ್ಮ ಸಂಘಟನೆಗೆ ಆಹ್ವಾನಿಸದೆ ಇರುವುದು ಉತ್ತಮ. ಆದ್ದರಿಂದ ಈ ಹೊಸ ಸಂಘಟನೆ ಬೇರೆ ಯಾರನ್ನೂ ಕೂಡದೆ, ಜನಾಧಾರಿತವಾಗಿ ಬೆಳೆಯಬೇಕು. ಜನರ ಸಮಸ್ಯೆಗಳನ್ನು ತೆಗೆದುಕೊಂಡು ಶಾಸನ ಸಭೆಯ ಒಳಗೂ ಹೊರಗೂ ಹೋರಾಡಬೇಕು. ಆಗ ಜನತೆ ಸಹಜವಾಗಿ ಈ ಸಂಘಟನೆಗೆ ಬೆಂಬಲ ನೀಡುತ್ತಾರೆ.

ರೈತ ಸಂಘಟನೆಯಲ್ಲಿಯೂ ಒಂದು ಶಿಥಿಲತೆ ಇದೆ. ಆ ಸಂಘಟನೆಯಲ್ಲಿ ಪಟ್ಟಭದ್ರ ಭೂಮಾಲಿಕರು ಹಿಡಿ ಮಂದಿ ಇದ್ದರೆ, ಒಂದು ಎರಡು ಐದು ಎಕರೆ ಇರುವವರು ಬಹುಸಂಖ್ಯೆಯಲ್ಲಿದ್ದಾರೆ. ಈ ಸಣ್ಣ ಭೂ ಹಿಡುವಳಿದಾರರನ್ನು ರೈತಸಂಘ Gun fodder ಆಗಿ ಉಪಯೋಗಿಸಿಕೊಳ್ಳಲು ಇಟ್ಟುಕೊಂಡಿದೆ. ಈ ಪಟ್ಟಭದ್ರರು ಕ್ರಾಂತಿಕಾರಿ ಸಾಮಾಜಿಕ, ಆರ್ಥಿಕ, ಮೂಲಭೂತ ಬದಲಾವಣೆಗೆ ತಯಾರಿದ್ದಾರೆಯೇ ಎಂಬುದು ನನ್ನ ಪ್ರಶ್ನೆ. ಇದಕ್ಕೆ ಸಮಾಧಾನಕರವಾದ ಉತ್ತರವನ್ನು ಈ ಸಂಘಟನೆ ಕಂಡುಕೊಳ್ಳಬೇಕು.

ಈಗಿರುವ ಹಳಸಲು ವ್ಯವಸ್ಥೆಗೇ ತೇಪೆಹಾಕಿ ಅಷ್ಟಕ್ಕೇ ತೃಪ್ತಿ ಪಟ್ಟುಕೊಳ್ಳುವ ವಿಚಾರ ಈ ಸಂಘಟನೆಯದಾದರೆ, ಈ ಸಂಘಟನೆ ಈಗಿರುವ ಹತ್ತು ಸಂಘಟನೆಗಳ ಜೊತೆಗೆ ಹನ್ನೊಂದನೆಯದಾದೀತು. ಹೊಸ ಮೌಲ್ಯಗಳನ್ನು ಕಂಡುಕೊಳ್ಳುವ, ಹೊಸದೊಂದು ಸಮಾಜವನ್ನು ರೂಪಿಸುವ ಎದೆಗಾರಿಕೆ ಇದ್ದರೆ ಈ ಕೆಲಸಕ್ಕೆ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘಟನೆಗಳು ಕೈ ಹಾಕಲಿ. ಆ ವಿಚಾರ ಇಲ್ಲವಾದರೆ ಇವರು ಈಗಿರುವ ರಾಜಕೀಯ ಪಕ್ಷಗಳಲ್ಲೇ ಲೀನರಾಗಿ, ಅವುಗಳ ಬಾಲಬಡುಕರಾಗಿದ್ದುಕೊಂಡು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲಿ. □

ಶುದ್ಧ ಪರ್ಯಾಯ ಸಾಧ್ಯವೇ?

(೨೫ನೇ ಪುಟದಿಂದ)

ಮೇಲೆ ಒಗ್ಗೂಡುವ ಮೂಲಕ ಆರ್ಥಿಕ ಸುಭದ್ರತೆ ಕಂಡುಕೊಳ್ಳುವುದಾದಲ್ಲಿ ಅಂಥ ಶಕ್ತಿಗಳು ರಾಜಕೀಯವಾಗಿಯೂ ದೃಢವಾಗಿ ನಿಲ್ಲಬಲ್ಲವು. ಸಾಮಾಜಿಕವಾಗಿಯೂ ಒಳಜಾತಿಗಳ ವಿಂಗಡಣೆಯನ್ನು ಕಳೆದುಕೊಳ್ಳುವ ತನಕ ನಂಬಿದ ಮೌಲ್ಯಗಳ ನೈತಿಕತೆಯ ಪ್ರಶ್ನೆ ಕಾಡುವುದು ತಪ್ಪದು. ನಂಬಿದ ತತ್ವಗಳಿಗೆ ಬದ್ಧತೆ ಇರುವ ಶಕ್ತಿಗಳೂ, ವ್ಯಕ್ತಿಗಳೂ 'ಪರ್ಯಾಯ ರಾಜಕಾರಣ' ಮಾತ್ರವಲ್ಲ ಜನ ಮೆಚ್ಚುವ ಯಾವ ಕಾರ್ಯವನ್ನೂ ಮಾಡಲು ಸಾಧ್ಯ.

೪. ಗ್ರಾಮೀಣ ಮಟ್ಟದಲ್ಲಿ ದೇಶದ ಸ್ಥಿತಿಯ ಬಗ್ಗೆ, ಜನ ಪ್ರತಿಕ್ರಿಯಿಸಬೇಕಾದ ರೀತಿಯ ಬಗ್ಗೆ ಅರಿವು ನೀಡುವ ಕಾರ್ಯಾಗಾರಗಳು ನಡೆಯಬೇಕು. ಎಚ್ಚರವನ್ನು ಇಂದಿನ ಯುವ ಜನಾಂಗದಲ್ಲೇ ಬಿತ್ತಿದರೆ ನಾಳೆ ಜವಾಬ್ದಾರಿಯುತ ನಡತೆಯ ಫಸಲು ಸಿಕ್ಕಬಹುದು. ಒಂದು ಸುದೀರ್ಘ ಕಾರ್ಯವ್ಯೂಹವೇ ಬೇಕಾಗಬಹುದು.

೫. ಜಾತ್ಯತೀತ ಮನೋಭಾವದ ಚಟುವಟಿಕೆಗಳು, ಆರ್ಥಿಕ ಸ್ವಾವಲಂಬನೆ, ಸಬಲತೆಯ ಕಾರ್ಯಗಳಿಗೆ ಆದ್ಯತೆ ಮುಖ್ಯವಾಗಿವೆ. ಸಾಮಾಜಿಕ-ಆರ್ಥಿಕ ನೆಲೆಯ ಬುನಾದಿಯನ್ನು ಭದ್ರಪಡಿಸಿಕೊಂಡು ರಾಜಕಾರಣಕ್ಕೆ ಕೈ ಚಾಚುವುದು ಸಾಧ್ಯ. ಹಾಗಿದ್ದಾಗಲೂ ಚಿಂತಕ ಕೇಂದ್ರಗಳನ್ನು ಕ್ರಿಯಾಕೇಂದ್ರಗಳಿಂದ ಪ್ರತ್ಯೇಕವಾಗಿ ಉಳಿಸಿಕೊಳ್ಳುವುದು ಸೂಕ್ತ. ಪ್ರತಿ ಚಳವಳಿಯಲ್ಲಿಯೂ ಚಿಂತಕ ಕೇಂದ್ರಗಳು ಒಂದೆಡೆ ಇದ್ದು ಅಲ್ಲಿಯ ವಿಚಾರಗಳು ಕ್ರಿಯಾ ಕೇಂದ್ರಗಳ ತನಕ ಪ್ರವಹಿಸಿ, ಅಲ್ಲಿ ಪ್ರಯೋಗವಾಗಿ - ಅದರ ಫಲಿತಾಂಶಗಳು ಮರಳಿ ಪ್ರವಹಿಸುವ ರೀತಿಯನ್ನು ಗಮನಿಸಬಹುದು. ಈ ಸ್ವರೂಪದ ಸಂವಹನ ಶಕ್ತವಾಗಿದ್ದಷ್ಟೂ ನಿರ್ಧಾರಗಳು ಸೂಕ್ತವಾಗಿ ಹೊರಹೊಮ್ಮುತ್ತವೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು – ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಇನ್ನು ಮುಂದೆ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಸಮಕಾಲೀನ ಕಣ್ಣಲ್ಲಿ

ಅಂಬೇಡ್ಕರರ ಆರ್ಥಿಕ ಚಿಂತನೆಗಳು

ಆನಂದ್ ತೇಲ್‌ತುಂಬ್ಡೆ
ಅನು : ಕೆ. ವಿದ್ಯಾ

ಅವಲೋಕನ

ಹಣಕಾಸು ವ್ಯವಸ್ಥೆ, ಆರ್ಥಿಕ ನಿರ್ವಹಣೆ, ಭೂಸ್ವಾಮ್ಯಕ್ಕೆ ಸಂಬಂಧಪಟ್ಟ ವಿಷಯಗಳು, ಕೈಗಾರಿಕೀಕರಣ ಮತ್ತು ಅಭಿವೃದ್ಧಿ ಯೋಜನೆಗಳನ್ನು ಅರ್ಥಮಾಡಿಕೊಂಡಿದ್ದ ಒಬ್ಬ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾಗಿದ್ದ ಅಂಬೇಡ್ಕರ್ ತನ್ನ ಜೀವಿತಕಾಲದಲ್ಲಿ, ಅದಕ್ಕಿಂತಲೂ ಹೆಚ್ಚಾಗಿ ಮರಣದ ನಂತರ ನಾನಾ ವಿಧಗಳಲ್ಲಿ ಅಸಾಧಾರಣ ವಿದ್ಯಮಾನವಾಗಿ ಗೋಚರಿಸುತ್ತಿದ್ದಾರೆ. ನಮ್ಮ ಕಾಲದಿಂದ ಆತ ದೂರ ಸರಿದಷ್ಟು ಆತನ ವ್ಯಕ್ತಿತ್ವ ಶ್ರೇಷ್ಠತೆಯತ್ತ ದಾಪುಗಾಲಿಡುತ್ತಿದೆ. ತುಂಬಾ ಜನ ವಿದ್ವಾಂಸರು ಅವರ ಅಧ್ಯಯನಗಳಿಗೆ ಅರ್ಥ ವಿವರಣೆ ಕೊಡಲು ಪ್ರಯತ್ನಿಸಿದ್ದರೆ, ಅದಕ್ಕಿಂತಲೂ ಹೆಚ್ಚು ಜನ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಅವರ ಅಧ್ಯಯನದಲ್ಲಿ ತೊಡಗಿದ್ದಾರೆ.

ಅಸ್ಪೃಶ್ಯತೆಯ ಮತ್ತು ಜಾತಿವ್ಯವಸ್ಥೆಯ ತನ್ನ ನಿರಂತರ ಹೋರಾಟದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್‌ರವರು ಯಾವತ್ತಿನಿಂದ ದಲಿತರ ವಿಷಯಗಳನ್ನು ಗುರಿಯಾಗಿಸಿಕೊಂಡರೋ, ಅಂದಿನಿಂದ ಅವರೊಬ್ಬ 'ದಲಿತ ನಾಯಕ' ನೆಂದು ಗುರುತಿಸಲ್ಪಟ್ಟರು. ಈ ಐಡೆಂಟಿಟಿಯು ಅವರ ವ್ಯಕ್ತಿತ್ವದ ಹಲವು ಮಜಲುಗಳನ್ನು ಸಂಪೂರ್ಣವಾಗಿ ಮರೆಮಾಚುತ್ತದೆ. ನಂತರದ ದಿನಗಳಲ್ಲಿ ಅವರೊಬ್ಬ ಭಾರತ ಸಂವಿಧಾನದ ಮುಖ್ಯಶಿಲ್ಪಿ ಅಥವಾ ದೇಶದಲ್ಲಿ ಬೌದ್ಧಧರ್ಮದ ಪುನರುದ್ಧಾರಕರಾದರೂ ಅವರ ಈ 'ಐಡೆಂಟಿಟಿ'ಯನ್ನು ಕುಗ್ಗಿಸಿಲ್ಲ.

ಇದೊಂದು ಸಹಜ ಅಥವಾ ಮುಗ್ಧತೆಯ ವಿಷಯವೇನೂ ಅಲ್ಲ. ಅಸಹಾಯಕ ದಲಿತ ಗುಂಪುಗಳು ಅವರನ್ನೊಬ್ಬ ತಮ್ಮ ವಿಮೋಚಕ, ಉದ್ಧಾರಕ, ನಿಜವಾದ ದೇವಮಾನವ ಅಂಥ ಭಾವಿಸಿದರೆ, ಇತರರು ಅವರನ್ನೊಬ್ಬ ಕೇವಲ ಅಸ್ಪೃಶ್ಯರ ನಾಯಕನೆಂದು ಕಡೆಗಣಿಸಿದ್ದಾರೆ. ಇತರ ಕೆಲವರು ಅವರನ್ನು ಇಡೀ ಅಸ್ಪೃಶ್ಯರ ಸಮುದಾಯದ ನಾಯಕನೆಂದು ಒಪ್ಪಿಕೊಳ್ಳಲು ನಿರಾಕರಿಸಿ, ಅವರೊಬ್ಬ ಕೇವಲ ಅವರ ಉಪಜಾತಿಯ ನಾಯಕನೆಂದು ಅಪಹಾಸ್ಯ ಮಾಡಿದ್ದರು. ಇದೊಂದು ಕೇವಲ ಪಟ್ಟಭದ್ರ ಹಿತಾಸಕ್ತಿಯಾಗಿದ್ದು ಅವರನ್ನು ಜಾತಿ ಅಥವಾ ಸಮುದಾಯದ ನಾಯಕನೆಂಬುದನ್ನು ನಿರಾಕರಿಸಿ, ಆ ಮೂಲಕ ಅವರ ಹೋರಾಟದ ತೀವ್ರತೆಯನ್ನು ನಿರ್ಲಕ್ಷಿಸುವುದಾಗಿತ್ತು. ಯಾವಾಗ ಕಾನೂನಿನ ಮೂಲಕ ಅಸ್ಪೃಶ್ಯತೆಯ ಆಚರಣೆಯನ್ನು ತೊಡೆದುಹಾಕಿ ಸಂವಿಧಾನದಲ್ಲಿ ದಲಿತರಿಗೆ ಕೆಲವು ರಕ್ಷಣಾತ್ಮಕ ಕ್ರಮಗಳನ್ನು ಅಳವಡಿಸಲಾಯಿತೋ ಇನ್ನು ಅಂಬೇಡ್ಕರ್‌ರವರ ಪ್ರಸ್ತುತತೆಯ ಅಗತ್ಯವಿಲ್ಲ ಎನ್ನುವಂಥ ಅಭಿಪ್ರಾಯಗಳನ್ನು ಬಿಂಬಿಸಲಾಗಿತ್ತು.

ಇದಕ್ಕೆ ಉತ್ತರವೆನ್ನುವಂತೆ ಕಾನೂನಿನಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕಿದರೂ, ಅದು ಇನ್ನೂ ಆಚರಣೆಯಲ್ಲಿದ್ದದ್ದರಿಂದ ಅಂಬೇಡ್ಕರ್‌ರವರ ಪ್ರಸ್ತುತತೆ ಇದೆ ಎನ್ನುವ ಬಲವಾದ ಪ್ರತಿಕ್ರಿಯೆ ಅಂಬೇಡ್ಕರ್ ವಾದಿಗಳಿಂದ ವ್ಯಕ್ತವಾಗಿತ್ತು. ಈ ಪ್ರಸ್ತುತತೆಯ ಸಂಗತಿಯು ಪದೇ ಪದೇ ಉದಯಿಸುತ್ತಿದ್ದು ಅದನ್ನು ಭಿನ್ನ ಅಥವಾ ವರ್ತಮಾನದ ಜರೂರಿನೊಡನೆ ಮುಖಾಮುಖಿಯಾಗಿಸಬೇಕಾಗುತ್ತದೆ.

ತನ್ನ ಜೀವಿತಕಾಲದಲ್ಲಿ, ಅದಕ್ಕಿಂತಲೂ ಹೆಚ್ಚಾಗಿ ಮರಣದ ನಂತರ ನಾನಾ ವಿಧಗಳಲ್ಲಿ ಅಂಬೇಡ್ಕರ್ ಅಸಾಧಾರಣ ವಿದ್ಯಮಾನವಾಗಿ ಗೋಚರಿಸುತ್ತಿದ್ದಾರೆ. ಸಮಸ್ಯಾತ್ಮಕವಾಗಿ ನಮ್ಮ ಕಾಲದಿಂದ ಆತ ದೂರ ಸರಿದಷ್ಟು ಆತನ ವ್ಯಕ್ತಿತ್ವ ಶ್ರೇಷ್ಠತೆಯತ್ತ ದಾಪುಗಾಲಿಡುತ್ತಿದೆ. ಈ ಪ್ರಕ್ರಿಯೆಯು ಜಗತ್ತು ಈವರೆಗೆ ಗುಪ್ತವಾಗಿದ್ದ ಅವರ ದೊಡ್ಡಗುಣದ ಕೆಲವು ಅಂಶಗಳನ್ನು ಅರಿತುಕೊಳ್ಳುತ್ತದೆ ಎಂಬುದನ್ನು ತೋರಿಸುತ್ತಿದ್ದರೆ, ನಿಜವಾಗಿಯೂ ಇದು ಅವರ ಚಿಂತನೆ ಮತ್ತು ಕೆಲಸಗಳಿಗೆ ಸಿಗುವ ಪ್ರಶಂಸೆಯನ್ನು ಪ್ರತಿಬಿಂಬಿಸುವುದಿಲ್ಲ. ತುಂಬಾ ಜನ ವಿದ್ವಾಂಸರು ಅವರ ಅಧ್ಯಯನಗಳಿಗೆ ಅರ್ಥ ವಿವರಣೆ ಕೊಡಲು ಪ್ರಯತ್ನಿಸಿದ್ದರೆ, ಅದಕ್ಕಿಂತಲೂ ಹೆಚ್ಚು ಜನ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಅವರ ಅಧ್ಯಯನದಲ್ಲಿ ತೊಡಗಿದ್ದಾರೆ. ವಿಶ್ವವಿದ್ಯಾನಿಲಯಗಳು ಅಂಬೇಡ್ಕರ್ ಚಿಂತನೆಗಳನ್ನು ಅಧ್ಯಯನ ಮಾಡಲೆಂದೇ ವಿಶೇಷ ಅಧ್ಯಯನ ಕೇಂದ್ರ ಮತ್ತು ಇಲಾಖೆಗಳನ್ನು ತೆರೆದಿದೆ.

ಇವರೆಲ್ಲರ ಕೊಡುಗೆ ಅಂಬೇಡ್ಕರ್ ಜೀವನ ಮತ್ತು ಧ್ಯೇಯಗಳನ್ನು ನೋಡುವ ದೃಷ್ಟಿಕೋನಗಳನ್ನು ವಿಶಾಲಗೊಳಿಸಿದರೂ ಇನ್ನೂ ಅವರ ಚಿಂತನೆಯಲ್ಲಿರುವ ಮುಖ್ಯವಾದ ಚಿಂತನೆಯ ತೀವ್ರತೆ ಹಾಗೂ ಉಪಯುಕ್ತತೆಯನ್ನು ಗ್ರಹಿಸುವಲ್ಲಿ ಇನ್ನೂ ಹಿಂದೆ ಬಿದ್ದಿದ್ದಾರೆ. ಅನೇಕ ಸಲ ಮುಖ್ಯವಾಹಿನಿಯ ವಿದ್ವಾಂಸರು ತಮ್ಮ ಅಧ್ಯಯನ ವಿಭಾಗದ ಚೌಕಟ್ಟಿನ ಮಿತಿಯಲ್ಲೇ ಕೆಲಸ ಮಾಡುತ್ತಾರೆ. ಸಂಕೀರ್ಣ ವಿಷಯಗಳನ್ನು ವಿವರಿಸಿದಾಗಲೂ ಅದು ತಾತ್ವಿಕ ಅಂತಃಸತ್ವವನ್ನು ಪೂರ್ಣವಾಗಿ ಸ್ಪಷ್ಟಪಡಿಸುವುದಿಲ್ಲ. ಅದಕ್ಕಿಂತಲೂ ಹೆಚ್ಚಿಗೆ ಕಾಲ ಮತ್ತು ಅವಕಾಶದ ವಿವಿಧ ಸಂದರ್ಭಗಳಲ್ಲಿ ಪಲ್ಲಟಗೊಳ್ಳುತ್ತಿರುತ್ತದೆ. ಅಂಬೇಡ್ಕರ್ ವಿಷಯದಲ್ಲಿ ಈ ಕೆಲಸವು ತುಂಬಾ ಸಂಕೀರ್ಣವಾಗಿದೆ. ಯಾಕೆಂದರೆ ಅವರ ಬರವಣಿಗೆ ಮತ್ತು ಭಾಷಣಗಳು ಹೆಚ್ಚಾಗಿ ಸನ್ನಿವೇಶ ಆಧಾರಿತವಾದುದು ಹಾಗೂ ಇನ್ನೂ ಹೆಚ್ಚಾಗಿ ವಿವಾದಾತ್ಮಕವಾದುದು. ಅಂಬೇಡ್ಕರ್ ಸಿದ್ಧಾಂತದ ತಿರುಳುಗಳು ವ್ಯಾಖ್ಯಾನಿಸಲ್ಪಡದೆ ಇದ್ದರೂ ಈಗಾಗಲೇ ಅವರೊಬ್ಬ ಕೆಳಸ್ತರದ ಜನರ ಸೈದ್ಧಾಂತಿಕ ಸಂಕೇತವಾಗಿದ್ದಾರೆ.

ಬಾಬಾಸಾಹೇಬ್ ಅಂಬೇಡ್ಕರರ ಆರ್ಥಿಕ ಚಿಂತನೆಗಳನ್ನು ಗಮನಿಸುವಾಗ ಯುಟಿಲಿಟಿ ಸಿದ್ಧಾಂತದ ಮಜಲುಗಳ ಬಗ್ಗೆ ಪ್ರಜ್ಞೆಯುಳ್ಳವರಾಗಿರಬೇಕು. ಡಾ॥ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾರ್ಥಿಯಾಗಿದ್ದಾಗ, ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಪಿ.ಎಚ್.ಡಿ ಪದವಿ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಎಂ.ಎಸ್ಸಿ ಮತ್ತು ಡಿ.ಎಸ್ಸಿ (ಎಲ್.ಎಸ್‌ಇ ಯಿಂದ ಡಿಎಸ್ಸಿ ಪಡೆದ ಮೊದಲ ಭಾರತೀಯ) ಪಡೆದರು. ಮತ್ತು ಹಣಕಾಸು ವ್ಯವಸ್ಥೆ ಆರ್ಥಿಕ ನಿರ್ವಹಣೆ, ಭೂಸ್ವಾಮ್ಯಕ್ಕೆ ಸಂಬಂಧಪಟ್ಟ ವಿಷಯಗಳು, ಕೈಗಾರಿಕೀಕರಣ ಮತ್ತು ಅಭಿವೃದ್ಧಿ ಯೋಜನೆಗಳನ್ನು ಅರ್ಥಮಾಡಿಕೊಂಡಿದ್ದ ಒಬ್ಬ ಪ್ರಸಿದ್ಧ ಅರ್ಥಶಾಸ್ತ್ರಜ್ಞ; ಆದರೆ ಈ ದೇಶದಲ್ಲಿ ಅವರೊಬ್ಬ ಅರ್ಥಶಾಸ್ತ್ರಜ್ಞ ಎನ್ನುವುದನ್ನು ತಿಳಿದವರು ತುಂಬಾ ವಿರಳ.

ಇತಿಹಾಸದಲ್ಲಿ ಆರ್ಥಿಕತೆಯ ಮಹತ್ತ್ವವನ್ನು ಗುರುತಿಸಿದ್ದ ಅದರ ಬಗ್ಗೆ ಬರೆದಿದ್ದ ವ್ಯಕ್ತಿಯೊಬ್ಬ ತನ್ನ ಅನುಯಾಯಿಗಳಿಂದ, ಅದಕ್ಕೆ ವಿರುದ್ಧವಾಗಿ ಆರ್ಥಿಕತೆಯ ವಿರೋಧಿಯೆಂಬ ನಿಷೇಧವನ್ನು ಎದುರಿಸಬೇಕಾಯಿತು. ಇಂದಿಗೂ ಪ್ರಚಲಿತವಿರುವ ಒಂದು ಮಿಥ್ಯೆಯೆಂದರೆ ಅರ್ಥಶಾಸ್ತ್ರವೆಂದರೆ ಅದು ಎಡಪಂಕ್ತೀಯ ಕಮ್ಯುನಿಸ್ಟರ ಪ್ರಣಾಳಿಕೆ ಎಂದೂ, ಬಾಬಾಸಾಹೇಬ್ ಅಂಬೇಡ್ಕರರು ಕಮ್ಯೂನಿಸ್ಟರನ್ನು ವಿರೋಧಿಸಿದ್ದರಿಂದ ಅಂಬೇಡ್ಕರ್‌ವಾದಿಗಳು ಸಹ ಅರ್ಥಶಾಸ್ತ್ರವನ್ನು ತಿರಸ್ಕರಿಸಬೇಕು. ಮೇಲ್ಮುಖ ಚಲನೆಯಲ್ಲಿದ್ದ ದಲಿತರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಗಮನಕೊಟ್ಟರೋ, ಅವರ ಹಾನಿಕರ ಪ್ರಚಾರದ ಅಬ್ಬರವು, ಅಸಹಾಯಕ ದಲಿತರನ್ನು ದಾರಿತಪ್ಪಿಸಿ ಆರ್ಥಿಕ ವಿಚಾರಗಳಿಂದ ದೂರಹೋಗುವಂತೆ

ಮಾಡುತ್ತದೆ ಹಾಗೂ ಅಭೌತಿಕ ಸಂಗತಿಗಳಲ್ಲಿ (ಭಾವನಾತ್ಮಕ) ತಲ್ಲೀನರಾಗುವಂತೆ ಮಾಡುತ್ತದೆ.

ಬಾಬಾಸಾಹೇಬ್ ಅಂಬೇಡ್ಕರರ ಆರ್ಥಿಕ ಚಿಂತನೆಗಳನ್ನು ಅಭಿವ್ಯಕ್ತಿಯ ದೃಷ್ಟಿಯಿಂದ ಎರಡು ಭಾಗ ಮಾಡಬಹುದು: ಒಂದು ಪ್ರತ್ಯಕ್ಷ ಅಥವಾ ವ್ಯಕ್ತವಾದದ್ದು. ಇನ್ನೊಂದು ಪರೋಕ್ಷ ಅಥವಾ ಧ್ವನಿತ: ಅಂಬೇಡ್ಕರರು ತನ್ನ ಸ್ನಾತಕೋತ್ತರ ಮತ್ತು ಡಾಕ್ಟೋರೆಟ್ ಪದವಿಗಳ ಶೈಕ್ಷಣಿಕ ಚಟುವಟಿಕೆಯ ಭಾಗವಾಗಿ ಅವರು ಬರೆದ ಪ್ರೌಢಪ್ರಬಂಧಗಳು ಮತ್ತು ಲೇಖನಗಳು ಮುಂತಾದುವುಗಳಲ್ಲಿ ಆರ್ಥಿಕ ಸಮಸ್ಯೆಯ ಬಗ್ಗೆ ಪ್ರಮುಖವಾಗಿ ಗಮನಹರಿಸಿದ್ದನ್ನು ಕಾಣಬಹುದು. ಡಾ॥ ಅಂಬೇಡ್ಕರರ ಶೈಕ್ಷಣಿಕ ಬರಹಗಳೆಂದರೆ : ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ಮತ್ತು ಹಣಕಾಸು (ಎಂ.ಎ ಪದವಿ, ಕೊಲಂಬಿಯಾ ವಿ.ವಿ) ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸಿನ ಪರಿಣಾಮ (ಪಿಎಚ್‌ಡಿ ಪ್ರೌಢ ಪ್ರಬಂಧ, ಕೊಲಂಬಿಯಾ ವಿ.ವಿ., ೧೯೧೭; ೧೯೨೫ರಲ್ಲಿ ಪ್ರಕಟವಾಗಿದೆ) ರೂಪಾಯಿಯ ಸಮಸ್ಯೆ : ಅದರ ಹುಟ್ಟು ಮತ್ತು ಪರಿಹಾರ (ಡಿ.ಎಸ್ಸಿ, ಪ್ರೌಢಪ್ರಬಂಧ, ಲಂಡನ್ ಅರ್ಥಶಾಸ್ತ್ರಶಾಲೆ, ೧೯೧೭; ೧೯೨೧ರಲ್ಲಿ ಪ್ರಕಟ) ಮತ್ತೊಂದು ಅವರ ಲೇಖನ, ಸಣ್ಣ ಹಿಡುವಳಿಗಳ ಸಮಸ್ಯೆ (ಭಾರತದಲ್ಲಿ ಸಣ್ಣ ಹಿಡುವಳಿಗಳು ಮತ್ತು ಅದರ ಸಮಸ್ಯೆಗಳು) ಶೈಕ್ಷಣಿಕ ಪೂರ್ವದ ಆರ್ಥಿಕ ಬರಹಗಳು ಕರಡು ಪ್ರಸ್ತಾವನೆಗಳಾಗಿದ್ದು, ಅವುಗಳನ್ನು ತನ್ನ ಪಕ್ಷದ (ಭಾರತದ ಸಂವಿಧಾನಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ) ಪರವಾಗಿ ಬರೆಯಲಾಗಿತ್ತು. ಇದನ್ನು ರಾಜ್ಯಾಂಗ ಮತ್ತು ಅಲ್ಪಸಂಖ್ಯಾತರು ಎಂಬುದಾಗಿ ಪ್ರಕಟಿಸಲಾಗಿತ್ತು.

ಆರ್ಥಿಕ ನೀತಿಗಳಿಗೆ (ನೀರು, ವಿದ್ಯುತ್, ಮೂಲ ಸೌಕರ್ಯ ಮತ್ತು ಕುಟುಂಬ ಯೋಜನೆ ಇತ್ಯಾದಿ) ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ವೈಸರಾಯ್ ಕೌನ್ಸಿಲ್ ಸದಸ್ಯರಾಗಿದ್ದಾಗ ವ್ಯಕ್ತಪಡಿಸಿದ ಚಿಂತನೆಗಳ ಚೆಲ್ಲಾಪಿಲ್ಲಿಯಾಗಿದೆ. ಈ ಸ್ಪಷ್ಟ ಆರ್ಥಿಕ ಬರಹಗಳ ಹೊರತಾಗಿಯೂ ಅವರ ಸಂಪೂರ್ಣ ಸಂಘರ್ಷವು ಆತನ ಆರ್ಥಿಕ ಚಿಂತನೆಯ ಗಟ್ಟಿಯಾದ ತಳಹದಿಯಾಗಿದೆ. ಉದಾಹರಣೆಗೆ ಜಾತಿಪದ್ಧತಿ ವಿರುದ್ಧದ ಅವರ ಹೋರಾಟವು ಬರೀ ನೈತಿಕ ಅಥವಾ ಮತೀಯ ಕಾರಣಕ್ಕಾಗಿ ಅಲ್ಲ. ಇದು ನಿಕೃಷ್ಟ ಮತ್ತು ವಿವೇಚನಾಯುತ ದೃಷ್ಟಿಕೋನ. ಆದ್ದರಿಂದಲೇ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವ ಮುಂತಾದುವು ಅಥವಾ ರಾಜನೀತಿಯ ನಿರ್ದೇಶಕ ತತ್ವಗಳು ಅಥವಾ ಸಮಾಜದ ದುರ್ಬಲ ವರ್ಗಗಳ ಪರವಾದ ಸಕಾರಾತ್ಮಕ ಕ್ರಮಗಳು ಮುಂತಾದ ವಿವಿಧ ಸಂವಿಧಾನಾತ್ಮಕ ಪ್ರಸ್ತಾವಗಳು ಅಥವಾ ಬೌದ್ಧಧರ್ಮಕ್ಕೆ ಮತಾಂತರ ಅವರ ದರ್ಶನವಾಗಿದೆ.

ಈ ಎಲ್ಲ ಅಂಶಗಳನ್ನು ಕಾಗದದೊಳಗೆ ಸೆರೆಹಿಡಿಯುತ್ತೇವೆನ್ನುವುದು ದಾರ್ಷ್ಟ್ಯವಾಗುತ್ತದೆ. ಆದ್ದರಿಂದ ನಾನು ಅವರ ಆರ್ಥಿಕ ಚಿಂತನೆಗಳ ಕೆಲವು ಅಂಶಗಳನ್ನು ಸಂಗ್ರಹಿಸಿದ್ದೇನೆ.

ಅವರ ವಿದ್ಯಾರ್ಥಿ ದೆಸೆಯಲ್ಲಿ ಬರೀ ವಿದ್ಯಾರ್ಥಿ ವೇತನದಿಂದ ಅತಂತ್ರವಾಗಿ ಬದುಕಿದ್ದರು. ಆದ್ದರಿಂದ ತನ್ನ ತಕ್ಷಣದ ಗುರಿಗಳನ್ನು ಈಡೇರಿಸಿಕೊಳ್ಳುವ ಉತ್ಸಾಹ ಹೊಂದಿದ್ದರು. ಪದವಿಗಳನ್ನು ಪಡೆದುಕೊಳ್ಳುವುದು, ಬಡವರ ಬಗ್ಗೆ ಕಾಳಜಿ ಮತ್ತು ಅನ್ಯಾಯ ಮತ್ತು ಶೋಷಣೆಯ ಬಗ್ಗೆ ಸಿಟ್ಟು -ಈ ಅವರ ಲೇಖನಗಳು ಮತ್ತು ಪ್ರೌಢ ಪ್ರಬಂಧಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ಮತ್ತು ಹಣಕಾಸು ಎಂಬ ಅವರ ಮೊದಲ ಪ್ರಬಂಧದಲ್ಲಿ ೧೭೯೨ ರಿಂದ ೧೮೫೮ ರವರೆಗಿನ ದೀರ್ಘ ಅವಧಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಭಾರತೀಯರನ್ನು ಹೇಗೆ ಶೋಷಿಸಿತು ಎಂಬುದನ್ನು ಮತ್ತು ಅದರ ಆಳ್ವಿಕೆಯನ್ನು ನಂತರದಲ್ಲಿ ೧೮೫೮ ರಲ್ಲಿ ರದ್ದುಗೊಳಿಸಲಾಯಿತು. ಆದ ಅನ್ಯಾಯವನ್ನು ಪರಿಹರಿಸುವ ಬದಲಿಗೆ, ಬ್ರಿಟಿಷ್ ಸಾಮ್ರಾಜ್ಯವು ಈಸ್ಟ್ ಇಂಡಿಯಾ ಕಂಪೆನಿಯು ತನ್ನ ಅನುಭೋಗಕ್ಕೆ ತೆಗೆದುಕೊಂಡ ದೊಡ್ಡ ಮೊತ್ತದ ಸಾಲವನ್ನು ಹಸಿದ ಭಾರತೀಯರ ತಲೆಗೆ ಹೇಗೆ ಹೊರಿಸಲಾಯಿತು ಎಂಬುದನ್ನು ಪ್ರತಿಪಾದಿಸಿದ್ದಾರೆ.

ನನ್ನ ಮನಸ್ಸಿನಲ್ಲಿ ಉಳಿದಿರುವ ಅಂಬೇಡ್ಕರವರ ಆರ್ಥಿಕ ಬರವಣಿಗೆಗಳಲ್ಲಿನ ಒಂದು ಮುಖ್ಯವಾದ ಅಂಶವೆಂದರೆ 'ಸಣ್ಣ ಹಿಡುವಳಿಗಳ ಸಮಸ್ಯೆ'ಯ ಬಗ್ಗೆ ಸಮಕಾಲೀನ ಅರ್ಥಶಾಸ್ತ್ರಜ್ಞರ ಜೊತೆಗಿನ ಅವರ ಚರ್ಚೆಯ ಪ್ರಬಂಧ. ಮುಖ್ಯವಾಹಿನಿಯ ಅಭಿಪ್ರಾಯಕ್ಕಿಂತ ಭಿನ್ನವಾದ ಒಳನೋಟವನ್ನು ಅವರು ಹೊಂದಿದ್ದಾರೆ. ಭೂಮಿಗಳ ವಿಭಾಗದ ಬಗ್ಗೆ ಆಡಳಿತವರ್ಗದ ಅಭಿಪ್ರಾಯ ಭಿನ್ನವಾಗಿತ್ತು. ಅದು ಹಿಡುವಳಿಗಳನ್ನು ತುಂಡುತುಂಡಾಗಿ ಒಡೆಯುವುದು ಸಮಸ್ಯಾತ್ಮಕವಾಗಿರುವುದರಿಂದ, ಅವುಗಳನ್ನು ದೊಡ್ಡ 'ಆರ್ಥಿಕ ಹಿಡುವಳಿ'ಗಳನ್ನಾಗಿ ಒಗ್ಗೂಡಿಸುವ ಅವಶ್ಯಕತೆಯ ಪರವಾಗಿತ್ತು. ಡಾ॥ ಅಂಬೇಡ್ಕರ್‌ರವರು ಈ ತರಹದ ಸಿದ್ಧ ಮಾದರಿಯ ಆರ್ಥಿಕ ಹಿಡುವಳಿಗಳನ್ನು ವಿರೋಧಿಸುತ್ತಾ ಯಾವುದೇ ಹಿಡುವಳಿಗಳನ್ನು ಆರ್ಥಿಕತೆಯಾಗಿ ಮಾಡುವಲ್ಲಿ ಹಿಡುವಳಿಗಳ ಗಾತ್ರವು ಅಪ್ರಸ್ತುತ ಎಂದು ಪ್ರತಿಪಾದಿಸುತ್ತಾರೆ.

ಭೂಮಿಯ ಮೇಲಿನ ಉತ್ಪಾದಕ, ಬಂಡವಾಳ ಮತ್ತು ಶ್ರಮಶಕ್ತಿ ಹಾಗೂ ಇತರ ಎಲ್ಲ ಸಂಗತಿಗಳನ್ನೊಳಗೊಂಡಂತೆ ಬೇಸಾಯದ ಸಾಂದ್ರತೆಯು ಭೂಮಿಯನ್ನು ಆರ್ಥಿಕತೆಯನ್ನಾಗಿಸುತ್ತದೆ. ನಿಜವಾದ ಪರಿಹಾರವಿರುವುದು ಕೈಗಾರಿಕೆಯ ಅಭಿವೃದ್ಧಿಯಲ್ಲಿ; ಅದು ದೇಶದಾದ್ಯಂತ ಲಭ್ಯವಿರುವ ಅಧಿಕ ಶ್ರಮವನ್ನು ಹೀರಿಕೊಳ್ಳುವುದು ಮಾತ್ರವಲ್ಲದೆ ಪ್ರತಿಫಲವಾಗಿ ವ್ಯವಸಾಯಕ್ಕೆ ಅವಶ್ಯಕವಾದ ಇತರ ಸವಲತ್ತುಗಳ ಪೂರೈಕೆಯೇ ಭಾರತದ ಕೃಷಿಯನ್ನು ಕುಂಠಿತಗೊಳಿಸಿದ್ದಲ್ಲದೆ ಹೊಲಗದ್ದೆಗಳ ಗಾತ್ರಗಳಲ್ಲ. ಒಂದು ವೇಳೆ ಇಂಥ ಹೊಲಗದ್ದೆಗಳನ್ನು ಒಗ್ಗೂಡಿಸಬೇಕೆಂದರೆ, ಸಹಕಾರದ ಮೂಲಕ ಮಾಡಬೇಕೇ ಹೊರತು ಬಲಾತ್ಕಾರದ ನಿಗಮೀಕರಣದಿಂದಲ್ಲ ಎಂದು ಸೂಚಿಸುತ್ತಾರೆ. ಇಂದಿಗೂ ಕೂಡಾ, ಇದೊಂದು ಒಳ್ಳೆಯ ವಿಶ್ಲೇಷಣೆ ಮತ್ತು ನಮ್ಮ ದೇಶದ ಸಮಸ್ಯೆಗೆ ನ್ಯಾಯಸಮ್ಮತ ಪರಿಹಾರ ಎಂದು ಕಾಣುತ್ತದೆ. ಕೃಷಿಯ ನಿಗಮೀಕರಣಕ್ಕೋಸ್ಕರ ಹಿಡುವಳಿಗಳ ಕ್ರೋಢೀಕರಣವು ಜಾಗತೀಕರಣದ ಕೊನೆಯ ದಶಕದಲ್ಲಿ ಆರಂಭವಾದರೂ ಈ ವಿಶ್ಲೇಷಣೆ ಇನ್ನೂ ಕೂಡಾ ಪ್ರಬಲ ಪರಿಹಾರವನ್ನು ಒದಗಿಸುತ್ತದೆ. ಹಿಡುವಳಿಗಳ ಕ್ರೋಢೀಕರಣ ವಾದವನ್ನು ವಿರೋಧಿಸುತ್ತಾ ಡಾ॥ ಅಂಬೇಡ್ಕರ್‌ರವರು ಆಮೂಲಾಗ್ರ ಭೂಸುಧಾರಣೆಯ ಅನಿವಾರ್ಯತೆ ಮತ್ತು ಈ ಸುಧಾರಣೆಯನ್ನು ತರುವಲ್ಲಿ ರಾಜ್ಯಾಂಗದ ಪಾತ್ರದ ಬಗ್ಗೆ ಒತ್ತು ನೀಡುತ್ತಾರೆ.

ಅನಂತರದ ವರ್ಷಗಳಲ್ಲಿ ಆರ್ಥಿಕ ನೀತಿಯ ಸಮಸ್ಯೆಗಳನ್ನು ಪರಿಶೀಲಿಸುವಾಗ ಅವರು ಈ ಸೂಕ್ಷ್ಮ ಒಳನೋಟಗಳನ್ನೇ ನೆಚ್ಚಿಕೊಂಡಂತೆ ಕಾಣುತ್ತದೆ. ಅಕ್ಟೋಬರ್ ೧೦, ೧೯೨೭ ರಂದು ಬಾಂಬೆ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ 'ಸಣ್ಣ ಹಿಡುವಳಿದಾರರಾದ ರಿಲೀಫ್ ಬಿಲ್ :೧' ಚರ್ಚೆಯಲ್ಲಿ ಪಾಲ್ಗೊಂಡು ಡಾ॥ ಅಂಬೇಡ್ಕರ್‌ರವರು ಅಗ್ರೇರಿಯನ್ ಪ್ರಶ್ನೆಗೆ ಪರಿಹಾರ ಅಡಗಿರುವುದು 'ಹೊಲಗದ್ದೆಗಳ ಗಾತ್ರವನ್ನು ಹೆಚ್ಚಿಸುವುದರಲ್ಲಿ ಅಲ್ಲ. ಆದರೆ ಅಧಿಕ ಬಂಡವಾಳ ಮತ್ತು ಅಧಿಕ ಶ್ರಮಗಳನ್ನೊಳಗೊಂಡ ಭೂಮಿಯ ಮೇಲಿನ ತೀವ್ರಗತಿಯ ಬೇಸಾಯದಿಂದ' ಎಂದು ವಾದಿಸುತ್ತಾರೆ. ಅವರು ಮುಂದುವರಿಸುತ್ತಾ 'ಒಳ್ಳೆಯ ವಿಧಾನವೆಂದರೆ ಸಹಕಾರಿ ಕೃಷಿಯನ್ನು ಪರಿಚಯಿಸುವುದು ಮತ್ತು ಸಣ್ಣ ಹೊಲಗದ್ದೆಗಳ ಮಾಲೀಕರನ್ನು ಬೇಸಾಯದಲ್ಲಿ ತೊಡಗಿಕೊಳ್ಳಲು ಒತ್ತಾಯಿಸುವುದು' ಎಂದು ಹೇಳುತ್ತಾರೆ. ಅವರು ಸೂಚಿಸಿದ ಸಹಕಾರಿ ಮಾದರಿಯು ಕೆಲವು ಯೂರೋಪಿಯನ್ ರಾಷ್ಟ್ರಗಳಿಂದ ತೆಗೆದುಕೊಂಡದ್ದೆಂದು ಹೇಳುತ್ತಾ '... ನಾನು ಸಲಹೆ ಮಾಡುತ್ತಿರುವ ವಿಧಾನವು ನನ್ನ ಸ್ವಂತದ್ದಲ್ಲ, ಆದರೆ ತುಂಬಾ ಪ್ರಯೋಜನಗಳೊಂದಿಗೆ ಈ ವ್ಯವಸ್ಥೆಯು ಈಗಾಗಲೇ ಇಟಲಿ, ಫ್ರಾನ್ಸ್ ಮತ್ತು ಇಂಗ್ಲೆಂಡಿನ ಕೆಲವು ಭಾಗಗಳಲ್ಲಿ ಅಸ್ತಿತ್ವದಲ್ಲಿದೆ'.

ಅವರು ಈ ವಾದವನ್ನು ಎಷ್ಟರಮಟ್ಟಿಗೆ ಮುಂದುವರಿಸುತ್ತಾರೆಂದರೆ ಭಾರತ ಸಂವಿಧಾನದಲ್ಲಿ ಇದನ್ನು ಸೇರಿಸಿಕೊಳ್ಳಲು ಸೂಚಿಸುತ್ತಾ, ಇದೊಂದು ಆಡಳಿತವರ್ಗದ ನಡತೆಯನ್ನು ನಿರ್ದೇಶಿಸಲು ಇರುವ ಕೇವಲ ದಾಖಲೆಯಾಗಿರದೆ ಸಮಾಜದ ಮೂಲಭೂತ ಆರ್ಥಿಕ ರಚನೆಯನ್ನು ಆದೇಶಿಸುವಂತಹುದಾಗಿರಬೇಕೆಂದು ಯೋಚಿಸಿದ್ದರು. ಪರಿಶಿಷ್ಟ ಜಾತಿಗಳ ಒಕ್ಕೂಟ (ಅವರ ಆಗಿನ ರಾಜಕೀಯ ಪಕ್ಷ)ದಿಂದ ಬರೆಯಲ್ಪಟ್ಟ 'ರಾಜ್ಯಾಂಗ ಮತ್ತು ಅಲ್ಪಸಂಖ್ಯಾ ತರು' ಎನ್ನುವ ತನ್ನ ಚಿಕ್ಕ ಪ್ರಸ್ತಾವನೆಯಲ್ಲಿ ಭೂಮಿಯ ರಾಷ್ಟ್ರೀಕರಣ ಮತ್ತು ಕೃಷಿಯ ಅಭಿವೃದ್ಧಿಗಾಗಿ ಸಹಕಾರೀ ಸಂಘಗಳ ಮೂಲಕ ಕೃಷಿಯನ್ನು ಪ್ರೋತ್ಸಾಹಿಸುವ ಉಳುಮೆದಾರ ಗುಂಪುಗಳಿಗೆ ಭೂಮಿಯನ್ನು ಗೇಣಿಗೆ ಕೊಡಬೇಕೆಂದು ವಾದಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ರಾಜ್ಯಾಂಗವು ಅವಶ್ಯವಾಗಿ ಅತೀ ಮುಖ್ಯ ಪಾತ್ರವನ್ನು ವಹಿಸಬೇಕು. 'ಯಾವುದನ್ನು ಖಾಸಗಿ ಉದ್ಯಮಕ್ಕೆ ನೀಡದೆ ಅತ್ಯಧಿಕ ಉತ್ಪಾದಕತೆಯನ್ನು ಕೊಡುವ ಜನರ ಆರ್ಥಿಕ ಜೀವನವನ್ನು ರೂಪಿಸುವ ಹಾಗೂ ಸಂಪತ್ತಿನ ಸಮಾನ ಹಂಚಿಕೆಯನ್ನು ನಿರ್ಧರಿಸುವ ಯೋಜನೆಯನ್ನು ರೂಪಿಸುವ ಜವಾಬ್ದಾರಿಯನ್ನು ರಾಜ್ಯಾಂಗದ ಮೇಲೆ ಹೊರಿಸುತ್ತಾರೆ'.

> **ಅಂಬೇಡ್ಕರ್‌ರವರು ಕೆಟ್ಟ ಜಾತಿವ್ಯವಸ್ಥೆಯ ವಿರುದ್ಧ ಸಾಮಾಜಿಕ-ಸಾಂಸ್ಕೃತಿಕ ಮಟ್ಟದ ತನ್ನ ಹೋರಾಟ ಆರಂಭಿಸಿದ್ದರೂ, ಒಬ್ಬ ಅರ್ಥಶಾಸ್ತ್ರಜ್ಞನಾಗಿ ಸಾಮಾಜಿಕ ಮತ್ತು ಆರ್ಥಿಕತೆಯ ನಡುವಿನ ತಾರ್ಕಿಕ ಸಂಬಂಧವನ್ನು ಅರಿತಿದ್ದರು. ಆರ್ಥಿಕ ಅಭಿವೃದ್ಧಿಯನ್ನು ಪ್ರತಿಫಲಿಸುವ ಉತ್ಪಾದಕ ವ್ಯವಸ್ಥೆಯಲ್ಲಿ ನಿಜವಾದ ವಾಸ್ತವಿಕ ಬದಲಾವಣೆಯಾಗದೆ, ಸಾಮಾಜಿಕ ವ್ಯವಸ್ಥೆಯಲ್ಲಿ ಅಪೇಕ್ಷಿತ ಬದಲಾವಣೆ ಸಾಧ್ಯವಿಲ್ಲ. ಆದುದರಿಂದ ಸಂಬಂಧಿತ ಕ್ಷೇತ್ರದಲ್ಲಿ ಬದಲಾವಣೆ ತರಲು ಹೋರಾಡುತ್ತಿದ್ದಾಗಲೇ ಅವರು ಉತ್ಪಾದಕ ಕ್ಷೇತ್ರವನ್ನು ಊಳಿಗಮಾನ್ಯ ಅಧಿಪತ್ಯದ ಸಂಕೋಲೆಯಿಂದ ಬಿಡಿಸಲು ಪ್ರಯತ್ನಿಸಿದ್ದರು.**

ಅವರು ತಯಾರಿಸಿದ ಯೋಜನೆಯು 'ಸಂಘಟಿತ ವಿಧಾನದ ಬೇಸಾಯವನ್ನು ಒಳಗೊಂಡ ಕೃಷಿಯ ಮೇಲಿನ ರಾಜ್ಯಾಂಗ ಮಾಲೀಕತ್ವ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ರಾಜ್ಯಾಂಗದ ಸುಧಾರಿತ ರೀತಿಯ ಸಮಾಜವಾದ' ಎಂಬುದಾಗಿತ್ತು. ಪ್ರಮುಖ ಕೈಗಾರಿಕೆಗಳು ಮತ್ತು ವಿಮೆಗಳು ಸಾರ್ವಜನಿಕ ಕ್ಷೇತ್ರದಡಿಯಲ್ಲಿರಬೇಕೆಂದು ಆಲೋಚಿಸಿದ್ದರು. ತಮ್ಮ ಪ್ರಸ್ತಾವನೆಯಲ್ಲಿ ಕಾರಣಗಳನ್ನು ಕೊಡುತ್ತಾ, 'ರಾಜ್ಯಾಂಗದಿಂದ ಬಂಡವಾಳದ ಪೂರೈಕೆ ಇಲ್ಲದಿದ್ದರೆ ಭೂಮಿಯಾಗಲಿ, ಕೈಗಾರಿಕೆಯಾಗಲೀ ಯಾವುದೇ ಉತ್ತಮ ಫಲಿತಾಂಶ ನೀಡುವಂತೆ ಮಾಡಲು ಸಾಧ್ಯವಿಲ್ಲ' ಎನ್ನುತ್ತಾರೆ. ಖಾಸಗಿ ವಿಮೆಗಳಿಗಿಂತ ರಾಷ್ಟ್ರೀಕೃತ ವಿಮೆಗಳು ವ್ಯಕ್ತಿಗೆ ಹೆಚ್ಚಿನ ಭದ್ರತೆಯನ್ನು ಒದಗಿಸುತ್ತದೆ. ವಿಮೆಯ ಹಣದ ಪಾವತಿಗಾಗಿ ವಾಣಿಜ್ಯ ಸಂಸ್ಥೆಯು ರಾಜ್ಯಾಂಗದ ಎಲ್ಲ ಸಂಪನ್ಮೂಲಗಳನ್ನು ಭದ್ರತೆಯಾಗಿ ಅಡವಿಡುತ್ತದೆ. ರಾಜ್ಯಾಂಗವು ಆರ್ಥಿಕ ಯೋಜನೆಗಳಿಗಾಗಿ ಅಗತ್ಯ ಹಣಕಾಸಿನ ಸಂಪನ್ಮೂಲಗಳನ್ನು ಹಣಕಾಸು ಮಾರುಕಟ್ಟೆಯಿಂದ ಅಧಿಕ ಬಡ್ಡಿದರದಲ್ಲಿ ಪಡೆಯಲಾಗದ ಸಂದರ್ಭದಲ್ಲಿ ಇದು ಒದಗಿಸುತ್ತದೆ. ಅವರ ಪ್ರಕಾರ ಭಾರತದ ಕ್ಷಿಪ್ರ ಕೈಗಾರೀಕೀಕರಣಕ್ಕೆ ರಾಜ್ಯಾಂಗ ಸಮಾಜವಾದ' ಅವಶ್ಯವಾಗಿದೆ.

'ಖಾಸಗಿ ಉದ್ಯಮಕ್ಕೆ ಇದನ್ನು ಮಾಡಲು ಸಾಧ್ಯವಿಲ್ಲ. ಒಂದು ವೇಳೆ ಮಾಡಿದರೆ ಖಾಸಗಿ ಬಂಡವಾಳಶಾಹಿ ಯೂರೋಪಿನಲ್ಲಾದ್ದಂತೆ ಸಂಪತ್ತಿನ ಅಸಮಾನತೆಯನ್ನು ಸೃಷ್ಟಿಸುತ್ತದೆ ಹಾಗೂ ಭಾರತೀಯರಿಗೆ ಇದೊಂದು ಎಚ್ಚರಿಕೆಯಾಗಿದೆ'.

ಅವರ ಯೋಜನೆಯು ಎರಡು ಪ್ರಮುಖ ಲಕ್ಷಣಗಳನ್ನೊಂದಿದೆ. ಒಂದು, ಅದು ಆರ್ಥಿಕ ಜೀವನದ ಮುಖ್ಯಕ್ಷೇತ್ರಗಳಲ್ಲಿ 'ರಾಜ್ಯಾಂಗ ಸಮಾಜವಾದವನ್ನು ಪ್ರತಿಪಾದಿಸಿತ್ತು; ಮತ್ತು ಎರಡು ಇದರ ಸ್ಥಾಪನೆಯನ್ನು ಶಾಸಕಾಂಗದ ಇಚ್ಛೆಗೆ ಬಿಟ್ಟುಕೊಟ್ಟಿರಲಿಲ್ಲ. ರಾಜ್ಯಾಂಗ ಸಮಾಜವಾದವು ಸಂವಿಧಾನದ ಕಾನೂನಿನ ಮೂಲಕವೇ ಅಸ್ತಿತ್ವಕ್ಕೆ ಬರಬೇಕು. ಆ ರೀತಿ ಮಾಡುವುದರಿಂದ ಶಾಸಕಾಂಗ ಮತ್ತು ಕಾರ್ಯಾಂಗದ ಕಾಯ್ದೆ ಇದನ್ನು ಬದಲಾವಣೆ ಮಾಡಲಾಗದು. ಅವರು ಈ ಅಂಶಗಳನ್ನು ರಾಜಕೀಯ ಪ್ರಜಾಪ್ರಭುತ್ವದ ಮೂಲ ಸ್ಫೂರ್ತಿ ಎಂದು ಹೇಳುತ್ತಾ ಸಮರ್ಥಿಸಿಕೊಳ್ಳುತ್ತಿದ್ದರು.

ರಾಜಕೀಯ ಪ್ರಜಾಪ್ರಭುತ್ವವೆಂದರೆ 'ಸೌಲಭ್ಯಗಳನ್ನು ಪಡೆದುಕೊಳ್ಳಲು ವ್ಯಕ್ತಿಯೊಬ್ಬ ತನ್ನ ಸಂವಿಧಾನಾತ್ಮಕ ಹಕ್ಕಿನಿಂದ ವಂಚಿತನಾಗದೆ ಇರುವುದು'. ಮತ್ತು 'ರಾಜ್ಯಾಂಗವು ಖಾಸಗಿ ವ್ಯಕ್ತಿಗಳಿಗೆ ಇತರರನ್ನು ನಿಯಂತ್ರಿಸಲು ಅಧಿಕಾರವನ್ನು ಕೊಡತಕ್ಕದ್ದಲ್ಲ' ಎಂದು ವಾದಿಸುತ್ತಾರೆ. 'ವ್ಯಕ್ತಿಗತ ಲಾಭವನ್ನು ಪ್ರಚೋದಿಸುವ ಖಾಸಗಿ ಉದ್ಯಮ ಆಧಾರಿತ ಸಾಮಾಜಿಕ ಆರ್ಥಿಕತೆಯ ವ್ಯವಸ್ಥೆ ಈ ಅವಶ್ಯಕತೆಗಳನ್ನು ಧಿಕ್ಕರಿಸುತ್ತದೆ' ಎಂದು ಹೇಳುತ್ತಾರೆ.

ಅವರು ಯಾವಾಗಲೂ ಹೇಳುತ್ತಿದ್ದರು. 'ಆರ್ಥಿಕ ವ್ಯವಸ್ಥೆಯಲ್ಲಿ ಕೆಲಸಗಾರರ ಕೆಲಸ ಮಾಡುವ ಕೈಗಳು, ನಿಗದಿತ ವಿರಾಮಗಳಲ್ಲಿ ಅತ್ಯಧಿಕ ಸಾಮಗ್ರಿಗಳನ್ನು ಉತ್ಪಾದಿಸಲು ಯಾರಾದರೊಬ್ಬರು ನಿಯಮಗಳನ್ನು ರೂಪಿಸಬೇಕು; ಆಗ ಕೆಲಸಗಾರರು ಕೆಲಸ ಮಾಡುತ್ತಾರೆ, ಹಾಗೂ ಕೈಗಾರಿಕೆಯು ಮುಂದುವರಿಯುತ್ತದೆ. ರಾಷ್ಟ್ರವು ಇದನ್ನು ಮಾಡದಿದ್ದರೆ ಖಾಸಗಿ ಯಜಮಾನ ಮಾಡಬೇಕು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ 'ರಾಜ್ಯಾಂಗದ ನಿಯಂತ್ರಣದಿಂದ ಸ್ವಾತಂತ್ರ್ಯವೆಂದು ಏನನ್ನು ಕರೆಯುತ್ತೇವೋ ಅದರ ಇನ್ನೊಂದು ಹೆಸರೆ ಖಾಸಗಿ ಯಜಮಾನನ ನಿರಂಕುಶ ಸರ್ವಾಧಿಕಾರತ್ವ.

ಆಗ ಅವರು ಕೆಟ್ಟ ಜಾತಿವ್ಯವಸ್ಥೆಯ ವಿರುದ್ಧ ಸಾಮಾಜಿಕ-ಸಾಂಸ್ಕೃತಿಕ ಮಟ್ಟದ ತನ್ನ ಹೋರಾಟ ಆರಂಭಿಸಿದ್ದರೂ, ಒಬ್ಬ ಅರ್ಥಶಾಸ್ತ್ರಜ್ಞನಾಗಿ ಡಾ|| ಅಂಬೇಡ್ಕರ್‌ರವರು ಸಾಮಾಜಿಕ ಮತ್ತು ಆರ್ಥಿಕತೆಯ ನಡುವಿನ ತಾರ್ಕಿಕ ಸಂಬಂಧವನ್ನು ಅರಿತಿದ್ದರು. ಆರ್ಥಿಕ ಅಭಿವೃದ್ಧಿಯನ್ನು ಪ್ರತಿಫಲಿಸುವ ಉತ್ಪಾದಕ ವ್ಯವಸ್ಥೆಯಲ್ಲಿ ನಿಜವಾದ ವಾಸ್ತವಿಕ ಬದಲಾವಣೆಯಾಗದೆ, ಸಾಮಾಜಿಕ ವ್ಯವಸ್ಥೆಯಲ್ಲಿ ಅಪೇಕ್ಷಿತ ಬದಲಾವಣೆ ಸಾಧ್ಯವಿಲ್ಲ. ಆದುದರಿಂದ ಸಂಬಂಧಿತ ಕ್ಷೇತ್ರದಲ್ಲಿ ಬದಲಾವಣೆ ತರಲು ಹೋರಾಡುತ್ತಿದ್ದಾಗಲೇ ಅವರು ಉತ್ಪಾದಕ ಕ್ಷೇತ್ರವನ್ನು ಊಳಿಗಮಾನ್ಯ ಅಧಿಪತ್ಯದ ಸಂಕೋಲೆಯಿಂದ ಬಿಡಿಸಲು ಪ್ರಯತ್ನಿಸಿದ್ದರು.

ಸಣ್ಣ ಹಿಡುವಳಿಗಳ ಅಧ್ಯಯನದ ಮೂಲಕ ಗಳಿಸಿದ ಒಳನೋಟಗಳು ಭೂಸುಧಾರಣೆಯಿಂದ ಕೂಡಿದ ಭಾರತೀಯ ಆರ್ಥಿಕತೆಯು ಬೇಸಾಯದ ಸಾಂದ್ರಿಕತೆಯ ಆಧಾರವನ್ನು ಒದಗಿಸಿದೆಯಲ್ಲದೆ ಕೈಗಾರಿಕೀಕರಣವನ್ನು ಮಾಡುವಲ್ಲಿಯೂ ಸಹ ರಾಜ್ಯಾಂಗವು ಅಡಿಪಾಯವನ್ನು ಹಾಕಲೇಬೇಕಾಗಿತ್ತು. ಈ ಗ್ರಹಿಕೆಯು ಅವರ ಮುಂದಿನ ಎಲ್ಲ ಸೂಚನೆಗಳಿಗೂ ಪೂರಕವಾಗಿಯೇ ಇತ್ತು. ಆದುದರಿಂದ ಅವರು ಹಿಂದಿನ ಕೆಲವು ಹೋರಾಟಗಳಂತೆ ತನ್ನ ಜಾತಿ ಪದ್ಧತಿಯ ವಿರುದ್ಧದ ಹೋರಾಟವನ್ನು ಕೇವಲ ಸಾಮಾಜಿಕ ವಿಷಯಗಳಿಗೆ ಮಾತ್ರ ಸೀಮಿತಗೊಳಿಸಿರಲಿಲ್ಲ. ಹಾಗೂ ಎರಡು ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಲು ನಿರ್ಧರಿಸಿದ್ದರು.

ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಆಚರಣೆಯಲ್ಲಿದ್ದ ಜಮೀನ್ದಾರಿ ಪದ್ಧತಿಯಾದ ಖೋಟಿ ವ್ಯವಸ್ಥೆಯ ವಿರುದ್ಧ ಅವರ ಹೋರಾಟವು ಅಸಂಖ್ಯಾತ ಗ್ರಾಮೀಣ ಬಡವರನ್ನು ತೀವ್ರತರದ ಆರ್ಥಿಕ ಶೋಷಣೆಯಿಂದ ಸ್ವತಂತ್ರಗೊಳಿಸಿತ್ತು. ಹಾಗೆಯೇ, ಮಹರ್ ಸಮುದಾಯದ ಜನರನ್ನು ಹಳ್ಳಿಯಲ್ಲಿ ಗುಲಾಮರಾಗಿ ಇಟ್ಟುಕೊಂಡಿದ್ದಂಥ ಮಹರ್ ವಟನ್ ವಿರುದ್ಧವೂ ಚಳವಳಿ ಮಾಡಿದ್ದರು. ಪಟ್ಟಣಗಳಲ್ಲಿನ ಕೈಗಾರಿಕಾ ಕ್ಷೇತ್ರದಲ್ಲಿ ತಮ್ಮ ವರ್ಗ ಸಿದ್ಧಾಂತದ ಅಡಿಯಲ್ಲಿ ಕಮ್ಯುನಿಸ್ಟರ ಮುಂದಾಳತ್ವದಲ್ಲಿ ಪ್ರಬಲ ಕಾರ್ಮಿಕ ಸಂಘಟನೆಗಳ ಹೋರಾಟ ನಡೆಯುತ್ತಿದ್ದರೂ ಅವುಗಳು ದಲಿತ ಕಾರ್ಮಿಕರ ಜಾತಿ ತುಳಿತವನ್ನು ಸರಿಯಾಗಿ ಪ್ರತಿನಿಧಿಸುತ್ತಿರಲಿಲ್ಲ.

ಕಮ್ಯೂನಿಸ್ಟ್ ಕಾರ್ಮಿಕ ಸಂಘಟನೆಗಳ ಈ ತರಹದ ಲೋಪ ಹಾಗೂ ಶ್ರಮದ ಶೋಷಣೆಯಿಂದ ಹೊರಬರಲೆಂದೇ ಡಾ|| ಅಂಬೇಡ್ಕರ್‌ರವರು ೧೯೩೬ರಲ್ಲಿ ಕಾರ್ಮಿಕ ಪಕ್ಷವನ್ನು ಕಟ್ಟುತ್ತಾರೆ. ಡಾ|| ಅಂಬೇಡ್ಕರ್ ಒಬ್ಬ ಸಾಮಾಜಿಕ 'ಸ್ವತಂತ್ರ ಸುಧಾರಕನಾಗುವ ಲಕ್ಷಣಗಳನ್ನು ಹೊಂದಿದ್ದು ಜಾತಿ ಪದ್ಧತಿಯನ್ನು ತೊಡೆದುಹಾಕಲು ಇಚ್ಛಿಸಿದ್ದರು. ಯಾಕೆಂದರೆ ಸ್ವತಃ ಅವರು ಅದರ ಕೆಡುಕುಗಳನ್ನು ಅನುಭವಿಸಿದ್ದರು. ಹಾಗಾಗಿ ಅವರ ಜನರನ್ನು ಅದರಿಂದ ಮುಕ್ತಗೊಳಿಸಲು ಇಚ್ಛಿಸಿದ್ದರು. ನಿಜವಾಗಿಯೂ ಅವರ ವೈಯಕ್ತಿಕ ನೋವುಗಳೇ ಜಾತಿಪದ್ಧತಿಯ ವಿರುದ್ಧದ ಅವರ ತೀವ್ರ ಹೋರಾಟದ ಪ್ರೇರಕ ಶಕ್ತಿಯಾಗಿತ್ತು.

ಇಲ್ಲಿ ಗಮನಿಸದೆ ಇರುವಂಥ ಒಂದು ಬಹುಮುಖ್ಯ ಸಂಗತಿಯೆಂದರೆ ಜಾತಿವ್ಯವಸ್ಥೆಯನ್ನು ನಿಭಾಯಿಸದೆ ಭಾರತದ ಅಭಿವೃದ್ಧಿ ಸಾಧ್ಯವಿರಲಿಲ್ಲ ಎಂದರೆ ಅವರ ಆರ್ಥಿಕತೆಯ ತರ್ಕವು ಜಾತಿಪದ್ಧತಿಯ ನಿವಾರಣೆಯಾಗದೆ ಪೂರ್ಣಗೊಳ್ಳುತ್ತಿರಲಿಲ್ಲ. ಆದುದರಿಂದ ದಲಿತರ ಸ್ವಾತಂತ್ರ್ಯ ದೇಶದ ಸಮಗ್ರ ಅಭಿವೃದ್ಧಿಯನ್ನು ಅವಲಂಬಿಸಿತ್ತು. ಯಾವಾಗ ಜಾತಿಪದ್ಧತಿಯ ಮುಂದಾಳುಗಳು ತಮ್ಮನ್ನು ಆರ್ಥಿಕತೆಯ ಸಮಯಸಾಧಕ ಮೂಲತತ್ವಗಳ, ಶ್ರಮವಿಭಜನೆಗಳ ಆಧಾರದ ಮೇಲೆ ಸಮರ್ಥಿಸಲು ಪ್ರಯತ್ನಿಸಿದರೋ ಆವಾಗ ಅಂಬೇಡ್ಕರ್ ಜಾತಿಗಳ ನಿರ್ಮಾಮದ ಮೂಲಕ ಬಲವಾದ ಹೊಡೆತವನ್ನು ನೀಡಿದರು. ಜಾತಿವ್ಯವಸ್ಥೆಯು ಕೇವಲ 'ಶ್ರಮವಿಭಜನೆ' ಯಾಗಿರದೆ 'ಶ್ರಮಜೀವಿಗಳ ವಿಭಜನೆ' ಯಾಗಿದೆ ಎನ್ನುತ್ತಾರೆ.

ಜಾತಿವ್ಯವಸ್ಥೆಯ ಮೇಲಿನ ಅಂಬೇಡ್ಕರ್ ದಾಳಿ ದೋಷಮುಕ್ತವಾಗಿ ಕಂಡಿದ್ದರಿಂದ ಮೇಲ್ಜಾತಿಯವರೆಂದು ಹೇಳಿಕೊಳ್ಳುತ್ತಿದ್ದವರ ಪ್ರತಿಷ್ಠೆಗೆ ಸವಾಲಾಗಿತ್ತು. ಈ ಸವಾಲುಗಳೇ ಅವರ ಹೋರಾಟದ ಅವಿಭಾಜ್ಯ ಭಾಗಗಳಾಗಿದ್ದಾಗಲೂ, ಆರ್ಥಿಕ ಪ್ರಗತಿ ಮತ್ತು ಅಭಿವೃದ್ಧಿಯ ಈ ಹೋರಾಟದ ತಳಹದಿ ಎಂಬುದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಭಾರತದಲ್ಲಿ ಜಾತಿಪದ್ಧತಿಯು ಶ್ರಮ ಮತ್ತು ಬಂಡವಾಳಗಳ ಚಲನೆಯನ್ನು ನಿಯಂತ್ರಿಸುವ ಮೂಲಕ ಆರ್ಥಿಕ ಪ್ರಗತಿ ಮತ್ತು ಅಭಿವೃದ್ಧಿಗೆ ಮಾರಕವಾಗಿದೆ ಎಂದು ಅಂಬೇಡ್ಕರ್ ವಾದಿಸುತ್ತಾರೆ. ಶ್ರಮ ಮತ್ತು ಬಂಡವಾಳಗಳ ನಿಶ್ಚಲತೆಯು ಉತ್ಪಾದಕ ಪ್ರಕ್ರಿಯೆಯಲ್ಲಿ ಅದಕ್ಷತೆಯನ್ನು ಉಂಟು ಮಾಡುವ ಮೂಲಕ ಆರ್ಥಿಕ ಪ್ರಗತಿಯನ್ನು ವ್ಯರ್ಥಗೊಳಿಸುತ್ತದೆ.

ಆದ್ದರಿಂದ, 'ಸಾಮಾಜಿಕ ಮತ್ತು ವೈಯಕ್ತಿಕ ದಕ್ಷತೆಯು, ತನ್ನ ಜೀವನವನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ರೂಪಿಸಿಕೊಳ್ಳುವ ಸಾಮರ್ಥ್ಯದ ದೃಷ್ಟಿಯಿಂದ ವ್ಯಕ್ತಿಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ನಮಗೆ ಅಗತ್ಯಪಡಿಸುತ್ತದೆ. ಈ ತತ್ವವು ಜಾತಿ ವ್ಯವಸ್ಥೆಯ ಉಲ್ಲಂಘನೆಯಾಗಿದ್ದು ಇದು ವ್ಯಕ್ತಿಗಳಿಗೆ ಕೆಲಸಗಳನ್ನು ಮೊದಲೇ ತರಬೇತುಗೊಂಡ ಮೂಲ

ಡಾ|| ಅಂಬೇಡ್ಕರ್‌ರವರ ಆರ್ಥಿಕ ಚಿಂತನೆಗಳ ಪ್ರಸ್ತುತತೆಯನ್ನು ಸಮಕಾಲೀನ ವಿಚಾರಗಳೊಂದಿಗೆ ತುಲನೆ ಮಾಡಲು ತುಂಬಾ ದಾರಿಗಳಿವೆ. ಅನೇಕ ಮುಖ್ಯವಾಹಿನಿಯ ಆರ್ಥಿಕ ತಜ್ಞರು ಹಣಕಾಸು ನಿರ್ವಹಣೆ, ಹಣಕಾಸು ವ್ಯವಸ್ಥೆ ಮತ್ತು ಆರ್ಥಿಕ ನಿಯಂತ್ರಣದ ಸಮಗ್ರ ಅಂಶಗಳ ಬಗೆಗಿನ ಅವರ ದೃಷ್ಟಿಕೋನಗಳನ್ನು ಈಗಲೂ ಪ್ರಸ್ತುತವೆಂದು ಮನಗಂಡಿದ್ದಾರೆ. ಈ ಬರವಣಿಗೆಗಳು ಕೇವಲ ಆರ್ಥಿಕ ತತ್ವಗಳಾಗಿರದೆ ವಾಸ್ತವಾಂಶಗಳು ಮತ್ತು ಅಂಕಿ ಅಂಶಗಳನ್ನು ಒಳಗೊಂಡಿದೆ. ಅವರ ಆರ್ಥಿಕ ಚಿಂತನೆಯ ಪ್ರಸ್ತುತತೆಯನ್ನು ರಾಜ್ಯಾಂಗ ನಿರ್ವಹಣೆಯ ಅಂಶಗಳಿಗೆ ಮಿತಿಗೊಳಿಸುವಂತಿಲ್ಲ. ಅವುಗಳ ಪ್ರಸ್ತುತತೆ ಹೆಚ್ಚಾಗಿರುವುದು ಜನಪರ ಆರ್ಥಿಕ ಯೋಜನೆ ಮತ್ತು ಅಭಿವೃದ್ಧಿಯ ವಿಷಯದಲ್ಲಿ; ಜನರ ವಿಮೋಚನೆಯ ವಿಷಯದಲ್ಲಿ ಮತ್ತು ಸಾಮಾಜಿಕ ಪಿಡುಗಗಳ ನಿರ್ಮೂಲನೆಯ ವಿಷಯದಲ್ಲಿ.

ಅರ್ಹತೆಗಳ ಮೇಲೆ ನೀಡುವ ಪ್ರಯತ್ನ ಮಾಡುತ್ತಿದ್ದು, ಹೆತ್ತವರ ಸಾಮಾಜಿಕ ಸ್ಥಿತಿಗತಿಗಳಿಗೆ ಅನುಗುಣವಾಗಿರುತ್ತದೆ' ಎಂದು ಅವರು ಹೇಳುತ್ತಾರೆ. ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯು ಸಾಮಾಜಿಕ-ಆರ್ಥಿಕ ರಚನೆಗಳಲ್ಲಿ ನಿರಂತರ ಬದಲಾವಣೆಗಳನ್ನು ಬಯಸುತ್ತಿದ್ದರೆ, ಜಾತಿವ್ಯವಸ್ಥೆಯು ಸಾಂಪ್ರದಾಯಿಕ ಸಾಮಾಜಿಕ-ಆರ್ಥಿಕ ರೀತಿಗೆ ಪ್ರಚೋದಿಸುತ್ತಿದ್ದು, ಇದು ಆರ್ಥಿಕ ಅಭಿವೃದ್ಧಿಗೆ ಮಾರಕವಾಗಿರುವುದು ಋಜುವಾತಾಗಿದೆ.

ಡಾ|| ಅಂಬೇಡ್ಕರ್‌ರವರ ಆರ್ಥಿಕ ಚಿಂತನೆಗಳ ಪ್ರಸ್ತುತತೆಯನ್ನು ಸಮಕಾಲೀನ ವಿಚಾರಗಳೊಂದಿಗೆ ತುಲನೆ ಮಾಡಲು ತುಂಬಾ ದಾರಿಗಳಿವೆ. ಅನೇಕ ಮುಖ್ಯವಾಹಿನಿಯ ಆರ್ಥಿಕ ತಜ್ಞರು ಹಣಕಾಸು ನಿರ್ವಹಣೆ, ಹಣಕಾಸು ವ್ಯವಸ್ಥೆ ಮತ್ತು ಆರ್ಥಿಕ ನಿಯಂತ್ರಣದ ಸಮಗ್ರ ಅಂಶಗಳ ಬಗೆಗಿನ ಅವರ ದೃಷ್ಟಿಕೋನಗಳನ್ನು ಈಗಲೂ ಪ್ರಸ್ತುತವೆಂದು ಮನಗಂಡಿದ್ದಾರೆ.

ಈ ಬರವಣಿಗೆಗಳು ಕೇವಲ ಆರ್ಥಿಕ ತತ್ವಗಳಾಗಿರದೆ ವಾಸ್ತವಾಂಶಗಳು ಮತ್ತು ಅಂಕಿ ಅಂಶಗಳನ್ನು ಒಳಗೊಂಡಿದೆ. ಉದಾಹರಣೆಗೆ ಅವರ ಕೃತಿಯಲ್ಲಿರುವ ಪ್ರಾಂತೀಯ ಹಣಕಾಸಿನ ಬಗೆಗಿರುವ ಒಳನೋಟಗಳನ್ನು ನಮ್ಮ ಸಂವಿಧಾನದಲ್ಲಿ ಹಣಕಾಸು ಆಯೋಗದ ಸಂಸ್ಥೆಗೆ ಸೇರಿಸಿಕೊಳ್ಳಲು ಅನುಕೂಲವಾಯಿತು. ಚಿನ್ನದ ವಿನಿಮಯದ ಮಾನದಂಡದ ಬಗ್ಗೆ ಕೀನ್ಸ್‌ನ ಅಭಿಪ್ರಾಯವು ಸೇರಿದಂತೆ ಮುಖ್ಯವಾಹಿನಿಯ ಆರ್ಥಿಕ ಅಭಿಪ್ರಾಯವನ್ನು ಅವರು ವಿರೋಧಿಸಿದ್ದು ಅವರ ಭೌತಿಕ ನಿರ್ಣಯ ಮತ್ತು ಪಾಂಡಿತ್ಯ ಪ್ರಬುದ್ಧತೆಯನ್ನು ತೋರಿಸುತ್ತದೆ. ಸಂದರ್ಭವು ತೀರಾ ಹಿಂದಿನದಾಗಿದ್ದರೆ ಹಣಕಾಸು ನಿರ್ವಹಣೆಯ ಬಗೆಗಿನ ಸುಸಂಬದ್ಧತೆಯನ್ನು ನಿಷ್ಠುರವಾಗಿ ತಿರಸ್ಕರಿಸಬೇಕು. ಹಿಂದೆಂದಿಗಿಂತಲೂ ಹೆಚ್ಚಾಗಿ ಹಣದ ವಾಸ್ತವತೆಯೇ ಈ ಕಾಲಘಟ್ಟದಲ್ಲಿ ಹೆಚ್ಚು ಸುಸಂಬದ್ಧವೆಂದು ಯಾರಾದರೂ ವಾದಿಸಬಹುದು. ಆದರೆ ಹಣಕಾಸು ಆರ್ಥಿಕತೆಯ ಸಮಗ್ರ ಶಿಸ್ತು ಈ ಅಂಶಗಳನ್ನು ತಂದುಕೊಂಡೆ ರೂಪಿತವಾಗಿದೆ. ಮತ್ತು ಯಾರೆ ಆಗಲಿ ಅದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ಅದನ್ನು ಹಣದ ಸಮಸ್ಯೆಗೆ ಅನ್ವಯಿಸುವ ಅಗತ್ಯವಿಲ್ಲ.

ಡಾ|| ಅಂಬೇಡ್ಕರರ ಆರ್ಥಿಕ ಚಿಂತನೆಯ ಪ್ರಸ್ತುತತೆಯನ್ನು ರಾಜ್ಯಾಂಗ ನಿರ್ವಹಣೆಯ ಅಂಶಗಳಿಗೆ ಮಿತಿಗೊಳಿಸುವಂತಿಲ್ಲ. ಅವುಗಳ ಪ್ರಸ್ತುತತೆಯು ಹೆಚ್ಚಾಗಿರುವುದು ಜನಪರ ಆರ್ಥಿಕ ಯೋಜನೆ ಮತ್ತು ಅಭಿವೃದ್ಧಿಯ ವಿಷಯದಲ್ಲಿ; ಜನರ ವಿಮೋಚನೆಯ ವಿಷಯದಲ್ಲಿ ಮತ್ತು ಸಾಮಾಜಿಕ ಪಿಡುಗಗಳ ನಿರ್ಮೂಲನೆಯ ವಿಷಯದಲ್ಲಿ.

> **ಡಾ|| ಅಂಬೇಡ್ಕರರವರ ಆರ್ಥಿಕ ಚಿಂತನೆಗಳ ನಿಜವಾದ ಪ್ರಸ್ತುತತೆ ಇರುವುದು ರಾಷ್ಟ್ರದ ಅಧಿಕಾರವನ್ನು ಪಡೆಯಲು ವರ್ಗ ಹೋರಾಟವನ್ನು ಆರಂಭಿಸಲು ಜನರು ಚಳವಳಿ ಹೂಡುವುದರಲ್ಲಿ; ಅವರ ಚಿಂತನೆಗಳ ಪರತತೆ ಇರುವುದು ದಲಿತ ಚಳವಳಿಗಳಲ್ಲಿ. ಯಾಕೆಂದರೆ ಇದು ದಲಿತರ ವಿಮೋಚನಾ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ದಮನಕ್ಕೊಳಗಾದ ಎಲ್ಲಾ ಜನರು ಶ್ರೀಮಂತ ನವ ಉದಾರವಾದಿ ಸಿದ್ಧಾಂತಗಳ ವಿರುದ್ಧ ಸಂಘಟಿತರಾಗುವುದಕ್ಕೆ ಅವರ ಚಿಂತನೆಗಳ ಅಗತ್ಯತೆ ಇದೆ. ಭೂ ಸುಧಾರಣೆಗಳ ಮೇಲೆ ಅವರು ನೀಡಿದ ಒತ್ತು, ಅಗತ್ಯ ಪರಿಶ್ರಮಗಳ ಪೂರೈಕೆಯಿಂದ ಕೂಡಿದ ಸಹಕಾರಿ ಸಂಘಟಿತ ಬೇಸಾಯ, ಕ್ಷಿಪ್ರ ಕೈಗಾರಿಕೀಕರಣ, ರಾಷ್ಟ್ರೀಕೃತ ವಿಮೆಗಳ ಮೂಲಕ ಜನರ ಸಂಪನ್ಮೂಲದ ಕ್ರೋಢೀಕರಣ ಇತ್ಯಾದಿ ಪ್ರಮುಖ ಹಾಗೂ ಮೂಲ ಕೈಗಾರಿಕೆಗಳನ್ನು ಸಾರ್ವಜನಿಕ ನಿಯಂತ್ರಣದಲ್ಲಿಡುವುದು ನಮ್ಮ ಆಡಳಿತಗಾರರು ಅಳವಡಿಸಿಕೊಂಡು ಬರುತ್ತಿರುವ ಅತಂತ್ರ ಆರ್ಥಿಕ ಯೋಜನೆಗಳ ಸಂದರ್ಭದಲ್ಲಿ ತುಂಬಾ ಮಹತ್ವಪೂರ್ಣವಾಗಿದೆ.**

ಆದಾಗ್ಯೂ ದೇಶದ ಸಾಮಾಜಿಕ ಆರ್ಥಿಕ ಚಿತ್ರವನ್ನು ಬದಲಾಯಿಸುವಂಥ ಜನಪರ ಆರ್ಥಿಕ ನೀತಿ ಮತ್ತು ಅಭಿವೃದ್ಧಿಯ ವಿಷಯಗಳಿಗೆ ಇನ್ನೂ ಪರಿಹಾರವೇ ಸಿಕ್ಕಿಲ್ಲ. ಇದು ಇನ್ನೂ ಕಾರ್ಯಾತ್ಮಕ ಪರಿಹಾರವನ್ನು ಬಯಸುತ್ತದೆ. ನವ ಉದಾರವಾದಿ ಜಾಗತೀಕರಣವು ಕಲ್ಯಾಣ ರಾಜ್ಯದ ಕಲ್ಪನೆಯನ್ನು ತೀವ್ರವಾಗಿ ಛಿದ್ರ ಮಾಡುತ್ತದೆ. ಡಾ|| ಅಂಬೇಡ್ಕರರ ದೃಷ್ಟಿಕೋನಗಳು ಈ ಪರಿಸ್ಥಿತಿಯನ್ನು ಸರಿಪಡಿಸುವ ಬೆಳಕಾಗಿ ಗೋಚರಿಸುತ್ತದೆ. ಅಸಮಾನ ಸಮಾಜದಲ್ಲಿರುವ ಮುಕ್ತ ಮಾರುಕಟ್ಟೆ ಸಿದ್ಧಾಂತದ ಬಗೆಗಿನ ಡಾ|| ಅಂಬೇಡ್ಕರರ ವಿಮರ್ಶೆಯು ಈ ಅನುಭವಗಳನ್ನು ಎದ್ದು ಕಾಣುವಂತೆ ಎತ್ತಿ ಹಿಡಿದಿದೆ. ಸಮಾಜದ ಆರ್ಥಿಕ ರಚನೆಯನ್ನು ಗೊತ್ತುಪಡಿಸುವ ಸಂವಿಧಾನದ ಮೇಲಿನ ಅವರ ಒತ್ತು, ಮೂಲಭೂತ ಹಕ್ಕುಗಳು, ದುರ್ಬಲ ವರ್ಗಗಳ ರಕ್ಷಣೆ ಮತ್ತು ಮೀಸಲಾತಿಗಳ ಬಗೆಗಿನ ಉಪಬಂಧದ ಅವರ ಸಮರ್ಥನೆ- ಈ ಕೆಲವು ಅಂಶಗಳು ಪೂರ್ಣವಾಗಿ ಅವಲಂಬನೆಯನ್ನು ನಿರಾಕರಿಸುತ್ತದೆ. ಇದನ್ನು ಕಳೆದ ೫ ದಶಕಗಳ ಅನುಭವವೇ ದಟ್ಟವಾಗಿ ಸಮರ್ಥಿಸುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಡಾ||ಅಂಬೇಡ್ಕರರ ಮಾತುಗಳನ್ನು ನೆನಪಿಸಿಕೊಳ್ಳುತ್ತದೆ. 'ರಾಜ್ಯಾಂಗ ನಿಯಂತ್ರಣದಿಂದ ಬರುವ ಸ್ವಾತಂತ್ರ್ಯ ಖಾಸಗಿ ಉದ್ಯೋಗದಾತನ ನಿರಂಕುಶತೆಗೆ ಮತ್ತೊಂದು ಹೆಸರಾಗಿದೆ. ಕೂಲಿ ಸುದಾರಣೆಗಳಾಗಲೀ ಅಥವಾ ಕೃಷಿನೀತಿಯಾಗಿರಲಿ ಅಥವಾ ವಿಮಾ ವಲಯದ ಪ್ರಶ್ನೆಯಾಗಿರಲಿ ಅಥವಾ ಅಭಿವೃದ್ಧಿಯ ಸಂದರ್ಭದಲ್ಲಿ ಖಾಸಗಿ ವಲಯದ ಪಾತ್ರವಾಗಿರಲಿ, ಡಾ|| ಅಂಬೇಡ್ಕರರ ದೃಷ್ಟಿಕೋನಗಳು ನವ ಉದಾರವಾದಿ ನೀತಿಗಳಿಗೆ ನೇರ ವಿರೋಧವನ್ನು ಒಡ್ಡುತ್ತದೆ'.

ಭೂ ಸುಧಾರಣೆ, ಸಹಕಾರಿ ಸಂಘಟಿತ ಬೇಸಾಯ ಪದ್ಧತಿ, ಬಂಡವಾಳ ಮತ್ತು ಶ್ರಮವನ್ನೊಳಗೊಂಡ ಬೇಸಾಯದ ಬಗೆಗಿನ ದೃಢ ಪ್ರಯತ್ನ, ಸಾರ್ವಜನಿಕ ಕ್ಷೇತ್ರದ ಪ್ರಮುಖ ಹಾಗೂ ಮೂಲ ಕೈಗಾರಿಕೆಗಳ ಕ್ಷಿಪ್ರ ಕೈಗಾರಿಕೀಕರಣ, ವಿಮೆಯ ರಾಷ್ಟ್ರೀಕರಣ ಇವು ಅಂಬೇಡ್ಕರ್ ಸೂಚಿಸಿದಂಥ ಪರಿಹಾರಗಳಾಗಿವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಬಡತನ ನಿವಾರಿಸಿ, ಜನರ ಜೀವನಮಟ್ಟವನ್ನು ಸುಧಾರಿಸುವ ಉದ್ದೇಶ ಇಟ್ಟುಕೊಂಡ 'ರಾಷ್ಟ್ರ ಸಮಾಜವಾದದ ಮಾದರಿಯು ನಿಶ್ಚಯವಾಗಿಯೂ ನಮ್ಮಲ್ಲಿದ್ದ ಪರಿಹಾರಕ್ಕಿಂತಲೂ ಅತ್ಯಂತ ಉತ್ತಮವಾದ ಪರಿಹಾರವಾಗಿರುತ್ತದೆ. ವ್ಯಂಗ್ಯವೆಂದರೆ ಕರಡುಸಮಿತಿಯ ಅಧ್ಯಕ್ಷರಾಗಿದ್ದರೂ ಸಹ ಈ ಮುಖ್ಯ ಅಂಶಗಳನ್ನು ಸಂವಿಧಾನದಲ್ಲಿ ಅಳವಡಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಇದು ಉದಾತ್ತ ವ್ಯಕ್ತಿಗಳ ಬೌದ್ಧಿಕ ಚರ್ಚೆ, ಗೋಷ್ಠಿಗಳ ಮಿತಿ ಹಾಗೂ ವರ್ಗ ಪ್ರಾಬಲ್ಯದ ನಿರ್ಣಾಯಕ ಪಾತ್ರವನ್ನು ಮಾತ್ರ ಎತ್ತಿ ತೋರಿಸುತ್ತದೆ. ಅಂಬೇಡ್ಕರ್‌ರವರು ಈ ಸತ್ಯವನ್ನು ಅರಿತಿದ್ದರೆ ಎಂಬುದು ಗೊತ್ತಾಗುತ್ತಿಲ್ಲ. ಆಡಳಿತ ವರ್ಗಗಳು ಸಮಾಜದ ದುರ್ಬಲ ವರ್ಗಗಳ ರಕ್ಷಣೆಗಳು, ಮೀಸಲಾತಿಗಳ ಬಗೆಗಿನ ಅನೇಕ ಉಪಬಂಧಗಳನ್ನು ಹಾಗೂ ಸಂವಿಧಾನದ ಅನೇಕ ಇತರ ಪ್ರಗತಿಪರ ಅಂಶಗಳನ್ನು ಅಂಗೀಕರಿಸಿದ್ದರು ಮತ್ತು ಯಾವುದೇ ಕ್ರಾಂತಿಕಾರಕ ಹುಟ್ಟಿನ ಸಾಧ್ಯತೆಯನ್ನು ಒಳಗೊಂಡಿದ್ದರು. ಅವರಿಗೆ ತಮ್ಮೆಲ್ಲ ಸವಲತ್ತುಗಳನ್ನು ಶಾಶ್ವತವಾಗಿ ಬಿಟ್ಟುಕೊಡುವುದು ಅವರಿಗೆ ಕಲ್ಪಿಸಲಸಾಧ್ಯವಾಗಿತ್ತು. ಅಂಥ ಪರಿವರ್ತನೆಯು 'ವರ್ಗ ಸಂಘರ್ಷ' ದಿಂದ ಮಾತ್ರ ಸಾಧ್ಯ.

ಡಾ|| ಅಂಬೇಡ್ಕರ್‌ರವರ ಆರ್ಥಿಕ ದೃಷ್ಟಿಕೋನಗಳನ್ನು ಸಂವಿಧಾನದಲ್ಲಿ ಸಮಾಜದ ಮೂಲಭೂತ ಸಾಮಾಜಿಕ-ಆರ್ಥಿಕ ರಚನೆಯಲ್ಲಿ ಸೇರಿಸುವ ಪ್ರಸ್ತಾವನೆಯ ಕೇಂದ್ರವಾಗಿದೆ. ಯಾಕೆಂದರೆ ರಾಜಕೀಯ ಬಹುಸಂಖ್ಯಾತರಿಗೆ ಬಿಟ್ಟುಕೊಡುವುದೆಂದರೆ, 'ಉಳ್ಳವರ' ನಿರಂಕುಶ ಪ್ರಭುತ್ವಕ್ಕೆ ದಾರಿ ಮಾಡಿದಂತೆ ಮತ್ತು ತುಂಬಾ ವರ್ಷಗಳ ದಬ್ಬಾಳಿಕೆ


'ಸಂವಾದ' ದೊರೆಯುವ ಸ್ಥಳ

☞ ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ

❖ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-೫೬೦ ೦೦೧, ☎ : ೨೨೨೦೩೬೮೦

❖ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೦೩೮೨ ❖ ಸ್ಟೇಷನ್ ರಸ್ತೆ, ಗುಲ್ಬರ್ಗ-೨, ☎ : ೪೨೪೬೦೨

❖ ಕೆ.ಎಸ್.ರಾವ್ ರಸ್ತೆ, ಮಂಗಳೂರು-೧, ☎ : ೨೪೪೧೦೦೧೬ ❖ ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೮೯೪

☞ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦

☞ ಕೆಎಸ್‌ಆರ್‌ಟಿಸಿ ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ. ೧, ಸ್ಟಾಲ್ ನಂ. ೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು


ಯನ್ನು ನಿರಂತರ ಕಾಯುವುದು' ಎಂದಾಗುತ್ತದೆ. ಇದು ಬದಲಾವಣಾ ವಿಷಯಗಳಲ್ಲಿ ಸಂಸದೀಯ ರಚನೆಗಳ ಅವಾಸ್ತವಿಕತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇದು, ಅವರ ಬರಹಗಳಲ್ಲಿ ಭದ್ರವಾಗಿ ನೆಲೆಯೂರಿದ ರಾಜಕೀಯ ಆರ್ಥಿಕತೆಯ ಬಗೆಗಿನ ದೊಡ್ಡ ಪಾಠವಾಗಿದ್ದು ಇದನ್ನು ತಿಳಿದುಕೊಳ್ಳಲು ಅವರ ಅನುಯಾಯಿಗಳು ಇಲ್ಲಿಯವರೆಗೆ ನಿರಾಕರಿಸಿದ್ದರು.

ಕೊನೆಯಲ್ಲಿ ಹೇಳುವುದೇನೆಂದರೆ, ಜನಪರ ಆರ್ಥಿಕ ಯೋಜನೆ ಮತ್ತು ಅಭಿವೃದ್ಧಿಗಳಿಂದ ಕೂಡಿದ ಅಂಬೇಡ್ಕರ್‌ರವರ ಆರ್ಥಿಕ ಚಿಂತನೆಗಳು ಕೇವಲ ಪ್ರಸ್ತುತ ಮಾತ್ರವಲ್ಲ, ಈಗಿನ ಜಾಗತೀಕರಣದ ಯುಗದಲ್ಲಿ ಅಪೇಕ್ಷಣೀಯವೂ ಆಗಿದೆಯೆಂಬುದನ್ನು ಯಾರಾದರೂ ಸುಲಭವಾಗಿ ಗ್ರಹಿಸಬಹುದು. ಅಲ್ಲದೆ, ಇವು ಜಾತಿಗಳ ನಿರ್ಮೂಲನೆ ಮತ್ತು ಬೆಳೆಯುತ್ತಿರುವ ಕೋಮುವಾದಕ್ಕೆ ತಡೆಯುಂಟುಮಾಡುವ ದೃಷ್ಟಿಯಿಂದಲೂ ಕೂಡಾ ಅಪೇಕ್ಷಣೀಯವಾಗಿದೆ. ಹಾಗಿದ್ದರೂ ಇವುಗಳ ಅನುಷ್ಠಾನದಿಂದ ಕಲ್ಯಾಣ ರಾಷ್ಟ್ರದ ಉದಯವಾಗುತ್ತದೆ. ಡಾ|| ಅಂಬೇಡ್ಕರ್‌ರು ಅಂಥ ರಾಷ್ಟ್ರದ ಉದಯ ಹೇಗೆಂಬುದನ್ನು ವಿವರಿಸಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಜಮೀನ್ದಾರಿ-ಆಡಳಿತಶಾಹಿ ಅಡಿಯಲ್ಲಿರುವ ರಾಷ್ಟ್ರವು ಏಕೆ ಅಂಥ ಪರಿವರ್ತನೆಯನ್ನು ಕೈಗೊಳ್ಳಬೇಕು? ತನ್ನ ನಾಶಕ್ಕೆ ತಾನೇ ಏಕೆ ದಾರಿ ಮಾಡಿಕೊಳ್ಳಬೇಕು? ಸ್ವಾತಂತ್ರ್ಯನಂತರದ ದಶಕಗಳಲ್ಲಿ ನಾವು ಅನುಭವಿಸಿದಂಥ ಕಲ್ಯಾಣ ರಾಷ್ಟ್ರದ ಕೊಡುಗೆಯಲ್ಲಿ ಸ್ವಲ್ಪ ದಿನ ಸಾಗಬಹುದು. ಆದರೆ ಆಗ ಯಾಕೆ ಹಾಗಾಯಿತು ಎಂಬುದು ನಮಗೆಲ್ಲ ತಿಳಿದಿದೆ. ಅದು ಜನರ ಹಿತದೃಷ್ಟಿಯಿಂದ ಆದದ್ದಲ್ಲ. ಅದು ಪೂರ್ತಿಯಾಗಿ ತನ್ನ ವರ್ಗ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದೇ ಆಗಿತ್ತು.

ಮಾರ್ಕ್ಸ್‌ನ ಸಿದ್ಧಾಂತವಾದ ಶ್ರಮಜೀವಿಗಳು ಕ್ರಾಂತಿಕಾರಿ ವರ್ಗಸಂಘರ್ಷದ ಮೂಲಕ ರಾಷ್ಟ್ರದ ಅಧಿಕಾರವನ್ನು ಪಡೆದುಕೊಳ್ಳಬೇಕೆನ್ನುವ ಬದಲು ಡಾ|| ಅಂಬೇಡ್ಕರರು ಸಂವಿಧಾನ ರಚನಾಕಾರರೇ ಅಂಥ ರಾಷ್ಟ್ರವನ್ನು ಕಟ್ಟಬೇಕು ಎನ್ನುತ್ತಾರೆ. ಈ ಸಂವಿಧಾನ ರಚನಾಕಾರರು ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ವ್ಯಂಗ್ಯವೆಂದರೆ, ಚರಿತ್ರೆಯು ಅವರ ಕೈಯಲ್ಲಿ ಪೆನ್ನು ಕೊಟ್ಟು ಸಂವಿಧಾನ ಬರೆಸುವ ಮೂಲಕ ಅವರನ್ನೇ ಸಂವಿಧಾನ ರಚನಾಕಾರರನ್ನಾಗಿ ಮಾಡಿದ್ದು ಹಾಗೂ ನಂತರ ಅವರು ಬೇರೆಯವರಿಗಾಗಿ ಬರೆಯುವಂತೆ ಮಾಡಿ ಅವರನ್ನು ಶೋಚನೀಯ ಸ್ಥಿತಿಗೆ ಇಳಿಸಿದ್ದು ಇತಿಹಾಸದ ತೀರ್ಪಲ್ಲಿ ತಪ್ಪಿಲ್ಲ. ವರ್ಗ ಸಂಘರ್ಷದಿಂದ ಮಾತ್ರ ರಾಷ್ಟ್ರವನ್ನು ಜಯಿಸಬಹುದು. ಮಾರ್ಕ್ಸ್ ಏನು ಹೇಳಿದ್ದಾನೋ ಅದು ಊರ್ಜಿತವಾಗಿದೆ. ರಾಷ್ಟ್ರದ ಕ್ರಾಂತಿಕಾರಿ ಪರಿವರ್ತನಾ ಸಂದರ್ಭದಲ್ಲಿ ಅಂಬೇಡ್ಕರ್‌ರವರ ಆರ್ಥಿಕ ಪ್ರಸ್ತಾವನೆಗಳನ್ನು ನೀಲಿ ಪ್ರತಿಗಳಾಗಿ ತೆಗೆದುಕೊಳ್ಳಬಹುದು. ಇಲ್ಲದಿದ್ದರೆ ಅವುಗಳು ಕೇವಲ ದೃಷ್ಟಿಕೋನಗಳಾಗಿ ಉಳಿದುಬಿಡುತ್ತದೆ.

ಅಂಬೇಡ್ಕರ್‌ರವರ ಆರ್ಥಿಕ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸ್ವಲ್ಪಮಟ್ಟಿನ ದ್ವಂದ್ವ ಮತ್ತು ಸ್ವಲ್ಪ ಅಕೃತಿಮತೆ ಇದ್ದರೂ, ಅವರ ಚಿಂತನೆಗಳ ಪ್ರಸ್ತುತತೆಯನ್ನು ಪ್ರಶ್ನಿಸಲು ಸಾಧ್ಯವಿಲ್ಲ.

ಭೂ ಸುಧಾರಣೆಗಳ ಮೇಲೆ ಅವರು ನೀಡಿದ ಒತ್ತು ಅಗತ್ಯ ಪರಿಶ್ರಮಗಳ ಪೂರೈಕೆಯಿಂದ ಕೂಡಿದ ಸಹಕಾರಿ ಸಂಘಟಿತ ಬೇಸಾಯ, ಕ್ಷಿಪ್ರ ಕೈಗಾರಿಕೀಕರಣ, ರಾಷ್ಟ್ರೀಕೃತ ವಿಮೆಗಳ ಮೂಲಕ ಜನರ ಸಂಪನ್ಮೂಲದ ಕ್ರೋಢೀಕರಣ ಇತ್ಯಾದಿ ಪ್ರಮುಖ ಹಾಗೂ ಮೂಲ ಕೈಗಾರಿಕೆಗಳನ್ನು ಸಾರ್ವಜನಿಕ ನಿಯಂತ್ರಣದಲ್ಲಿಡುವುದು ನಮ್ಮ ಆಡಳಿತಗಾರರು ಅಳವಡಿಸಿಕೊಂಡು ಬರುತ್ತಿರುವ ಅತಂತ್ರ ಆರ್ಥಿಕ ಯೋಜನೆಗಳ ಸಂದರ್ಭದಲ್ಲಿ ತುಂಬಾ ಮಹತ್ವಪೂರ್ಣದ್ದಾಗಿರುತ್ತದೆ. ನನ್ನ ಮನಸ್ಸಿನಲ್ಲಿರುವ, ಡಾ|| ಅಂಬೇಡ್ಕರರವರ ಆರ್ಥಿಕ ಚಿಂತನೆಗಳ ನಿಜವಾದ ಪ್ರಸ್ತುತತೆ ಇರುವುದು ರಾಷ್ಟ್ರದ ಅಧಿಕಾರವನ್ನು ಪಡೆಯಲು ವರ್ಗ ಹೋರಾಟವನ್ನು ಆರಂಭಿಸಲು ಜನರು ಚಳವಳಿ ಹೂಡುವುದರಲ್ಲಿ; ಅವರ ಚಿಂತನೆಗಳ ಪರತತೆ ಇರುವುದು ದಲಿತ ಚಳವಳಿಗಳಲ್ಲಿ, ಯಾಕೆಂದರೆ ಇದು ದಲಿತರ ವಿಮೋಚನಾ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ದಮನಕ್ಕೊಳಗಾದ ಜನರು ಶ್ರೀಮಂತ ನವ ಉದಾರವಾದಿ ಸಿದ್ಧಾಂತಗಳ ವಿರುದ್ಧ ಸಂಘಟಿತರಾಗುವುದಕ್ಕೆ ಅವರ ಚಿಂತನೆಗಳ ಅಗತ್ಯತೆ ಇದೆ. □

ಸ್ವರ ವಿಸ್ತಾರ

೧
ಹಿಡಿಯುತ್ತ ಬಂದ:
ನೀರಿನಲಿ ಹರಿವ ಹಾವನ್ನು,

ಮುಗಿಲಲ್ಲಿ ರೆಕ್ಕೆ ಬಿಚ್ಚಿದ
ಹಕ್ಕಿಯ ಹಾದಿಯನ್ನು,

ಚಿಟ್ಟೆ ರೆಕ್ಕೆಯ ಪುಟ್ಟ
ಕಣ್ಣಿನ ಬಣ್ಣಬಣ್ಣಗಳನ್ನು,

ಹಸಿರಿನೊಡಲಿಂದ ಉಲಿಯುವ
ಹಕ್ಕಿ ಹಾಡಿನ ಎಳೆಎಳೆಯನ್ನು,

ಸುಳಿಗಾಳಿ ಆಡುವ
ಕೊಳದ ಅಲೆ ಅಲೆಯ ಗೀತವನ್ನು,

ಧುಮ್ಮಿಕ್ಕುವ ಝರಿಯ ಉತ್ಸಾಹವನ್ನು
ನೆಗೆಯುವ ಜಿಂಕೆಯ ಜೀವ ಚೈತನ್ಯವನ್ನು,

ಅಬ್ಬರದೊಳಗಿನ ಮೌನವನ್ನು
ಮೌನದೊಳಗಿನ ವಿಷಾದವನ್ನು,

ಒಂದರೊಳಗಿನ ಬಂಧವನ್ನು
ಸಂಬಂಧವನ್ನು,

೨
ತಾನೆ ತೆಗೆದ
ಧ್ವನಿಯಲ್ಲಿ
ಆಲಾಪದಲ್ಲಿ
ಸ್ವರ ವಿಸ್ತಾರದಲ್ಲಿ
ಎಲ್ಲವನು ಕಟ್ಟುತ್ತ
ಸೂತ್ರವನು ಹಿಡಿಯುತ್ತ
ಏಕಾಗ್ರ ಬೆಸೆಯುತ್ತ
ತೇಲುತ್ತಾನೆ ಅನಂತದಲಿ
ಏಕಾಕಿ.

ಆಹಾ!
ಈ ಕ್ಷಣ
ಇದೊಂದೆ ಕ್ಷಣ
ತಾನೆ ತಾನು
ತಾನು ಕಟ್ಟಿದ
ತಾನೆ ಹಿಡಿದ
ಭೂಮಿ-ಆಕಾಶ
ಗಿಡ ಮರ ಹಕ್ಕಿ
ಚಿಟ್ಟೆ ಹುಳ ಹಕ್ಕಿ
ಎಲ್ಲದಕ್ಕೂ -

ಒಂದೆ
ರೆಕ್ಕೆ.
ಹಾರಾಟ,
ದಾರಿ.

○ ಜಿ.ಪಿ. ಬಸವರಾಜು

ಭವ್ಯ ಭಾರತ ನಮ್ಮೆಲ್ಲರ ನೆಲೆ
ಸ್ವಾತಂತ್ರ್ಯೋತ್ಸವ ನಮಗೆಲ್ಲ ಸ್ಫೂರ್ತಿಯ ಸೆಲೆ

ಭಾರತದ ಸ್ವಾತಂತ್ರ್ಯೋತ್ಸವ ಎಂದರೆ ಸತ್ಯ, ಅಹಿಂಸೆ, ಸಹಿಷ್ಣುತೆಗಳಂತಹ ಹಲವು ಉದಾತ್ತ ತತ್ವಗಳತ್ತ ನಮ್ಮೆಲ್ಲರ ಗಮನ ಸೆಳೆಯುವುದರೊಂದಿಗೆ ಅವುಗಳನ್ನು ಪರಿಪಾಲಿಸುವಂತೆ ಸದಾ ಪ್ರೇರಣೆ ಒದಗಿಸುವ ಅತ್ಯಪೂರ್ವ ಅವಕಾಶ.

ಸಮೃದ್ಧ ಕರ್ನಾಟಕ - ಸದೃಢ ಹೆಜ್ಜೆ

★ ಕೃಷಿ - ಕೃಷಿ ವಲಯಕ್ಕೆ ಉತ್ತೇಜನ ನೀಡಲು 412 ಕೋಟಿ ರೂ.ಗಳ ಯೋಜನಾ ಅನುದಾನ 840 ಕೋಟಿ ರೂ.ಗಳಿಗೆ ಹೆಚ್ಚಳ.

★ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲಕ್ಕಾಗಿ 100 ಕೋಟಿ ರೂ.ಗಳ ಆವರ್ತನಿಧಿ.

ಗ್ರಾಮೀಣಾಭಿವೃದ್ಧಿ

★ ಗ್ರಾಮೀಣ ಜನತೆಯ ಬದುಕಿಗೆ ಹೊಸ ಚೇತನ ನೀಡಲು ರೂ. 690 ಕೋಟಿಗಳ ಜಲಾನಯನ ಯೋಜನೆ. ರೂ. 670 ಕೋಟಿ ವೆಚ್ಚದಲ್ಲಿ ಕೆರೆ ನಿರ್ವಹಣಾ ಯೋಜನೆ ಮತ್ತು ರೂ. 1035-00 ಕೋಟಿ ವೆಚ್ಚದಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆ ಅನುಷ್ಠಾನ.

★ ಹಿಂದುಳಿದ ವರ್ಗಗಳ ಸ್ವಯಂ ಉದ್ಯೋಗಕ್ಕಾಗಿ ರೂ. 20 ಕೋಟಿಯೊಂದಿಗೆ ಶ್ರಮಶಕ್ತಿ ಯೋಜನೆ.

ಪ್ರಾಥಮಿಕ ಶಿಕ್ಷಣ

★ ಅಕ್ಷರ ದಾಸೋಹ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿರುವ 7ನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೂ ವಿಸ್ತರಣೆ. ಹೆಚ್ಚುವರಿಯಾಗಿ 25 ಲಕ್ಷ ಶಾಲಾ ಮಕ್ಕಳು ಫಲಾನುಭವಿಗಳು.

ಆರೋಗ್ಯ

★ ಮುಂದಿನ 5 ವರ್ಷಗಳಲ್ಲಿ ರೂ. 765 ಕೋಟಿ ವೆಚ್ಚದಲ್ಲಿ ಆರೋಗ್ಯ ಮತ್ತು ಪೌಷ್ಠಿಕಾಂಶ ಯೋಜನೆಯ ಅನುಷ್ಠಾನ. ಸಾರ್ವಜನಿಕ ಆರೋಗ್ಯವರ್ಧನೆ ಮತ್ತು ಆರೋಗ್ಯ ರಕ್ಷಣೆಗೆ ಹೆಚ್ಚಿನ ಸೌಲಭ್ಯ. ★ ಯಶಸ್ವಿನಿ ಯೋಜನೆಯ ಮುಂದುವರಿಕೆ ಎಲ್ಲಾ ರೈತರ ಆರೋಗ್ಯ ರಕ್ಷಣೆಗಾಗಿ ಸಂಜೀವಿನಿ ಆರೋಗ್ಯ ವಿಮೆ.

ನೀರಾವರಿ

★ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ವಿವಿಧ ಹಂತದಲ್ಲಿರುವ ಎಲ್ಲಾ ನೀರಾವರಿ ಕಾಮಗಾರಿಗಳು ಡಿಸೆಂಬರ್ 2005ರೊಳಗೆ ಪೂರ್ಣ.

ಸಮಾಜ ಕಲ್ಯಾಣ

★ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಣ್ಣ ರೈತರಿಗೆ ಮತ್ತಷ್ಟು ಪ್ರೋತ್ಸಾಹ ನೀಡಲು ಗಂಗಾ ಕಲ್ಯಾಣ ಕಾರ್ಯಕ್ರಮದಡಿ ರೂ.13 ಕೋಟಿಗಳ ಹೆಚ್ಚುವರಿ ಅನುದಾನ. ★ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಯೋಜನಾ ಅನುದಾನದಲ್ಲಿ ಗಮನಾರ್ಹ ಹೆಚ್ಚಳ. ರೂ. 396 ಕೋಟಿಯಿಂದ ರೂ. 435 ಕೋಟಿ ಏರಿಕೆ.

ಕನ್ನಡ ಮತ್ತು ಸಂಸ್ಕೃತಿ

★ ಈ ನಾಡಿನ ನೆಲ, ಜಲ ಮತ್ತು ವಿಶಿಷ್ಟ ಸಂಸ್ಕೃತಿಯ ಪಾಲನೆ, ಪೋಷಣೆ ಮತ್ತು ಅಭಿವೃದ್ಧಿಗೆ ವಿಶೇಷ ಒತ್ತು. ಐತಿಹಾಸಿಕ ಸ್ಥಳಗಳಾದ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಬಿಜಾಪುರ, ಗುಲ್ಬರ್ಗಾ ಮತ್ತು ಕಿತ್ತೂರು ಪಟ್ಟಣಗಳನ್ನು ಪರಂಪರೆ ಕೇಂದ್ರಗಳೆಂದು ಘೋಷಿಸಲಾಗುವುದು.

★ ಕೂಡಲ ಸಂಗಮ ಮಾದರಿಯಲ್ಲೇ ಬಸವ ಕಲ್ಯಾಣದ ಅಭಿವೃದ್ಧಿಗೆ ಕ್ರಮ.

ಪ್ರಾದೇಶಿಕ ಅಸಮಾನತೆ ನಿವಾರಣೆಯತ್ತ ದಿಟ್ಟ ಹೆಜ್ಜೆ

★ ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ ಶ್ರೀ ನಂಜುಂಡಪ್ಪ ಸಮಿತಿ ಮಾಡಿರುವ ಶಿಫಾರಸ್ಸುಗಳು ಹಂತಹಂತವಾಗಿ ಜಾರಿ.

★ ಉತ್ತರ ಕರ್ನಾಟಕದ ಅಭಿವೃದ್ಧಿ ರೂ. 7,170 ಕೋಟಿಗಳ ಬೃಹತ್ ಯೋಜನಾ ಅನುದಾನ. ಇದು ರಾಜ್ಯದ ಒಟ್ಟಾರೆ ಯೋಜನಾ ಗಾತ್ರದ ಶೇ 54 ರಷ್ಟು

★ ಉತ್ತರ ಕರ್ನಾಟಕದ ತೀರ ಹಿಂದುಳಿದ 37 ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ. ★ ಉತ್ತರ ಕರ್ನಾಟಕವೂ ಸೇರಿದಂತೆ ರಾಜ್ಯದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಅವುಗಳಿಗೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ 371ನೇ ವಿಧಿಗೆ ತಿದ್ದುಪಡಿ ತರಲು ಕೇಂದ್ರಕ್ಕೆ ಒತ್ತಾಯ.

ರಾಷ್ಟ್ರದ ಸಂಪದಭಿವೃದ್ಧಿಯಲ್ಲಿ ನಾವೆಲ್ಲರೂ ಭಾಗಿಗಳು

ಕರ್ನಾಟಕ ವಾರ್ತೆ

ಕಾಂಗ್ರೆಸ್ ಸಿಹಿ ವಿಷ ಉಣಿಸಲು ಆರಂಭಿಸಿದೆಯೇ ?

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಇದು ನಂಬಲಸಾಧ್ಯವಾದುದು ಮತ್ತು ಊಹಿಸಲಸಾಧ್ಯವಾದುದು! ಕಾಂಗ್ರೆಸ್ ಮುಂದಾಳತ್ವದ ಸಂಯುಕ್ತ ಪ್ರಗತಿಪರ ಒಕ್ಕೂಟ (ಯುಪಿಎ)ದ ದಲಿತಪರ ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ (ಸಿಎಂಪಿ) ಸೋನಿಯಾಗಾಂಧಿ ಅಥವಾ ಪ್ರಧಾನಮಂತ್ರಿ ಮನಮೋಹನ್‌ಸಿಂಗ್‌ರ ಸಮ್ಮತಿಯು ದೊರೆತಂತಿಲ್ಲ.

ಸಿಎಂಪಿಯ ಕರಡಿನ ಪರಿಶೀಲನೆಯನ್ನು ವೈಯಕ್ತಿಕವಾಗಿ ಮಾಡಲು ಅವರಿಗೆ ಸಮಯವಿದೆಯೇ? ಅವರೆಲ್ಲಾ ಗಳಿಕೆ ತರುವ ಸಚಿವ ಸ್ಥಾನಕ್ಕೆ ವಿವಿಧ ಮೈತ್ರಿಪಕ್ಷಗಳು ಕಚ್ಚಾಡತೊಡಗಿರುವಾಗ ಪ್ರಣಾಳಿಕೆಯ ಪ್ರಶ್ನೆಯೆಲ್ಲಿ? ಕೊಳ್ಳೆ ಹೊಡೆದುದನ್ನು ಹಂಚಿಕೊಳ್ಳುವುದರಲ್ಲಿ ನಿರತವಾಗಿರುವ ಪೈಪೋಟಿ ಗುಂಪುಗಳೊಂದಿಗೆ ಸಂಧಾನ ಮತ್ತು ಮರುಸಂಧಾನ ಮಾಡುವುದರಲ್ಲೇ ಸೋನಿಯಾ ಮತ್ತು ಸಿಂಗ್ ಇಬ್ಬರೂ ಮೌನವಾಗಿ ಸಮ್ಮತಿಸಿದಂತಿದೆ. ವಾಸ್ತವಿಕವಾಗಿ ನಡೆದದ್ದೇನೆಂದರೆ, ಕೆಲವು ಐಎಎಸ್ ಅಥವಾ ದೈನಂದಿನ ಪತ್ರಿಕಾ ಹೇಳಿಕೆಗಳ ಕರಡು ತಯಾರಿಕೆಯ ತಜ್ಞರಿಗೆ ಈ ಸಿಎಂಪಿಯನ್ನು ತಯಾರಿಸಲು ಕೇಳಿಕೊಳ್ಳಲಾಗಿತ್ತು. ಇತರ ಹಿರಿಯ ಕಾಂಗ್ರೆಸ್ ಮುಖಂಡರು ಕೂಡಾ ಇದಕ್ಕೆ ಆಕ್ಷೇಪಿಸಲಿಲ್ಲ. ಯಾಕೆಂದರೆ ಅವರು ತಮ್ಮ ಸ್ವಹಿತಾಸಕ್ತಿ ಕಾಯ್ದುಕೊಳ್ಳುವುದರಲ್ಲೇ ಬಿಜಿಯಾಗಿದ್ದರು.

ಖಾಸಗೀಕರಣವನ್ನು ಪ್ರತಿಪಾದಿಸುತ್ತಿರುವ ಉದಾರೀಕರಣವು ಇಂದು ದಲಿತರಿಗೆ ಅತೀ ದೊಡ್ಡ ಸವಾಲಾಗಿದೆ. ಅವರು ತಮ್ಮ ಹಕ್ಕುಗಳನ್ನು ಉದಾರೀಕರಣೋತ್ತರ ಕಾಲಘಟ್ಟದಲ್ಲಿ ಅನ್ವೇಷಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ದಲಿತರ ಪ್ರಾತಿನಿಧಿಕ ವರ್ಗವು ಸರ್ಕಾರೀ ಖರೀದಿಗಳು ಮತ್ತು ಕರಾರುಗಳಲ್ಲಿ ಆರ್ಥಿಕತೆಯ ಒಂದು ಭಾಗವನ್ನು ಕೇಳಲು ಶುರು ಮಾಡಿದೆ. ಸೋನಿಯಾ ಅಡಿಯಲ್ಲಿರುವ ಕಾಂಗ್ರೆಸ್ ದಲಿತರ ಈ ಆಕಾಂಕ್ಷೆಗಳನ್ನು ಗುರುತಿಸುವಲ್ಲಿ ಪ್ರಾಮಾಣಿಕವಾಗಿದೆ. ಇದು ಪಕ್ಷದ ಪ್ರಣಾಳಿಕೆಯಲ್ಲೂ ಪ್ರತಿಧ್ವನಿಸಿದೆ.

ಇದರ ಪ್ರಣಾಳಿಕೆಯು ದಲಿತರಿಗಾಗಿ ಈ ಮುಂದಿನವುಗಳನ್ನು ಮಾಡುತ್ತೇನೆಂದು ಪ್ರಮಾಣಗೈದಿದೆ. 'ಖಾಸಗಿ ಕ್ಷೇತ್ರದಲ್ಲಿ ಉದ್ಯೋಗದಲ್ಲಿ ಸೂಕ್ತ ಪಾಲನ್ನು ಪಡೆಯುವಲ್ಲಿ ದಲಿತರ ಮತ್ತು ಆದಿವಾಸಿಗಳ ವಿಷಯದಲ್ಲಿ ರಾಷ್ಟ್ರೀಯ ಒಮ್ಮತವನ್ನು ಮೂಡಿಸುವುದು. ಯುವಜನರ ಅದರಲ್ಲೂ ವಿಶೇಷವಾಗಿ ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಜನರ ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ಭಾರತೀಯ ಕೈಗಾರಿಕೆಯು ಎಷ್ಟರಮಟ್ಟಿಗೆ ಅತ್ಯುತ್ತಮವಾಗಿ ಗುರುತಿಸಿಕೊಳ್ಳುತ್ತದೆ ಎಂಬ ಬಗ್ಗೆ ಖಾಸಗಿ ಕೈಗಾರಿಕೆಗಳೊಂದಿಗೆ ವಾಸ್ತವಿಕ ಕ್ರಮಗಳ ಮೂಲಕ ಸಂವಾದ ಆರಂಭಿಸಲಾಗುವುದು. ದಲಿತರು ಮತ್ತು ಆದಿವಾಸಿಗಳಿಗೆ ಸರ್ಕಾರೀ ಸೌಕರ್ಯಗಳಲ್ಲಿ ವಿಶೇಷ ರಿಯಾಯಿತಿಯನ್ನು ಒದಗಿಸುವ ಮೂಲಕ ಮತ್ತು ಸಮರ್ಥನೀಯ ಕರಾರುಗಳಲ್ಲಿ ಬ್ಯಾಂಕ್ ಸಾಲವನ್ನು ನೀಡುವ ಮೂಲಕ ಅವರು ವ್ಯಾಪಾರ ನಡೆಸುವಂತೆ ಅವರ ನಡುವೆ ಉದ್ಯಮಶೀಲ ಸಂಸ್ಕೃತಿಯನ್ನು ಉತ್ತೇಜಿಸುವುದಕ್ಕೆ ನಿರ್ಧಾರಾತ್ಮಕ ಪ್ರಯತ್ನಗಳನ್ನು ಮಾಡಲಾಗುವುದು'
(ಪು. ೨೧, 'ದಲಿತರು ಮತ್ತು ಆದಿವಾಸಿಗಳ' ಮೇಲಿನ ಉಪ-ಪ್ರಕರಣ)

ಆದರೆ, ಸರ್ಕಾರವು ವಾಸ್ತವಿಕವಾಗಿ ಅಧಿಕಾರಕ್ಕೆ ಬಂದಾಗ ಯುಪಿಎ ಅಧ್ಯಕ್ಷೆ ಸೋನಿಯಾ ಸಿಎಂಪಿಯನ್ನು ಬಿಡುಗಡೆ ಮಾಡಿದಾಗ ದಲಿತರಿಗೆ ಈ ಮುಂದಿನವುಗಳನ್ನು ಕೊಡಮಾಡಲಾಯಿತು : 'ಖಾಸಗಿ ವಲಯದಲ್ಲಿ ಮೀಸಲಾತಿಯು ಸೇರಿದಂತೆ, ಸಕಾರಾತ್ಮಕ ಕಾರ್ಯಕ್ರಮಗಳನ್ನು ಮಾಡುವುದರಲ್ಲಿ ಯುಪಿಎಯು ತುಂಬಾ ಸಂವೇದನಾಶೀಲತೆ ಹೊಂದಿದೆ. ಖಾಸಗಿ ವಲಯವು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಯುವಜನರ ಆಕಾಂಕ್ಷೆಗಳನ್ನು ಅತ್ಯುತ್ತಮವಾಗಿ ನೆರವೇರಿಸುವುದಕ್ಕಾಗಿ ಎಲ್ಲ ರಾಜಕೀಯ ಪಕ್ಷಗಳು, ಕೈಗಾರಿಕೆ ಮತ್ತು ಇತರ ಸಂಸ್ಥೆಗಳೊಂದಿಗೆ ತಕ್ಷಣವೇ ರಾಷ್ಟ್ರೀಯ ಸಂವಾದವನ್ನು ಆರಂಭಿಸುವುದು'.
(ಪುಟ. ೭, 'ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳ' ಮೇಲಿನ ಉಪ-ಪ್ರಕರಣ).

ಆದರೆ ಒಂದೇ ಏಟಿಗೆ ಈ ಮುಂದಿನ ನಿರ್ಣಾಯಕ ಸಾಲು ಮಾಯವಾಗಿದೆ : 'ಆದಿವಾಸಿಗಳಿಗೆ ಸರ್ಕಾರಿ ಸೌಕರ್ಯಗಳಲ್ಲಿ ವಿಶೇಷ ರಿಯಾಯಿತಿಯನ್ನು ಒದಗಿಸುವ ಮೂಲಕ ಮತ್ತು ಸಮರ್ಥನೀಯ ಕರಾರುಗಳಲ್ಲಿ ಬ್ಯಾಂಕ್ ಸಾಲವನ್ನು ನೀಡುವ ಮೂಲಕ ಅವರು ವ್ಯಾಪರಾರ ನಡೆಸುವಂತೆ, ಅವರ ನಡುವೆ ಉದ್ಯಮಶೀಲ ಸಂಸ್ಕೃತಿಯನ್ನು ಉತ್ತೇಜಿಸುವುದಕ್ಕೆ ನಿರ್ಧಾರಾತ್ಮಕ ಪ್ರಯತ್ನಗಳನ್ನು ಮಾಡಲಾಗುವುದು'

ಸೋನಿಯಾ ಮತ್ತು ಸಿಂಗ್ ವಾಸ್ತವಿಕವಾಗಿ ನೋಡಿದ್ದಾರೆಂದು ನಾವು ಭಾವಿಸಿದರೂ (ಕರಡು ಸಿಎಂಪಿಯನ್ನು ನೋಡಿದರೆಂದು ಹೇಳಲು ಸಾಧ್ಯವಿಲ್ಲ) ಅದನ್ನು ರದ್ದುಗೊಳಿಸಲು ತೀರ್ಮಾನಿಸಲಾಗಿದೆ. ಮುಖ್ಯ ಭಾಗವನ್ನು ಬದಲಾಯಿಸಲು ಅದರ ಹಿಂದೆ ತುಂಬಾ ಗಂಭೀರ ರಾಜಕೀಯ ಕಾರಣಗಳಿರಬೇಕು.

ಎಷ್ಟೇ ಆದರೂ, ದಲಿತರು ಪಕ್ಷಕ್ಕೆ ಅತ್ಯಂತ ನಿಷ್ಠಾವಂತ ಸರ್ಕಾರವನ್ನು ನೀಡಿದವರು. ಸರ್ಕಾರೀ ಖರೀದಿಗಳು ಮತ್ತು ಒಪ್ಪಂದಗಳಲ್ಲಿ ದಲಿತರ ಪಾಲಿನೊಂದಿಗೆ ವ್ಯವಹರಿಸುವುದನ್ನು ಅಜೆಂಡಾದಿಂದ ಕೈಬಿಡಲಾಗಿದೆ. ಭಾರತ ಸರ್ಕಾರವು ಸರಕುಗಳ ಮತ್ತು ಸೇವೆಗಳ ಅತ್ಯಂತ ದೊಡ್ಡ ಗ್ರಾಹಕರಲ್ಲಿ ಒಂದಾಗಿದೆ, ಮತ್ತು ಸರ್ಕಾರಿ ಹಕ್ಕಿನಲ್ಲಿ ದಲಿತರ ಪಾಲನ್ನು ಚೆನ್ನಾಗಿ ಬದಿಗೆ ಸರಿಸಲಾಗಿದೆ. ಎಲ್ಲ ಇಲಾಖೆಗಳಿಗೆ ಪ್ರಧಾನಮಂತ್ರಿ ಕಚೇರಿಯಿಂದ ಒಂದು ಸಾಲಿನ ಸೂಚನೆ ಬಂದರೆ ಸಾಕು. ಈಗ ಯುಪಿಎಯು ಸಿಎಂಪಿಯಲ್ಲಿ ರದ್ದುಗೊಳಿಸಿದ ಮತ್ತು ಖಾಸಗಿ ವಲಯದಲ್ಲಿ ಮೀಸಲಾತಿ ಮೇಲಿನ 'ರಾಷ್ಟ್ರೀಯ ಸಂವಾದ'ವನ್ನು ಇಟ್ಟುಕೊಳ್ಳಬಹುದು. ಈ ಪ್ರಕ್ರಿಯೆಯು ವರ್ಷಗಳುರುಳಿದರೂ ನಡೆಯುತ್ತಿರುತ್ತದೆ. ಕಾಂಗ್ರೆಸ್‌ನ ಮತದಾನದ ನಂತರದ ಮೈತ್ರಿಗಳಲ್ಲಿ ಎಡಪಕ್ಷ, ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಕ್ಷ ಮೂರು ಬಾಹ್ಯ ಬೆಂಬಲ ನೀಡಿವೆ. ಎಡಪಕ್ಷವು ಮಾತ್ರ ಸಿಎಂಪಿಯನ್ನು ಪರಿಶೀಲಿಸುವ ಹಕ್ಕನ್ನು ಪಡೆದಿದೆ. ಮೈತ್ರಿಯೊಳಗಿನ ಪಕ್ಷಗಳಲ್ಲಿ ಲಾಲ್ ಬ್ರಿಗೇಡ್, ಡಿ.ಎಂ.ಕೆ ನೇತೃತ್ವದ ದ್ರಾವಿಡ ಪಕ್ಷಗಳು, ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಮತ್ತು ರಾಮ್‌ವಿಲಾಸ್ ಪಾಸ್ವಾನರ ಲೋಕ ಜನಶಕ್ತಿ ಪಕ್ಷಗಳ ಬಗ್ಗೆ ಸ್ವಲ್ಪ ಮಟ್ಟಿಗೆ ಸಂಶಯಿಸಬಹುದು. ಆದರೂ ಯಾವ ಪಕ್ಷ ದಲಿತರನ್ನು ವಂಚಿಸಿದೆ ಎಂಬುದು ಹೊರಗಿನವರಿಗೆ ತಿಳಿಯುವುದು ಸಾಧ್ಯವಿಲ್ಲ.

ಆದರೆ ದಲಿತರಲ್ಲಿ ರಾಜಕೀಯ ಪ್ರಜ್ಞೆ ಹೊಂದಿರುವ ವರ್ಗಗಳ ಪೈಕಿ ಕಾಂಗ್ರೆಸ್‌ನ ಪ್ರತಿಷ್ಠೆಯ ಮಾದರಿಯು ನಾಶವಾಗುತ್ತಿದೆ. ಇದನ್ನು ಸೋನಿಯಾಗಾಂಧಿಯು ಗುಮಾನಿಯೆಂದು ಸ್ವೀಕರಿಸಬಹುದು. ಎಷ್ಟೇ ಆಗಲಿ ಇದು ಅನ್ಯಾಯವಲ್ಲವೇ? ಕಾಂಗ್ರೆಸ್ ನಾಲ್ಕು ದಶಕಕ್ಕಿಂತಲೂ ಹೆಚ್ಚಾಗಿ ಭಾರತದಲ್ಲಿ ಅಧಿಕಾರ ಹೊಂದಿತ್ತು, ಮತ್ತು ದಲಿತರಿಗೆ ಮಹತ್ವವಾದುದೇನನ್ನೂ ನೀಡಿಲ್ಲ. ೧೯೮೦ರ ಮಧ್ಯದಿಂದ ವ್ಯಾಮೋಹ ಮೆಲ್ಲಗೆ ಸರಿಯಿತು. ಅನೇಕ ಸಿದ್ಧಾಂತಗಳು ಚಲಾವಣೆಗೆ ಬಂದಿತು. ಕಾಂಗ್ರೆಸ್ ದಲಿತರ ಪಾಲಿಗೆ 'ಸಿಹಿ ವಿಷ'ವಾಗಿದೆ. ಈಗಿನ 'ರಾಷ್ಟ್ರೀಯ ಸಂವಾದ'ದ ಘೋಷಣೆಯು ವಿಷದೊಂದಿಗೆ ಸಿಹಿಲೇಪ ಹಚ್ಚಿದೆ. ಹೀಗೆಯೇ 'ರಾಷ್ಟ್ರೀಯ ಸಂವಾದ'ವೆನ್ನುವುದೂ ಸಹ ಸಿಹಿಲೇಪವಚ್ಚಿದ ವಿಷವೇ ಸರಿ.

ದಲಿತ್ ಡೈರಿ

ಯುಪಿಎ ಸರ್ಕಾರವು ಸಿಎಂಪಿಯನ್ನು ಬಿಡುಗಡೆ ಮಾಡಿದಾಗ ದಲಿತರಿಗೆ 'ಖಾಸಗಿ ವಲಯದಲ್ಲಿ ಮೀಸಲಾತಿಯು ಸೇರಿದಂತೆ, ಸಕಾರಾತ್ಮಕ ಕಾರ್ಯಕ್ರಮಗಳನ್ನು ರೂಪಿಸಲು ಎಲ್ಲ ರಾಜಕೀಯ ಪಕ್ಷಗಳು, ಕೈಗಾರಿಕೆ ಮತ್ತು ಇತರ ಸಂಸ್ಥೆಗಳೊಂದಿಗೆ ತಕ್ಷಣವೇ ರಾಷ್ಟ್ರೀಯ ಸಂವಾದವನ್ನು ಆರಂಭಿಸಲಾಗುವುದು ಎಂಬ ಘೋಷಣೆ ಹೊರಡಿಸಿತು. ಆದರೆ ಈ ಘೋಷಣೆಯು ವಿಷದೊಂದಿಗೆ ಸಿಹಿಲೇಪ ಹಚ್ಚಿದಂತಿದೆ. ಇದು ಹೇಗಿದೆಯೆಂದರೆ ಕಳ್ಳನು ಪ್ರಯಾಣಿಕನನ್ನು ಲೂಟಿ ಮಾಡಿದ ಮೇಲೆ ಅವನನ್ನು ಓಡುತ್ತಿರುವ ರೈಲಿನಿಂದ ದೂಡಿದ ರೀತಿಯಲ್ಲಿ. ಆದರೆ ಸಿಹಿವಿಷವನ್ನು ನೀಡಿದ ಕಳ್ಳನ ರೀತಿಯಲ್ಲೇ ನಾವು ಇದ್ದೇವೆ. ಇದನ್ನು ಪ್ರಯಾಣಿಕ ಸವಿಯುತ್ತಾ ನಿಧಾನ ಸಾವಿಗೆ ಶರಣಾಗುತ್ತಾನೆ.

○ ಚಂದ್ರಭಾನ್ ಪ್ರಸಾದ್
ಅನು: ಕೆ.ವಿದ್ಯಾ, ಡಿ.ಡೊಮಿನಿಕ್

ಈ ಘೋಷಣೆಯಲ್ಲಿ ಒಂದು ಸಣ್ಣ ವ್ಯತ್ಯಾಸವನ್ನು ಕಾಣಲೇಬೇಕಾಗಿದೆ. ಇದು ಹೇಗಿದೆಯೆಂದರೆ ಕಳ್ಳನು ಪ್ರಯಾಣಿಕನನ್ನು ಲೂಟಿ ಮಾಡಿದ ಮೇಲೆ ಅವನನ್ನು ಓಡುತ್ತಿರುವ ರೈಲಿನಿಂದ ದೂಡಿದ ರೀತಿಯಲ್ಲಿ, ಆದರೆ ಸಿಹಿವಿಷವನ್ನು ನೀಡಿದ ಕಳ್ಳನ ರೀತಿಯಲ್ಲೇ ನಾವು ಇದ್ದೇವೆ. ಇದನ್ನು ಪ್ರಯಾಣಿಕ ಸವಿಯುತ್ತಾ ನಿಧಾನ ಸಾವಿಗೆ ಶರಣಾಗುತ್ತಾನೆ. ಹೊಸ ದಲಿತರು ವಿವೇಚನಾಯುತ ಆಯ್ಕೆಯನ್ನು ಮಾಡಬೇಕಾಗಿದೆ.

೨೦೦೪ರ ಬಜೆಟ್‌ನಲ್ಲಿ ದಲಿತರು ದಲಿತರೇ : ೧೯೪೭ರಿಂದೀಚೆಗೆ ಹಣಕಾಸು ಬಿಲ್ಲನ್ನು ಸರ್ಕಾರವು ಮಂಡಿಸುವ ಸಂಪ್ರದಾಯವನ್ನು ನೋಡುತ್ತಲೇ ಇದ್ದೇವೆ. ಎಲ್ಲ ಬಜೆಟ್‌ಗಳಲ್ಲಿ ಕಾಣುವ ಒಂದು ಸಾಮಾನ್ಯ ಸಂಗತಿಯೆಂದರೆ ದಲಿತರನ್ನು ಹೊರಗಿಟ್ಟದ್ದು. ಅಧಿಕಾರದಲ್ಲಿರಲಿ ಅಥವಾ ವಿರೋಧ ಪಕ್ಷದಲ್ಲಿರಲಿ ಈ ವಿಷಯದಲ್ಲಿ ಅವರ ಸೈದ್ಧಾಂತಿಕ ಭಿನ್ನತೆಯನ್ನು ಮೀರಲಾಗದು. ಎಷ್ಟೇ ಆದರೂ ದಲಿತ ಸಮಸ್ಯೆಗೆ ಒಂದಾಗುವುದು ಕೃತಕವೆನಿಸುತ್ತದೆ.

ದಲಿತರಿಗೆ ಸಂಬಂಧಿಸಿದಂತೆ ೨೦೦೪-೦೫ರ ಬಜೆಟ್ ಹಿಂದಿನ ಉದಾಹರಣೆಗಳಿಗಿಂತ ಭಿನ್ನವಾಗಿಲ್ಲ. ಭಾರತದ ಜನಸಂಖ್ಯೆ ೧/೪ ರಷ್ಟು ಪ್ರತಿನಿಧಿಸುವ ಎಸ್‌ಸಿ ಮತ್ತು ಎಸ್‌ಟಿಗಳ ಕಲ್ಯಾಣಕ್ಕಾಗಿ ೨,೩.೨೬ ಕೋಟಿ ರೂಪಾಯಿಯ ಹಂಚಿಕೆಯನ್ನು ಹಣಕಾಸು ಸಚಿವರು ಮಾಡಿದ್ದಾರೆ. ದಲಿತರ ಸಮಗ್ರ ಆರ್ಥಿಕ ಅಭಿವೃದ್ಧಿಯು ಈ ಹಣದಲ್ಲಿ ಆಗಬೇಕೆಂದು ಅಪೇಕ್ಷಿಸಲಾಗಿದೆ. ಯೋಜನಾ ಆಯೋಗವು ಸದಾ ಇದೇ ರೀತಿ ಚಿಂತಿಸುತ್ತದೆ. ವಸ್ತುಸ್ಥಿತಿ ಏನೇ ಇದ್ದರೂ ಕಳೆದ ೫ ದಶಕಗಳ ಅನುಭವವು, ಈ 'ಆರ್ಥಿಕ ವಿವೇಕ'ವನ್ನು ತಪ್ಪೆಂದು ಋಜುವಾತುಪಡಿಸಿದೆ.

ಉದಾಹರಣೆಗೆ ಸಮಾಜವಾದಿ ಪರಿಭಾಷೆಯಲ್ಲಿ ಭಾರತವೆಂದು ಕರೆಯುವ ಗ್ರಾಮೀಣ ಕ್ಷೇತ್ರಕ್ಕೆ ಹೆಚ್ಚು ಗಮನ ನೀಡಲಾಯಿತು. ಆದರೆ ದಲಿತ ಭೂರಹಿತ ಕೃಷಿ ಕೂಲಿ ಕಾರ್ಮಿಕರ ಸಮಸ್ಯೆಯು ಪರಿಹಾರವಾಗದೆ ಹಾಗೇ ಉಳಿದಿದೆ. ದಲಿತರ ಒಟ್ಟು ಸಂಖ್ಯೆಯಲ್ಲಿ ಸುಮಾರು ಅರ್ಧ ದಷ್ಟು ಜನರು ಭೂರಹಿತ ಕೃಷಿ ಕೂಲಿಕಾರ್ಮಿಕರಾಗಿದ್ದು ಇವರ ಆರ್ಥಿಕ ಜೀವನವು ಭೂಮಾಲೀಕರಿಂದ ನಿಯಂತ್ರಿಸಲ್ಪಡುತ್ತಿದೆ. ಯಾರೇ ಹಣಕಾಸು ಸಚಿವನೂ ಕೂಡ ಕೃಷಿ ವಲಯಕ್ಕೆ ನೂರು ಮಿಲಿಯ ಹಣವನ್ನು ಮೀಸಲಿಡುವಾಗ ಬಜೆಟ್‌ನಿಂದ ಪ್ರಯೋಜನ ಪಡೆಯುವ ಭೂಮಾಲೀಕರಿಗೆ ಕನಿಷ್ಠ ಕೂಲಿ ಸೂತ್ರಕ್ಕೆ ಮನ್ನಣೆ ನೀಡಬೇಕೆಂಬ ಷರತ್ತನ್ನು ಅಳವಡಿಸಿದ್ದಾನೆಯೇ?

ನಾವು ಇಂದಿನ ರಾಜಕೀಯ ದೃಶ್ಯವನ್ನು ಅರ್ಥಮಾಡಿಕೊಳ್ಳುತ್ತಿದ್ದೇವೆ. ಇಲ್ಲಿ ಮತದಾನ ದಿನದಂದು ಭೂಮಿ ಹೊಂದಿರುವ ಸಮುದಾಯಗಳ ಅಧಿಕಾರವು ರಾಜಕೀಯ ಅಧಿಕಾರಕ್ಕಾಗಿ ಗಂಭೀರ ರೀತಿಯಲ್ಲಿ ಹೋರಾಡಲು ನಿರ್ಣಾಯಕವಾಗಿರುತ್ತದೆ. ವಾಸ್ತವಿಕತೆಯನ್ನು ಪರಿಗಣನೆಗೆ ತೆಗೆದುಕೊಳ್ಳದೆ ಯಾವುದೇ ರಾಜಕೀಯ ಪಕ್ಷವೂ ಭೂಮಿ ಹೊಂದಿರುವ ಸಮುದಾಯಗಳನ್ನು ಮುಟ್ಟುವುದಿಲ್ಲ. ಇದೊಂದು ಕೆಟ್ಟ ರಾಜಕೀಯ ಮಾತ್ರವಾಗಿರದೆ, ಕೆಟ್ಟ ಆರ್ಥಿಕತೆಯೂ ಆಗಿದೆ. ಇದೊಂದು ಕೆಟ್ಟ ರಾಜಕೀಯವಾಗಿದೆಯೇಕೆಂದರೆ, ಭೂಮಿತಿ ಅಧಿನಿಯಮದ ಉಪಬಂಧಗಳ ವಿರುದ್ಧವಾಗಿ ಹೆಚ್ಚುವರಿ ಭೂಮಿಯನ್ನು ಲಾಲಸೆಯಿಂದ ಹೊಂದಿರುವುದರಿಂದ ಪ್ರಜಾಪ್ರಭುತ್ವದ ಮೂಲತತ್ವಕ್ಕೆ ವಿರುದ್ಧವಾಗಿದೆ. ಕೃಷಿ ವಲಯಕ್ಕೆ ಹಂಚಲಾದ ೪೦,೦೦೦ ಕೋಟಿಯು 'ನಮ್ಮ ರೈತರಿಗೆ' ಹೋಗುತ್ತದೆ. 'ಗ್ರಾಮೀಣ ವಲಯ'ವೆಂಬ

ದಲಿತ ವಿದ್ಯಾರ್ಥಿಗಳನ್ನು ಶಾಲಾ ವ್ಯವಸ್ಥೆಯಲ್ಲಿ ಉಳಿಸಿಕೊಳ್ಳಲು ಇರುವ ದಾರಿಯೆಂದರೆ ಅವರಿಗೆ ದಿನಕ್ಕೆ ೫ ರೂಪಾಯಿಯ ದರದಲ್ಲಿ ಪರಿಹಾರ ಕೊಡಬೇಕು. ಇದರ ವೆಚ್ಚವು ವಾರ್ಷಿಕವಾಗಿ ೨,೦೦೦ ಕೋಟಿಗಿಂತ ಕಡಿಮೆಯಿರುತ್ತದೆ. ವಾರ್ಷಿಕವಾಗಿ ಹತ್ತು ಸಾವಿರ ಕೋಟಿಗಿಂತ ಕಡಿಮೆ ಹಣದಲ್ಲಿ ಸರ್ಕಾರವು, ಒಂದು ದಶಕಕ್ಕಿಂತ ಕಡಿಮೆ ಅವಧಿಯಲ್ಲಿ ಮಿಲಿಯಗಟ್ಟಲೆ ದಲಿತರ ಜೀವನವನ್ನು ಬದಲಾಯಿಸಬಹುದು. ಈ ೧೦,೦೦೦ ಕೋಟಿ ರೂಪಾಯಿಗಳು ಚಾರಿತ್ರಿಕ ತಪ್ಪುಗಳನ್ನು ಸರಿಪಡಿಸಲು ದೊಡ್ಡ ಮೊತ್ತವೇ?



ಸಾಮಾಜಿಕ ಜೈಲನ್ನು ನಿಯಂತ್ರಿಸುವ ಕಾನೂನು ಮಾಲಿಕರು ಇವರು ಎಂದು ವ್ಯಾಖ್ಯಾನಿಸಬಹುದು. ಇದು ರಾಜಕೀಯ ಲಂಚಕೋರತನಕ್ಕಿಂತ ಭಿನ್ನವಾದುದಲ್ಲ. ಇದೊಂದು ಕೆಟ್ಟ ಆರ್ಥಿಕತೆ, ಯಾಕೆಂದರೆ ಭೂ ಮಾಲೀಕರಿಗೆ ಹೋಗುವ ೪೦,೦೦೦ ಕೋಟಿ ಲಂಚವು ಬಂಡವಾಳವಾಗಿ ಪರಿವರ್ತನೆಗೊಳ್ಳುವುದಿಲ್ಲ.

ಪಾರಂಪರಿಕವಾಗಿ ಭೂಮಾಲಿಕರು ಬಡಗ್ರಾಹಕರಾಗಿದ್ದಾರೆ. ಮತ್ತು ಈ ಮನಸ್ಥಿತಿಯು, ಮಾರುಕಟ್ಟೆ ಆರ್ಥಿಕತೆಯೆಡೆಗೆ ಸಾಗುವುದಕ್ಕೆ ಇರುವ ಶಾಶ್ವತ ರಸ್ತೆ ತಡೆಯಾಗಿದೆ. ಆದರೆ ಈ ಭೂಮಿ ಹೊಂದಿರುವ ಸೋಮಾರಿ ಸಮುದಾಯಗಳನ್ನು ಮುಟ್ಟದೆ ಗಣರಾಜ್ಯವು, ದಲಿತ ಭೂರಹಿತ ಕೃಷಿ ಕೂಲಿ ಕಾರ್ಮಿಕ ಹಿತವನ್ನು ಬೇರೆ ರೀತಿಯಲ್ಲಿ ಕಾಯಲು ಸಾಧ್ಯವಿಲ್ಲ. ಅನೇಕ ಸಂದರ್ಭಗಳಲ್ಲಿ ದಲಿತ ಡೈರಿ ಪ್ರತಿಪಾದಿಸಿದಂತೆ, ಎಲ್ಲಾ ದಲಿತ ಭೂ ರಹಿತ ಕೃಷಿ ಕೂಲಿ ಕಾರ್ಮಿಕರನ್ನು 'ಉಳಿತಾಯ ವಿಮಾ ಯೋಜನೆ'ಯಡಿ ತರಬೇಕು. ಇಲ್ಲಿ ರಾಜ್ಯಾಂಗವು ವ್ಯಕ್ತಿ ಅಥವಾ ಕುಟುಂಬವನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಅವರೊಂದಿಗೆ ಪಾಲುದಾರಿಕೆ ಹೊಂದಬೇಕು. ಮತ್ತು ಬ್ಯಾಂಕ್‌ಗಳಲ್ಲಿ ಜಂಟಿ ಖಾತೆಯನ್ನು ತೆರೆಯಬೇಕು. ರಾಜ್ಯಾಂಗವು ಮಾಸಿಕ ಕಂತು ರೂ. ೨೦೦ರ ಆಜುಬಾಜಿನಲ್ಲಿ ರೂ. ೫೦೦ರ ಆರಂಭಿಕ ಠೇವಣಿಯನ್ನು ಇಡಬೇಕು. ಮತ್ತು ದಲಿತ ಫಲಾನುಭವಿಯು ಪ್ರತಿತಿಂಗಳು ಅರ್ಧದಷ್ಟು ಮೊತ್ತವನ್ನು ನೀಡಬೇಕು. ಈ ಯೋಜನೆಯು ಮಿಲಿಯಗಟ್ಟಲೆ ದಲಿತರ ಜೀವನವನ್ನು ಬದಲಾಯಿಸುತ್ತದೆ. ಅಲ್ಲದೆ ಅವರು ಈ ದೇಶಕ್ಕೆ ಸೇವೆ ಸಲ್ಲಿಸಿದಂತಾಗುತ್ತದೆ ಮತ್ತು ತೊಂದರೆಯ ಸಮಯದಲ್ಲಿ ವಾಪಸ್ಸು ಪಡೆಯಬಹುದು.

ನನ್ನ ಅಂದಾಜಿನ ಪ್ರಕಾರ, ಈ ಯೋಜನೆಯ ಒಟ್ಟು ವೆಚ್ಚ ವಾರ್ಷಿಕವಾಗಿ ೪,೦೦೦ ಕೋಟಿಗಿಂತ ಕಡಿಮೆಯಿರುತ್ತದೆ. ಈ ಯೋಜನೆಯು ಈ ಮುಂದಿನ ವಿಮೋಚನಾ ಪರಿಣಾಮವನ್ನು ಹೊಂದಿರುತ್ತದೆ. ಒಂದನೆಯದು ನತದೃಷ್ಟ ಭೂರಹಿತ ದಲಿತರು ತಕ್ಷಣವೇ ಶೇ. ೧೦೦ ಅಥವಾ ಅದಕ್ಕಿಂತ ಹೆಚ್ಚಿನ ಬಡ್ಡಿದರಗಳಲ್ಲಿ ಅವರಿಗೆ ಸಾಲನೀಡುವ ಕಟ್ಟುನಿಟ್ಟಿನ ಲೇವಾದೇವಿಗಾರರಿಂದ ಅಥವಾ ಭೂಮಾಲೀಕರಿಂದ ಬಿಡುಗಡೆ ಪಡೆಯುತ್ತದೆ.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ, ದಲಿತರು ಭೂಮಾಲೀಕರಿಂದ ಹಣ ಸಾಲ ಪಡೆದು ಈ ವಿಷಚಕ್ರದಲ್ಲಿ ಸಿಲುಕಿ ಅವರು ಯಾವತ್ತಿಗೂ ಆ ಸಾಲದಿಂದ ಹೊರಬರಲಾಗಲೇ ಇಲ್ಲ. ಎರಡನೆಯದಾಗಿ, ಇಂತಹ ಯೋಜನೆಯು ಭೂ ರಹಿತ ದಲಿತರಿಗೆ, ಉಳಿತಾಯ ಮಾಡುವುದಕ್ಕೆ ಉತ್ತೇಜಿಸುತ್ತದೆ. ಹಣಕಾಸಿನ ಭದ್ರತೆಯು, ಪ್ರಜಾಪ್ರಭುತ್ವಕ್ಕೆ ನಿರ್ಣಾಯಕವಾಗಿ ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಖಚಿತಪಡಿಸಿ, ಅವರನ್ನು ಸಶಕ್ತರನ್ನಾಗಿಸುತ್ತದೆ. ಮೂರನೆಯದಾಗಿ, ಇದು ಉತ್ತಮ ಆರ್ಥಿಕ ಪ್ರಜ್ಞೆಯನ್ನು ಮೂಡಿಸುತ್ತದೆ. ಹೆಚ್ಚಿನ ದಲಿತರು, ಒಮ್ಮೆ ಅವರ ಕೈಯಲ್ಲಿ ಹಣ ಬಂತೆಂದರೆ ಉತ್ತಮ ಗ್ರಾಹಕರಾಗುತ್ತಾರೆ. ಭೂ ಮಾಲೀಕರಂತೆ, ಅವರು ಹಣದ ಚಲಾವಣೆಯನ್ನು ತಡೆಯುವುದಿಲ್ಲ. ಹಾಗೆಯೇ ಹಣಕಾಸು ಮಂತ್ರಿಯವರು ತನ್ನ ಪೂರ್ವಾಧಿಕಾರಿಗಳಂತೆ, ದಲಿತರ ಶಿಕ್ಷಣದ ಪ್ರಶ್ನೆಯನ್ನು ಮರೆತಿದ್ದಾರೆ. ದಲಿತ ದಾಖಲೆಯ ಪ್ರಮಾಣವು ಸುಮಾರು ಶೇ ೧೦೦ ಅಂಶವನ್ನು ಮುಟ್ಟುತ್ತದೆ. ಆದರೆ, ಅವರಲ್ಲಿ ಶೇ ೮೦ಕ್ಕಿಂತಲೂ ಹೆಚ್ಚಿಗೆ ೧೦ನೇ ತರಗತಿಯನ್ನು ಮುಗಿಸುವುದಕ್ಕೆ ಮೊದಲೇ ಶಾಲೆ ಬಿಟ್ಟುಬಿಡುತ್ತಾರೆ. ಮಧ್ಯಾಹ್ನದ ಊಟವು ಸೇರಿದಂತೆ, ಎಲ್ಲಾ ಯೋಜನೆಗಳು ಶಾಲೆ ಬಿಡುವ ಪ್ರಮಾಣವನ್ನು ತಡೆಯಲು ವಿಫಲವಾಗಿದೆ. ಹೀಗೆ ಭೂತಕ್ಕೆ ಜೋತುಬಿದ್ದಿರುವುದಾದರೂ ಹೇಗೆ?

ದಲಿತ ಡೈರಿ ವಾದಿಸುವಂತೆ, ತರಗತಿಗಳಿಗೆ ಹಾಜರಾಗುವ ದಲಿತ ವಿದ್ಯಾರ್ಥಿಗಳಿಗೆ ದಿನಕ್ಕೆ ೫ ರೂಪಾಯಿಯ ದರದಲ್ಲಿ ಪರಿಹಾರ ಕೊಡಬೇಕು. ಇಲ್ಲದಿದ್ದರೆ ಅವರನ್ನು ಶಾಲಾವ್ಯವಸ್ಥೆಯಲ್ಲಿ ಉಳಿಸಿಕೊಳ್ಳುವ ಬೇರೆ ದಾರಿಯೇ ಇಲ್ಲ. ಇದರ ವೆಚ್ಚವು ವಾರ್ಷಿಕವಾಗಿ ೨,೦೦೦ ಕೋಟಿಗಿಂತ ಕಡಿಮೆಯಿರುತ್ತದೆ. ವಾರ್ಷಿಕವಾಗಿ ಹತ್ತು ಸಾವಿರ ಕೋಟಿಗಿಂತ ಕಡಿಮೆ ಹಣದಲ್ಲಿ ಸರ್ಕಾರವು, ಒಂದು ದಶಕಕ್ಕಿಂತ ಕಡಿಮೆ ಅವಧಿಯಲ್ಲಿ ಮಿಲಿಯಗಟ್ಟಲೆ ದಲಿತರ ಜೀವನವನ್ನು ಬದಲಾಯಿಸಬಹುದು. ಈ ೧೦,೦೦೦ ಕೋಟಿ ರೂಪಾಯಿಗಳು ಚಾರಿತ್ರಿಕ ತಪ್ಪುಗಳನ್ನು ಸರಿಪಡಿಸಲು ದೊಡ್ಡ ಮೊತ್ತವೇ?

ಹಣಕಾಸು ಮಂತ್ರಿಯವರು, 'ಹಿಂದುಳಿದ ರಾಜ್ಯಗಳ ಆಯೋಗ' ರೂಪಿಸಲು ೨೫,೦೦೦ ಕೋಟಿ ನೀಡಿರುವುದು ಕಂಡುಬರುತ್ತದೆ. ಜೊತೆಗೆ ೪೦,೦೦೦ ಕೋಟಿಯನ್ನು ವಿಮಾನಗಳು, ಬಂದರುಗಳು ಮತ್ತು ಪ್ರವಾಸೋದ್ಯಮದ ಆಧುನೀಕರಣಕ್ಕೆ ತೆಗೆದಿಟ್ಟಿದ್ದಾರೆ. ಅವರು ದಲಿತರ ಅಭಿವೃದ್ಧಿಗಾಗಿ ಹೊಸ ಅಧ್ಯಾಯ ಬರೆಯಲು ಇನ್ನೊಂದು ೧೦,೦೦೦ ಕೋಟಿಯನ್ನು ಏಕೆ ಮೀಸಲಿಡಬಾರದು?

ಇತ್ತೀಚಿನ ಖಾಸಗಿ ವಲಯದ ಉದ್ಯೋಗ ಮೀಸಲಾತಿಯ ಚರ್ಚೆಯು ಹಿಂದೆಂದಿಗಿಂತಲೂ ಹೆಚ್ಚಾಗಿ ಭಾರತೀಯ ಸಮಾಜದ ಗುಣಧರ್ಮಕ್ಕೆ ಕನ್ನಡಿಯಾಗಿದೆ. ನಯನಾಜೂಕುತನವಿಲ್ಲದ ಖಾಸಗಿ ವಲಯವು ಈ ವಿಷಯವನ್ನು ತಿರಸ್ಕರಿಸುವಲ್ಲಿ ಕನಿಷ್ಠ ನಡತೆಯನ್ನು ಇಟ್ಟುಕೊಳ್ಳುವ ಜಾಗರೂಕತೆ ವಹಿಸುತ್ತಿಲ್ಲ. ಅಲ್ಲದೆ ಸಾಮುದಾಯಿಕ ದಲಿತ ಸಾಮರ್ಥ್ಯವನ್ನು ಪದೇಪದೇ ಅಪಮಾನ ಮಾಡುತ್ತಿದೆ.

'ನಾವು ಸ್ಪರ್ಧಾತ್ಮಕತೆಯನ್ನು ಕಳೆದುಕೊಳ್ಳುತ್ತಿದ್ದೇವೆ' 'ನಮ್ಮ ಉತ್ಪಾದನೆಯು ಸ್ಥಗಿತಗೊಳ್ಳುತ್ತದೆ' ಮತ್ತು 'ಮೆರಿಟ್ ನೊಂದಿಗೆ ರಾಜೀ ಮಾಡಿಕೊಳ್ಳಬೇಕಾಗುತ್ತದೆ' ಇಂಥ ಉದ್ಧೃತಗಳ ಸುತ್ತವೇ ಗಿರಕಿ ಹೊಡೆಯುತ್ತಿರುತ್ತದೆ. ಈ ಸಮಸ್ಯೆಯನ್ನೆತ್ತಿದ ಕಾಂಗ್ರೆಸ್ ಪಕ್ಷವು ಯುದ್ಧೋಪಾದಿಯಲ್ಲಿ ಚಳವಳಿ ಮಾಡಿ ಕೈಗಾರಿಕೆಯ 'ಮುಖಂಡರಿಗೆ' ಸೋತು, ಚರ್ಚೆಯಿಂದ ಅಂಜುಬುರುಕನಾಗಿ ಹಿಂದುಳಿಯಿತು.

ಆದರೆ ಈ ಪ್ರತಿಕೂಲ ಸನ್ನಿವೇಶದ ವಿರುದ್ಧ ವಿಡಿಯೋಕಾನ್ ಇಂಟರ್‌ನ್ಯಾಷನಲ್ ಅಧ್ಯಕ್ಷರಾದ ವೇಣುಗೋಪಾಲ್ ದೂತ್ ಅವರು ಜೂನ್ ೨, ೨೦೦೪ರ ಬಿಸಿನೆಸ್ ಡೈಲಿಯಲ್ಲಿ ಈ ರೀತಿ ಹೇಳಿದರು; 'ಈ ಕ್ರಮವನ್ನು ನಾವು ಸ್ವಾಗತಿಸುತ್ತೇವೆ ಮತ್ತು ಕಾನೂನನ್ನು ಪಾಲಿಸುತ್ತೇವೆ'. ಖಾಸಗಿ ವಲಯದಲ್ಲಿನ ಉದ್ಯೋಗ ಮೀಸಲಾತಿಯ ಬಗ್ಗೆ ಅವರಿಗೆ ನೇರ ಪ್ರಶ್ನೆಯನ್ನು ಕೇಳಲಾಯಿತು. ಎಲ್ಲವನ್ನು ಕಳೆದುಕೊಳ್ಳುವುದಿಲ್ಲ ಎಂದು ದೂತ್‌ರ ಸನ್ನೆಯೇ ತೋರಿಸಿಕೊಡುತ್ತದೆ. ನಾವು ಯೋಚಿಸಬಹುದಾದಂತೆ ಖಾಸಗಿ ವಲಯವು ಸಾಮಾಜಿಕವಾಗಿ ಮತಿವಿಕಲಗೊಳ್ಳುವುದಿಲ್ಲ. ಸ್ವಲ್ಪಮಟ್ಟಿನ ಭರವಸೆಯ ಕಿರಣಗಳಿವೆ.

> **ಖಾಸಗಿ ವಲಯದ ಉದ್ಯೋಗ ಮೀಸಲಾತಿಯ ಚರ್ಚೆಯು ಹಿಂದೆಂದಿಗಿಂತಲೂ ಹೆಚ್ಚಾಗಿ ಭಾರತೀಯ ಸಮಾಜದ ಗುಣಧರ್ಮಕ್ಕೆ ಕನ್ನಡಿಯಾಗಿದೆ. ಖಾಸಗಿ ವಲಯವು ಈ ವಿಷಯವನ್ನು ತಿರಸ್ಕರಿಸುವಲ್ಲಿ ಕನಿಷ್ಠ ನಡತೆಯನ್ನು ಇಟ್ಟುಕೊಳ್ಳುವ ಜಾಗರೂಕತೆ ವಹಿಸುತ್ತಿಲ್ಲ. 'ನಾವು ಸ್ಪರ್ಧಾತ್ಮಕತೆಯನ್ನು ಕಳೆದುಕೊಳ್ಳುತ್ತಿದ್ದೇವೆ' 'ನಮ್ಮ ಉತ್ಪಾದನೆಯು ಸ್ಥಗಿತಗೊಳ್ಳುತ್ತದೆ' ಮತ್ತು 'ಮೆರಿಟ್ ನೊಂದಿಗೆ ರಾಜೀ ಮಾಡಿಕೊಳ್ಳಬೇಕಾಗುತ್ತದೆ' ಇಂಥ ಉದ್ಧೃತಗಳ ಸುತ್ತವೇ ಗಿರಕಿ ಹೊಡೆಯುತ್ತಿರುತ್ತದೆ. ಆದರೆ ಈ ಪ್ರತಿಕೂಲ ಸನ್ನಿವೇಶದ ವಿರುದ್ಧ ವಿಡಿಯೋಕಾನ್ ಇಂಟರ್‌ನ್ಯಾಷನಲ್ ಅಧ್ಯಕ್ಷರಾದ ವೇಣುಗೋಪಾಲ್ ಪತ್ರಿಕೆಯೊಂದರಲ್ಲಿ 'ಈ ಕ್ರಮವನ್ನು ನಾವು ಸ್ವಾಗತಿಸುತ್ತೇವೆ ಮತ್ತು ಕಾನೂನನ್ನು ಪಾಲಿಸುತ್ತೇವೆ' ಎಂದಿರುವುದು ಭರವಸೆಯ ಕಿರಣಗಳನ್ನು ಮೂಡಿಸಿದೆ.**

ಕಟ್ಟಿಕೊಂಡರು. ತಮ್ಮ ಸಾಮಾಜಿಕ ದೃಷ್ಟಿಕೋನದಲ್ಲಿ ಆದರ್ಶವಂತರೂ ಉದಾರವಾದಿಗಳೂ ಮತ್ತು ಪ್ರಾಮಾಣಿಕರೂ ಆಗಿರುವರು.

ವಿಡಿಯೊಕೊನ್ ಮಂಡಲಿಯ ಹೇಳಿಕೆಯ ಧ್ಯೇಯ ಘೋಷಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಜವಾಬ್ದಾರಿಯುತ ನಿಗಮೀಕೃತ ನಾಗರಿಕನಾಗಿರುವ ಮೂಲಕ ಜನರ ಜೀವನಮಟ್ಟವನ್ನು ಉತ್ತಮಗೊಳಿಸಲು ಸಮಾಜದ ಹಿತಾಸಕ್ತಿ ಕಾಯುವುದಕ್ಕೆ ವಿಡಿಯೊಕೊನ್ ಸಮೂಹವು ಬದ್ಧವಾಗಿದೆ. 'ಸಮಾಜದ ಹಿತಾಸಕ್ತಿಗಳನ್ನು ಕಾಯುವುದು' ಎಂಬ ಮಾತುಗಳನ್ನು ಭಾರತೀಯ ನಿಗಮಗಳಿಂದ ನಾವು ಕೇಳಿದ್ದೇವೆಯೇ?' ಮೀಸಲಾತಿ ಬಗೆಗಿನ ವಿಡಿಯೊಕೊನ್ ಹೇಳಿಕೆಯು ಒಂದು ತಿಂಗಳ ಹಿಂದೆಯಷ್ಟೆ ಬಂದಿದೆ. ಆದರೆ ಈ ಮಂಡಲಿಯ ಹೇಳಿಕೆಗೆ ವರ್ಷಗಳೇ ಕಳೆದಿವೆ.

ಆದ್ದರಿಂದ ನಾವು ಊಹಿಸಬಹುದಾದುದೇನೆಂದರೆ, ಈ ಅಚ್ಚರಿಯ ಕಂಪೆನಿಯು ಅಮೆರಿಕದ ನಿಗಮಗಳಿಗೆ ಮಾತ್ರ ಹೋಲಿಸಬಹುದಾದ ತಾತ್ವಿಕತೆಯನ್ನು ಹೊಂದಿದೆ. ಯಾವುದೇ ದೇಶದಲ್ಲಿ 'ಸಮಾಜದ ಹಿತಾಸಕ್ತಿಗಳು' ಅದರ ಸಾಮಾಜಿಕ ಶಾಂತಿಯೊಂದಿಗೆ ಸಮೃದ್ಧತೆಯನ್ನು ಅವಲಂಬಿಸಿದೆ. 'ಎಲ್ಲರಿಗೆ ಸ್ಪರ್ಧಾತ್ಮಕತೆ ನ್ಯಾಯಯುತ ಅವಕಾಶಗಳು ಅರ್ಹತೆಯನ್ನು ಆಧರಿಸಿರಬೇಕೇ ಹೊರತು ಹುಟ್ಟು ಮತ್ತು ವಂಶಪಾರಂಪರ್ಯವಲ್ಲ.

ವಿಡಿಯೊಕೊನ್ ಗುಂಪು ಸ್ಪರ್ಧಾತ್ಮಕತೆಗೆ ಹೆದರುತ್ತಿಲ್ಲ ಎಂಬುದನ್ನು ಇದು ತೋರಿಸುತ್ತದೆ, ಮತ್ತು ಸಾಮಾಜಿಕ ಕರಾರುಗಳನ್ನು ಸ್ವೀಕರಿಸಲು ಚಾರಿತ್ರಿಕವಾಗಿ ತಿರಸ್ಕೃತ

ವಿಡಿಯೋಕಾನ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಭಾರತದ ಭವಿಷ್ಯವೇ ?

ಇದನ್ನು ಪ್ರಾಮಾಣಿಕವಾಗಿ ಹಿಂಬಾಲಿಸಿದರೆ ಬಂಡವಾಳಶಾಹಿ ಪ್ರಜಾಪ್ರಭುತ್ವವು ಭಾರತದ ವಾಸ್ತವವಾಗುತ್ತದೆ.

ವಿಡಿಯೊಕೊನ್ ಸಮೂಹದ ಕಥೆಯು ದೂತ್ ಕುಟುಂಬದ ಸಾಮಾಜಿಕ ಪ್ರಜ್ಞೆಯಂತೆ ಅದ್ಭುತ ಕಥೆಯಾಗಿದೆ. ೫೦ ಬಿಲಿಯನ್ ಮೀರುವ ವಹಿವಾಟು, ೧೮ ಉತ್ಪಾದನಾ ಘಟಕಗಳು ಮತ್ತು ೧೦,೦೦೦ ನೌಕರರನ್ನು ಹೊಂದಿರುವ ವಿಡಿಯೊಕೊನ್ ಸಮೂಹವು ಗ್ರಾಹಕ ಇಲೆಕ್ಟ್ರಾನಿಕ್ ಮತ್ತು ಗೃಹಬಳಕೆ ಸಾಧನಗಳಲ್ಲಿ ಮಾರುಕಟ್ಟೆ ನಾಯಕತ್ವ ಹೊಂದಿದೆ. ಜಪಾನಿನ ತೊಶಿಬಾದ ತಾಂತ್ರಿಕ ಸಹಯೋಗದ ಮೂಲಕ ವಿಡಿಯೊಕೊನ್ ಭಾರತದ ಪ್ರಥಮ ಜಾಗತಿಕ ಮಟ್ಟದ ಬಣ್ಣದ ಟಿವಿಯನ್ನು ತಯಾರಿಸಿದೆ. ಕಂಪೆನಿಯ ಉತ್ಪಾದನಾ ಮಟ್ಟವು ನಿಜವಾಗಿಯೂ ವಿಭಿನ್ನತೆಯನ್ನು ಹೊಂದಿದೆ. ಟಿ.ವಿಗಳು, ವಾಷಿಂಗ್ ಮೆಷಿನ್‌ಗಳು, ಫ್ರಿಜ್‌ಗಳು, ಹವಾನಿಯಂತ್ರಕಗಳು, ವಿಸಿಆರ್‌ಗಳು ಮತ್ತು ಏನಿಲ್ಲ.

ಇದು ವರ್ಲ್‌ಪೂಲ್, ಎಲ್‌ಜಿ, ಸ್ಯಾಮ್‌ಸಂಗ್ ಮುಂತಾದ ಬಹುರಾಷ್ಟ್ರೀಯ ಕಂಪೆನಿಗಳಿಂದ ಮತ್ತು ಇತರ ದೈತ್ಯ ನಿಗಮಗಳಿಂದ ಧೈರ್ಯದಿಂದ ಸ್ಪರ್ಧೆ ಎದುರಿಸಿದೆ. ವಾಸ್ತವವಾಗಿ ಇದು ಬಹುರಾಷ್ಟ್ರೀಯ ಕಂಪೆನಿಗಳ ನೆಲವಾದ-ಯುರೋಪಿಗೆ ಯುದ್ಧದ ಹಕ್ಕನ್ನು ತೆಗೆದುಕೊಂಡು ಹೋಗಿದೆ. ವೆಬ್ ಮ್ಯಾಗಜಿನ್, ಅಪ್ಲೆಯನ್ಸೀ ಮ್ಯಾಗಜಿನ್, ಡಾಟ್ ಕಾಮ್ ಪ್ರಕಾರ 'ಇಂದು ಯುರೋಪಿನಲ್ಲಿ ಮಾರಾಟವಾಗುವ ಅನೇಕ ರೆಫ್ರಿಜರೇಟರ್ ಬ್ರ್ಯಾಂಡ್‌ಗಳು ವಿಡಿಯೊಕೊನ್ ಉಪಾಂಗವಾದ ನೀಚಿ ಕಂಪ್ರೆಸರ್‌ಗಳು ಮಾಡಿದ ಕಂಪ್ರೆಸರ್‌ಗಳನ್ನು ಹೊಂದಿವೆ'. ಇದು ಆಶ್ಚರ್ಯವೆಂದು ಕಂಡುಬರುತ್ತದೆ. ವಿಡಿಯೊಕೊನ್ ೧೯೮೫ರಲ್ಲಿ ಮಾತ್ರ ಆರಂಭವಾದದ್ದು ಭಾರತದ ಅತ್ಯಂತ ಚಿಕ್ಕ ಕಂಪೆನಿಗಳಲ್ಲಿ ಒಂದಾದ ಇದು ೫೦ ಬಿಲಿಯ ವಹಿವಾಟನ್ನು ಮುಟ್ಟಿದೆ.

ಇದರ ಸ್ಥಾಪಕ, ದಿವಂಗತ ನಂದಲಾಲ್ ಮಾಧವಲಾಲ್ ದೂತ ಪಾರಂಪರಿಕ ವ್ಯಾಪಾರ ಕುಟುಂಬದಿಂದ ಬಂದವರಲ್ಲ. ಒಬ್ಬ ಯಶಸ್ವಿ ಕಬ್ಬು ಮತ್ತು ಹತ್ತಿ ಬೆಳೆಗಾರ ನಂದಲಾಲರು ೧೯೫೫ರಲ್ಲಿ ಮಹಾರಾಷ್ಟ್ರದ ಗಂಗಪುರದಲ್ಲಿ ಸಕ್ಕರೆ ಮಿಲ್ಲನ್ನು ಸ್ಥಾಪಿಸಿದರು. ತನ್ನ ಮೂರು ಮಕ್ಕಳಾದ ವೇಣುಗೋಪಾಲ್, ರಾಜ್‌ಕುಮಾರ್ ಮತ್ತು ಪ್ರದೀಪರನ್ನು ವ್ಯಾಪಾರದೆಡೆಗೆ ತಿರುಗಿಸಿದರು. ಇವರು ೧೯೮೫ರಲ್ಲಿ ವಿಡಿಯೊಕೊನ್ ಇಂಟರ್‌ನ್ಯಾಷನಲ್ ಲಿ. ಬಗ್ಗೆ ಯೋಚಿಸಿದರು.

ಆದ್ದರಿಂದ ದೂತ್‌ರ ವಂಶವು ತಮ್ಮ ವ್ಯಾಪಾರ ಅಥವಾ ನಿಗಮದ ಸ್ಥಾನಗಳನ್ನು ಪಾರಂಪರಿಕವಾಗಿ ಹೊಂದಿಲ್ಲ ಎಂಬುದು ವಾಸ್ತವ ಸಂಗತಿಯಾಗಿದೆ. ಅದಕ್ಕೆ ಬದಲಾಗಿ ಅವರೇ ಅದನ್ನು ಕಟ್ಟಿದ್ದರು ಮತ್ತು ಹೆಚ್ಚಿನ ಸ್ಪರ್ಧೆಯನ್ನೆದುರಿಸಿ ಬೆಳೆಸಿದರು. ಈ ಅಂಶವು, ಭಾರತದ ನಿಗಮೀಕೃತ ಜಗತ್ತಿನ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳಲು ತುಂಬಾ ಮುಖ್ಯವಾಗುತ್ತದೆ. ವಂಶಪಾರಂಪರ್ಯದಿಂದ ತಮ್ಮ ವ್ಯಾಪಾರ ಮತ್ತು ಸ್ಥಾನಗಳನ್ನು ಹೊಂದಿರುವ ಕೈಗಾರಿಕೋದ್ಯಮಿಗಳು ಯಾವುದೇ ಸ್ಪರ್ಧೆಯನ್ನು ಎದುರಿಸಿರುವುದಿಲ್ಲ. ಆದ್ದರಿಂದ, ಹೆಚ್ಚಾಗಿ 'ಮೆರಿಟ್', 'ಸ್ಪರ್ಧಾತ್ಮಕತೆ', 'ದಕ್ಷತೆ'ಯ ಬಗ್ಗೆ ಮಾತನಾಡುತ್ತಾರೆ. ಸ್ಪರ್ಧೆಯಿಂದ ಮೇಲೆ ಬಂದು ತಮ್ಮ ಸಾಮ್ರಾಜ್ಯ

ಗೊಂಡಿದ್ದ ಸಾಮಾಜಿಕ ಗುಂಪುಗಳಿಗೆ ಅವಕಾಶಗಳನ್ನು ವಿಸ್ತರಿಸಲು ಸಿದ್ಧವಾಗಿದೆ. ಇಲ್ಲಿ ಖಾಸಗಿ ವಲಯ ಸಾರ್ವಜನಿಕವಾಗಿ ಘೋಷಿಸಿದಲ್ಲಿ ತನ್ನ ಸಾಮಾಜಿಕ ಪ್ರಾಬಲ್ಯತೆಯನ್ನು ಕಳೆದುಕೊಂಡು ಬಂಡವಾಳ ಮಾರುಕಟ್ಟೆಯಿಂದ ದೂರ ಸರಿಯುತ್ತದೆ ಎಂಬ ಭಯ ಅದನ್ನು ಕಾಡುತ್ತಿದೆ. ಖಾಸಗಿ ವಲಯವು ಐದು ದಶಕಗಳ ವಿದ್ಯಮಾನಗಳಿಗೆ ಸಾಕ್ಷಿಯಾಗಿದೆ.

ಆದರೆ ಪಾರಂಪರಿಕವಾಗಿ ದಮನಿತ ಸಾಮಾಜಿಕ ಗುಂಪುಗಳು ರಾಜ್ಯಾಂಗದ ಅಡಿಯಲ್ಲಿನ ಸಂಸ್ಥೆಗಳಲ್ಲಿ ತಮ್ಮ ದಾರಿಯನ್ನು ಕಂಡುಕೊಂಡಿದೆ. ಖಾಸಗಿ ವಲಯವು, ತಮ್ಮ ಮುಂದಿನ ತಲೆಮಾರುಗಳು ನಿರುದ್ಯೋಗಿಗಳಾಗುತ್ತಾರೆ ಎಂಬ ಭಯದಿಂದ ಅನವಶ್ಯಕವಾಗಿ ಕೆಲಸ ಮಾಡಬೇಕಾಗಿಲ್ಲ. ಆರ್ಥಿಕತೆ ಬೆಳೆದಂತೆ, ಎಲ್ಲರಿಗೂ ಹೆಚ್ಚಿನ ಉದ್ಯೋಗಾವಕಾಶಗಳು ದೊರೆಯುತ್ತಿದೆ. ಜವಾಬ್ದಾರಿಯುತ ನಿಗಮೀಕೃತ ವಲಯವಾಗಿ ಖಾಸಗಿ ವಲಯವು ಸಂಕುಚಿತ ಜಾತಿ ನೆಲೆಗಳಿಂದ ಬಿಡುಗಡೆಗೊಳ್ಳಬೇಕು. ಜಾಗತಿಕ ರಾಷ್ಟ್ರ ಕುಟುಂಬದಲ್ಲಿ ಭಾರತಕ್ಕೆ ಹೆಮ್ಮೆಯ ಸ್ಥಾನ ತಂದುಕೊಳ್ಳಲು ಹೇಗೆ ಸಾಧ್ಯ ಎಂಬುದರ ಬಗ್ಗೆ ಚಿಂತಿಸಬೇಕು. ಜಾಗತಿಕ ಮಾರುಕಟ್ಟೆಯಲ್ಲಿ ಭಾರತವು ಮಹತ್ತ್ವದ ಪಾತ್ರವನ್ನು ವಹಿಸದಿದ್ದರೆ ಇದು ಸಾಧ್ಯವಿಲ್ಲ. ಖಾಸಗಿವಲಯವು ಕೈಗಾರಿಕೆಯಲ್ಲಿ ಸಾಮಾಜಿಕ ಸ್ಪರ್ಧಾತ್ಮಕತೆಯನ್ನು ಅಂಗೀಕರಿಸದ ಹೊರತು ಇದು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಅಮೆರಿಕಾದ ನಿಗಮಗಳಂತೆ ಆಲೋಚಿಸುವ ವಿಡಿಯೊಕೊನ್ ಭಾರತದ ಭವಿಷ್ಯವಾಗಿದೆ. ಉಳಿದವುಗಳು ಅದನ್ನು ಅನುಸರಿಸಬಹುದು ಅಥವಾ ಅದನ್ನು ಮೀರಬಹುದು.

ಅಮೆರಿಕಾದ ಬಹುತ್ವವಾದ; ಭಾರತಕ್ಕೆ ಪಾಠವಾಗಬೇಕು

ಅಮೆರಿಕಾದ ಬಹುತ್ವವಾದವನ್ನು ಅರ್ಥೈಸಲು ಅಮೆರಿಕಾದ ಚರಿತ್ರೆಯನ್ನು ತಿಳಿದುಕೊಳ್ಳುವುದು ಭಾರತೀಯರಿಗೆ ಆಸಕ್ತಿದಾಯಕ ವಿಷಯ ವಾಗಬೇಕು. ೧೬೧೯ ಮತ್ತು ೨೦೧೯ ರ ನಡುವೆ ಅಮೆರಿಕಾವು ನಾಲ್ಕು ನೂರು ವರ್ಷಗಳನ್ನು ಹಾದು ಬಂದಿದೆ. ೨೦೧೯ ರ ವೇಳೆಗೆ ಆಫ್ರಿಕಾದ ಅಮೆರಿಕನ್ನರು ಅಮೆರಿಕಾದ ಸಾಮಾಜಿಕ ಜೀವನದಲ್ಲಿ ಅತ್ಯುನ್ನತ ಎತ್ತರದ ಸ್ಥಾನಗಳನ್ನು ತಲುಪಬಹುದು. ಇದಕ್ಕೆ ವಿರುದ್ಧವಾಗಿ ಭಾರತದ ದುರಂತವೆಂದರೆ ಅದರ ಆಂತರಿಕ ಸಾಮಾಜಿಕ ಸಂರಚನೆಯಂತೆ ಬಹುಶಃ ಕ್ರಿ.ಪೂ. ೧೫೦೦ಕ್ಕೆ ಆರಂಭಗೊಂಡಿದೆ. ಕ್ರಿ.ಪೂ. ೧೫೦೦ ಮತ್ತು ೨೦೦೪ರ ಒಳಗೆ ಭಾರತವು ಸು. ೩,೫೦೦ ವರ್ಷಗಳ ದೂರವನ್ನು ಕ್ರಮಿಸಿದೆ. ಆದರೆ ಅದರ ಸಮಾಜವು ಇದುವರೆಗೆ ಕ್ರಿ.ಪೂ. ೧೫೦೦ರ ಹಿಂದೆ ಇದ್ದಂತೆ ಇದೆ.

ಸೆಪ್ಟೆಂಬರ್ ೧೧ರ ಭಯೋತ್ಪಾದಕರ ಆಕ್ರಮಣದ ನಂತರ ತಕ್ಷಣವೇ ಬುಶ್ ಆಡಳಿತವು ಅಮೆರಿಕಾದ ನ್ಯಾಯಾಲಯದಲ್ಲಿರುವ ಮುಸ್ಲಿಮರನ್ನೊಳಗೊಂಡ ಎಲ್ಲ ಪ್ರಕರಣಗಳನ್ನು ಅಮಾನತುಗೊಳಿಸಿದೆ.

ಗೋದ್ರಾ ಘಟನೆಗೆ ಗುಜರಾತ್ ಸಮಾಜವು ಹೇಗೆ ಪ್ರತಿಕ್ರಿಯಿಸಿತು ಎಂಬುದನ್ನು ನೆನಪಿಸಿಕೊಳ್ಳಿ. ಬರೀ ಹಣಕ್ಕಾಗಿ ಮಾತ್ರವಲ್ಲ, ಜಗತ್ತಿನ ಎಲ್ಲ ಪ್ರತಿಭಾವಂತ ಮೆದುಳುಗಳಿಗೆ ಅಮೆರಿಕಾದ ಮಣ್ಣನ್ನು ಮುಟ್ಟಬೇಕೆಂಬ ಕನಸು ಇದೆ. ಅನೇಕರು ಆ ದೊಡ್ಡ ದೇಶವನ್ನು ಬಿಡುವುದಕ್ಕೆ ನಿರಾಕರಿಸುತ್ತಾರೆ. ಈ ಕಾರಣಕ್ಕಾಗಿ ಅಮೆರಿಕಾವು ಶ್ರೇಷ್ಠವಾದುದು! ಇದಕ್ಕೆ ಕಾರಣಗಳಲ್ಲಿ ಬಹುತ್ವವಾದವೂ ಕೂಡ ಒಂದಾಗಿರ ಬಹುದೇ? ಅಮೆರಿಕನ್ ಬಹುತ್ವವಾದವು ಭಿನ್ನ ಜನಾಂಗದ, ಕುಲದ ಮತ್ತು ರಾಷ್ಟ್ರೀಯ ಮೂಲದ ಭಿನ್ನ ಜನರನ್ನು ಭಿನ್ನ ಸಾಮಾಜಿಕ ವರ್ಗಗಳಾಗಿ ತಮ್ಮ ಅನನ್ಯತೆಗಳನ್ನು ಪ್ರತಿಪಾದಿಸಲು ಉತ್ತೇಜಿಸುತ್ತದೆ. ಆದರೆ ಅದೇ ಸಮಯದಲ್ಲಿ ತಮ್ಮ ಸಾಮಾಜಿಕ ಮೂಲಗಳಿಂದ ನ್ಯಾಯಯುತವಾಗಿ ಬಿಡುಗಡೆ ಪಡೆದ ವ್ಯಕ್ತಿಗಳಾಗಿ ರೂಪುಗೊಳ್ಳಲು ಅವಕಾಶವನ್ನು ನೀಡುತ್ತದೆ. ಆದ್ದರಿಂದ ಸಮಾಜ-ಸಮಾಜದಲ್ಲಿ ಅಮೆರಿಕನೊಬ್ಬ 'ಬಿಳಿ ಅಮೆರಿಕನ್' ಅಥವಾ 'ದೇಶಿ ಅಮೆರಿಕನ್' ಅಥವಾ ಆಫ್ರಿಕನ್ ಅಮೆರಿಕನ್', 'ಹಿಸ್ಪಾನಿಕ್', 'ಏಷ್ಯನ್' ಅಥವಾ 'ಯೂರೋಪಿಯನ್' ಆಗಿರುತ್ತಾರೆ. ಆದರೆ ಸಮಾಜದೊಳಗೆ ಅವರೆಲ್ಲರೂ ಅಮೆರಿಕನ್ನರು.

ಬಿಳಿ-ಪ್ರಾಧಾನ್ಯ ಸಮಾಜವು ರೂಪಿಸಿದಂತೆ ಅಮೆರಿಕದ ಬಹುತ್ವವಾದ ಯೋಜನೆಯು, ದೇಶದ ಜನಾಂಗಿಕ-ಕುಲಸಂಬಂಧೀ ಸಂಯೋಗವು ಅದರ ಆಂತರಿಕ ಸಂತೋಷವಾಗಿ ಪ್ರತಿಬಿಂಬಿತವಾಗಿದೆ. ಇದರ ಬಗ್ಗೆ ವಿರೋಧವೇನಾದರೂ ಬಂತೆಂದರೆ ಅದು ತನ್ನಂತಹ ಎಲ್ಲ ಸಮಸ್ಯೆಗಳಿರುವಲ್ಲಿ ಅಸಂತೋಷವನ್ನೇ ವಿಸ್ತರಿಸುತ್ತದೆ.

ಎಂದರೆ, ಬಹುಸಂಸ್ಕೃತಿಯ ಸಾಮಾಜಿಕ ಸಂಸ್ಥೆಯಲ್ಲಿ ಭಿನ್ನ ಜನಾಂಗಿಕ-ಕುಲಸಂಬಂಧೀ ಗುಂಪುಗಳಿಂದ ಬಂದಿರುವ ಪ್ರಾತಿನಿಧಿಕ ವ್ಯಕ್ತಿಗಳು ಪರಸ್ಪರ ವಿರುದ್ಧವಾಗಿ ಮತ್ತು ಪರವಾಗಿ ಎದುರಿಸಿದಾಗ ಸ್ಪರ್ಧಾತ್ಮಕತೆಯು ಅತ್ಯುನ್ನತ ಮಟ್ಟವನ್ನು ಮುಟ್ಟುತ್ತದೆ.

ಬಹಿಷ್ಕೃತ ಜನಾಂಗಿಕ-ಕುಲಸಂಬಂಧೀ ಗುಂಪುಗಳನ್ನು ದೇಶದ ಆರ್ಥಿಕ ಜೀವನದ ಭಾಗವಾಗಿ ಮಾಡಿದಾಗ ಅಮೆರಿಕ ಸಮಾಜದಲ್ಲಿ ಹೆಚ್ಚು ಸ್ಪರ್ಧೆ ಕಂಡುಬಂತು. ಅಮೆರಿಕನ್ ಬಹುತ್ವವಾದವು ನಾಶದಿಂದ ಸಮೃದ್ಧಿಯೆಡೆಗೆ ಪರಿವರ್ತನೆಗೊಂಡಿತು. ಈ ಪ್ರಕ್ರಿಯೆಯಲ್ಲಿ ಅದು ಹಿಂದೆಂದಿಗಿಂತಲೂ ಹೆಚ್ಚು ಸುಂದರವಾಗಿ ಪರಿವರ್ತನೆಗೊಂಡಿತು.

ಅಮೆರಿಕನ್ ಇತಿಹಾಸದ ಪಾಠವು ಯಾವುದೇ ನಾಗರಿಕತೆಯಂತೆ ಅಸಹ್ಯ ಹುಟ್ಟಿಸುವಂಥದ್ದೇ. ೧೬೧೯ ರಿಂದೀಚೆಗೆ, ೧೯೫೪ ರವರೆಗೆ ಮೊದಲ ಆಫ್ರಿಕನ್ನರು ಹೊಸ ಜಗತ್ತಿಗೆ ತೆರೆದುಕೊಂಡಾಗ ಬ್ರೌನ್ v/s ಶಿಕ್ಷಣಮಂಡಲಿ ಪ್ರಕರಣ ಇತ್ಯರ್ಥವಾದಾಗ ಮತ್ತು ಪ್ರತ್ಯೇಕ ಶಾಲಾ ವ್ಯವಸ್ಥೆಯನ್ನು ಕಾನೂನು ಬಾಹಿರವೆಂದು ಘೋಷಿಸುವವರೆಗೆ, ಅಮೆರಿಕನ್ ಚರಿತ್ರೆಯ ಪ್ರತಿಯೊಂದು ಪುಟವು, ರಕ್ತ, ಕ್ರೌರ್ಯ ಮತ್ತು ಮತಧರ್ಮಗಳ ನಂಬಿಕೆಯಿಂದ ತುಂಬಿಹೋಗಿತ್ತು.

ಆದರೆ, ಬಿಳಿಯರು ಮತಾಂಧ ಜನಾಂಗವಾದಿಗಳಿಂದ ತಾಳ್ಮೆಯ ಮೂರ್ತತೆಗೆ ಎಷ್ಟು ಬೇಗ ಪರಿವರ್ತನೆಗೊಂಡಿತು ಎಂಬುದಕ್ಕೆ ಮಿಚಿಗನ್ ವಿಶ್ವವಿದ್ಯಾನಿಲಯದ ಪ್ರಕರಣವೇ ಅತ್ಯುತ್ತಮ ಉದಾಹರಣೆಯಾಗಿದೆ. ಜಗತ್ತಿನಲ್ಲಿ ಅತ್ಯುತ್ತಮ ವಿಶ್ವವಿದ್ಯಾನಿಲಯಗಳಲ್ಲಿ ಒಂದೆಂದು ಹೆಸರು ಪಡೆದ ಮಿಚಿಗನ್ ಕಾನೂನು ಶಾಲೆಯು, ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಕಪ್ಪು ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯವನ್ನು ಒದಗಿಸಿದೆ.

ವಿಶ್ವವಿದ್ಯಾನಿಲಯದ ನೀತಿಯನ್ನು ಕೆಲವು ಬಿಳಿ ವಿದ್ಯಾರ್ಥಿಗಳು ಪ್ರಶ್ನಿಸಿದ್ದರು. ಸರ್ವೋಚ್ಚ ನ್ಯಾಯಾಲಯವು ಜೂನ್ ೨೩, ೨೦೦೩ರ ತನ್ನ ಚಾರಿತ್ರಿಕ ತೀರ್ಪಿನಲ್ಲಿ ವಿಶ್ವವಿದ್ಯಾನಿಲಯದ ಪ್ರವೇಶ ನೀತಿಯನ್ನು ಎತ್ತಿಹಿಡಿಯಿತು. ವಾದ-ವಿವಾದಗಳ ಸಂದರ್ಭದಲ್ಲಿ ಅನೇಕ ಪ್ರಮುಖ ಕಂಪೆನಿಗಳು ಮತ್ತು ವ್ಯಕ್ತಿಗಳು ಮಿಚಿಗನ್ ವಿಶ್ವವಿದ್ಯಾನಿಲಯವನ್ನು ಸಮರ್ಥಿಸಿ ಅಮಿಕಸ್ ಕ್ಯೂರಿಯ (ನ್ಯಾಯಾಲಯದ ಮಿತ್ರ) ವ್ಯಾಜ್ಯ ಟಿಪ್ಪಣಿಯನ್ನು ದಾಖಲಿಸಿದರು. ಜನರಲ್ ಇಲೆಕ್ಟ್ರಿಕ್, ಮೈಕ್ರೋಸಾಫ್ಟ್ ಮತ್ತು ಕೋಕಾ ಕೋಲ ಸೇರಿದಂತೆ, ಅಮೆರಿಕಾದ ೬೫ ಕಾರ್ಪೋರೇಟ್ ದೈತ್ಯರು ವಿಶ್ವವಿದ್ಯಾನಿಲಯದ ಪರವಾಗಿ ವ್ಯಾಜ್ಯ ಟಿಪ್ಪಣಿ ದಾಖಲಿಸಿದರು.

೧೯೯೧ರ ಗಲ್ಫ್ ಯುದ್ಧದಲ್ಲಿ ಮೈತ್ರಿ ಸೇನಾಪಡೆಗಳ ನಿರ್ದೇಶಕರಾಗಿದ್ದ ಜನರಲ್ ಹೆಚ್. ನೋರ್ಮನ್ ಸ್ಕಾರ್ಟ್, ಅಧ್ಯಕ್ಷ ರೀಗನಿನ ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ರಾಬರ್ಟ್ ಮ್ಯಾಕ್‌ಫರ್‌ಲೆನ್ಸ್ (ಕೆಲವರ ಹೆಸರನ್ನಷ್ಟೇ ಉಲ್ಲೇಖಿಸಲಾಗಿದೆ) ಸೇರಿದಂತೆ ಒಂಬತ್ತು ನಿವೃತ್ತ ಮಿಲಿಟರಿ ಮತ್ತು ಸಿವಿಲ್ ವ್ಯಕ್ತಿಗಳ ಗುಂಪೊಂದು ಸಹ ವಿಶ್ವವಿದ್ಯಾನಿಲಯವನ್ನು ಸಮರ್ಥಿಸಿ, ಅಮಿಕಸ್ ಕ್ಯೂರಿ ದಾಖಲಿಸಿತು. ಹಾರ್ವರ್ಡ್, ಪ್ರಿನ್ಸ್‌ಟನ್ ಮತ್ತು ಯೇಲ್ ವಿಶ್ವವಿದ್ಯಾನಿಲಯಗಳನ್ನು ಒಳಗೊಂಡಂತೆ ಅಮೆರಿಕಾದ ಎಂಟು ಸುಪ್ರಸಿದ್ಧ ಶೈಕ್ಷಣಿಕ ಸಂಸ್ಥೆಗಳು ಮಿಚಿಗನ್ ವಿಶ್ವವಿದ್ಯಾನಿಲಯ 'ವನ್ನು ಸಮರ್ಥಿಸಿ ಹಲವು ಸಂದರ್ಭಗಳಲ್ಲಿ ಬಿಳಿಯರು ನಡೆಸುವ ಪ್ರಜಾ ಸ್ವಾತಂತ್ರ್ಯ ಸಂಸ್ಥೆಗಳ ನೆರವಿನೊಂದಿಗೆ ಅಮಿಕಸ್ ಕ್ಯೂರಿಯನ್ನು ದಾಖಲಿಸಿತು.

ನ್ಯೂಯಾರ್ಕ್ ರಿವ್ಯೂ ಆಫ್ ಬುಕ್ಸ್‌ನ ಮೇ ೧೫ ೨೦೦೩ರ ಸಂಚಿಕೆಯಲ್ಲಿ ಅಮೆರಿಕದಲ್ಲಿ ಅನೇಕ ದಶಕಗಳ ಹೋರಾಟದ ನಂತರವೂ ಸಹ ಜನಾಂಗೀಯ ಅಸಮಾನತೆ ತೀವ್ರವಾಗಿರುವುದು ದುರಂತವೇ ಸರಿ. 'ಇದು ನಮ್ಮ ಸೋಲ ನ್ನಷ್ಟೇ ಸೂಚಿಸುತ್ತಿದೆಯಾದರೂ ಇದು ನಮ್ಮ ವಿದ್ವಾಂಸರು, ಅರ್ಥಶಾಸ್ತ್ರಜ್ಞರು ಹಾಗೂ ರಾಜಕೀಯ ನಾಯಕರು ಕಾಲು ಶತಮಾನದ ಅನುಭವಗಳಲ್ಲಿ ಕಂಡುಕೊಂಡಂತೆ ಅಸಮಾನತೆಯ ವಿರುದ್ಧ ಹೋರಾಟದ ಅಸ್ತ್ರದಲ್ಲಿ ಇದು ಅತ್ಯುತ್ತಮವಾದುದು'.

ರೊನಾಲ್ಡ್‌ನಂತೆ ಅನೇಕ ಬಿಳಿ ಬುದ್ಧಿಜೀವಿಗಳು, ಶುದ್ಧ ವಿಜ್ಞಾನಗಳು, ಬಂಡವಾಳ ಮಾರುಕಟ್ಟೆಗಳು, ಮಾಧ್ಯಮ, ಸಿನೆಮಾ ಮತ್ತು ಸಂಗೀತಕ್ಕೂ ಇದನ್ನು ವಿಸ್ತರಿಸುವ ಬಹುತ್ವ ಕಾರ್ಯಕ್ರಮವನ್ನು ಸಮರ್ಥಿಸಿದರು.

ಅಮೆರಿಕಾದ ಬಹುತ್ವವಾದವನ್ನು ಅರ್ಥೈಸಲು ಅಮೆರಿಕಾದ ಚರಿತ್ರೆಯನ್ನು ತಿಳಿದುಕೊಳ್ಳುವುದು ಭಾರತೀಯರಿಗೆ ಆಸಕ್ತಿದಾಯಕ ವಿಷಯವಾಗಬೇಕು. ೧೬೧೯ ಮತ್ತು ೨೦೧೯ ರ ನಡುವೆ ಅಮೆರಿಕಾವು ನಾಲ್ಕು ನೂರು ವರ್ಷಗಳನ್ನು ಹಾದು ಬಂದಿದೆ. ೨೦೧೯ ರ ವೇಳೆಗೆ ಆಫ್ರಿಕಾದ ಅಮೆರಿಕನ್ನರು ಅಮೆರಿಕಾದ ಸಾಮಾಜಿಕ ಜೀವನದಲ್ಲಿ ಅತ್ಯುನ್ನತ ಎತ್ತರದ ಸ್ಥಾನಗಳನ್ನು ತಲುಪಬಹುದು. ಇದಕ್ಕೆ ವಿರುದ್ಧವಾಗಿ ಭಾರತದ ದುರಂತವೆಂದರೆ ಅದರ ಆಂತರಿಕ ಸಾಮಾಜಿಕ ಸಂರಚನೆಯಂತೆ ಬಹುಶಃ ಕ್ರಿ.ಪೂ. ೧೫೦೦ಕ್ಕೆ ಆರಂಭಗೊಂಡಿದೆ. ಕ್ರಿ.ಪೂ. ೧೫೦೦ ಮತ್ತು ೨೦೦೪ರ ಒಳಗೆ ಭಾರತವು ಸು. ೩,೫೦೦ ವರ್ಷಗಳ ದೂರವನ್ನು ಕ್ರಮಿಸಿದೆ. ಆದರೆ ಅದರ ಸಮಾಜವು ಇದುವರೆಗೆ ಕ್ರಿ.ಪೂ. ೧೫೦೦ರ ಹಿಂದೆ ಇದ್ದಂತೆ ಇದೆ. ಭಾರತದಲ್ಲೂ ಮಿಚಿಗನ್ ವಿ.ವಿಯ ರೀತಿಯದೇ ಪ್ರಕರಣವನ್ನು ಎದುರಿಸಬೇಕಾದಾಗ ೬೦ ಉನ್ನತ ಕಾರ್ಪೋರೇಟ್ ಸಂಸ್ಥೆಗಳು, ೮ ಉನ್ನತ ಶೈಕ್ಷಣಿಕ ಸಂಸ್ಥೆಗಳು ಮತ್ತು ನಿವೃತ್ತ ಮಿಲಿಟರಿ ಜನರಲ್‌ಗಳು ಮತ್ತು ಪ್ರಜಾಸ್ವಾತಂತ್ರ್ಯ ಸಂಸ್ಥೆಗಳು ಭಿನ್ನತೆ ಮತ್ತು ಖಾಸಗಿ ವಲಯದಲ್ಲಿನ ಮೀಸಲಾತಿ ಬಗ್ಗೆ ದಲಿತರ ಹಕ್ಕುಗಳನ್ನು ಸಮರ್ಥಿಸಲು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಅಮಿಕಸ್ ಕ್ಯೂರಿಯನ್ನು ದಾಖಲಿಸುತ್ತಾರೆಯೇ.

ಭಾರತದ ಕಾರ್ಪೋರೇಟ್ ವಲಯವು ಅಮೆರಿಕದ ಅನುಭವದಿಂದ ಪಾಠ ಕಲಿಯಲು ಇದು ಸಕಾಲವಾಗಿದೆ. ಅಮೆರಿಕನ್ ರೀತಿಯ ಬಹುತ್ವವಾದವು ಭಾರತೀಯ ಸಮಾಜವನ್ನು ಹೆಚ್ಚು ಸ್ಪರ್ಧಾತ್ಮಕವನ್ನಾಗಿಸುತ್ತದೆ. ಜೊತೆಗೆ ಕ್ಷಿಪ್ರ ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಸಂಧಾನಕ್ಕೆ ಅತ್ಯವಶ್ಯಕವಾಗಿದೆ. □

ಜಾಗೃತಿ

ಜಾಗತೀಕರಣ ನಮ್ಮ ಮನೆ ಬಾಗಿಲಿಗೇ ಬಂದಿದೆ. 'ಪ್ರಗತಿಯ ಬಸಿರೆಂದು' ಬಲಿಷ್ಠ ರಾಷ್ಟ್ರಗಳು ಬಣ್ಣಿಸುತ್ತಿರುವ ಜಾಗತೀಕರಣದಿಂದ ಭಾರತದ ಅಲಕ್ಷಿತ ಜನಸಮುದಾಯ ತತ್ತರಿಸಿ ಹೋಗುತ್ತಿದ್ದು ಮುಂಬರುವ ದಿನಗಳು ಕರಾಳವಾಗಲಿವೆ ಎಂಬುದು ಭಾರತದಲ್ಲಿ ದಲಿತ ಮಾನವ ಹಕ್ಕುಗಳ ರಾಷ್ಟ್ರೀಯಾಂದೋಲನ ಶೋಧಿಸಿ ಪ್ರಕಟಿಸಿರುವ ಮಾಹಿತಿಯಿಂದ ತಿಳಿದುಬಂದಿದೆ. ಜಾಗತೀಕರಣದ ಬಗೆಗಿನ ಎಲ್ಲಾ ಭರವಸೆಗಳು ಎಂಥ ಹಸಿ ಸುಳ್ಳು ಎಂಬುದು ಈ ಮಾಹಿತಿಯಿಂದ ತಿಳಿದುಬರುತ್ತದೆ. ಈ ಮಾಹಿತಿಯನ್ನಾಧರಿಸಿದ ಸಂಶೋಧನಾ ಲೇಖನಮಾಲೆಯ ಐದನೇ ಕಂತು ಇದು.

○ ಅನು: ಡಿ. ಡೊಮಿನಿಕ್

ಜಲಹಂಚಿಕೆಯ ಅಸಮಾನತೆ



ನೀರಿಗೆ ಪ್ರವೇಶಾಧಿಕಾರದ ನಿರಾಕರಣೆ ಮತ್ತು ತಾರತಮ್ಯ : ಜಾತಿಪದ್ಧತಿಯ ಧರ್ಮಾಧಾರಿತ ಸಾಮಾಜಿಕ-ಆರ್ಥಿಕ ವ್ಯವಸ್ಥೆಯು ಜಾತಿ ಪದ್ಧತಿಯಲ್ಲಿ ಅಶುಭರೆಂದು ಪರಿಗಣಿಸಿ ದಲಿತರಿಗೆ ಅಸಮಾನ, ಪ್ರವೇಶ ಮತ್ತು ನೀರಿನ ಹಂಚಿಕೆ ಹಾಗೂ ನೀರಿನ ಬಳಕೆಯ ಹಿಡಿತದ ಹಕ್ಕನ್ನು ಪ್ರತಿಪಾದಿಸುತ್ತದೆ. ಬಾವಿ, ಸ್ನಾನದ ತೊಟ್ಟಿ ಮತ್ತು ಇತರೆ ನೀರಿನ ಮೂಲವನ್ನು ಉಪಯೋಗಿಸಲು ಜಾತಿ ಆಧಾರಿತ ತಾರತಮ್ಯದ ಮೇಲೆ ನಿಷೇಧ ಏರುವ ಭಾರತದ ಸಂವಿಧಾನದ ಅನುಚ್ಛೇದ ೧೭ ಇದ್ದರು ಕೂಡ ಸುಮಾರು ವರ್ಷಗಳಿಂದ ಬೆಳೆದು ಬಂದಂಥ ವಿಧವಿಧವಾದ ತಾರತಮ್ಯವು ಮುಂದುವರಿಯುತ್ತಿದೆ.

ಬಹುತೇಕ ಭಾರತದ ಹಳ್ಳಿಗಳಲ್ಲಿ ನೀರು ಬಳಸಲು ದಲಿತರಿಗೆ ಪ್ರತ್ಯೇಕ ಬಾವಿ ಅಥವಾ ಪ್ರತ್ಯೇಕ ಕೊಳವು ಇರುತ್ತವೆ. ಆದರೆ ಈ ತೋರಿಕೆಯ ನೀರು ಉಪಯೋಗಿಸುವ ಹಕ್ಕು ಶ್ರಮದಿಂದ ಬಂದಿದೆ. ಹತ್ತಿರದ ಎಲ್ಲಾ ನೀರಿನ ಮೂಲಗಳನ್ನು ವಿಶೇಷವಾಗಿ ತಮಗೆಂದೆ ಪ್ರಾಬಲ್ಯ ಜಾತಿಗಳು ಉಪಯೋಗಿಸುವುದರಿಂದ ಅನೇಕ ಬಾರಿ ದಲಿತ ಮಹಿಳೆಯರು ನೀರಿಗಾಗಿ ಬಹಳಷ್ಟು ದೂರ ನಡೆಯಬೇಕಾಗುತ್ತದೆ. ಸಾಮಾನ್ಯವಾಗಿ ದಲಿತರಿಗೆ ಕಡಿಮೆ ಶುಭ್ರತೆ ಇರುವ ಕೆಳ ಪ್ರವಾಹದಲ್ಲಿ ಅಥವಾ ಅವರ ಬಾವಿ ಅಥವಾ ನಲ್ಲಿಗಳಿರುತ್ತವೋ ಅಲ್ಲಿ ನೀರನ್ನು ಉಪಯೋಗಿಸುವಂತೆ ಮಾಡಿದೆ. ಗಣನೀಯವಾಗಿ ಎಲ್ಲರಿಗೂ ತಿಳಿದಂತೆ, ಕುಡಿಯುವ ನೀರಿನ ಗುಣ ಮಟ್ಟವು ಇತರೆ ಪ್ರಾಬಲ್ಯ ಜಾತಿಗಳು ಆನಂದದಿಂದ ಉಪಯೋಗಿಸುವ ನೀರಿನ ಗುಣಮಟ್ಟಕ್ಕಿಂತ ಕಳಪೆಯದಾಗಿರುತ್ತದೆ.

ಭಿನ್ನವಾಗಿ ಎಲ್ಲಿ ಪ್ರತ್ಯೇಕ ನೀರು ಸರಬರಾಜು ಇರುವುದಿಲ್ಲವೋ ಅಲ್ಲಿ, ದಲಿತರು ಅದರಲ್ಲೂ ದಲಿತ ಮಹಿಳೆಯರು ಅನೇಕ ಅಸ್ಪೃಶ್ಯತೆ ಆಚರಣೆಗೆ ಗುರಿಯಾಗುತ್ತಾರೆ.

★ ದಲಿತೇತರರಿಗಿಂತ ಮುಂಚಿತವಾಗಿ ದಲಿತರು ನೀರಾವರಿ ಮಾಡುವುದನ್ನು ತಡೆಗಟ್ಟುತ್ತಾರೆ.

★ ದಲಿತರ ಭೂಮಿಯ ಸರಬರಾಜಿನ ನೀರನ್ನು ಅನೇಕ ಕಡೆಗೆ ತಿರುಗಿಸುತ್ತಾರೆ.

★ ದಲಿತರು ನೀರಾವರಿ ಮೂಲವನ್ನು ಉಪಯೋಗಿಸುವ ಮುಂಚೆ ಅವರ ಅನುಮತಿಯನ್ನು ಕೋರುವಂತೆ ಒತ್ತಾಯಿಸುತ್ತಾರೆ. (ಎ. ಇರುದಯನ್ ಮತ್ತು ಜೆ.ಪಿ. ಮುಂಗುಬಾಯ್, ಜಾತಿ ಆಧಾರಿತ ನೀರಿನ ಕಾಳಗ ೨೦೦೨)

ನೀರು ಒದಗಿಸುವಲ್ಲಿ ಸರ್ಕಾರದ ತಾರತಮ್ಯದ ವಿಧಗಳು : ೧೯೯೧ ನಂತರದ ಸ್ಥಿತಿ : ದಲಿತರ ಪರವಾಗಿರುವಂಥ ಸರ್ಕಾರದ ನೀತಿಗಳು, ಆಚರಣೆಯಲ್ಲಿ ಪ್ರತ್ಯೇಕ ಮತ್ತು ಪರೋಕ್ಷ ರೂಪಗಳಲ್ಲಿ ತಾರತಮ್ಯ ಮಾಡುತ್ತವೆ. ಭಾರತದಲ್ಲಿ ಶೇ ೮೦ ಜನಸಂಖ್ಯೆಯು ವ್ಯವಸಾಯದ ಮೇಲೆ ಅವಲಂಬಿತವಾಗಿದೆ. ಶೇ ೯೦ ದಲಿತ ರೈತರು ನೀರಾವರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಬಹಳಷ್ಟು ನೀರಾವರಿ ಸೌಲಭ್ಯಗಳಿಂದ (ನೀರಾವರಿ ಕೊಳ ಅಥವಾ ತೊಟ್ಟಿಗಳು) ಭೂಮಿಯು ವಿಶೇಷವಾಗಿ ಪ್ರಾಬಲ್ಯ ಜಾತಿಗಳ ಮಾಲೀಕತ್ವದಲ್ಲಿರುತ್ತದೆ ಅಥವಾ ಅವರು ಉಪಯೋಗಿಸುತ್ತಿರುತ್ತಾರೆ. ಹಾಗಾಗಿ ನೀರು ನೀಡುವ ಸಲುವಾಗಿ ಮಾಡುವ ನೀರಾವರಿ ಯೋಜನೆಗಳು ಅಥವಾ ಹನಿ ನೀರಾವರಿಯಂತಹ ಹೊಸ ತಂತ್ರಜ್ಞಾನವನ್ನು ಪರಿಚಯಿಸಿದರೆ ಅದು ನೀರಾವರಿ ಅನುಕೂಲವಿರುವ ಭೂಮಿ ಇರುವ ಪ್ರಾಬಲ್ಯ ಜಾತಿಗಳಿಗೆ ಉಪಯೋಗವಾಗುತ್ತದೆ.

ದಲಿತರ ಜಾತಿ ಆಧಾರಿತ ಪ್ರತ್ಯೇಕಿಸಿದ ಕಾಲೋನಿಗಳಿಗೆ ಕುಡಿಯುವ ನೀರು ಸರಬರಾಜು ಸೌಲಭ್ಯವನ್ನು ಒದಗಿಸಬೇಕೆಂದು ಸರ್ಕಾರದ ಉದ್ದೇಶವಿದ್ದರು ರಾಷ್ಟ್ರೀಯ ಎಸ್‌ಸಿ/ಎಸ್‌ಟಿ ಆಯೋಗವು

೧೯೯೨-೯೩ ರಲ್ಲಿ ಕರ್ನಾಟಕ ರಾಜ್ಯದ ೭೦ ಹಳ್ಳಿಗಳಲ್ಲಿ ಮಾಡಿದ ಸಮೀಕ್ಷೆಯು ೪೬ ಹಳ್ಳಿಗಳಲ್ಲಿ ದಲಿತರಿಗೆ ಪ್ರತ್ಯೇಕ ನೀರಿನ ಮೂಲಗಳು ಮುಂದುವರಿದಿವೆ ಎಂಬುದನ್ನು ಬಹಿರಂಗಪಡಿಸಿತು. ಮಿಕ್ಕ ಸಾಮಾನ್ಯ ನೀರಿನ ಮೂಲಗಳ ೨೩ ಹಳ್ಳಿಗಳಲ್ಲಿ, ೧೪ ಹಳ್ಳಿಗಳಲ್ಲಿ ದಲಿತ ಮಹಿಳೆಯರು ಪ್ರತ್ಯೇಕ ನಲ್ಲಿಗಳನ್ನು ಉಪಯೋಗಿಸುವಂತೆ ಮಾಡಿದೆ ಅಥವಾ ಮೇಲುಜಾತಿಯ ಮಹಿಳೆ ನೀರು ತುಂಬಿಸಿಕೊಳ್ಳುವವರೆಗೂ ಇದ್ದು ನಂತರ ತಾವು ನೀರು ತೆಗೆದುಕೊಳ್ಳಬಹುದು ಮತ್ತು ಇದನ್ನು ಬಹಿರಂಗವಾಗಿ ಅಗೌರವದ ಮಾತುಗಳನ್ನಾಡಿದ ನಂತರ ನೀಡಲಾಗುತ್ತದೆ. (ಸುಖದಿಯೋ ತೋರಾಟ್, ಹಿಂದೂ ಸಾಮಾಜಿಕ ವ್ಯವಸ್ಥೆ ಮತ್ತು ಮಾನವ ಹಕ್ಕುಗಳು : ಭಾರತದ ಮಾಜಿ ಅಸ್ಪೃಶ್ಯರ ಒತ್ತಾಯದ ಕುರಿತು)

ಜೀವನಾಧಾರದ ನಿರಾಕರಣೆ : ನೀರಿನ ತಾರತಮ್ಯದ ಆರ್ಥಿಕ ಆಯಾಮವು ದೇಶದಲ್ಲಿ ಭೂಮಿ ಹೊಂದಿರುವ ಶೇ ೮೧.೧೮ ಎಸ್‌ಸಿ/ಎಸ್‌ಟಿ ದಲಿತೇತರರಿಗೆ ಹೋಲಿಸಿದರೆ ಶೇ ೩೫.೦೫ ರಷ್ಟಿರುವ ದಲಿತರ ಮೇಲೆ ಪ್ರಯೋಗಿಸಲಾಗಿದೆ. ಅವರು ಸಣ್ಣ ರೈತರಾಗಿ ತಮ್ಮ ಸಣ್ಣ ಭೂಮಿಯ ಮುಖಾಂತರ ಜೀವನಾದಾಯವನ್ನು ಪಡೆಯುವುದು ಮೇಲು ಜಾತಿಗಳ ಕೈಯಲ್ಲಿದೆ. ಸಾಮಾನ್ಯವಾಗಿ, ಅವರು ಸ್ವಂತವಾಗಿ ಅಥವಾ ಸ್ಥಳೀಯ ಸರ್ಕಾರದ ಅಧಿಕಾರಿಗಳ ಜೊತೆಗೆ ಶಾಮೀಲಾಗಿ :

★ ದಲಿತರು ನೀರಾವರಿಗೆ ನೀರನ್ನು ಉಪಯೋಗಿಸದಂತೆ ನಿರಾಕರಿಸುತ್ತಾರೆ.

ತನ್ನ ೧೯೯೬-೯೭ ಮತ್ತು ೧೯೯೭-೯೮ ರ ವರದಿಯಲ್ಲಿ ಶೇ ೨೦ ಕ್ಕಿಂತ ಹೆಚ್ಚು ದಲಿತ ಕುಟುಂಬಗಳು ಕನಿಷ್ಠ ಶುಭ್ರ ಕುಡಿಯುವ ನೀರಿನಿಂದ ವಂಚಿತರಾಗಿದ್ದಾರೆ. ಹೆಚ್ಚಿನದಾಗಿ, ಬಹಳಷ್ಟು ಸಲ ಸರ್ಕಾರ ಕೊಡುವ ಅಂಕಿ ಅಂಶಗಳಿಗಿಂತ ಹೆಚ್ಚು ಇರುತ್ತವೆ. ಕುಡಿಯುವ ನೀರಿನ ಮೂಲಗಳು ಒಣಗಿ ಹೋದರು ರೆಕಾರ್ಡ್‌ಗಳಲ್ಲಿ ದಲಿತರಿಗೆ ಸಾಕಷ್ಟು ಕುಡಿಯುವ ನೀರಿನ ವ್ಯವಸ್ಥೆಯಿದೆ ಎಂದು ತೋರಿಸಲಾಗುತ್ತದೆ. ಇಲ್ಲಿಯವರೆಗೂ ನಡೆದಂತಹ ವೈಯಕ್ತಿಕ ಸಂಶೋಧನೆಗಳು ಸರ್ಕಾರದ ಅಂಕಿ-ಅಂಶ ಮತ್ತು ಹಳ್ಳಿಗಳಲ್ಲಿನ ನಿಜವಾದ ಸ್ಥಿತಿಗಳ ನಡುವೆ ಬಹಳಷ್ಟು ಅಂತರವನ್ನು ಕಂಡುಹಿಡಿದಿದೆ.

೫೦ ವರ್ಷಗಳ ಸ್ವಾತಂತ್ರ್ಯದಲ್ಲಿ ಮಾಡಿದ ಪ್ರಗತಿಯನ್ನು ಪರಿಶೀಲಿಸಿದರೆ ವಿಶೇಷವಾಗಿ ದಲಿತರಿಗೆ ಕುಡಿಯುವ ನೀರನ್ನು ನೀಡುವ ಸಲುವಾಗಿ ಮೀಸಲಿಟ್ಟ ಹಣ ಮತ್ತು ಅಭಿವೃದ್ಧಿ ಕಾರ್ಯಗಳನ್ನು, ರಾಷ್ಟ್ರೀಯ ಎಸ್‌ಸಿ/ಎಸ್‌ಟಿ ಆಯೋಗವು ವಿಸ್ತಾರವಾದ ಸಮೀಕ್ಷೆ ನಡೆಸಿ ಕುಡಿಯುವ ನೀರಿನ ಸಮಸ್ಯೆ ಇರುವ ದಲಿತ ಹಳ್ಳಿಗಳನ್ನು ಪತ್ತೆಹಚ್ಚಿ ಸೂಕ್ತ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದೆ. ೫ ವರ್ಷಗಳ ಕಳೆದರೂ ಈ ಶಿಫಾರಸ್ಸುಗಳು ಕಾಗದದಲ್ಲೇ ಉಳಿದಿದೆ. ಆದರೆ ದಲಿತರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿ ನರಳುತ್ತಿದ್ದಾರೆ. (ಎ. ಇರುದಯಂ ಜೆ.ಪಿ. ಮಂಗುಬಾಯ್, ಜಾತಿ ಆಧಾರಿತ ನೀರಿನ ಕಾಳಗ, ೨೦೦೨)

ಒಂದು ಕ್ಷೇತ್ರ ಅಧ್ಯಯನವು (ಆಕ್ಷನ್ ಏಡ್, ಆಂಧ್ರಪ್ರದೇಶದಲ್ಲಿನ ಅಸ್ಪೃಶ್ಯತೆಯ ಸ್ಥಿತಿ - ೨೦೦೨) ಶೇ ೫೦ ದಲಿತರ ವಾಸಸ್ಥಳಗಳಲ್ಲಿ ಗ್ರಾಮೀಣ

ನೀರು ಸರಬರಾಜು ವ್ಯವಸ್ಥೆಯ ಅನುಷ್ಠಾನವು ಕೆಳಕಂಡ ಅಂಶಗಳ ಮೇಲೆ ತಾರತಮ್ಯವನ್ನು ಮಾಡಿದೆ ಎಂದು ಬಹಿರಂಗ ಪಡಿಸಿದೆ.

★ ಕಡಿಮೆ ಹಣ ಹಂಚುವಿಕೆ (ಮಂಜೂರು)
★ ಕಳಪೆ ದರ್ಜೆಯ ಸಾಮಾನುಗಳ ಉಪಯೋಗ
★ ಹಣ ಮಂಜೂರಾತಿಯನ್ನು ತಡಮಾಡುವುದು
★ ವ್ಯವಸ್ಥೆಯ ಅನುಷ್ಠಾನದಲ್ಲಿ ತಡ
★ ನಿರ್ವಹಣೆಯ ಹಣದ ಕೊರತೆ

ಆಂಧ್ರಪ್ರದೇಶದ ಸರ್ಕಾರವು ರಾಜ್ಯಾದ್ಯಂತ ನೀರು ಬಳಕೆದಾರರ ಸಂಘ (WUA'S) ಮತ್ತು ನೀರು ಸರಬರಾಜು (ಹಂಚಿಕೆದಾರರ) ಸಮಿತಿಗಳನ್ನು ನಿರ್ಮಿಸಿದೆ. ಇವುಗಳಿಗೆ ಸ್ಥಳೀಯ ನೀರಿನ ಮೂಲಗಳ ನಿರ್ವಹಣೆಯ ಅಧಿಕಾರವನ್ನು ನೀಡಲಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದ ಅಧಿಕಾರದ ಅಸ್ತಾಂತರ ನೀತಿಯ ಅನುಗುಣವಾಗಿ ಈ ಸಂಸ್ಥೆಗಳು ಪಂಚಾಯತಿ ವ್ಯವಸ್ಥೆಗೆ ಸಮಾನವಾಗಿ ಕಾರ್ಯನಿರ್ವಹಿಸುತ್ತವೆ. ಪಂಚಾಯತಿ ವ್ಯವಸ್ಥೆಯಲ್ಲಿ ದಲಿತರಿಗೆ ಮೀಸಲಾತಿ ನೀಡಿರುವಂತೆ ಆಂಧ್ರಪ್ರದೇಶದ ಹಳ್ಳಿಗಳ ನೀರಿನ ಸರಬರಾಜನ್ನು ನಿಯಂತ್ರಿಸುವ ಈ ಹೊಸ ಸಂಸ್ಥೆಗಳಲ್ಲಿ ಮೀಸಲಾತಿ ಇಲ್ಲ.

ಈ ನೀತಿಗಳ ಬದಲಾವಣೆಯ ಪ್ರಭಾವದ ಕ್ಷೇತ್ರ ಅಧ್ಯಯನವು ನೀರಿನ ಹಂಚುವಿಕೆ ಮತ್ತು ನಿರ್ವಹಣೆಯನ್ನು ನೇರವಾಗಿ ಪ್ರಾಬಲ್ಯ ಭೂಮಾಲಿಕ ಜಾತಿಗಳ ನಿಯಂತ್ರಣದಲ್ಲಿ ಈ ಸಂಸ್ಥೆಗಳಿವೆ ಎಂದು ಬಹಿರಂಗಪಡಿಸಿದೆ. ಅನೇಕ ಪ್ರಬಲ ಜಾತಿ ಅಧ್ಯಕ್ಷರುಗಳು ಕಾಲುವೆ ಕಾರ್ಯ ಗುತ್ತಿಗೆದಾರರಾಗಿದ್ದಾರೆ: ಲಂಚಗುಳಿತನದ ಸಂಶಯವು ಪ್ರಚಲಿತದಲ್ಲಿದೆ. ಶೇ ೫ರಷ್ಟು (WUA) ಅಧ್ಯಕ್ಷರುಗಳು ಮಾತ್ರ ದಲಿತರು ಅಥವಾ ಆದಿವಾಸಿಗಳು ಎಲ್ಲಿ ಹೀಗಿದೆಯೋ ಅಲ್ಲಿ ಪ್ರಾಬಲ್ಯ ಜಾತಿಗಳಿಂದ ಸಹಕಾರವು ಬಹಳ ಕಡಿಮೆ. 'ಭೂಮಿ ಇರುವವರಿಗೆ ಒಂದು ವ್ಯಕ್ತಿ ಒಂದು ಓಟು ಎಂಬ ಸಿದ್ಧಾಂತಕ್ಕೂ ಈ ಹೊಸ ರಚನೆಯಲ್ಲಿನ ದಲಿತರ ಪಾಲ್ಗೊಳ್ಳುವಿಕೆ ಉಚಿತವಾಗಿಲ್ಲ, ಯಾಕೆಂದರೆ ಇದರಿಂದ ಬಹುಸಂಖ್ಯಾ ಭೂರಹಿತ ದಲಿತರನ್ನು ಹೊರತುಪಡಿಸಲಾಗಿದೆ. (ಎಮ್. ಸುಧಾಕರ, ಸ್ಥಳೀಯ ಆಳ್ವಿಕೆ ಮತ್ತು ದಲಿತರ ಸುಧಾರಣೆ-೨೦೦೨)

ನೀರಿನ ಕೊಳಡಿಗಳ ಅಭಿವೃದ್ಧಿ

ವಿಶ್ವಬ್ಯಾಂಕು ಭಾರತದ ಬಹುತೇಕ ಮತ್ತು ದಕ್ಷಿಣ ರಾಜ್ಯಗಳಿಗೆ ನೀರಿನ ಕೊಳಡಿಗಳ ಅಭಿವೃದ್ಧಿಗಾಗಿ ಹಣವನ್ನು ನೀಡಿದೆ. ಇದನ್ನು ದೇಶದ ನೀರಿನ ಕೊರತೆ ಮತ್ತು ಕ್ಷಾಮಕ್ಕೆ ಪರಿಹಾರವೆಂದು ಪರಿಗಣಿಸಲಾಗಿದೆ. ವಿಶ್ವಬ್ಯಾಂಕ್ ಪ್ರಭಾವಿತ ರಾಜ್ಯ ಸರ್ಕಾರದ ನೀತಿಗಳು, ನೀರಿನ ಕೊಳಡಿಗಳ ನಿರ್ಮಾಣವು ಸಾಮಾಜಿಕ ಸಮಾನತೆಯನ್ನು ಕೇಂದ್ರೀಕರಿಸಿಲ್ಲ, ಅದು ನೆಲದ ಭೌತಿಕ ಮತ್ತು ಸ್ಥಳ ವರ್ಣದ ಮೇಲೆ ಕೇಂದ್ರೀಕರಿಸಲಾಗಿದೆ. ಈ ನೀತಿಗಳು ಕೆಲ ಜಲಾನಯನ ಪ್ರದೇಶದಲ್ಲಿ ಭೂಮಿ ಹೊಂದಿರುವಂತಹ ಜನರಿಗೆ ಪ್ರಯೋಜನಕಾರಿಯಾಗಿರುತ್ತದೆ. ಅಂದರೆ ಮೇಲು ಜಾತಿಗಳಿಗೆ ದಲಿತರಿಗೆ ಮತ್ತು ಆದಿವಾಸಿಗಳಿಗೆ ನೀರಿನ ಕೊಳಡಿಗಳ ಕೆಲಸ ಮಾಡುವ ಸಮಯದಲ್ಲಿ ಕೆಲಸದ ಅವಕಾಶ ಸಿಗುತ್ತಿದೆ. ವಾಸ್ತವವಾಗಿ ದಲಿತರಿಗೆ ಉದ್ಯೋಗ ಅವಕಾಶವನ್ನು ನಿರಾಕರಿಸಲಾಗುತ್ತದೆ.

ಜಲ ಕೃಷಿ : ದಲಿತರು ಎದುರಿಸುತ್ತಿರುವ ಜಾತಿ ಆಧಾರಿತ ತಾರತಮ್ಯದ ಜೊತೆಗೆ ಜಾಗತೀಕರಣದ ಹೊಸ ಆರ್ಥಿಕ ನೀತಿಗಳು ನೀರು ಹೆಚ್ಚಿರುವಂಥ ಪ್ರದೇಶದಲ್ಲಿ ಕೂಡ ದಲಿತರಿಗೆ ನೀರಿನ ಹಕ್ಕನ್ನು ನಿರಾಕರಿಸಲಾಗಿದೆ. ೩೦೦೦ ಕಿ.ಮೀ. ಪೂರ್ವ ಕರಾವಳಿಯಲ್ಲಿ ಜಲಕೃಷಿಯ ಪ್ರಾರಂಭ

ಮುಂದಿನ ೫ ವರ್ಷಗಳಲ್ಲಿ ಭಾರತದಲ್ಲಿ ನೀರಿನ ಸರಬರಾಜು ವರ್ಷಕ್ಕೆ ೭೦೦ ಕ್ಯೂಬಿಕ್ ಕಿ.ಮೀ. ಆಗುತ್ತದೆ. ಆದರೆ ಬೇಡಿಕೆಯು ೧,೦೫೦ ಘಟಕಗಳಾಗಿರುತ್ತದೆ. ಕೊರತೆ ಮತ್ತು ಮುಖ್ಯವಾದ ಸಂಪನ್ಮೂಲದ ಮೇಲಿನ ಹಿಡಿತವು ಖಾತರಿ ಲಾಭದ ಮೂಲವಾಗುತ್ತದೆ. ಖಾಸಗಿ ಬಂಡವಾಳ ಹೂಡಿಕೆದಾರು ಸುರಕ್ಷಿತ ಕುಡಿಯುವ ನೀರಿನ ಪೂರೈಕೆಯು ಕೋಟಿ ಡಾಲರ್ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ ಎಂದು ಅಂದಾಜು ಮಾಡುತ್ತಿದ್ದಾರೆ. ಬರೀ ೧೦ ವರ್ಷಗಳ ಹಳೆಯದಾದ ಭಾರತದ ಪಾಕೇಟು ನೀರಿನ ಮಾರುಕಟ್ಟೆ ಕೈಗಾರಿಕೆಯು ೧೨ ಲಕ್ಷ ಕೋಟಿ ವಾರ್ಷಿಕ ನಿವ್ವಳ ಲಾಭ ಗಳಿಸುತ್ತಿದೆ.

ಬಡವರಿಗೆ ಕೊಳಕು ಕೆರೆ ಕುಂಟೆಗಳೇ ಗತಿ

ದಿಂದ ಸುಮಾರು ೨೦೦,೦೦೦ ಹೆಕ್ಟೇರ್ ಮೀನು ಅಥವಾ Prawon ಕೆರೆಗಳು ಶೇ ೬೦ ನೀರು ಮೂಲಗಳನ್ನು ಉಪಯೋಗಿಸುತ್ತಿದೆ. ಸುರಕ್ಷಿತ ಕುಡಿಯುವ ನೀರು ಮತ್ತು ನೀರಾವರಿಗೆ ನೀರನ್ನು ನಿರಾಕರಿಸಿದೆ. ನೀರು ಕೃಷಿಯಿಂದ ಕರಾವಳಿಯ ತೀರದ ನೀರು ಶೇ ೭೦ ಉಪ್ಪಾಗಿದೆ. ಶ್ರೀಮಂತ ಪ್ರಾಬಲ್ಯ ಜಾತಿಗಳು ಪಾಕೇಟು ನೀರನ್ನು ಅಥವಾ ಸೂಕ್ತ ಹಳ್ಳಿ ನೀರಿನ ತೊಟ್ಟಿಯ ನೀರನ್ನು ಬಳಸುತ್ತಾರೆ; ದಲಿತರನ್ನು ಉಪ್ಪಿನ ನೀರು ಅಥವಾ ಕಲುಷಿತ ನೀರು ಉಪಯೋಗಿಸುವಂತೆ ಮಾಡುತ್ತಾರೆ ಅಥವಾ ಹಳ್ಳಿಯಿಂದ ವಲಸೆ ಹೋಗುವಂತೆ ಮಾಡುತ್ತಾರೆ. ಯಾರು ಹಳ್ಳಿಯಲ್ಲಿ ಉಳಿಯುತ್ತಾರೊ ಅವರು ಮಲಿನ ನೀರಿನಿಂದ ಆರೋಗ್ಯದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. (ಜೆ.ಪಿ. ಮಂಗುಬಾಯ್, ಆಂಧ್ರಪ್ರದೇಶದಲ್ಲಿ ದಲಿತರ ಜೀವನದ ಮೇಲೆ ಜಾಗತೀಕರಣದ ಪ್ರಭಾವ - ೨೦೦೨)

ಕರಾಳ ನೀರಿನ ಕೊರತೆಯ ಭವಿಷ್ಯದ ಕಡೆ ಗಮನ

ಮುಂದಿನ ೫ ವರ್ಷಗಳಲ್ಲಿ ಭಾರತದಲ್ಲಿ ನೀರಿನ ಸರಬರಾಜು ವರ್ಷಕ್ಕೆ ೭೦೦ ಕ್ಯೂಬಿಕ್ ಕಿ.ಮೀ. ಆಗುತ್ತದೆ. ಆದರೆ ಬೇಡಿಕೆಯು ೧,೦೫೦ ಘಟಕಗಳಾಗಿರುತ್ತದೆ. ಕೊರತೆ ಮತ್ತು ಮುಖ್ಯವಾದ ಸಂಪನ್ಮೂಲದ ಮೇಲಿನ ಹಿಡಿತವು ಖಾತರಿ ಲಾಭದ ಮೂಲವಾಗುತ್ತದೆ. ಖಾಸಗಿ ಬಂಡವಾಳ ಹೂಡಿಕೆದಾರು ಸುರಕ್ಷಿತ ಕುಡಿಯುವ ನೀರಿನ ಪೂರೈಕೆಯು ಕೋಟಿ ಡಾಲರ್ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ ಎಂದು ಅಂದಾಜು ಮಾಡುತ್ತಿದ್ದಾರೆ. ಬರೀ ೧೦ ವರ್ಷಗಳ ಹಳೆಯದಾದ ಭಾರತದ ಪಾಕೇಟು ನೀರಿನ ಮಾರುಕಟ್ಟೆ ಕೈಗಾರಿಕೆಯು ೧೨ ಲಕ್ಷ ಕೋಟಿ ವಾರ್ಷಿಕ ನಿವ್ವಳ ಲಾಭ ಗಳಿಸುತ್ತಿದೆ. ಕೋಕೋ ಕೋಲಾದ 'ಕಿನ್ಲೆ', ಪೆಪ್ಸಿಯ 'ಆಕ್ವಾಫಿನ' ಮತ್ತು ಪಾರ್ಲೆಯ 'ಬಿಸ್ಲೆರಿ' ಅಂದಾಜು ೪ ಲಕ್ಷ ಕೋಟಿ ವಾರ್ಷಿಕ ನಿವ್ವಳ ಲಾಭಗಳಿಸುತ್ತಿದೆ. (ವಂದನ ಶಿವ, ಭಾರತ ಮತ್ತು ತೃತೀಯ ಪ್ರಪಂಚದ ನೀರು ಹಕ್ಕು ಮತ್ತು ಮೀನುಗಾರಿಕೆಯನ್ನು ಹಿಡಿತದಲ್ಲಿಡಲು ಹೊರಟಿರುವ ಮೋನ್ಸಾನ್ಟೋ)

ಭಾರತ ಸರ್ಕಾರವು ೧೯೬೨ ಮತ್ತು ೧೯೭೮ರ ನಡುವೆ ಸುಮಾರು ೧.೨ ಲಕ್ಷ ಕೋಟಿ ಡಾಲರ್‌ನಷ್ಟು ಹಣವನ್ನು ವಿವಿಧ ಜಲ ಯೋಜನೆಗಳ ಮೇಲೆ ಖರ್ಚು ಮಾಡಿದೆ; ಒಂದೆಡೆ ವಿಶ್ವಬ್ಯಾಂಕ್ ಭಾರತದಲ್ಲಿ ೬೦೦ ದಶಲಕ್ಷ ಡಾಲರ್ ಹಣವನ್ನು ಖರ್ಚುಮಾಡಿದೆ. ಖಾಸಗಿ ಹೂಡಿಕೆದಾರರು ಸಾರ್ವಜನಿಕ ನೀರು ಸರಬರಾಜು ಸಾರ್ವಜನಿಕ ಹಣವನ್ನು, ಖಾಸಗಿ ನೀರು ಸಾರ್ವಭೌಮತ್ವವನ್ನು ಸ್ಥಾಪಿಸಲು ಉಪಯೋಗಿಸುತ್ತಿದ್ದಾರೆ.

ಈ ಪರಿಸ್ಥಿತಿಯಲ್ಲಿ ಜಾತಿ ಆಧಾರಿತ ತಾರತಮ್ಯದ ಆಧಾರದ ಮೇಲೆ ದಲಿತರಿಗೆ ನೀರಿನ ಹಕ್ಕನ್ನು ನಿರಾಕರಿಸಲಾಗಿತ್ತು. ಈಗ ಮೂಲ ಜೀವ ಕೊಡುವ ವಸ್ತುವಿಗೆ ಹಣ ಕೊಡಲಾಗದೆ ಮತ್ತಷ್ಟು ತೀವ್ರವಾಗಿ ನೀರಿನ ಉಪಯೋಗವನ್ನು ನಿರಾಕರಿಸಲಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಹೆಚ್ಚುತ್ತಿರುವ ಪರಿಮಿತ ಜಲ ಸರಬರಾಜುವಿನ ಮೇಲಿನ ಪ್ರಾಬಲ್ಯ ಜಾತಿಗಳ ಹಕ್ಕು ಪ್ರತಿಪಾದನೆ ದೇಶದಲ್ಲಿ ಜಾತಿ ಭೇದವನ್ನು ಪುನರ್ ನಿರ್ಮಿಸುತ್ತಿದೆ. ಹಾಗಾಗಿ ಕಡಿಮೆಯಾಗುತ್ತಿರುವ ನೈಸರ್ಗಿಕ ಸಂಪನ್ಮೂಲದ ಮೇಲಿನ ಜಗಳವು ದಲಿತರ ಜೀವನದ ರಕ್ಷಣೆ ಮತ್ತು ಜೀವನೋಪಾಯವನ್ನು ಬೆದರಿಸುತ್ತದೆ.

ಸಂದಿಗ್ಧ ಪ್ರಶ್ನೆಗಳು

★ ಜೀವದ ಅವಶ್ಯಕವಾದ ನೀರನ್ನು ಹೇಗೆ ವಾಣಿಜ್ಯದ ವಸ್ತುವಾಗಿ ಮಾರ್ಪಡಿಸಿ ಬಡವರಿಗೆ ಅದರಲ್ಲೂ ಕಡಿಮೆ ಆದಾಯದ ವರ್ಗಗಳಾದ ದಲಿತರಿಗೆ ದೊರಕದಂತೆ ಮಾಡಲಾಗಿದೆ? ಈ ಜಲ ವಾಣಿಜ್ಯೀಕರಣವು ಎಲ್ಲಾ ಸ್ವಾಭಾವಿಕ ನ್ಯಾಯದ ನಿಯಮಗಳು ಉಲ್ಲಂಘನೆ ಮಾಡಿದಂತಾಗುವುದಿಲ್ಲವೆ?

★ ಲಾಭಾಧಾರಿತ ತಾಂತ್ರಿಕತೆಯಿಂದ ಕೂಡಿದ ವ್ಯವಸಾಯ ಯೋಜನೆಗಳು ಭೂಮಿ ರಹಿತರಲ್ಲಿ ಬಹುಸಂಖ್ಯಾತರಾದ ದಲಿತರಿಗೆ ನೀರನ್ನು ನಿರಾಕರಿಸಲು ಮಾನವತೆಯ ಮೇಲಿನ ಈ ಕ್ರೂರ ಮತ್ತು ಭೀಕರ ಕೃತ್ಯವನ್ನು ಏನೆಂದು ಕರೆಯಬೇಕು?

★ ನಾಗರಿಕ ಸಮಾಜ ಎದ್ದು ವಿಶ್ವಬ್ಯಾಂಕನ್ನು ಒಂದೇ ಧ್ವನಿಯಿಂದ ಪ್ರತಿಭಟಿಸಿ 'ಸಾಕು ಎಂದರೆ ಸಾಕು' ಎಂದು ಹೇಳಬಾರದೆ?

★ ತಡವಾಗುವುದಕ್ಕಿಂತ ಮೊದಲೆ, ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ಅದರ ಸಮೂಹಗಳ ಮೇಲೆ ಆಹಾರ, ನೀರು, ಗಾಳಿ...ಗಳ ಮೇಲಿನ ಹಿಡಿತದ ಮೇಲೆ ಅಂತರರಾಷ್ಟ್ರೀಯ ಸಮುದಾಯವು ಕಡಿವಾಣ ಹಾಕಬಾರದೆ?

★ ತಮ್ಮ ಜೀವನೋಪಾಯಕ್ಕೆ ಭೂಮಿಯ ಮೇಲೆ ಆಧಾರ ಪಡೆದಂತಹ ಜನರಲ್ಲಿ ಬಹುಸಂಖ್ಯಾತರಾಗಿರುವ ದಲಿತರು ಮುಂದಾಳತ್ವವನ್ನು ತೆಗೆದುಕೊಂಡು ಜಲ ಮೂಲಗಳ ಖಾಸಗೀಕರಣಕ್ಕೆ ಅಂತ್ಯವಾಡಬಾರದೆ?

ಮಹಿಳೆಯರ ಹಕ್ಕುಗಳಿಗೆ ಇನ್ನೆಲ್ಲಿ ದಾರಿ

ಭಾರತದ ಗ್ರಾಮೀಣ ಭಾಗಗಳಲ್ಲಿ ದಲಿತ ಮಹಿಳೆಯರಿಗೆ ವಿವಿಧ ಕರ್ಮಗಳು ಮೀಸಲಿಟ್ಟಂತಿದೆ. ದ್ರೌಪದಿಯ ಕಾಲದಿಂದಲೂ ನಮ್ಮ ಮಹಿಳೆಯರನ್ನು ಸಾರ್ವಜನಿಕವಾಗಿ ನಿರ್ವಸ್ತ್ರಗೊಳಿಸುವುದು ಮತ್ತು ಅವಮಾನಗೊಳಿಸುವಂತಹ ಜನ್ಯ ವೈರಿಕೃತ್ಯಗಳನ್ನು ಒಳಪಡಿಸಲಾಗುತ್ತಿದೆ. ವೈಯಕ್ತಿಕವಾಗಿ, ಸಾರ್ವಜನಿಕವಾಗಿ ಮತ್ತು ರಾಜಕೀಯವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ದಲಿತ ಮಹಿಳೆಯರಿಗೆ ಇದು ಸಹಜ ಅನುಭವವಾಗಿದೆ; ಆದರೆ ಆಶ್ಚರ್ಯಕರವೆಂದರೆ ಇದನ್ನು ನಮ್ಮ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲೂ ವಿನೋದ ಹಿಂಸೆಯಾಗಿ ವಿಸ್ತರಿಸಿರುವುದನ್ನು ಕಾಣಬಹುದು'

ಶ್ರೀ ಕೆ. ಆರ್. ನಾರಾಯಣನ್, ಮಾಜಿ ರಾಷ್ಟ್ರಪತಿಗಳು

ದಲಿತರು, ಶೈಕ್ಷಣಿಕವಾಗಿ, ಸರ್ಕಾರಿ ಉದ್ಯೋಗದಲ್ಲಿ ಮತ್ತು ಆರ್ಥಿಕವಾಗಿ ಅಭಿವೃದ್ಧಿಪೊಂದಲು ಮೀಸಲಾತಿ ನೀತಿ ಮತ್ತು ಸರ್ಕಾರದ ವಿಶೇಷ ಅಭಿವೃದ್ಧಿ ಯೋಜನೆಗಳೆ ಕಾರಣವಾಗಿವೆ. ಆದರೆ ೧೯೯೧ರ ಹೊಸ ಆರ್ಥಿಕ ನೀತಿಯು ಸಾಮಾಜಿಕ ಮತ್ತು ಆರ್ಥಿಕ ಆಡಳಿತದಲ್ಲಿ ಸರ್ಕಾರದ ಪಾತ್ರವನ್ನು ಕಡಿಮೆಗೊಳಿಸಿದೆ.

ಆದರೆ ಆತಂಕವೆಂದರೆ ಹೊಸ ಆರ್ಥಿಕ ನೀತಿಯ ಹೊರೆ ಬಡಜನರ ಮೇಲೆ ಬಿದ್ದಿದೆ. ಆ ಬಡಜನರೊಳಗೆ ಹೆಚ್ಚಿನದಾಗಿ ದಲಿತರೆ ಇದ್ದಾರೆ. ಸಂಶಯವಿಲ್ಲದೆ, ಜಾಗತೀಕರಣದ ಬದಲಾಗುತ್ತಿರುವ ನೀತಿಗಳನ್ನು ದಲಿತ ಮಹಿಳೆಯರು ಸಹಿಸಬೇಕಾಗಿದೆ. ಮಹಿಳೆ ದುಡಿಯುವ ವರ್ಗದಲ್ಲಿ ಇವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು ಅವರ ಕಡಿಮೆ ದರ್ಜೆಯ ಜೀವನ ಮಟ್ಟ, ಆರೋಗ್ಯ, ವಿದ್ಯೆಯು ಅವರನ್ನು ಪೀಡಿಸುತ್ತಿದೆ. ಬದಲಾಗುತ್ತಿರುವ ಕೃಷಿನೀತಿಗಳು ಮತ್ತು ಸಮಾಜ ಸೇವೆಯಲ್ಲಿ ಕಡಿಮೆಯಾಗುತ್ತಿರುವ ಸರ್ಕಾರದ ವೆಚ್ಚವು ನೇರವಾಗಿ ದಲಿತ ಮಹಿಳೆಯರ ಆರೋಗ್ಯ, ಶಿಕ್ಷಣ, ರಕ್ಷಣೆ, ಅಭಿವೃದ್ಧಿ ಮತ್ತು ಜೀವನಾಧಾರದ ಮೇಲೆ ಪ್ರಭಾವ ಬೀರುತ್ತಿದೆ.

ದಲಿತ ಮಹಿಳೆಯ ಆರ್ಥಿಕ ಶೋಷಣೆ

ಭಾರತ ಸಮಾಜದಲ್ಲಿ ದಲಿತ ಮಹಿಳೆಯರು ಆರ್ಥಿಕವಾಗಿ ಅತ್ಯಂತ ಶೋಷಣೆಗೊಳಪಟ್ಟಿದ್ದಾರೆ.

★ ೧೯೯೧ರಲ್ಲಿ ಗ್ರಾಮೀಣ ಭಾರತದಲ್ಲಿ ಶೇ ೭೧ ದಲಿತ ಮಹಿಳೆಯರು ಕೃಷಿ ಕಾರ್ಮಿಕರಾಗಿದ್ದರು. ಶೇ ೧೯ ಮಾತ್ರ ಸಾಗುವಳಿದಾರರಾಗಿದ್ದರು. ವ್ಯತ್ಯಾಸವೆಂದರೆ ಶೇ ೪೩ ಮಾತ್ರ ದಲಿತೇತರ ಮಹಿಳೆಯರು ಕೃಷಿ ಕಾರ್ಮಿಕರು ಮತ್ತು ಶೇ ೪೨ ಸಾಗುವಳಿದಾರರು. ಕೃಷಿಯು ಕಾಲೋಚಿತವಾಗಿದ್ದು ಅದು ಕೆಲವು ಸಮಯದಲ್ಲಿ ಮಾತ್ರ ಲಭ್ಯ. ಆಗಾಗಿ ಬೇರೆ ಸಮಯದಲ್ಲಿ ಕೆಲಸವಿಲ್ಲ ಮತ್ತು ಆದಾಯವಿಲ್ಲ.

★ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ದಲಿತ ಮಹಿಳೆಯರಿಗೆ ನಿರುದ್ಯೋಗವು ದಲಿತೇತರ ಮಹಿಳೆಯರ ನಿರುದ್ಯೋಗಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದೆ.

★ ಇತ್ತೀಚಿನ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಪ್ರಕಾರ ಪ್ರಸ್ತುತ ದಿನ ಆಧಾರಿತ ದಲಿತ ಮಹಿಳೆಯರ ನಿರುದ್ಯೋಗದ ಪ್ರಮಾಣವು ಶೇ ೪೦. ದಲಿತೇತರ ಮಹಿಳೆಯರ ನಿರುದ್ಯೋಗ ಪ್ರಮಾಣ ಶೇ ೦.೯೭ ಮಾತ್ರ.

★ ದಲಿತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಕೆಳದರ್ಜೆಯ ಕೆಲಸ ಎಂದು ಪರಿಗಣಿಸಲ್ಪಟ್ಟು ಸ್ವಚ್ಛವಲ್ಲದ ಕಸುಬುಗಳಲ್ಲಿ ತೊಡಗಿರುತ್ತಾರೆ. ಅವರು ಇಂತಹ ಕಸುಬುಗಳನ್ನು ಮಾಡುವುದರಿಂದ ಅವರು ಸಾಮಾಜಿಕವಾಗಿ ಮತ್ತು ಔದ್ಯೋಗಿಕವಾಗಿ ತಾರತಮ್ಯವನ್ನು ಎದುರಿಸಬೇಕಾಗುತ್ತದೆ. ಉದಾ: ಗುಡಿಸುವ ಜನಾಂಗಕ್ಕೆ ಸೇರುವ ದಲಿತ ಮಹಿಳೆಯರಿಗೆ ಅಡುಗೆ ಮಾಡುವ ಕೆಲಸ ಮತ್ತು ಮನೆ ಕೆಲಸ ದೊರಕುವುದಿಲ್ಲ.

ಬಟ್ಟಲು ನೀರಿಗೆ ಎಂಥೆಂಥಾ ಬವಣೆ

ಅನಕ್ಷರತೆ ಮತ್ತು ಶಿಕ್ಷಣ : ಶೈಕ್ಷಣಿಕ ಅಭಿವೃದ್ಧಿಯ ಕೊರತೆ ದಲಿತ ಮಹಿಳೆಯ ಮುಖ್ಯ ತೊಂದರೆಯಾಗಿದೆ ಮತ್ತು ದಲಿತ ಪುರುಷ ಮತ್ತು ದಲಿತೇತರ ಜೊತೆ ಹೋಲಿಸಿದರೆ ಅವರಿಗೆ ಇದು ಪ್ರತಿಕ್ರಿಯೆ.

★ ೧೯೯೧ರಲ್ಲಿ ದಲಿತ ಮಹಿಳೆಯರ ಸಾಕ್ಷರತೆ ಪ್ರಮಾಣ ಶೇ ೨೩.೭೬. ಆದರೆ ದಲಿತೇತರ ಪ್ರಮಾಣ ಶೇ ೩೯.೨೯.

★ ನಗರ ಪ್ರದೇಶದಲ್ಲಿ ದಲಿತ ಮಹಿಳೆಯರ ಸಾಕ್ಷರತಾ ಪ್ರಮಾಣ ಅತ್ಯಂತ ಕಡಿಮೆ ಅಂದರೆ ಶೇ ೧೯.೪೬ ಆಗಿದೆ. ಸಾಮಾನ್ಯ ಮಹಿಳೆ ಜನಸಂಖ್ಯೆಗೆ ಹೋಲಿಸಿದರೆ ಅದು ಹೆಚ್ಚಾಗಿದೆ. ಅಂದರೆ ಶೇ ೩೦.೬೨.

★ ರಾಜ್ಯಮಟ್ಟದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದಲಿತ ಮಹಿಳೆ ಸಾಕ್ಷರತಾ ಪ್ರಮಾಣ ಅಂತರರಾಜ್ಯ ಅಸಮಾನತೆಯನ್ನು ಕಾಣಬಹುದು. ದಲಿತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ವಾಸಿಸುವ ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತಾ ಪ್ರಮಾಣ ಬಿಹಾರದಲ್ಲಿ ಅತ್ಯಂತ ಕಡಿಮೆಯಾಗಿದೆ. (ಶೇ ೫.೫೪) ರಾಜಸ್ಥಾನ ಶೇ ೪.೭೩, ಉತ್ತರ ಪ್ರದೇಶ ಶೇ ೮.೪೭.

★ ದಲಿತ ಹೆಣ್ಣುಮಕ್ಕಳ ಮತ್ತೊಂದು ತೊಂದರೆಯೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಂದ ಮಧ್ಯದಲ್ಲೇ ಬಿಟ್ಟುಬಿಡುವುದು. ಅದು ದಲಿತ ಹುಡುಗರು ಮತ್ತು ದಲಿತೇತರ ಹೆಣ್ಣುಮಕ್ಕಳಿಗೆ ಹೋಲಿಸಿದರೆ ಹೆಚ್ಚಿನ ಪ್ರಮಾಣದಲ್ಲಿದೆ. ೧೯೯೦-೯೧ರಲ್ಲಿ ಪ್ರಾಥಮಿಕ ಶಾಲೆ ಬಿಟ್ಟ ದಲಿತ ಮಕ್ಕಳ ಸಂಖ್ಯೆ ಶೇ ೫೩.೯೬.

ದಲಿತ ಹೆಣ್ಣಿನ ಕಡಿಮೆ ಶಿಕ್ಷಣಕ್ಕೆ ದಲಿತ ಹೆಣ್ಣುಮಕ್ಕಳಿಗೆ ಶೈಕ್ಷಣಿಕ ಅವಕಾಶ ನಿರಾಕರಣೆ ಜಾತಿ ಮತ್ತು ಲಿಂಗ ತಾರತಮ್ಯ ಮತ್ತು ಬಡತನ ಮುಖ್ಯವಾದ ಕಾರಣಗಳಾಗಿವೆ. ಸಮಾಜದಲ್ಲಿ ಇಂದಿಗೂ ಕೂಡ ಗಂಡು ಮಗುವಿಗೆ ಹೋಲಿಸಿದರೆ ಹೆಣ್ಣಿನ ಶಿಕ್ಷಣ ಮುಖ್ಯವಲ್ಲ. ಅದರಲ್ಲೂ ದಲಿತ ಹೆಣ್ಣು ಮಗುವಿನದು ಎಂದೂ ಭಾವಿಸದೆ.

ಸಾಮಾಜಿಕ-ಧಾರ್ಮಿಕ ಆಚರಣೆಗಳು ಮತ್ತು ಹಿಂಸೆಯ ಬಲಿಪಶುಗಳು : ಭಾರತದ ಜಾತಿ ತುಂಬಿದ ಸಮಾಜದಲ್ಲಿ ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳನ್ನು ಕಾಣಬಹುದು. ಇವುಗಳಿಗೆ ದಲಿತ ಮಹಿಳೆ ಬಲಿಪಶುಗಳಾಗಿದ್ದಾರೆ. ದಲಿತ ಹುಡುಗಿಯನ್ನು ಗ್ರಾಮದ ದೇವತೆಗೆ ತಮ್ಮ ತಂದೆ- ತಾಯಿಯರು ಮದುವೆ ಮಾಡಿಸಿದ ನಂತರ ಅವಳನ್ನು ದೇವದಾಸಿ ಪದ್ಧತಿ ಮತ್ತು ಜೋಗತಿ ಪದ್ಧತಿಗಳನ್ನು ಒಳಗೊಂಡಿದೆ. ಪ.ಜಾ/ಪ.ಪಂ ಆಯೋಗದ ೧೯೮೬ರ ೨೮ನೇ ವರದಿಯ ಪ್ರಕಾರ ಆಂಧ್ರಪ್ರದೇಶದ ನಿಜಾಮಬಾದ್ ಜಿಲ್ಲೆಯಲ್ಲಿ ದಲಿತ ವರ್ಗಕ್ಕೆ ಸೇರಿದ ೧೦,೦೦೦ ಜೋಗಿತಿಯರಿದ್ದಾರೆ. ೧೯೮೭ ಜನವರಿಯ ಅಂತ್ಯಕ್ಕೆ ಆಂಧ್ರಪ್ರದೇಶದ ೧೨ ಜಿಲ್ಲೆಗಳಲ್ಲಿ ೧೫,೦೦೦ ಜೋಗಿಣಿಯರನ್ನು ಪತ್ತೆ ಹಚ್ಚಲಾಯಿತು. ಜೋಗಿತಿಯಲ್ಲಿ ಶೇ ೮೦ ದಲಿತ ಹುಡುಗಿಯರು ಮತ್ತು ಮಹಿಳೆಯರು ಇರುವುದನ್ನು ಕೂಡ ಪತ್ತೆ ಹಚ್ಚಲಾಯಿತು.

ದಲಿತ ಮಹಿಳೆಯರನ್ನು ಅತಿರೇಕ ಹಿಂಸೆಗೂ ಕೂಡ ಒಳಪಡಿಸಲಾಗಿದೆ. ಆಶ್ಚರ್ಯಕರವಾಗಿ ಭಾರತದ ಜಾತಿ ಮತ್ತು ಲಿಂಗ ಏಣಿಶ್ರೇಣಿಯಲ್ಲಿ ದಲಿತ ಮಹಿಳೆಯರನ್ನು ತಳಭಾಗದಲ್ಲಿರಿಸಿರುವುದನ್ನು ಕಾಣಬಹುದು. ದಲಿತ ಮಹಿಳೆಯ ಜಾತಿ ಮತ್ತು ಲಿಂಗ ಸ್ಥಾನಮಾನ ಅವಳ ಮೇಲಾಗುತ್ತಿರುವ ಹಿಂಸೆಗೆ ಕಾರಣವಾಗುತ್ತದೆ. ದಲಿತ ಮಹಿಳೆಯರ ಮೇಲಿನ ಹಿಂಸೆ ದೈಹಿಕ, ಲೈಂಗಿಕ ಮತ್ತು ಮಾನಸಿಕ ಸಮಗ್ರತೆಯನ್ನು ನಿರಾಕರಿಸುತ್ತಿದೆ ಮತ್ತು ಅವಳ ಮೇಲಾಗುತ್ತಿರುವ ಹಿಂಸೆಗೆ ಮತ್ತು ತಾರತಮ್ಯಕ್ಕೆ ಪುರುಷ ಪ್ರಧಾನ ಸಮಾಜದಲ್ಲಿ ಅವಳು ಶಕ್ತಿಯಲ್ಲಿ ಪುರುಷನಿಗೆ ಅಧೀನ ಮತ್ತು ಅವಳ ಸಮುದಾಯಕ್ಕೆ ವಿರುದ್ಧ ಎನ್ನುವ ನೀತಿಯಲ್ಲಿ ಅಡಗಿದೆ.

೧೯೯೦ರಲ್ಲಿ ವಾರ್ಷಿಕ ಸರಾಸರಿ ೬೦೦ ರಿಂದ ೮೦೦ ದಲಿತ ಮಹಿಳೆಯರು ಲೈಂಗಿಕ ಹಲ್ಲೆಗೆ ಒಳಗಾಗಿದ್ದಾರೆ. ಇತ್ತೀಚೆಗೆ ಸಂಸತ್ತಿನಲ್ಲಿ ಪ್ರಸ್ತುತಪಡಿಸಿದ ರಾಷ್ಟ್ರೀಯ ಪಜಾ/ಪಪಂ ಆಯೋಗದ ವರದಿಯಂತೆ ೨೦೦೦ದಲ್ಲಿ ದಲಿತರು ಮೇಲಿನ ದೌರ್ಜನ್ಯದ ಪ್ರಕರಣಗಳ ದಾಖಲಾತಿ ೨೩,೭೪೨ಕ್ಕೆ ನಿಂತಿದೆ. (೧,೦೩೪ ಅತ್ಯಾಚಾರದ ಪ್ರಕರಣಗಳು) ಅಮ್ನೆಸ್ಟಿ ಇಂಡಿಯಾದ ಪ್ರಕಾರ ಅದರಲ್ಲಿ ದಲಿತ ಮಹಿಳೆಯರು ಮುಖ್ಯ ಬಲಿಪಶುಗಳಾಗಿದ್ದಾರೆ. ಅವರ ಸಂಖ್ಯೆ ಶೇ ೭೫.

ಬಡತನದ ಪ್ರಮಾಣ

ಹೆಚ್ಚಿನ ದಲಿತ ಮಹಿಳೆಯರು ತಮ್ಮ ಜೀವನಾಧಾರಕ್ಕೆ ದಿನಗೂಲಿಯ ಮೇಲೆ ಅವಲಂಬಿತರಾಗಿದ್ದಾರೆ. ಅವರಿಗೆ ಆರ್ಥಿಕ ತಳಹದಿ ಇಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ನಿರುದ್ಯೋಗವಿದೆ. ಇದನ್ನು ಅವರ ಕಡಿಮೆ ಜೀವನಮಟ್ಟ ಮತ್ತು ಹೆಚ್ಚು ಬಡತನದ ಪ್ರಮಾಣದ ಮೂಲಕ ಕಾಣಬಹುದು.

★ ೧೯೯೩-೯೪ ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ ೫೧ ಮತ್ತು ನಗರ ಪ್ರದೇಶದಲ್ಲಿ ಶೇ ೫೬.೪೮ ದಲಿತರು

ಬಡತನ ರೇಖೆಗಿಂತ ಕೆಳಗಿದ್ದಾರೆ. ಅಂದರೆ, ಅರ್ಧದಷ್ಟು ದಲಿತರಿಗೆ ತಿನ್ನುವಷ್ಟು ಆಹಾರ ಸಿಗದೆ ಪೌಷ್ಟಿಕಾಂಶದ ಕೊರತೆಯಿಂದ ಬಳಲಿದ್ದಾರೆ. ದಲಿತೇತರ ವಿಚಾರಕ್ಕೆ ಬಂದರೆ ಗ್ರಾಮೀಣ ಪ್ರದೇಶದಲ್ಲಿ ಶೇ ೩೩.೯೮ ಮತ್ತು ನಗರ ಪ್ರದೇಶದಲ್ಲಿ ಶೇ ೩೪.೩೭ ಬಡತನವನ್ನು ಕಾಣಬಹುದು. ದಲಿತರಿಗೆ ಹೋಲಿಸಿದರೆ ಅದು ಕಡಿಮೆ.

★ ಗ್ರಾಮೀಣ ಪ್ರದೇಶಗಳಲ್ಲಿ ಬಡತನದ ಪ್ರಮಾಣವು ಕೃಷಿ ಕಾರ್ಮಿಕರಲ್ಲಿ ಹೆಚ್ಚಿನದಾಗಿರುವುದನ್ನು ಕಾಣಬಹುದು ಮತ್ತು ನಗರ ಪ್ರದೇಶದಲ್ಲಿ ದಿನಗೂಲಿ ಕಾರ್ಮಿಕರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಡತನವನ್ನು ಕಾಣಬಹುದು. ಅದರಲ್ಲಿ ಹೆಚ್ಚಿನದಾಗಿ ದಲಿತ ಮಹಿಳೆಯರು ಗ್ರಾಮೀಣ ಕೃಷಿ ಕಾರ್ಮಿಕರು ಶೇ ೬೦ ನಗರದಲ್ಲಿ ದಿನಗೂಲಿ ಕಾರ್ಮಿಕರು ಶೇ ೭೩.

★ ದಲಿತೇತರರಿಗೆ ಹೋಲಿಸಿದರೆ ದಲಿತರ ಕಳಪೆ ಮಟ್ಟದ ಗೃಹಗಳು ಮತ್ತು ಮೂಲಭೂತ ಸೌಲಭ್ಯಗಳು ಮನೆಗಳನ್ನು ನಿರ್ವಹಿಸುವ ಮತ್ತು ತಮ್ಮ ಕುಟುಂಬವನ್ನು ಪೋಷಿಸುವ ಸಲುವಾಗಿ ಕೆಲಸಮಾಡುವ ದಲಿತ ಮಹಿಳೆಯರ ಮೇಲೆ ಪರಿಣಾಮ ಬೀರಿದೆ. ಶೇ ೭೦ ರಿಂದ ಶೇ ೭೫ ದಲಿತ ಕುಟುಂಬಗಳು ಸ್ತ್ರೀ ಯಜಮಾನಿಕೆಯಲ್ಲಿರುತ್ತವೆ. ಅದಕ್ಕೆ ಕಾರಣ ಗಂಡ ಅವರನ್ನು ತೊರೆದಿರುವುದು ಅಥವಾ ಅವನ ಆದಾಯವನ್ನು ಮದ್ಯಪಾನಕ್ಕೆ ಉಪಯೋಗಿಸುವುದರಿಂದ ಈ ಪರಿಸ್ಥಿತಿಯು ಮನೆಯ ಜವಾಬ್ದಾರಿಯನ್ನು ಮಹಿಳೆಯ ಅಲ್ಪ ದುಡಿಮೆಯ ಮೇಲೆ ಅವಲಂಬಿಸಿ ಅವಳ ಹೆಗಲಿಗೆ ಮನೆಯ ಜವಾಬ್ದಾರಿ ಬೀಳುತ್ತದೆ. (ಭಾರತದಲ್ಲಿ ಮಹಿಳೆಯರ ಮೇಲೆ ಜಾತಿ ಮತ್ತು ಲಿಂಗ ಆಧಾರಿತ ಹಿಂಸೆ, ಜೋಗ್‌ದಂಡ್ ಪಿ.ಜಿ. (ಸಂ), ಭಾರತದಲ್ಲಿ ದಲಿತ ಮಹಿಳೆ ವಿಷಯಗಳು ಮತ್ತು ದೃಷ್ಟಿಕೋನಗಳು ೧೯೯೫)

ದಲಿತ ಮಹಿಳೆಯರ ಅನಾರೋಗ್ಯಕ್ಕೆ ಅವರ ಕಡಿಮೆ ಜೀವನಮಟ್ಟ ಮತ್ತು ಕಷ್ಟದ ಕೆಲಸಗಳಲ್ಲಿ ದುಡಿಮೆ ಕಾರಣವಾಗಿದೆ. ಶೇ ೫೬ ದಲಿತ ಮಹಿಳೆಯರು ಒಂದು ರೀತಿಯ ರಕ್ತಹೀನತೆಯಿಂದ ಪೀಡಿತರಾಗಿದ್ದಾರೆ. ಅದೆ ದಲಿತೇತರ ಮಹಿಳೆಯರಲ್ಲಿ ಶೇ ೪೯.೧ ಮಹಿಳೆಯರು ರಕ್ತಹೀನತೆಯಿಂದ ನರಳುತ್ತಿದ್ದಾರೆ. ಹಾಗೆಯೆ ದಲಿತೇತರ ಮಹಿಳೆಯರಿಗೆ ಹೋಲಿಸಿದರೆ ಹೆಚ್ಚಿನ ಶೇಕಡಾವಾರು ದಲಿತ ಮಹಿಳೆಯರು ಪೌಷ್ಟಿಕ ಆಹಾರದಿಂದ ವಂಚಿತರಾಗಿದ್ದಾರೆ. (೨ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ೧೯೯೮-೯೯)

ದಲಿತ ಮಹಿಳೆಯರ ಮೇಲೆ ಹೊಸ ಆರ್ಥಿಕ ನೀತಿಯ ಪರಿಣಾಮ

ಹೊಸ ಆರ್ಥಿಕ ನೀತಿಯ ನಕಾರಾತ್ಮಕ ಪರಿಣಾಮಗಳನ್ನು ಈಗಾಗಲೇ ದಲಿತ ಮಹಿಳೆಯರ ಮೇಲೆ ಬೀರಿರುವುದನ್ನು ಕಾಣಬಹುದು.

★ ೧೯೯೧ರಲ್ಲಿ ಆರ್ಥಿಕ ಸುಧಾರಣೆಗಳ ಕಾರ್ಯಗತದ ನಂತರ, ನಿರುದ್ಯೋಗ ಮತ್ತು ಬಡತನದ ಮಟ್ಟ ಹೆಚ್ಚಾಯಿತು. ೧೯೮೯ರಲ್ಲಿದ್ದ ಶೇ ೩೮ ಬಡತನದ ಶೇಕಡಾವಾರು, ೧೯೯೨ರಲ್ಲಿ ಶೇ ೪೮ ಕ್ಕೆ ಏರಿತು. ಇದರಲ್ಲಿ ಹೆಚ್ಚಿನ ಸಂಖ್ಯೆ ದಲಿತರು ಮತ್ತು ದಲಿತ ಮಹಿಳೆಯರು; ಈ ಕ್ರಿಯೆಯಿಂದ ಬಹಳಷ್ಟು ನಷ್ಟವನ್ನು ಅನುಭವಿಸಿದವರು ದಲಿತರೆ.

ಹೆಚ್ಚಿನ ಸಂಖ್ಯೆಯಲ್ಲಿ ಇವರು ಕೌಶಲ್ಯರಹಿತ ಕೆಲಸಗಳಲ್ಲಿ ತೊಡಗಿರುವುದರಿಂದ ದಲಿತ ಮಹಿಳೆಯರ ದುಡಿಮೆಯನ್ನು ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ, ಕಾರ್ಮಿಕರ ನಿರ್ದಿಷ್ಟ ಮಾನವನ್ನು ಭಗ್ನಗೊಳಿಸುವ ಮುಖಾಂತರ ಕಾರ್ಮಿಕ ಕಾನೂನುಗಳಿಂದ ಕಡಿಮೆಗೊಳಿಸುತ್ತಿರುವ ದುಡಿಮೆ ದಿನಗಳ ಮುಖಾಂತರ, ಅತ್ಯಂತ ಕಡಿಮೆ ಕೂಲಿಗೆ ಇವರು ಸಿಗುವಂತಾಗಿದೆ. ಅಗ್ಗದ ಕೆಲಸವೆಂದರೆ ಕಡಿಮೆ ಸಂಬಳ ಮತ್ತು ರಕ್ಷಣೆ ಇಲ್ಲದ ಕೆಲಸವೆಂದರೆ ಹೆಚ್ಚಿನ ಶೋಷಣೆ ಎಂದರ್ಥ. ಇದರ ಪ್ರತಿಫಲವಾಗಿ ದಲಿತ ಮಹಿಳೆಯರು ಮಾರುಕಟ್ಟೆ ಒತ್ತಡಗಳಿಗೆ ದುರ್ದೈವಿ ಬಲಿಪಶುಗಳಾಗುತ್ತಿದ್ದಾರೆ.

ದಲಿತ ಮಹಿಳೆಯು ಸಾರ್ವಜನಿಕ ಕ್ಷೇತ್ರದಲ್ಲಿ ಕಾರ್ಮಿಕರಾಗಿ ದುಡಿಯುವುದಲ್ಲದೆ ಅವರು ಮನೆಯ ಕೆಲಸವನ್ನು ಮಾಡಬೇಕಾಗುತ್ತದೆ. ಕಡಿಮೆಯಾಗುತ್ತಿರುವ ಸಾಮಾನ್ಯ ಆಸ್ತಿ ಸಂಪನ್ಮೂಲಗಳು ಅಂದರೆ ನೀರು. ಹೀಗೆ ಗ್ರಾಮೀಣ ಮಹಿಳೆಯರು ನೀರಿಗಾಗಿ ಬಿಂದಿಗೆ ಹಿಡಿದು ಮೈಲುಗಟ್ಟಲೆ ನಡೆಯಬೇಕಾಗುತ್ತದೆಯಲ್ಲದೆ, ಅವರನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸುತ್ತದೆ.

'ಆಂಧ್ರಾದ ಮೆಹಬೂಬ್ ನಗರ ಜಿಲ್ಲೆಯ ದೂಪ್ಪಲ್ಲಿ ಗ್ರಾಮದಲ್ಲಿ ರತ್ನಮ್ಮ (೪೨ ವರ್ಷ) ಮತ್ತು ಲತೀಫಮ್ಮ (೪೦ ವರ್ಷ) ಕ್ರಮವಾಗಿ ಅಕ್ಟೋಬರ್ ೬ ಮತ್ತು ೭ ರಂದು ಹಸಿವಿನಿಂದ ಸತ್ತರು. ಆ ಪ್ರದೇಶದಲ್ಲಿ ನಿರಂತರ ಬರಗಾಲ ಮತ್ತು ಮೇಲ್ಜಾತಿ ಜನ ಎಲ್ಲಾ ನೀರಾವರಿ ಅನುಕೂಲಗಳನ್ನು ಕಬಳಿಸಿದ್ದರಿಂದ ದಲಿತ ಕೃಷಿ ಕಾರ್ಮಿಕರಿಗೆ ಕೂಲಿ ದಿನಗಳು ಕಮ್ಮಿಯಾಗಿ, ಮತ್ತು ಇತರೆ ಹಿಂದುಳಿದ ಜಾತಿಗಳು ಕೂಲಿಯಾಳುಗಳಾಗಿ ಬಂದು, ದಲಿತರನ್ನು ಪಲ್ಲಟಗೊಳಿಸಿದ್ದರಿಂದ ಈ ಇಬ್ಬರು ದಲಿತ ಮಹಿಳೆಯರು ಬೀಡಿ ಉದ್ಯಮಕ್ಕೆ ಸ್ಪರ್ಧೆಯೊಡ್ಡಿದ್ದರಿಂದ ತಿಂಗಳಿಗೆ ೧೬ ಕೆಲಸದ ದಿನಗಳಿಂದ ೧೦ ಕೆಲಸದ ದಿನಗಳಿಗೆ ಕೂಲಿ ಸಿಗುವಂತಾಗಿ ಅವರ ಬದುಕು ನಿಭಾಯಿಸುವುದೇ ದುಃಸ್ತರವಾಗುತ್ತದೆ. ಈ ಇಬ್ಬರು ಮಹಿಳೆಯರು ದಿನಕ್ಕೆ ೧೨ ಗಂಟೆಗಳ ಕೆಲಸ ಮಾಡಿ ೧೦೦೦ ಬೀಡಿಗಳನ್ನು ಕಟ್ಟಿ ರೂ. ೩೦ನ್ನು ಪಡೆಯುತ್ತಿದ್ದರು. ಇವರಿಬ್ಬರು ಒಬ್ಬಂಟಿಗಳಾದ್ದರಿಂದ ಕಾಯಿಲೆ ಬೀಳುತ್ತಾರೆ. ಒಂದು ತಿಂಗಳು ಕೆಲಸ ಮಾಡಲಾಗದೆ ಔಷಧಿಗೂ ಹಣವಿಲ್ಲದೆ, ಯಾವುದೇ ಸಾಮಾಜಿಕ ಆಸರೆ ಸಿಗದೆ ಅವರು ನಿಧಾನವಾಗಿ ಹಸಿವಿನಿಂದ ಸಾವನ್ನಪ್ಪುತ್ತಾರೆ.

-ಸಾಕ್ಷಿ ಮಾನವ ಹಕ್ಕುಗಳ ವಿಭಾಗ, ಎ.ಪಿ. ೨೦೦೨

★ ಜಾತಿ ಮತ್ತು ಲಿಂಗದೊಟ್ಟಿಗೆ ಮತ್ತೊಂದು ತಾರತಮ್ಯ ಗೊತ್ತಿಲ್ಲದೆ ನುಸಿಳಿರುವುದು ಜಾಗತೀಕರಣದ ಮಾರಿ. ಇದು ಖಾಸಗೀಕರಣದ ಮೂಲಕ ದಲಿತ ಮಹಿಳೆಯರನ್ನು ಶಿಕ್ಷಣದಿಂದ ದೂರವಿರಿಸುತ್ತದೆ. ಅವರು ಮೂಲ ಸಾಕ್ಷರತೆಯಿಂದಲೇ ಹಿಂದುಳಿದಿರುತ್ತಾರೆ. ಹೀಗಿರುವಲ್ಲಿ ಖಾಸಗಿ ಸಂಸ್ಥೆಗಳಲ್ಲಿ ಅಧಿಕ ಹಣ ಕೊಟ್ಟು ಶಿಕ್ಷಣ ಪಡೆಯುವುದು ಮರೀಚಿಕೆಯಷ್ಟೆ. ಹೀಗೆ ಅವರು ಪ್ರಾಚೀನ ಕಾಲದ ಸ್ಥಿತಿಯಲ್ಲೇ ಉಳಿದುಬಿಡುತ್ತಾರೆ.

ಇವತ್ತಿನ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಅಗತ್ಯವಿರುವ ಜ್ಞಾನ ಮತ್ತು ಕೌಶಲ್ಯಗಳನ್ನು ದಲಿತ ಮಹಿಳೆಯರು ಪಡೆಯುವುದಾದರೂ ಹೇಗೆ ? ಖಾಸಗೀಕರಣಗೊಂಡ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇದು ಸಾಧ್ಯವಾಗುತ್ತದೆಯೇ ? ದಲಿತ ಮಹಿಳೆಯರು ಇವತ್ತಿಗೂ ಅಸ್ಪೃಶ್ಯರಾಗಿದ್ದು ಜಾತಿ ಕಸುಬಾದ ಕಸ ಗುಡಿಸುವುದನ್ನೇ ಮಾಡುತ್ತಿರುವಾಗ ಭಾರತೀಯ ಸಂವಿಧಾನದಲ್ಲಿ ಗೊತ್ತುಪಡಿಸಿರುವ ಮೂಲಭೂತ ಹಕ್ಕಾದ ಅನುಚ್ಛೇದ ೧೭ಕ್ಕೆ (ಅಸ್ಪೃಶ್ಯತೆ ನಿರ್ಮೂಲನಾ ಕಾನೂನು) ಏನಾದರೂ ಅರ್ಥವಿದೆಯೇ ?

★ ಸಾರ್ವಜನಿಕ ಆರೋಗ್ಯಕ್ಕೆ ಒದಗಿಸುತ್ತಿದ್ದ ಸರ್ಕಾರದ ಹಣ ಬರುಬರುತ್ತಾ ಕಮ್ಮಿಯಾಗಿ, ಇಡೀ ಸಾರ್ವಜನಿಕ ಆರೋಗ್ಯ ಸೇವೆಯನ್ನು ಖಾಸಗಿಗೊಳಿಸುವುದರ ಮೂಲಕ ನೇರವಾಗಿ ದಲಿತ ಮಹಿಳೆಯರು ಮತ್ತಷ್ಟು ಸುಲಿಗೆಗೆ ಒಳಗಾಗುತ್ತಾರೆ. ಇವತ್ತಿಗೆ ಈ ಸಾರ್ವಜನಿಕ ಆರೋಗ್ಯ ಕೇಂದ್ರಗಳೇ ಎಲ್ಲಾ ಬಡ ಮಹಿಳೆಯರಿಗೆ ಎಟುಕುವ ಕೇಂದ್ರಗಳಾಗಿವೆ. ಯಾವಾಗ ಅವು ಖಾಸಗಿಗೊಳ್ಳುತ್ತವೋ, ಅವರಿಗೆ ಇರುವ ಮಾರ್ಗವೆಂದರೆ ರೋಗದೊಡನೆ ಜೀವಿಸುವುದು. ಇಲ್ಲವೇ ಆರೋಗ್ಯಕ್ಕಾಗಿ ಸಾಲದ ಬಲೆಯಲ್ಲಿ ಸಿಕ್ಕಿಕೊಳ್ಳುವುದಷ್ಟೇ. ಇದು ಸರಣಿಯೋಪಾದಿಯಲ್ಲಿ ಇಡೀ ಕುಟುಂಬವನ್ನು ಸುತ್ತುವರೆದು, ಅಂತಿಮವಾಗಿ ದಲಿತ ಮಹಿಳೆಯರನ್ನು ಇನ್ನಷ್ಟು ದುರ್ಬಲರನ್ನಾಗಿ ಮಾಡಿಬಿಡುತ್ತದೆ.

★ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲ ದಲಿತ ಸಮುದಾಯಕ್ಕೆ ಉದ್ಯೋಗ ಅವಕಾಶಗಳನ್ನು ಕಲ್ಪಿಸುವ ಸಲುವಾಗಿ ಮೀಸಲಾತಿ ನೀತಿಯನ್ನು ತರಲಾಯಿತು. ಆದರೆ ಸರ್ಕಾರಿ ಸೇವೆಗಳು, ಸಾರ್ವಜನಿಕ ವಲಯಗಳು, ಬ್ಯಾಂಕ್ ಮುಂತಾದುವುಗಳನ್ನು ಖಾಸಗೀಕರಣಗೊಳಿಸುವ ಮೂಲಕ ಅಲ್ಲಿನ ಉದ್ಯೋಗಾವಕಾಶಗಳನ್ನು ಇಲ್ಲವಾಗಿಸಿ, ಮೀಸಲಾತಿ ನೀತಿಯನ್ನು ನಿಷ್ಪ್ರಯೋಜನಕಾರಿಯಾಗಿ ಮಾಡಲಾಗುತ್ತದೆ. ಹೀಗೆ ಉತ್ಪಾದನಾ ವ್ಯವಸ್ಥೆಯಲ್ಲಿ ಸರ್ಕಾರ ತನ್ನ ಪಾತ್ರವನ್ನು ಕಮ್ಮಿ ಮಾಡುತ್ತಾ ದಲಿತ ಮಹಿಳೆಯರು ಖಾಸಗೀ ಕ್ಷೇತ್ರಗಳಲ್ಲಿ ಉದ್ಯೋಗ ಹುಡುಕುವಂತಾಗಿ, ಕೊನೆಗೆ ಇಲ್ಲಿೀತನಕ ಸರ್ಕಾರದ ಬೆಂಬಲದಿಂದ ಏನನ್ನು ಪಡೆದುಕೊಂಡಿದ್ದರೋ ಅದೆಲ್ಲವನ್ನು ಕಳೆದುಕೊಳ್ಳುವಂತಾಗಿ ಮೇಲ್ಮುಖ ಚಲನೆ ಅಸಾಧ್ಯವಾಗಿಬಿಡುತ್ತದೆ.

ಗಂಭೀರ ಪ್ರಶ್ನೆಗಳು

★ ಜಾಗತೀಕರಣದಿಂದಾಗಿ ದಲಿತರಲ್ಲಿ ಬಡತನ ಹೆಚ್ಚಾಗುವಾಗ ಅದರ ಹೊರೆಯು ಮತ್ತಷ್ಟು ದಲಿತ ಮಹಿಳೆಯರ ಮೇಲೆ ಬೀಳುವುದಿಲ್ಲವೇ ? ಹೀಗಿರುವಲ್ಲಿ ಮಕ್ಕಳು ಮನೆಯನ್ನು ಸಾರಿಸುತ್ತಾ ಹೊರಗಿನ ಪ್ರಪಂಚದ ಆಗು-ಹೋಗುಗಳನ್ನು ತಿಳಿದುಕೊಳ್ಳಲು ಸಾಧ್ಯವೇ ?

★ ಇವತ್ತಿನ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಅಗತ್ಯವಿರುವ ಜ್ಞಾನ ಮತ್ತು ಕೌಶಲ್ಯಗಳನ್ನು ದಲಿತ ಮಹಿಳೆಯರು ಪಡೆಯುವುದಾದರೂ ಹೇಗೆ ? ಖಾಸಗೀಕರಣಗೊಂಡ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇದು ಸಾಧ್ಯವಾಗುತ್ತದೆಯೇ ? ಇಂತಹ ಪುರುಷ ಪ್ರಧಾನತೆಯ ಸಮಾಜದಲ್ಲಿ ದಲಿತ ಮಹಿಳೆಯರಿಗೆ ಶಿಕ್ಷಣ ಒದಗಿಸುವುದು ಸಾಧ್ಯವೇ ?

★ ದಲಿತ ಮಹಿಳೆಯರು ಇವತ್ತಿಗೂ ಅಸ್ಪೃಶ್ಯರಾಗಿದ್ದು ಜಾತಿ ಕಸುಬಾದ ಕಸ ಗುಡಿಸುವುದನ್ನೇ ಮಾಡುತ್ತಿರುವಾಗ ಭಾರತೀಯ ಸಂವಿಧಾನದಲ್ಲಿ ಗೊತ್ತುಪಡಿಸಿರುವ ಮೂಲಭೂತ ಹಕ್ಕಾದ ಅನುಚ್ಛೇದ ೧೭ಕ್ಕೆ (ಅಸ್ಪೃಶ್ಯತೆ ನಿರ್ಮೂಲನಾ ಕಾನೂನು) ಏನಾದರೂ ಅರ್ಥವಿದೆಯೇ ?

★ ದಲಿತ ಮಹಿಳೆಯರನ್ನು ಹೆಚ್ಚಾಗಿ ಕಾಡುವ ಹಿಂಸೆ ಮತ್ತು ಜಾತಿ-ಲಿಂಗ ತಾರತಮ್ಯವನ್ನು ಕೂಡಲೇ ನಿಲ್ಲಿಸಲು ರಾಷ್ಟ್ರೀಯ ಮಹಿಳಾ ಸಶಕ್ತೀಕರಣ ನೀತಿಯಿಂದ ಸಾಧ್ಯವೇ ? □

ಹೊಸ ಪುಸ್ತಕ



ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ

ಲೇ. ಭಗತ್ ಶರಣ ಉಪಾಧ್ಯಾಯ
ಅನು : ಪ್ರಧಾನ್ ಗುರುದತ್ತ
ಬೆಲೆ : ರೂ. ೧೨೦/-

ಇತಿಹಾಸಕಾರರಾಗಿ, ಪುರಾತತ್ವ ಶಾಸ್ತ್ರಜ್ಞರಾಗಿ, ಕಲಾವಿಮರ್ಶಕರಾಗಿ ಹಾಗೂ ಸಾಹಿತಿಯಾಗಿ ಪ್ರಸಿದ್ಧರಾದ ಭಗವತ್ ಶರಣ ಉಪಾಧ್ಯಾಯರು ಈ ಗ್ರಂಥದಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ, ವರ್ಣವ್ಯವಸ್ಥೆ ಹಾಗೂ ಇತರ ಅನೇಕ ವಿಷಯಗಳನ್ನು ವಿಶ್ಲೇಷಿಸಿದ್ದಾರೆ. ಈ ಕೃತಿಯು ಭಾರತೀಯ ಸಂಸ್ಕೃತಿ, ಪರಂಪರೆ ಕುರಿತ ಈಗಾಗಲೇ ಓದುಗನಲ್ಲಿ ಇರುವಂತಹ ಅಭಿಪ್ರಾಯಗಳನ್ನು ಒರೆಗೆ ಹಚ್ಚುವಂತೆ ಮಾಡುತ್ತದೆ.

ಪ್ರಕಾಶಕರು : ನವ ಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಬೆಂಗಳೂರು.

ಬೆಚ್ಚಿ ಬೀಳಿಸಿದ ಬೆಂಗಳೂರು

ಲೇ. ಸರ್ಜಾಶಂಕರ್ ಹರಳಿಮಠ
ಬೆಲೆ : ರೂ. ೭೫/-

ಮೂಲತಃ ಮಲೆನಾಡಿನವರಾದ ಲೇಖಕರು ಬೆಂಗಳೂರಿನಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಆ ಮಹಾನಗರದಲ್ಲಿ ತನಗಾಗುತ್ತಿದ್ದ ಹೊಸ ಅನುಭವ ಹಾಗೂ ತನ್ನಲ್ಲಿ ಹುಟ್ಟುತ್ತಿದ್ದ ಚಿಂತನೆಗಳನ್ನು ಈ ಕೃತಿಯಲ್ಲಿ ಹಂಚಿಕೊಂಡಿದ್ದಾರೆ.

ಹಳ್ಳಿಯಲ್ಲಿ ಹುಟ್ಟಿ ಬೆಳೆದ ಲೇಖಕರು ತನ್ನ ಊರಿನ ಪರಿಸರದ ಜನರನ್ನು ಉದ್ದೇಶಿಸಿ, ಮಹಾನಗರದಿಂದ ಪತ್ರ ಬರೆದಂತೆ ಪಾಕ್ಷಿಕ ಪತ್ರಿಕೆಯೊಂದರ ಅಂಕಣಕ್ಕೆ ಬರೆದ ಈ ಲೇಖನಗಳನ್ನು ಒಂದೆಡೆ ಕಲೆ ಹಾಕಿ ಈ ಅಂಕಣಗಳ ಸಂಕಲನವನ್ನು ಹೊರತಂದಿದ್ದಾರೆ.

ಪ್ರಕಾಶಕರು : ನಮ್ಮ ನಾಡು ಪ್ರಕಾಶನ, ಜೆ.ಸಿ.ನಗರ, ಶಿವಮೊಗ್ಗ - ೧

ದಾರಿ ಯಾವುದಯ್ಯ ?

ಲೇ. ಬಂದಗದ್ದೆ ರಾಧಾಕೃಷ್ಣ
ಬೆಲೆ : ರೂ. ೨೦/-

ಇದೊಂದು ನೀಳ್ಗತೆಯಾಗಿದ್ದು ಇದರಲ್ಲಿ ಬರುವ ಕಾಡಿನ ಕುರಿತ ವರ್ಣನೆ ಅತ್ಯಂತ ದಟ್ಟವಾಗಿ ನಿರೂಪಿತಗೊಂಡಿದೆ.

ಕಾಡು, ಕತ್ತಲು, ಬೆಳದಿಂಗಳು, ಮೋಡ, ಮಳೆಗಳ ಆತಂಕಗಳ ಮಧ್ಯೆ ವಿನಾಯಕ ನಡೆದುಕೊಂಡು ಸಾಗುವ ಪರಿಯನ್ನು ಕತೆಗಾರ ಅತ್ಯಂತ ಸಂಯಮ ಮತ್ತು ಜಾಣ್ಮೆಯಿಂದ ಹೆಣೆದಿದ್ದಾರೆ.

ಗಾಢ ಮತ್ತು ವಿಶಿಷ್ಟ ಅನುಭವವನ್ನು ನೀಡುವ ಈ ಕತೆಯ ಪ್ರಸಂಗಗಳು ಅಚ್ಚಳಿಯದೆ ಮನದಲ್ಲಿ ಉಳಿಯುತ್ತವೆ.

ಪ್ರಕಾಶಕರು : ಪುಸ್ತಕ ಹೊಂಬಾಳೆ, ಕೆಳದಿ, ಸಾಗರ, ಶಿವಮೊಗ್ಗ.



ಕಾಡಿನ ಮಕ್ಕಳ ಒಡನಾಟದಲ್ಲಿ

ಲೇ. ಕ್ಷೀರಸಾಗರ
ಬೆಲೆ : ರೂ. ೬೦/-

ಕೃತಿಯ ಹೆಸರೇ ಸೂಚಿಸುವಂತೆ ಲೇಖಕರು ಕಾಡಿನ ಮಕ್ಕಳ ಜತೆಗೆ ಬೆರೆತು ಅವರಲ್ಲಿರುವ ವಿಶೇಷ ಕಲೆ, ನೈಪುಣ್ಯತೆ ಹಾಗೂ ಅವರ ಮುಗ್ಧತೆಯನ್ನು ಇದರಲ್ಲಿ ಚಿತ್ರಿಸಿದ್ದಾರೆ.

'ಕಾಡು ಕಡಿವವರ ಕಾಲು ಕಡಿಯಿರಿ' ಎಂಬ ಘೋಷಣೆ ನಿಜವಾದಲ್ಲಿ ಮಾತ್ರ ಕಾಡಿನ ಮುಗ್ಧ ಬದುಕು ಈ ದೇಶದಲ್ಲಿ ಇನ್ನಷ್ಟು ದಿನ ಉಸಿರಾಡಬಹುದು. ಇಲ್ಲವಾದಲ್ಲಿ ಕಾಡು, ಕಾಡಿನ ಜನರು ಇಡೀ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಅನಾಥವಾಗಿ ಬಿಡುವ ಭಯ ಆತಂಕಗಳು ಈ ಕೃತಿಯಲ್ಲಿ ಗೋಚರಿಸುತ್ತವೆ.

ಪ್ರಕಾಶಕರು : ಕ್ರಾಂತಿಸಿರಿ ಪ್ರಕಾಶನ, ವಿಜಯನಗರ, ಬೆಂಗಳೂರು.

ಬೆಳಕಿನೆಡೆಗೆ

ಲೇ. ವಿದ್ಯಾವತಿ ಅಂಕಲಗಿ
ಬೆಲೆ : ರೂ. ೪೫/-

ಲೇಖಕಿ ವಿದ್ಯಾವತಿಯವರು ತನ್ನನ್ನು ಕೈಹಿಡಿದ ಕುಟುಂಬ ಹಾಗೂ ಬದುಕುತ್ತಿರುವ ಸಮಾಜದ ನಡುವೆ ಹೊಂದಾಣಿಕೆಯ ಪ್ರಯತ್ನವನ್ನು ಈ ಸಂಕಲನದಲ್ಲಿ ಮಾಡಿದ್ದಾರೆ.

ಇಲ್ಲಿ ತನ್ನನ್ನು ಒಳಗೊಂಡ ಪ್ರೀತಿ ಹಾಗೂ ಬದುಕುವ ಸಮಾಜದ ಸುತ್ತ ಚಿಂತಿಸುವ ಮನಸ್ಸೊಂದು ತುಯ್ದಾಡುತ್ತಿದೆ. ಬಂಡಾಯ ಮನೋಧರ್ಮದ ವಿದ್ಯಾವತಿಯವರ ಎಲ್ಲ ಕವನಗಳ ಹಿಂದೆ ಆಕ್ರೋಶಗೊಂಡ ಎಚ್ಚರದ ಸ್ಥಿತಿಯೊಂದಿದ್ದು ಅದು ನಿರಂತರವಾಗಿ ಪ್ರಶ್ನಿಸುತ್ತಿರುತ್ತದೆ.

ಪ್ರಕಾಶಕರು : ಏಕತಾ ಪ್ರಕಾಶನ, ವಿಜಾಪುರ.

ಸಿದ್ಧಮಂಕ ಚರಿತೆ

ಸಂ. ಡಾ|| ಎಂ.ಎಂ. ಕಲಬುರ್ಗಿ
ಡಾ|| ವೈ.ಸಿ. ಭಾನುಮತಿ
ಬೆಲೆ : ರೂ. ೨೫/-

ಲಿಂಗಾಯತ, ಕುರುಬ ಸಮಾಜಗಳ ಏಕೀಕರಣವನ್ನು ಧ್ವನಿಸುವ ಪುರಾಣೀಕೃತ ಇತಿಹಾಸ ಕೃತಿ ಈ ಸಿದ್ಧಮಂಕ ಚರಿತೆ. ಅಲ್ಲಮ ಪ್ರಭು ಕಾರಣವಾಗಿ ಸಿದ್ಧರಾಮ, ಸಿದ್ಧರಾಮ ಕಾರಣವಾಗಿ ಮಂಕಯ್ಯ ತಂದೆ, ಶರಣ ಸಂಸ್ಕೃತಿಗೆ ಹೊರಳಿದ ಎರಡು ಘಟನೆಗಳ ಸಂಯುಕ್ತ ಸಂಪುಟವಾಗಿರುವ ಇದನ್ನು ಸಿದ್ಧರಾಮ ಚರಿತ್ರೆಯೆಂದು ಕರೆದಿದ್ದರೂ ನಿಜ ಅರ್ಥದಲ್ಲಿ ಮಂಕಯ್ಯ ತಂದೆಯ ಚರಿತೆಯೂ ಆಗಿದೆ.

ಪ್ರಕಾಶಕರು : ಲಿಂಗಾಯತ ಅಧ್ಯಯನ ಸಂಸ್ಥೆ ಗದಗ.



ಕೆಲಸಕ್ಕೆ ಬಾರದ ವಿಶ್ವವಿದ್ಯಾಲಯ!

ವಿವೇಕಾನಂದರ ವಿಚಾರಗುಚ್ಛ

ವಿಶ್ವ ವಿದ್ಯಾಲಯ, ವಿದ್ಯೆ, ಶಿಕ್ಷಣ : ಇತರರು ತಮ್ಮ ಭಾವನೆಯನ್ನು ಮಕ್ಕಳು ಸ್ವೀಕರಿಸಬೇಕೆಂದು ಬರೆಯುವ ಪುಸ್ತಕಗಳೆಲ್ಲ ಕೆಲಸಕ್ಕೆ ಬಾರದವು.

ನಿಮಗೆ ಈಗ ದೊರೆಯುತ್ತಿರುವ ವಿದ್ಯಾಭ್ಯಾಸದಲ್ಲಿ ಕೆಲವು ಒಳ್ಳೆಯ ವಿಷಯಗಳಿವೆ. ಆದರೆ ಅದರಲ್ಲೊಂದು ಮಹಾಲೋಪವಿದೆ. ಇದರಿಂದ ಒಳ್ಳೆಯ ಗುಣಗಳಾವುವೂ ಕೆಲಸಕ್ಕೆ ಬರುವುದಿಲ್ಲ. ಇದು ಪುರುಷ ಸಿಂಹರನ್ನು ಮಾಡುವ ವಿದ್ಯಾಭ್ಯಾಸವಲ್ಲ. ಇದು ಕೇವಲ ನಿಷೇಧ ಮಯವಾದ ವಿದ್ಯಾಭ್ಯಾಸ. ನಿಷೇಧಮಯವಾದ ವಿದ್ಯಾಭ್ಯಾಸ ಅಥವಾ ನಿಷೇಧ ಭಾವನೆಯ ಮೇಲೆ ನಿಂತ ಯಾವ ತರಬೇತಾಗಲೀ ಮೃತ್ಯುವಿಗಿಂತ ಹಾನಿಕರ. ಮಗುವನ್ನು ಶಾಲೆಗೆ ಕಳುಹಿಸುವರು. ಮೊದಲು ಅದು ಕಲಿಯುವುದೆ ತಂದೆ ಮೂರ್ಖ ಎಂಬುದನ್ನು. ಎರಡನೆಯದು ತಾತ ಹುಚ್ಚನೆನ್ನುವುದು. ಮೂರನೆಯದೇ ಗುರುಗಳೆಲ್ಲ ಆಷಾಢಭೂತಿಗಳು, ನಾಲ್ಕನೆಯದೇ ಪುರಾತನ ಪರಂಪರೆ ಸುಳ್ಳಿನ ಕಂತೆ ಎನ್ನುವುದು. ಅವನಿಗೆ ಹದಿನಾರು ವರುಷ ತುಂಬುವುದರೊಳಗೆ ಅವ ನೊಂದು ನಿಷೇಧಮಯ ಕಂತೆ ಅವನು ನಿರ್ಜೀವವಾಗಿ, ನಿತ್ರಾಣನಾಗಿರುವನು. ಇದರ ಪರಿಣಾಮ ವಾಗಿ ಐವತ್ತು ವರುಷಗಳ ಇಂತಹ ವಿದ್ಯಾಭ್ಯಾಸದಿಂದ ಮೂರು ಪ್ರಾಂತಗಳಲ್ಲಿ ಒಬ್ಬ ಸ್ವತಂತ್ರವಾಗಿ ವಿಚಾರ ಮಾಡುವ ವ್ಯಕ್ತಿಯೂ ಇದರ ಮೂಲಕ ಬಂದಿಲ್ಲ. ಇರುವ, ಸ್ವತಂತ್ರವಾಗಿ ಆಲೋಚನೆ ಮಾಡುವ ವ್ಯಕ್ತಿಗಳೆಲ್ಲ ವಿದ್ಯಾಭ್ಯಾಸವನ್ನು ಇಲ್ಲಿ ಕಲಿಯಲಿಲ್ಲ.

ಈಗಿನ ವಿಶ್ವವಿದ್ಯಾನಿಲಯ ಲೋಪದೋಷಗಳ ಕಂತೆ. ಅದು ಗುಮಾಸ್ತರನ್ನು ಉತ್ಪತ್ತಿ ಮಾಡುವ ಯಂತ್ರವಲ್ಲದೆ ಮತ್ತೇನೂ ಅಲ್ಲ. ಇಷ್ಟೆ ಆಗಿದ್ದರೆ ಗ್ರಹಚಾರಕ್ಕೆ ನಾನೆಷ್ಟೋ ಕೃತಜ್ಞನಾಗಿರುತ್ತಿದ್ದೆ. ಅಷ್ಟೇ ಅಲ್ಲ. ಜನರು ಹೇಗೆ ನಂಬಿಕೆ ಮತ್ತು ಶ್ರದ್ಧಾಹೀನರಾಗುತ್ತಿದ್ದಾರೆಂಬುದನ್ನು ನೋಡು. ಅವರು ಗೀತೆಯು ಕೇವಲ ಒಂದು ಪ್ರಕ್ಷಿಪ್ತ ಭಾಗವೆಂದೂ, ವೇದಗಳೆಲ್ಲಾ ಗ್ರಾಮ್ಯ ಹಾಡುಗಳೆಂದೂ ಕಂಠೋಕ್ತವಾಗಿ ಹೇಳುತ್ತಿರುವರು.

ಭರತಖಂಡದ ಹೊರಗೆ ಇರುವ ವಸ್ತುಗಳು, ಜನಾಂಗಗಳ ವಿಚಾರದಲ್ಲೆಲ್ಲಾ ಪಾರಂಗತರಾಗಲು ಇಚ್ಛಿಸುವರು. ಆದರೆ ಅವರ ಪೂರ್ವಿಕರ ಏಳು ಸಂತತಿಗಳ ಹೆಸರನ್ನು ಕೇಳು, ಅದು ಕೂಡ ಅವರಿಗೆ ಗೊತ್ತಿರುವುದಿಲ್ಲ. ಇನ್ನು ಹದಿನಾಲ್ಕು ಸಂತತಿ ಪಾಡೇನು ?

ಪರಕೀಯರ ಆಳ್ವಿಕೆಯಲ್ಲಿ ನೀವು ಮತ್ತೇನನ್ನು ನಿರೀಕ್ಷಿಸಬಲ್ಲಿರಿ ? ಹೊರಗಿನಿಂದ ಬಂದು ಗೆದ್ದು ನಮ್ಮನ್ನು ಆಳುವುದು, ನಮಗೆ ಒಳ್ಳೆಯದನ್ನು ಮಾಡುವುದಕ್ಕೆ ಅಲ್ಲ. ಅವರಿಗೆ ಧನ ಬೇಕಾಗಿದೆ. ನಾನು ಹನ್ನೆರಡು ವರ್ಷ ಕಷ್ಟಪಟ್ಟು ಕಲ್ಕತ್ತೆಯ ವಿಶ್ವವಿದ್ಯಾಲಯದಲ್ಲಿ ಪದವೀಧರನಾದೆ. ಆದರೆ ಈಗ ನಾನು ನನ್ನ ದೇಶದಲ್ಲಿ ತಿಂಗಳಿಗೆ ಐದು ಡಾಲರ್‌ಗಳನ್ನು ಸಂಪಾದಿಸುವುದೆ ಕಷ್ಟವಾಗಿದೆ. ನೀವು ಇದನ್ನು ನಂಬಬಲ್ಲಿರಾ ? ಇದು ನಿಜವಾಗಿಯೂ ಸತ್ಯ. ಅವರು ನಮ್ಮಲ್ಲಿ ಸ್ಥಾಪಿಸಿರುವ ವಿದ್ಯಾ ಸಂಸ್ಥೆಗಳು ಕಡಿಮೆ ಸಂಬಳದ ಕೆಲಸಗಾರರನ್ನು ತಯಾರು ಮಾಡುವುದಕ್ಕೆ. ಗುಮಾಸ್ತರ ಪಡೆ, ಅಂಚೆ ಇಲಾಖೆಯ ನೌಕರರು ಇತ್ಯಾದಿ, ಇಷ್ಟೆ ಇವುಗಳ ಗುರಿ.

ಅಯ್ಯೋ ದೇವರೆ ! ಈ ಪದವೀಧರ ಪಟ್ಟಕ್ಕಾಗಿ ಎಷ್ಟೊಂದು ರೋಷಾವೇಶ, ಗಲಿಬಿಲಿ! ಕೊಂಚದಿನಗಳಲ್ಲಿಯೇ ಎಲ್ಲಾ ತಣ್ಣಗಾಯಿತು! ಇಷ್ಟೆಲ್ಲಾ ಆದ ಮೇಲೆ ಅವರು ಏನನ್ನು ಕಲಿಯುವುದು- ನಮ್ಮ ಧರ್ಮ, ನಮ್ಮ ನಡೆನುಡಿಗಳೆಲ್ಲಾ ಕೆಟ್ಟದ್ದು, ಪಾಶ್ಚಾತ್ಯರು ಹೊಂದಿರುವುದೆಲ್ಲಾ ಒಳ್ಳೆಯದು ಎಂಬುದನ್ನು ಕಲಿಯುವರಲ್ಲವೆ! ಕೊನೆಗೆ ಅವರು ಉಪವಾಸ ದಿಂದ ಪಾರಾಗಲಾರರು. ಉಚ್ಚ ಶಿಕ್ಷಣ ಇದ್ದರೆಷ್ಟು, ಹೋದರೆಷ್ಟು ? ಜನರು ತಾವು ಕೆಲಸ ಮಾಡಿ ತಮ್ಮ ಅನ್ನವನ್ನು ಸಂಪಾದಿಸುವಂತಹ ಕೈಗಾರಿಕಾ ಕಲೆಗಳ ವಿದ್ಯಾಭ್ಯಾಸವನ್ನು ಕಲಿತರೆ ಎಷ್ಟೋ ವಾಸಿ. ಕೆಲಸಕ್ಕಾಗಿ ಅಲೆಯುತ್ತಾ ವ್ಯರ್ಥವಾಗಿ ಕಾಲ ಕಳೆಯುವುದು ತಪ್ಪುವುದು.

ನಮ್ಮದೇ ಆಗಿರುವ ಅನೇಕ ಬಗೆಯ ಜ್ಞಾನದ ಶಾಖೆಗಳನ್ನೆಲ್ಲಾ ಪರದೇಶೀಯರ ಅಂಕೆಯಿಂದ ವಿಮುಕ್ತರಾಗಿ ಕಲಿಯಬೇಕು. ಇದೇ ನಮಗೆ ಈಗ ಬೇಕಾಗಿರುವುದು. ನಮಗೆ ಕೈಗಾರಿಕಾ ಶಿಕ್ಷಣ ಅವಶ್ಯಕ ಮತ್ತು ಯಾವುದರಿಂದ ಕೈಗಾರಿಕೆಗಳ ಬೆಳವಣಿಗೆಯಾಗುವುದೋ, ಯಾವುದರಿಂದ ಜನರು ಉದ್ಯೋಗಕ್ಕೆ ಹುಡುಕಿಕೊಂಡು ಅಲೆಯುವುದರ ಬದಲು ತಮಗೆ ಸಾಕಾಗುವಷ್ಟನ್ನು ಸಂಪಾದಿಸಿ ಕಷ್ಟಕಾಲಕ್ಕೆ ಕೊಂಚ ಉಳಿಸುವಷ್ಟನ್ನು ಸಂಪಾದಿಸಬಹುದೋ ಅಂತಹ ಶಿಕ್ಷಣ ಅವಶ್ಯಕ.

ಯಾವ ವಾಸ್ತವಿಕತೆಯನ್ನೂ ನಮಗೆ ಕಲಿಸಿಲ್ಲ. ನಿಮ್ಮ ಕೈಕಾಲುಗಳನ್ನು ಹೇಗೆ ಉಪಯೋಗಿಸಬೇಕೆಂಬುದೂ ನಿಮಗೆ ಗೊತ್ತಿಲ್ಲ. ಆಂಗ್ಲೇಯ ಪೂರ್ವಿಕರ ಅಂಕಿ ಅಂಶಗಳನ್ನು ಕಲಿತು ನಾವು ಪ್ರವೀಣರಾಗುವೆವು. ಆದರೆ ನಮ್ಮ ಪೂರ್ವಿಕರದ್ದೇ ನಮಗೆ ತಿಳಿಯದಿರುವುದು ಶೋಚನೀಯವಾಗಿದೆ. ನಾವು ಕೇವಲ ದುರ್ಬಲತೆಯನ್ನು ಕಲಿತಿದ್ದೇವೆ. ನಾವು ಪರಾಜಿತರಾದುದರಿಂದ ದುರ್ಬಲರು, ನಮಗೆ ಯಾವುದರಲ್ಲಿಯೂ ಸ್ವಾತಂತ್ರ್ಯವಿಲ್ಲ ಎಂದು ನಾವು ನಂಬುವಂತೆ ಮಾಡಿಕೊಂಡಿದ್ದೇವೆ... ನಮ್ಮ ಸ್ವಂತ ಆತ್ಮಶಕ್ತಿಯಲ್ಲಿ ನಮಗೆ ನಂಬಿಕೆ ಮತ್ತೊಮ್ಮೆ ಜಾಗ್ರತವಾಗಬೇಕು. ಆಗ ಮಾತ್ರ ದೇಶದ ಎದುರಿಗಿರುವ ಸಮಸ್ಯೆಗಳೆಲ್ಲಾ ಕ್ರಮೇಣ ನಮ್ಮಿಂದಲೇ ಪರಿಹಾರವಾಗುವುವು.

ಭರತಖಂಡದ ಶ್ರೇಯಸ್ಸಿನ ದಾರಿಯಲ್ಲಿ ಎರಡು ಆತಂಕಗಳಿವೆ. ಒಂದು ಪೂರ್ವಾಚಾರ ಪರಾಯಣತೆ; ಮತ್ತೊಂದು ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ. ಪಾಶ್ಚಾತ್ಯರನ್ನು ಅನುಕರಿಸುವವರಲ್ಲಿ ವ್ಯಕ್ತಿತ್ವವೇ ಇಲ್ಲ. ಮೂಲೆ ಮೂಲೆಗಳಿಂದ ಹಲವು ವಿಷಯಗಳನ್ನು ಸಂಗ್ರಹ ಮಾಡಿ ಮನಸ್ಸನ್ನು ಒಂದು ಉಗ್ರಾಣವನ್ನಾಗಿ ಮಾಡಿಕೊಂಡಿರುವರು. ಆ ವಿಷಯಗಳನ್ನು ಜೀರ್ಣಿಸಿಕೊಂಡಿಲ್ಲ; ಅವುಗಳಲ್ಲಿ ಒಂದು ರೀತಿ ಇಲ್ಲ, ರಚನೆ ಇಲ್ಲ. ಅವರು ಸ್ಥೈರ್ಯದಿಂದ ನಿಲ್ಲಲಾರರು, ತತ್ತರಿಸುವರು. ಅವರು ಮಾಡುವ ಕೆಲಸದ ಪ್ರೋತ್ಸಾಹದ ಮೂಲವೆಲ್ಲ ಎಲ್ಲಿ ? ಆಂಗ್ಲೇಯರು ಭುಜ ತಟ್ಟಿಕೊಡುವ ಸ್ವಲ್ಪ ಶಹಭಾಷ್‌ಗಿರಿಯಲ್ಲಿ. ಅವರು ಸಮಾಜದ ಕೆಲವು ವ್ಯವಹಾರಗಳನ್ನು ಅತಿಕಟುವಾಗಿ ಹಳಿಯುವುದರ ಹಿಂದೆ ಯಾರೋ ಕೆಲವು ಆಂಗ್ಲೇಯರು ಉತ್ತೇಜನವನ್ನು ಕೊಡುತ್ತಿರುವರು. ನಮ್ಮ ಕೆಲವು ಆಚಾರಗಳನ್ನು ಹೀನವಾದುದೆಂದು ಏತಕ್ಕೆ ಟೀಕಿಸುತ್ತಾರೆ? ಪಾಶ್ಚಾತ್ಯರು ಹಾಗೆ ಹೇಳುವರು ಎಂದು.

ಜಪಾನಿನಲ್ಲಿ ನಾವು ಜ್ಞಾನದ ಸಮೀಕರಣವನ್ನು ನೋಡುತ್ತೇವೆ. ನಮ್ಮಲ್ಲಿರುವಂತೆ ಅದರ ಅಜೀರ್ಣತೆಯನ್ನಲ್ಲ. ಅವರು ಐರೋಪ್ಯರಿಂದ ಎಲ್ಲವನ್ನೂ ತೆಗೆದುಕೊಂಡಿದ್ದಾರೆ. ಆದರೆ ಅದೇ ಕಾಲದಲ್ಲಿ ಜಪಾನೀಯರಾಗಿಯೇ ಉಳಿದಿದ್ದಾರೆ; ಐರೋಪ್ಯರಾಗಿಲ್ಲ. ನಮ್ಮ ದೇಶದಲ್ಲಾದರೋ ಪಾಶ್ಚಾತ್ಯನಾಗಿ ಬಿಡಬೇಕೆಂಬ ತೀವ್ರ ಹುಚ್ಚು ಪ್ಲೇಗಿನಂತೆ ನಮ್ಮನ್ನು ಹಿಡಿದು ಕೊಂಡಿದೆ. ಅಯ್ಯೋ! ದೇಶ ಇಂಥ ದುರವಸ್ಥೆಗಿಳಿದಿದೆ! ಜನರು ತಮ್ಮಲ್ಲಿರುವ ಚಿನ್ನವನ್ನೇ ಹಿತ್ತಾಳೆಯಂತೆ ನೋಡುವರು. ಪರದೇಶಿಯರ ಹಿತ್ತಾಳೆಯೆ ಚಿನ್ನ ಇವರಿಗೆ! ಆಧುನಿಕ ವಿದ್ಯಾಭ್ಯಾಸದಿಂದ ಉದ್ಭವಿಸಿದ ಯಕ್ಷಿಣಿ ಇದು. ಯುರೋಪಿಯನ್ನರಿಗೆ ಏಷ್ಯಾದ ಸಂಪರ್ಕವಾದಂದಿನಿಂದ ಅವರು ತಮ್ಮ ಜೀವನದಲ್ಲಿಯೂ ಕಲೆಯನ್ನು ಬೆಳಸಿಕೊಳ್ಳತೊಡಗಿದ್ದಾರೆ.

ನಮ್ಮ ಪೂರ್ವಿಕರು ಅಗೆದ ಬಾವಿ ಎಂದು ಅದರಲ್ಲಿರುವ ಸಿಹಿ ನೀರನ್ನು ಕುಡಿಯದೆ ಬಿಡುವವರು ಮೂಢರು. ಶಾಲೆಯ ಹುಡುಗನು ಏನನ್ನೂ ಕಲಿಯುವುದಿಲ್ಲ. ಆದರೆ ತನ್ನಲಾದ ಎಲ್ಲವನ್ನೂ ಹಾಳುಮಾಡಿ ಕೊಳ್ಳುವನು. ಶ್ರದ್ಧೆಯ ಅಭಾವವೇ ಇದರ ಪರಿಣಾಮ. □

ಈಗಿನ ವಿಶ್ವವಿದ್ಯಾನಿಲಯ ಲೋಪದೋಷಗಳ ಕಂತೆ. ಅದು ಗುಮಾಸ್ತರನ್ನು ಉತ್ಪತ್ತಿ ಮಾಡುವ ಯಂತ್ರವಲ್ಲದೆ ಮತ್ತೇನೂ ಅಲ್ಲ. ಇಷ್ಟೆ ಆಗಿದ್ದರೆ ಗ್ರಹಚಾರಕ್ಕೆ ನಾನೆಷ್ಟೋ ಕೃತಜ್ಞನಾಗಿ ರುತ್ತಿದ್ದೆ. ಅಷ್ಟೇ ಅಲ್ಲ. ಜನರು ಹೇಗೆ ನಂಬಿಕೆ ಮತ್ತು ಶ್ರದ್ಧಾಹೀನರಾಗು ತ್ತಿದ್ದಾರೆಂಬುದನ್ನು ನೋಡು. ಅವರು ಗೀತೆಯು ಕೇವಲ ಒಂದು ಪ್ರಕ್ಷಿಪ್ತ ಭಾಗ ವೆಂದೂ, ವೇದಗಳೆಲ್ಲಾ ಗ್ರಾಮ್ಯ ಹಾಡುಗಳೆಂದೂ ಕಂಠೋಕ್ತವಾಗಿ ಹೇಳುತ್ತಿರುವರು. ಆದರೆ ಭರತಖಂಡದ ಹೊರಗೆ ಇರುವ ವಸ್ತುಗಳು, ಜನಾಂಗಗಳ ವಿಚಾರ ದಲ್ಲೆಲ್ಲಾ ಪಾರಂಗತ ರಾಗಲು ಇಚ್ಛಿಸುವರು.

ಸಂಗ್ರಹ:
ಜ.ಹೊ. ನಾರಾಯಣಸ್ವಾಮಿ

SAMVADA' Kannada Monthly, OCTOBER- 2004 RNI-KAR KAN/2002/9246 CPMG/KA/BGW-706/2003-05

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

1) ಕಾಡಿನ ದಾವೇದಾರ ರೂ. 150/-
(ಬಂಗಾಳಿ ಮೂಲ: ಮಹಾಶ್ವೇತಾ ದೇವಿ, ಅನುವಾದ: ಜಿ. ಕುಮಾರಪ್ಪ)

2) ಉಮರಾವ್ ಜಾನ್ ಅದಾ ರೂ. 100/-
(ಉರ್ದು ಮೂಲ: ಮಿರ್ಜಾ ರುಸ್ವಾ, ಅನುವಾದ: ಶಾಂತರಸ)

3) ಹಾವಿನ ಡೊಂಕು ರೂ. 50/-
(ಸ್ವೀಡಿಸ್ ಮೂಲ: ಟೋರ್‌ಗ್ನಿ ಲಿಂಡ್‌ಗ್ರೆಯನ್)

4) ಕಾರ್ಮೆಲೀನ ರೂ. 100/-
(ಕೊಂಕಣಿ ಮೂಲ: ದಾಮೋದರ ಮಾವಜೊ, ಅನುವಾದ: ಶಾ.ಮಂ. ಕೃಷ್ಣರಾಯ)

ಕಥೆಗಳು

1) ಕೊಂಕಣಿ ಕಥಾ ಸಂಗ್ರಹ ರೂ. 125/-
(ಸಂಪಾದಕ: ಚಂದ್ರಕಾಂತ ಶ್ರೇಣಿ, ಅನುವಾದ: ಶಾ.ಮಂ. ಕೃಷ್ಣರಾಯ)

2) ಒಂದು ಪೀಳಿಗೆಯ ತೆಲುಗು ಕಥೆಗಳು ರೂ. 150/-
(ಸಂಪಾದಕ: ಡಿ. ರಾಮಲಿಂಗಂ, ಅನುವಾದ: ಕುಂ. ವೀರಭದ್ರಪ್ಪ)

3) ಕೃಷ್ಣನ್ ಚಂದರ್ ಆಯ್ದ ಸಣ್ಣ ಕಥೆಗಳು ರೂ. 150/-
(ಸಂಪಾದಕ: ಗೋಪಿ ಚಂದ್ ನಾರಂಗ್, ಅನುವಾದ: ಡಿ.ಎ. ಶಂಕರ್)

4) ಮಧುರಾಂತಕಂ ರಾಜಾರಾಂ ಕಥೆಗಳು ರೂ. 150/-
(ತೆಲುಗು ಮೂಲ: ಮಧುರಾಂತಕಂ ರಾಜಾರಾಂ
ಅನುವಾದ: ಲಕ್ಷ್ಮೀಪತಿ, ಕೋಲಾರ)

5) ದಕ್ಷಿಣ ಕಾಮರೂಪದ ಒಂದು ಕಥಾನಕ ರೂ. 180/-
(ಅಸ್ಸಾಮಿ ಮೂಲ: ಇಂದಿರಾ ಗೋಸ್ವಾಮಿ,
ಅನುವಾದ: ಆರ್.ಎಲ್. ಅನಂತರಾಮಯ್ಯ)

ನಾಟಕಗಳು

1) ಯಕೃತ್ತು ರೂ. 50/-
(ಮರಾಠಿ ಮೂಲ: ಶ್ಯಾಮ ಮನೋಹರ, ಅನುವಾದ: ವೀಣಾ ಶಾಂತೇಶ್ವರ)

2) ರವೀಂದ್ರನಾಥ್ ಟಾಗೋರ್: ಎರಡು ನಾಟಕಗಳು ರೂ. 50/-
(ಬಂಗಾಳಿ ಮೂಲ: ರವೀಂದ್ರನಾಥ್ ಟಾಗೋರ್,
ಅನುವಾದ: ಶ್ರೀನಿವಾಸ್ ವಿ. ಸುತ್ರಾವೆ)

ಕಾವ್ಯ

1) ಆಡು ಹಾವೇ ರೂ. 80/-
(ತಮಿಳು ಮೂಲ: ಡಾ. ಕಾರ್ಲೋಸ್, ಅನುವಾದ: ಡಾ. ಬಸವರಾಜ ಕಲ್ಗುಡಿ)

2) ಶ್ರೀರಾಧಾ ರೂ. 60/-
(ಒಡಿಯಾ ಮೂಲ: ಶ್ರೀ ರಮಾಕಾಂತ ರಥ, ಅನುವಾದ: ಸಂಧ್ಯಾ ಎಸ್.)

3) ಶ್ರೀ ಬಸವಣ್ಣನವರ ವಚನ ಸಂಗ್ರಹ ರೂ. 65/-
(ಸಂಪಾದಕ: ಸ.ಸ. ಮಾಳವಾಡ)

4) ಎರಡು ದಶಕದ ಕವಿತೆ ರೂ. 65/-
(ಸಂಪಾದಕ: ಜಿ.ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ)

5) ತೆಲುಗು ಕಾವ್ಯಮಾಲೆ ರೂ. 125/-
(ಸಂಪಾದಕ: ದೇವುಲಪಲ್ಲಿ ರಾಮಾನುಜರಾವ್,
ಅನುವಾದ: ಗುರುಮೂರ್ತಿ ಪೆಂಡಕೂರು)

ಭಾರತೀಯ ಸಾಹಿತ್ಯ ನಿರ್ಮಾಪಕರು

1) ಗೊರೂರು ರಾಮಸ್ವಾಮಿ ಅಯ್ಯಂಗಾರ್ ರೂ. 25/-
(ಲೇಖಕರು: ಸಿ.ಜಿ. ವೆಂಕಟಯ್ಯ)

2) ಶಂಬಾ ಜೋಶಿ ರೂ. 25/-
(ಲೇಖಕರು: ಮಲ್ಲೇಪುರಂ ಜಿ. ವೆಂಕಟೇಶ್)

3) ಭೀಮಾಭೋಯಿ ರೂ. 25/-
(ಲೇಖಕರು: ಸೀತಾಕಾಂತ ಮಹಾಪಾತ್ರ, ಅನುವಾದ: ಶ್ರೀಧರ್ ಜಿಸ್ತೆ)

4) ಮೋಹನ್ ರಾಕೇಶ್ ರೂ. 25/-
(ಲೇಖಕರು: ಪ್ರತಿಭಾ ಅಗರ್‌ವಾಲ್, ಅನುವಾದ: ಎಸ್.ಜಿ. ಶ್ರೀಮತಿ)

5) ಚಿಲಕಮುರ್ತಿ ಲಕ್ಷ್ಮೀನರಸಿಂಹಮ್ ರೂ. 25/-
(ಲೇಖಕರು: ವಿ.ವಿ.ಎಲ್. ನರಸಿಂಹರಾವ್, ಅನುವಾದ: ಕೆ.ಮರುಳಸಿದ್ದಪ್ಪ)

6) ಅನ್ನಮಾಚಾರ್ಯ ರೂ. 25/-
(ಲೇಖಕರು: ಅಡಪ ರಾಮಕೃಷ್ಣರಾವ್, ಅನುವಾದ: ಭಾಗ್ಯಲಕ್ಷ್ಮಿ ಪದಕಿ)

7) ಶಾಂತಿನಾಥ ದೇಸಾಯಿ ರೂ. 25/-
(ಲೇಖಕರು: ಜಿ.ಎಸ್. ಆಮೂರ್)

8) ಎಂ.ಎಸ್. ಪುಟ್ಟಣ್ಣ ರೂ. 25/-
(ಲೇಖಕರು: ಎಸ್.ಎಸ್. ಸುಜಾತ)

9) ದೇವುಡು ರೂ. 25/-
(ಲೇಖಕರು: ಡಾ. ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ))

10) ಕುಮಾರವ್ಯಾಸ ರೂ. 25/-
(ಲೇಖಕರು: ಕೀರ್ತಿನಾಥ ಕುರ್ತುಕೋಟಿ)

11) ಸಂ.ಶಿ. ಭೂಸನೂರಮಠ ರೂ. 25/-
(ಲೇಖಕರು: ಶಾಂತಾ ಇಮ್ರಾಪುರ)

12) ಸೇಡಿಯಾಪು ಕೃಷ್ಣಭಟ್ಟ ರೂ. 25/-
(ಲೇಖಕರು: ಎಂ. ರಾಮಚಂದ್ರ)

13) ಅಭಿನವಗುಪ್ತ ರೂ. 75/-
(ಲೇಖಕರು: ಜಿ.ಟಿ. ದೇಶಪಾಂಡೆ, ಅನುವಾದ: ಎನ್. ಬಾಲಸುಬ್ರಹ್ಮಣ್ಯ)

ಇತರೆ

1) ಮಂದಾರ ರಾಮಾಯಣ ರೂ. 150/-
(ತುಳು ಮೂಲ: ಮಂದಾರ ಕೇಶವಭಟ್ಟ)

2) ಕಲಾಪೂರ್ಣೋದಯ ರೂ. 100/-
(ಅನುವಾದ: ಆರ್. ಶೇಷಶಾಸ್ತ್ರಿ, ಜಿ. ಸದಾನಂದ)

3) ನನ್ನ ಜೀವಾವಧಿಯ ಶಿಕ್ಷೆ ರೂ. 200/-
(ಮರಾಠಿ ಮೂಲ: ವಿನಾಯಕ ದಾಮೋದರ ಸಾವರಕರ,
ಅನುವಾದ: ವಿರೂಪಾಕ್ಷ ಕುಲಕರ್ಣಿ)

4) ವನದೇವತೆ ರೂ. 25/-
(ಲೇಖಕರು: 'ಕಲ್ಕಿ' ಗೋಪಾಲಕೃಷ್ಣನ್, ಅನುವಾದ: ಎ. ಚಂದ್ರಮ್ಮ)

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ:

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ: 2245152